BY

B. G. DIVEKAR,

B. A., S. T. C. D.

ಭೀಮರಾವ ಗಣೇಶ ದಿವೇಕರ,

ಇವರು ಬರೆದದ್ದು.

೧೯೨೭.

…nnas.] [ಬೆಲೆ: ೧೪ ಆಣೆ.

ಟ್ರೇನಿಂಗ ಕಾಲೇಜ ಮತ್ತು ಇಂಗ್ಲಿಷ ಹಾಗು ಪ್ರಾಥಮಿಕ ಶಾಲೆಗಳ ಇನಾಮು ಮತ್ತು ಲೈಬ್ರರಿಗಾಗಿ ಎಜ್ಯುಕೇಶನಲ್ ಡಿಪಾರ್ಟಮೆಂಟಿನಿಂದ ಮಂಜೂರಾಗಿದೆ.

ಕನ್ನಡ

ನಿಬಂಧರತ್ನಾವಲಿ.

ಭೀಮರಾವ ಗಣೇಶ ದಿವೇಕರ,
ಬಿ. ಎ., ಎಸ್. ಟಿ. ಸಿ. ಡಿ.,
೧ನೇ ಅಸಿಸ್ಟಂಟ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ಧಾರವಾಡ,

ಇವರು ಬರೆದದ್ದು.

೩ ನೇ ಆವೃತ್ತಿ.

೧೯೨೭.

Price: 14 Annas.] [ಬೆಲೆ: ೧೪ ಆಣೆ.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.

ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ

ಬಹಳ ಶ್ರಮಬಟ್ಟ

ಕೈ. ತಿ. ರಾ. ರಾ. **ಗಣೇಶ ಗೋಪಾಳ ದಿವೇಕರ,**

ಇವರ ಪಾದಪದ್ಮಂಗಳಿಗೆ

ಈ ಪುಸ್ತಕವು

ಪ್ರೇಮಪೂರ್ವಕವಾಗಿ

ಅರ್ಪಿಸಲ್ಪಟ್ಟಿದೆ.

ಗ್ರಂಥಕರ್ತ.

Printed by M. K. Joshi at the Karnatak Printing works, Dharwar, and published by B. G. Divekar at his Bunglow on

MALGUDDA, DHARWAR.

ವಿಷಯಾನುಕ್ರಮಣಿಕೆ.

ಪ್ರಸ್ತಾವನೆ.

ಕನ್ನಡ ೫ನೇ, ೬ನೇ, ೭ನೇ ಇಯತ್ತೆಗಳಿಗೂ, ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆ, ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆ, ಇಂಗ್ಲಿಷ ಎಸ್. ಎಲ್. ಸಿ. ಪರೀಕ್ಷೆ ಇವೇ ಮೊದಲಾದ ಪರೀಕ್ಷೆಗಳಿಗೂ ಗೊತ್ತುಪಡಿಸಿದ ವಿಷಯುಗಳಲ್ಲಿ ನಿಬಂಧ ಲೇಖನವು ಒಂದು ಮುಖ್ಯ ವಿಷಯುವಾಗಿರುತ್ತದಷ್ಟೇ. ಈ ವಿಷಯುವು ಬಹಳೇ ಮಹತ್ವದ್ದಿದ್ದು, ಇದರಲ್ಲಿ ವಿದ್ಯಾರ್ಥಿಗಳು ತೋರಿಸುವ ಜಾಣತನದಿಂದ ಅವರ ಶಬ್ದಸಂಗ್ರಹಜ್ಞಾನ, ವಾಚನಾಭಿರುಚಿ, ಭಾಷಾಜ್ಞಾನ, ಬಹುಶ್ರುತತ್ವ, ವ್ಯವಹಾರಜ್ಞಾನ ಮುಂತಾದ ಗುಣಗಳು ವ್ಯಕ್ತವಾಗುತ್ತವೆ. ಆದರೆ ನಿಬಂಧಲೇಖನ ಸಂಬಂಧದಿಂದ ಮಾರ್ಗದರ್ಶಿಗಳಾದ ಪುಸ್ತಕಗಳು ಸದ್ಯಕ್ಕೆ ಕನ್ನಡದಲ್ಲಿ ಇಲ್ಲವಾದ್ದರಿಂದ, ಪರೀಕ್ಷೆಯುಲ್ಲಿ ಕೊಟ್ಟ ವಿಷಯುವನ್ನು ಕುರಿತು ಹಲವು ಸಾಧಕ-ಬಾಧಕ ಪ್ರಮಾಣಗಳನ್ನು ಕೊಟ್ಟು, ಸಂಗತವಾದಂಥ ಸಂಕ್ಷಿಪ್ತ ವಿವೇಚನವನ್ನು ಮಾಡುವದು ಬಹಳೇ ಕಠಿಣವಾಗುತ್ತದೆಂಬ ಸಂಗತಿಯು ಪರೀಕ್ಷೆಗೆ ಕುಳಿತ ಬಹುಜನ ವಿದ್ಯಾರ್ಥಿಗಳಿಗೆ ಮನವರಿಕೆಯಾಗಿರಬಹುದು. ಇದಲ್ಲದೆ ಇಂಗ್ಲಿಷ ೫ನೇ, ೬ನೇ, ೭ನೇ ಇಯತ್ತೆಗಳಲ್ಲಿ ಕನ್ನಡದಿಂದ ಇಂಗ್ಲಿಷದಲ್ಲಿ ಭಾಷಾಂತರಿಸಲಿಕ್ಕೆ ಉಪಯುಕ್ತವಾದ ಪುಸ್ತಕಗಳು ಇಲ್ಲವಾದ್ದರಿಂದ, ಆ ಇಯತ್ತೆಗಳ ವಿದ್ಯಾರ್ಥಿಗಳಿಗೂ ಬಹಳೇ ತೊಂದರೆಯಾಗುತ್ತಿರುವದು. ಈ ಎರಡೂ ಕೊರತೆಗಳನ್ನು ದೂರ ಮಾಡುವ ಉದ್ದೇಶದಿಂದ ನಾವು ಪ್ರಸಿದ್ಧವಾದ ಹಲವು ಇಂಗ್ಲಿಷ-ಸಂಸ್ಕೃತ-ಮಹಾರಾಷ್ಟ್ರ-ಕನ್ನಡ ಗ್ರಂಥಗಳ ಸಹಾಯುದಿಂದ ಈ ಪುಸ್ತಕವನ್ನು ಬರೆದಿರುವೆವು. ಇದರಿಂದ ವಿದ್ಯಾರ್ಥಿಗಳಿಗೆ ನಿಬಂಧಲೇಖನಕ್ಕೆ ತಕ್ಕ ಸಹಾಯುವು ದೊರೆತು, ಇಂಗ್ಲಿಷದಲ್ಲಿ ಭಾಷಾಂತರ ಮಾಡಲಿಕ್ಕೂ ಕೆಲಮಟ್ಟಿಗಾದರೂ ಸಹಾಯುವಾದರೆ, ನಮ್ಮ ಶ್ರಮವು ಸಫಲವಾಯಿತೆಂದು ತುಂಬಾ ನಂಬುವೆವು.

ಈ ಪುಸ್ತಕದಲ್ಲಿ ಒಟ್ಟು ಏಳು ಪ್ರಕರಣಗಳಿವೆ. ೧ ನೇ ಪ್ರಕರಣದಲ್ಲಿ ನಿಬಂಧಲೇಖನದ ನಿಯಮಗಳನ್ನು ಹೇಳಿರುವೆವು. ಅವುಗಳನ್ನು ನೆನಪಿನಲ್ಲಿಟ್ಟರೆ, ಯಾವದೇ ವಿಷಯವನ್ನು ಕುರಿತು ನಿಬಂಧ ಬರೆಯುವದು ಸುಲಭವಾಗುವದು. ೨ ನೇ, ೩ ನೇ, ೪ ನೇ ಪ್ರಕರಣಗಳಲ್ಲಿ ಅನುಕ್ರಮವಾಗಿ ವರ್ಣನಪರ, ಕಥನಪರ ಮತ್ತು ಚಿಂತನಪರ ನಿಬಂಧಗಳ ವಿಷಯಗಳ ಕೆಲವು ಮಾದರಿಗಳನ್ನು ಬರೆದು ತೋರಿಸಿರುವೆವು. ಆದರೆ ಈ ವಿಷಯಗಳು ಕೇವಲ ಮಾದರಿಗಾಗಿಯೇ ಬರೆದು ತೋರಿಸಲ್ಪಟ್ಟಿರುವವೇ ಹೊರತು ಅವುಗಳನ್ನು ವಿದ್ಯಾರ್ಥಿಗಳು ಬಾಯಿ ಪಾಠ ಮಾಡಬೇಕೆಂಬ ಉದ್ದೇಶವಿಲ್ಲ. ಆದ್ದರಿಂದ ಆಯಾ ವಿಷಯಗಳನ್ನು ಕುರಿತು ವಿದ್ಯಾರ್ಥಿಗಳು ಚೆನ್ನಾಗಿ ವಿಚಾರಮಾಡಿ, ತಮಗೆ ತಿಳಿದ ಮಟ್ಟಿಗೆ ಮೊದಲು ತಾವೇ ಸ್ವತಂತ್ರವಾಗಿ ನಿಬಂಧಗಳನ್ನು ಬರೆದು, ಬಳಿಕ ತಾವು ಬರೆದದ್ದನ್ನು ಈ ಪುಸ್ತಕದಲ್ಲಿ ಬರೆದು ತೋರಿಸಿದ ಮಾದರಿಗೆ ಹೋಲಿಸಿ ನೋಡಿ, ತಮಗೆ ತೋಚದಿದ್ದ ವಿಚಾರಗಳು ಆ ಮಾದರಿಯಲ್ಲಿ ಕಂಡು ಬಂದರೆ ಅವುಗಳನ್ನು ನೆನಪಿನಲ್ಲಿಟ್ಟು, ಮುಂದೆ ತಾವು ಬರೆದ ನಿಬಂಧಗಳಲ್ಲಿ ಅವುಗಳನ್ನು ಉಪಯೋಗಿಸತಕ್ಕದ್ದು. ಇದರಿಂದ ಅವರ ವಿಚಾರಶಕ್ತಿಯು ಬೆಳೆಯುವದಲ್ಲದೆ, ಅವರಿಗೆ ನಿಬಂಧದ ವಿಷಯಗಳನ್ನು ಚನ್ನಾಗಿ ಬರೆಯಲು ಅನುಕೂಲವಾಗುವದು. ೫ ನೇ ಪ್ರಕರಣದಲ್ಲಿ ವರ್ಣನಪರ-ಕಥನಪರ-ಚಿಂತನಪರ ನಿಬಂಧಗಳ ಕೆಲವು ಮುಖ್ಯ ವಿಷಯಗಳನ್ನೂ ಅವುಗಳ ಮುದ್ದೆಗಳನ್ನೂ (ವಿಚಾರಮಾಡತಕ್ಕಂಥ ಮಹತ್ವದ ಅಂಶಗಳನ್ನು) ಕೊಟ್ಟಿರುವೆವು. ಅದರಿಂದ ಯಾವದೊಂದು ವಿಷಯದಲ್ಲಿ ಮತ್ವಹದ ಮುದ್ದೆಗಳನ್ನು ಹುಡುಕುವದಕ್ಕೆ ಸಹಾಯವಾಗುವದು. ೬ ನೇ ಪ್ರಕರಣದಲ್ಲಿ ವಿದ್ಯಾರ್ಥಿಗಳು ಬರೆಯಬಹುದಾದ ಮೂರೂ ಜಾತಿಯ ನಿಬಂಧಗಳ ಬೇರೆ ಕೆಲವು ವಿಷಯಗಳನ್ನು ಸೂಚಿಸಿರುವೆವು. ವಿದ್ಯಾರ್ಥಿಗಳು ಅವುಗಳ ಬಗ್ಗೆ ಮುದ್ದೆಗಳನ್ನು ತಾವೇ ಹುಡುಕಿ ತೆಗೆದು ನಿಬಂಧಗಳನ್ನು ಬರೆಯಬಹುದು. ೭ ನೇ ಪ್ರಕರಣದಲ್ಲಿ ಪತ್ರವ್ಯವಹಾರದ ನಿಯಮಗಳನ್ನೂ ಕೆಲವು ಮಾದರಿಗಳನ್ನೂ ಬರೆದು ತೋರಿಸುವೆವು. ಅವುಗಳನ್ನು ಚನ್ನಾಗಿ ಓದಿ ನೆನಪಿನಲ್ಲಿಟ್ಟರೆ ಪತ್ರವ್ಯವಹಾರ ಜ್ಞಾನವುಂಟಾಗುವದು. ಈ ಹೊಸ ಆವೃತ್ತಿಯಲ್ಲಿ

ರಾಜಕೀಯ ಪತ್ರವ್ಯವಹಾರದ ಅಂದರೆ ರಿಪೋರ್ಟರ್ ಮತ್ತು ಅರ್ಜಿಗಳ ಕೆಲವು ಮಹತ್ವದ ಮಾದರಿಗಳನ್ನು ಬರೆದು ತೋರಿಸಿರುವೆವು. ಅವು ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೂಡ್ರುವ ಉಮೇದವಾರರಿಗಂತೂ ಬಹಳೇ ಉಪಯೋಗ ವಾಗುವವು.

ಈ ಪುಸ್ತಕದಲ್ಲಿ ಕೆಲವು ಕಡೆಯಲ್ಲಿ ಅಪರಿಚಿತವಾದ ಶಬ್ದಗಳು ಉಪಯೋಗಿಸಲ್ಪಟ್ಟವೆ. ಅವುಗಳ ಅರ್ಥವನ್ನು ಈ ಪುಸ್ತಕದ ಕೊನೆಯಲ್ಲಿ ಕೊಟ್ಟ ಕಠಿಣ ಶಬ್ದಗಳ ಕೋಶದಲ್ಲಿ ಹೇಳಿರುವೆವು. ವಾಚಕರು ಅದನ್ನು ನೋಡಿಕೊಳ್ಳಬಹುದು. ಕೆಲವು ಕಡೆಯಲ್ಲಿ ಮುದ್ರಣದ ದೋಷಗಳುಂಟಾಗಿರುವವು. ಅವುಗಳನ್ನು ಕೊನೆಯಲ್ಲಿ ಕೊಟ್ಟ ಶುದ್ಧಾಶುದ್ಧ ಪತ್ರಿಕೆಯಂತೆ ತಿದ್ದಿಕೊಂಡು ಈ ಪುಸ್ತಕವನ್ನು ಓದತಕ್ಕದ್ದು.

ಈ ಪುಸ್ತಕವನ್ನು ಶ್ರೀಯುತ ರಾಜಶ್ರೀ ವಾಯ್. ಬಿ. ಜಠಾರ, ಬಿ. ಎ., ಎಲ್.ಎಲ್. ಬಿ., ಪ್ರೊಪ್ರಾಯಟರ, ಕರ್ನಾಟಕ ಪ್ರಿಂಟಿಂಗ ವರ್ಕ್ಸ, ಧಾರವಾಡ, ಇವರು ಆದಷ್ಟು ಜಾಗ್ರತೆಯಿಂದ ಮುದ್ರಿಸಿರುವದರಿಂದ ಅವರ ಉಪಕಾರವನ್ನು ಸ್ಮರಿಸುತ್ತೇವೆ.

ಧಾರವಾಡ. ತಾ॥ ೧-೮-೧೯೨೨.

ಭೀಮರಾವ ಗಣೇಶ ದಿವೇಕರ,
ಗ್ರಂಥಕರ್ತ.

ಕನ್ನಡ

ನಿಬಂಧರತ್ನಾವಲಿ.

೧ನೇ ಪ್ರಕರಣ.

ನಿಬಂಧಲೇಖನ.

(೧) **ನಿಬಂಧ:—**

"ನಿಬಂಧ" ಈ ಶಬ್ದವು, ಬಂಧ್ ಅಂದರೆ ಕಟ್ಟು, ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿರುತ್ತದಷ್ಟೇ. ಆದಕಾರಣ ನಿಬಂಧವೆಂದರೆ, ಯಾವ ದೊಂದು ವಿಷಯವನ್ನು ಕುರಿತು ಒಟ್ಟುಗೂಡಿಸಿ ಬರೆದ ವಿಚಾರಗಳೆಂದು ಹೇಳಬಹುದು.

(೨) **ನಿಬಂಧದ ಉದ್ದೇಶವೂ ಪ್ರಕಾರಗಳೂ:—**

ನಿಬಂಧ ಬರೆಯುವ ಉದ್ದೇಶವು ವಿವಿಧವಾದದ್ದು. ಉದ್ದೇಶವು ಭಿನ್ನ ವಾಗಿದ್ದಂತೆ ಅದರ ರಚನೆಯೂ ಭಾಷಾಸರಣಿಯೂ ಬೇರೆಬೇರೆಯಾಗಿರುವದು ಸ್ವಾಭಾವಿಕವು. ನಿಬಂಧದ ಉದ್ದೇಶವು ಮುಖ್ಯವಾಗಿ ವರ್ಣನೆಯಾಗಲಿ ಮತ ಸ್ಥಾಪನೆಯಾಗಲಿ ಇರುತ್ತದೆ. ವಿಷಯಭೇದದಿಂದ ನಿಬಂಧದಲ್ಲಿ **ವರ್ಣನಪರ, ಕಥನಪರ, ಚಿಂತನಪರ,** ಹೀಗೆ ಮೂರು ಸ್ವಾಭಾವಿಕ ವಿಭಾಗ ಗಳಾಗುತ್ತವೆ. ಈ ವಿಭಾಗಗಳನ್ನು ಕುರಿತು ನಾವು ಮುಂದೆ ಹೇಳುವೆವು.

(೩) **ನಿಬಂಧದ ಭಾಷಾಸರಣಿ:—**

ನಿಬಂಧದ ಭಾಷೆಯು ಸುಗಮವಾದದ್ದು ಅಂದರೆ ಸುಲಭವಾಗಿ ತಿಳಿಯು ವಂಥಾದ್ದಿರಬೇಕು. ಎಷ್ಟೋ ನಿಬಂಧಕಾರರು ತಮ್ಮ ನಿಬಂಧಗಳನ್ನು ದೊಡ್ಡ ದೊಡ್ಡ ಶಬ್ದಗಳಿಂದಲೂ ದೂರಾನ್ವಯವುಳ್ಳ ವಾಕ್ಯಗಳಿಂದಲೂ ಶೋಭೆಗೊ ಳಿಸಲು ಯತ್ನಿಸುವರು. ಆದರೆ ಇದು ಸರಿಯಲ್ಲ. ಯಾಕಂದರೆ ವಾಚಕರು ಶಬ್ದಾಲಂಕಾರ, ಅರ್ಥಾಲಂಕಾರಗಳ ಗೊಂದಲದಲ್ಲಿ ಒಮ್ಮೆ ಬಿದ್ದರೆಂದರೆ, ಅವರು ನಿಬಂಧದ ಮುಖ್ಯ ವಿಷಯವನ್ನೇ ಮರೆತುಬಿಡುತ್ತಾರೆ. ಆದಕಾರಣ ನಿಬಂಧದಲ್ಲಿ ಸರಳವಾದಂಥ ಮತ್ತು ರೂಢವಾದಂಥ ಶಬ್ದಗಳನ್ನು ಉಪಯೋ

ಗಿಸಬೇಕು. ಭಾಷೆಯು ಶುದ್ಧ ಹಾಗು ಸರಸಾಗಿಯೂ, ವಾಕ್ಯಗಳು ಸುಲಭವಾಗಿಯೂ, ಅಲಂಕಾರಗಳು ಮಿತವಾದವುಗಳೂ ಪ್ರಸಂಗಾನುರೂಪವಾದವುಗಳೂ ಇರಬೇಕು.

(೪) ಉತ್ತಮ ಭಾಷೆಯನ್ನು ಕಲಿಯಲು ಹಲವು ಸಾಧನಗಳು:-

೧. ಮೇಲಾದ ಪುಸ್ತಕಗಳನ್ನು ಓದುವದೂ, ಅವುಗಳಲ್ಲಿ ತೋರುವ ಭಾಷಾಸರಣಿಯನ್ನು ಅನುಕರಿಸುವದೂ:—

ಮೇಲಾದ ಪುಸ್ತಕಗಳನ್ನು ಓದುವದೂ ಅವುಗಳಲ್ಲಿ ಬರೆದಂತೆ ತನುಗಾದರೂ ಬರೆಯಲಿಕ್ಕೆ ಬರಬೇಕೆಂದು ಪ್ರಯತ್ನಮಾಡುವದೂ ಉತ್ತಮವಾದ ಸಾಧನಗಳು. ಭಾಷಾಪದ್ಧತಿಯನ್ನು ಕಲಿಯುವದಕ್ಕಾಗಿ ಉತ್ತಮ ಪುಸ್ತಕಗಳನ್ನು ಎಷ್ಟು ಓದಿದರೂ ತೀರದು. ಪ್ರತಿಯೊಂದು ಪುಸ್ತಕವನ್ನು ಓದುವಾಗ, ಅದನ್ನು ಚನ್ನಾಗಿ ಮನನಮಾಡಿಕೊಳ್ಳುವದಕ್ಕೆ ಸಾಕಷ್ಟು ವೇಳೆಯು ದೊರೆಯದ ಪಕ್ಷಕ್ಕೆ, ಕೇವಲ ಹೊತ್ತುಗಳೆಯುವದಕ್ಕೋಸ್ಕರ ಓದಿದರೂ, ಆದಷ್ಟು ಉತ್ತಮವಾದ ಪುಸ್ತಕಗಳನ್ನೇ ಓದಬೇಕು. ಅದರಿಂದ ಭಾಷೆಯು ಸುಧಾರಿಸುತ್ತದೆ. ಕನ್ನಡದಲ್ಲಿ ಜೈಮಿನಿ, ರಾಜಶೇಖರ, ಕನ್ನಡಭಾರತ, ಮುದ್ರಾಮಂಜೂಷ, ಮೃಚ್ಛಕಟಿಕ, ತೂರಮುರಿಕೃತ ಕಾದಂಬರಿ ಮುಂತಾದ ಉತ್ತಮ ಪುಸ್ತಕಗಳನ್ನು ಓದುವದರಿಂದ ಉತ್ತಮವಾದ ಕನ್ನಡ ಭಾಷೆಯನ್ನು ಕಲಿಯುವದಕ್ಕೂ ನಿಬಂಧ ಬರೆಯುವದಕ್ಕೂ ಒಳ್ಳೇ ಸಹಾಯವಾಗುವದು.

೨. ವಿದ್ವಾಂಸರ ವ್ಯಾಖ್ಯಾನಗಳನ್ನು ಕೇಳುವದು:—

ವಿದ್ವಾಂಸರ ವ್ಯಾಖ್ಯಾನಗಳನ್ನು ಕೇಳುವ ಪ್ರಸಂಗಗಳನ್ನು ವಿದ್ಯಾರ್ಥಿಗಳು ಎಂದೂ ಕಳಕೊಳ್ಳಬಾರದು. ಇಂಥವರ ಭಾಷಣಗಳಲ್ಲಿ ತಲೆದೋರುವ ವಿಚಾರಗಳನ್ನೂ ಭಾಷಾಶೈಲಿಯನ್ನೂ ಕೇಳುವದರಿಂದ ನಿಬಂಧ ಬರೆಯುವದಕ್ಕೆ ಬಹಳೇ ಸಹಾಯವಾಗುತ್ತದೆ.

೩. ಬಾಯಿಪಾಠ ಮಾಡುವದು:—

ಈ ಅಭ್ಯಾಸವು ಅತ್ಯುತ್ತಮವಾದದ್ದು. ಯಾವದೊಂದು ಗದ್ಯವನ್ನಾಗಲಿ ಪದ್ಯವನ್ನಾಗಲಿ ಬಾಯಿಪಾಠ ಮಾಡುವದರಿಂದ ಯೋಗ್ಯವಾದ ಶಬ್ದಗಳೂ, ಬಗೆಬಗೆಯ ವಾಕ್ಯರಚನೆಗಳೂ, ಚಂದವಾದ ಅಲಂಕಾರಗಳೂ, ಉತ್ತಮ ಹಾಗು ಉದಾ

ತ್ರವಾದ ವಿಚಾರಗಳೂ-ಇವೇ ಮುಂತಾದವುಗಳ ಸಂಗ್ರಹವು ನಮ್ಮ ಹತ್ತಿರ ಸಿದ್ಧವಾಗಿರುವದು. ಇದಲ್ಲದೆ ಅದರಿಂದ ಭಾಷಾಸರಣಿಯೂ ವಿಚಾರಪದ್ಧತಿಯೂ ಸುಧಾರಿಸುವದರಿಂದ, ಆಕಸ್ಮಿಕ ಪ್ರಸಂಗಗಳಲ್ಲಿ ಸಹ ಸಮಯೋಚಿತವಾಗಿ ಮಾತಾಡಲಿಕ್ಕೂ ಬರೆಯಲಿಕ್ಕೂ ಸುಲಭವಾಗುತ್ತದೆ. ಪಠಣಶಕ್ತಿಯಿಂದ ವಿದ್ಯಾರ್ಥಿಗಳಿಗಂತೂ ಪರೀಕ್ಷೆಯಲ್ಲಿ ಬಹಳ ಉಪಯೋಗವಾಗುತ್ತದೆ. ಆದರೆ ಬಾಯಿಪಾಠಮಾಡುವದಾದರೆ, ಉತ್ಕೃಷ್ಟಗ್ರಂಥಗಳಲ್ಲಿರುವ ಉತ್ತಮಭಾಷಾಸರಣಿಯುಳ್ಳಂಥ ಮತ್ತು ಉದಾತ್ತವಿಚಾರಗಳುಳ್ಳಂಥ ಭಾಗಗಳನ್ನೇ ಪಾಠಮಾಡಬೇಕು. ಅನೇಕ ದೊಡ್ಡದೊಡ್ಡ ವಿದ್ವಾಂಸರೂ, ಗ್ರಂಥಕರ್ತರೂ, ವ್ಯಾಖ್ಯಾನಕಾರರೂ ಪಠಣಶಕ್ತಿಯಿಂದಲೇ ಹೆಸರು ಪಡೆದಿರುವರು. ಸಭೆಯಲ್ಲಿ ನಿಂತು ವಿಷಯ ಪ್ರತಿಪಾದನವನ್ನಾಗಲಿ ವಾದವಿವಾದವನ್ನಾಗಲಿ ಮಾಡುವವರಿಗಂತೂ ಪಾಠಮಾಡಿದ ಹೊರತು ಗತಿಯೇ ಇಲ್ಲ. ನಮ್ಮ ಭರತಖಂಡದಲ್ಲಿ ಪ್ರಖ್ಯಾತರಾದ **ಬಾಬು ಸುರೇಂದ್ರನಾಥ ಬಾನರ್ಜೀ, ಫೆರೋಜಶಹಾ ಮೇಥಾ, ಲಾಲಮೋಹನಘೋಸ, ಕುಂಠೆ, ಗೋಖಲೆ** ಮೊದಲಾದವರ ವಾಕ್ಚಾತುರ್ಯಕ್ಕೆ ಪಠಣಶಕ್ತಿಯೇ ಮುಖ್ಯಕಾರಣವೆಂದು ಹೇಳಬಹುದು. ಆದ್ದರಿಂದ ಬಾಯಿಪಾಠಮಾಡುವದು ಅವಶ್ಯವಾದದ್ದು. ಆದರೆ ಅರ್ಥವನ್ನು ತಿಳುಕೊಂಡ ಹೊರತು ಯಾವ ವಿಷಯವನ್ನೂ ಪಾಠಮಾಡಬಾರದು. ಯಾಕಂದರೆ ಅರ್ಥವನ್ನು ತಿಳುಕೊಳ್ಳದೆ ಬಾಯಿಪಾಠಮಾಡಿದ ವಿಷಯವು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಗೊಳ್ಳದೆ ಕೂಡಲೆ ಮರೆತುಹೋಗುತ್ತದೆ. "ಅರ್ಥದ ಮರ್ಮವನರಿಯದೆ ವ್ಯರ್ಥವು ತಾಂ ಕಲಿತರೇನು ಪದಪದ್ಯಂಗಳ..........." ಎಂಬ ಪದ್ಯದ ತಾತ್ಪರ್ಯವನ್ನು ಪೂರ್ಣವಾಗಿ ನೆನಪಿನಲ್ಲಿಡತಕ್ಕದ್ದು.

(೫) ಸರಳ ಹಾಗು ಸುಲಭವಾದ ಭಾಷೆಯನ್ನು ಬರೆಯುವ ಹಲವು ಸಾಧನಗಳು:—

ಈ ಬಗ್ಗೆ ಖಂಡಿತವಾದ ನಿಯಮಗಳಿಲ್ಲ. ಆದರೂ ಕೆಳಗೆ ಹೇಳಿದ ಸಂಗತಿಗಳನ್ನು ಮನಸ್ಸಿನಲ್ಲಿಟ್ಟರೆ ಒಳ್ಳೇ ಸಹಾಯವಾಗುವದು:—

೧. ಬರಹದ ಅರ್ಥವನ್ನು ತಿಳುಕೊಳ್ಳಲಿಕ್ಕೆ ತೊಂದರೆಯಾಗಬಾರದು. ೨. ಶಬ್ದಗಳನ್ನು ಅಶುದ್ಧವಾಗಿ ಉಪಯೋಗಿಸಬಾರದು. ೩. ಸಂದಿಗ್ಧಾರ್ಥವುಳ್ಳ ಶಬ್ದಗ

ಳನ್ನು ಉಪಯೋಗಿಸಬಾರದು. ೪. ಸಣ್ಣಸಣ್ಣ ವಾಕ್ಯಗಳನ್ನು ಬರೆಯಬೇಕು. ೫. ವಿಷಯಾಂತರ ವಿವೇಚನ ಮಾಡಬಾರದು. ೬. ಸ್ವಲ್ಪ ಶಬ್ದಗಳಿಂದ ವಿಶೇಷ ಅರ್ಥವನ್ನು ತರತಕ್ಕದ್ದು. ೭. ಒಮ್ಮೆ ಬರೆದ ವಿಚಾರಗಳನ್ನು ಮತ್ತೆ ಬರೆಯ ಬಾರದು. ೮. ವಾಚಕರಿಗೆ ಅಪರಿಚಿತವಾದ ಶಬ್ದಗಳನ್ನು ಉಪಯೋಗಿಸ ಬಾರದು. ೯. ವಿರಾಮಚಿಹ್ನಗಳನ್ನು ಯೋಗ್ಯವಾಗಿ ಉಪಯೋಗಿಸತಕ್ಕದ್ದು.

(೬) ವಿರಾಮ ಚಿಹ್ನಗಳು: —

ಹಿಂದಿನ ಕಾಲದಲ್ಲಿ ಪದ್ಯಗ್ರಂಥಗಳೇ ಹೆಚ್ಚು; ಗದ್ಯಗ್ರಂಥಗಳು ತೀರ ಕಡಿಮೆ. ಪದ್ಯಗಳ ಚರಣಗಳ ಕೊನೆಗೆ, ಮತ್ತು ಗದ್ಯವಾಕ್ಯಗಳು ಮುಗಿದಲ್ಲಿ, ಒಂದು ಇಲ್ಲವೆ ಎರಡು (। ॥) ಉದ್ದಗೀಟುಗಳನ್ನು ಮುಂಚಿನವರು ಬರೆ ಯುತ್ತಿದ್ದರು. ಅವೇ ಆ ಕಾಲದ ವಿರಾಮಚಿಹ್ನಗಳು. ಇಂಗ್ಲಿಷ ವಿದ್ಯೆಯೊ ಡನೆ ವಿರಾಮಚಿಹ್ನಗಳು ನಮ್ಮ ಬರಹದಲ್ಲಿ ಸೇರಿದವು. ಈಗ ಪದ್ಯಗಳಲ್ಲೂ ವಿರಾಮಚಿಹ್ನಗಳನ್ನು ಉಪಯೋಗಿಸಹತ್ತಿರುವರು. ಓದುವಾಗ ನಡುವೆ ಸ್ವರ ವನ್ನು ನಿಲ್ಲಿಸಲಿಕ್ಕೂ ಓದಿದ್ದು ವಾಚಕರ ಲಕ್ಷ್ಯದಲ್ಲಿ ನೆಲೆಗೊಳ್ಳಲಿಕ್ಕೂ ವಾಕ್ಯಗ ಳಲ್ಲಿ ಅಲ್ಲಲ್ಲಿ ವಿರಾಮಚಿಹ್ನಗಳನ್ನು ಉಪಯೋಗಿಸುವರು. ವಿರಾಮಚಿಹ್ನಗಳಿಂದ ಕೆಲವೆಡೆಯಲ್ಲಿ ತುಸು ಹೊತ್ತು, ಕೆಲವೆಡೆಯಲ್ಲಿ ಬಹಳ ಹೊತ್ತು, ಹೀಗೆ ನಿಲ್ಲಲಿಕ್ಕೆ ಸಹಾಯವಾಗುತ್ತದೆ. ಅವುಗಳಲ್ಲಿ ಕೆಲವು ಪ್ರಕಾರಗಳಿರುವವು. ಅವುಗಳ ವಿವರ:—

೧. ಅಲ್ಪವಿರಾಮ:—(,) ಸಂಗ್ರಹಣದ ಪದಗಳ ನಡುವೆ, ಶಿಥಿಲ ಸಮುಚ್ಚಯದ ಪದಗಳ ನಡುವೆ, ಉದ್ದವಾಕ್ಯಗಳೊಳಗಿನ ಅಪೂರ್ಣಕ್ರಿಯೆ ಯಿದ್ದ ಸ್ಥಳದಲ್ಲಿ, ಸಂಬೋಧನ ವಿಭಕ್ತಿಯ ಮುಂದೆ, ಹಾಗು ಗೌಣವಾಕ್ಯಗಳ ಕೊನೆಗೆ ಅಲ್ಪವಿರಾಮಚಿಹ್ನ ಕೊಡಬೇಕು.

ಉದಾ: —ಗಣಪತಿ, ಷಣ್ಮುಖ ಇವರು ಶಿವನ ಮಕ್ಕಳು. ನೀರಲ್ಲಿ, ನೆಲದಲ್ಲಿ, ಬಿಸಿಲಲ್ಲಿ, ಕತ್ತಲೆಯಲ್ಲಿ, ದೇವರು ಕಾಯುವನು. ಶಿವನ ಜಡೆಯಿಂದ ಹುಟ್ಟಿದ ವೀರಭದ್ರನು ದಕ್ಷನ ಯಜ್ಞಕ್ಕೆ ಹೋಗಿ, ಅಲ್ಲಿ ನೆರೆದ ದೇವತೆಗಳನ್ನು ಚದರಿಸಿದನು. ದೇವಾ, ನನ್ನನ್ನು ರಕ್ಷಿಸು. ಕೃಷ್ಣನು ಕೌರವನಿಗೆ—ನೀನು ಪಾಂಡವರಿಗೆ ಅರ್ಧರಾಜ್ಯ ಕೊಡು, ಎಂದು ಹೇಳಿದನು.

೨. ಅರ್ಧವಿರಾಮ: —(;) (ಅ) ಅಲ್ಪವಿರಾಮದಿಂದ ಕೂಡಿಸಿದ

ವಾಕ್ಯವು ದೊಡ್ಡದಿದ್ದರೆ. (ಬ) ಬೇರೆ ಬೇರೆ ವಾಕ್ಯಗಳನ್ನು ಮಾಡಿ ಭಾಷೆಯ ಕಸುವು ಹೆಚ್ಚುಗೊಳಿಸಿದ್ದರೆ, (ಕ) ಮೊದಲನೇ ವಾಕ್ಯದ ಫಲಿತವು ಮುಂದಿನ ವಾಕ್ಯದಲ್ಲಿ ಇದ್ದರೆ, (ಡ) ಒಂದು ಪೂರ್ಣವಾಕ್ಯವು ಮುಂದಿನ ವಾಕ್ಯಕ್ಕೆ ನಿಕಟವಾಗಿ ಸಂಬಂಧಿಸುತ್ತಿದ್ದರೆ, ಅರ್ಧವಿರಾಮ ಚಿಹ್ನವನ್ನು ಉಪಯೋಗಿಸುವರು. ಉದಾ:— (ಅ) ಚಿಕ್ಕ ಹೆಂಡತಿಯು ಹೂಮಾಲೆಯ ಅಂಗಡಿಯ ಕಡೆಗೆ ಬಹಳ ಹೊತ್ತು ನೋಡಿದಳು; ಬಳಿಕ ಕಟ್ಟೆಯಿಳಿದು, ತಾನೇ ಅಂಗಡಿಗೆ ಬಂದಳು. (ಬ) ನಮ್ಮ ಜನರು ಉದ್ಯೋಗ ಬಿಟ್ಟರು; ಸುಖಕ್ಕೆ ಮೆಚ್ಚಿದರು; ವಿಲಾಸದ ಒಡವೆಗಳನ್ನು ಕೊಳ್ಳಹತ್ತಿದರು; ಅದರಿಂದ ಈಗ ಬರಿಗೈಯವರಾಗಿ ವ್ಯಸನಪಡುತ್ತಿರುವರು. (ಕ) ನಾನು ಬೇಗ ನಡೆದು ಊರುಮುಟ್ಟಿದೆನು; ಇಲ್ಲದಿದ್ದರೆ ಕಳ್ಳರಿಂದ ಸುಲಿಸಿಕೊಳ್ಳುತ್ತಿದ್ದೆನು. (ಡ) ಇಂದು ದೇವಕಾರ್ಯವು; ಬಸಪ್ಪನವರ ಮನೆಯಲ್ಲಿ ಗದ್ದಲ ಬಹಳ; ಅವರೆಲ್ಲರೂ ನನಗೆ ಗುರುತಿಲ್ಲದವರೇ: ಅದರಿಂದ ನಾನು ಹುಚ್ಚಾಗಿ ನಿಂತುಕೊಂಡೆನು.

೩. **ಅಪೂರ್ಣವಿರಾಮ**: —(:—) ಇದನ್ನು ಸಾಧಾರಣವಾಗಿ ಅರ್ಧವಿರಾಮದ ಸ್ಥಳದಲ್ಲಿ ಉಪಯೋಗಿಸುವರು. (ಅ) ಮೊದಲನೇ ವಾಕ್ಯದ ಸ್ಪಷ್ಟೀಕರಣ ಇಲ್ಲವೆ ಪುಷ್ಟೀಕರಣಕ್ಕೋಸ್ಕರ, ಮತ್ತೊಂದು ಅರ್ಥದ ಹೊಸ ವಾಕ್ಯವನ್ನು ಹೇಳುವದಿದ್ದಾಗ, ಅಪೂರ್ಣವಿರಾಮಚಿಹ್ನ ಕೊಡಬೇಕು. ಉದಾ:— ದೇಶಭಕ್ತಿಯೆಂದರೆ: —ಹಗಲಿರುಳು ದೇಶೋದ್ಧಾರ ಕೆಲಸಗಳನ್ನು ಮನಸುಗೊಟ್ಟು ಮಾಡುವದು. ನಾನು ಇಲ್ಲಿಯೇ ಇಳಿಯಬೇಕು: —ಮುಂದೆ ಹೋದರೆ ಕತ್ತಲಾದೀತು. (ಬ) ಎರಡನೆಯವರ ಮಾತನ್ನು ಅವತರಣ ತಕ್ಕೊಳ್ಳುವಾಗ ಇಲ್ಲವೆ ನಿಯಮಗಳ ಉದಾಹರಣೆಗಳನ್ನು ಹೇಳುವಾಗ ಅಪೂರ್ಣವಿರಾಮಚಿಹ್ನ ಕೊಡಬೇಕು. ಉದಾ: —ಕಾಳಿದಾಸನು ಹೀಗೆ ಹೇಳುತ್ತಾನೆ: —ಪ್ರಜೆಗಳಿಗೆ ಸುಖಕೊಡುವವನೇ ನಿಜವಾದ ಅರಸು. ನಾಮಗಳಲ್ಲಿ ಮೂರು ಪ್ರಕಾರಗಳುಂಟು:—ಉದಾ:—ರೂಢ, ಅಂಕಿತ, ಅನ್ವರ್ಥಕ.

೪. **ಪೂರ್ಣವಿರಾಮ**:— (.) ವಾಕ್ಯವೂ ವಾಕ್ಯಾರ್ಥವೂ ಪೂರ್ಣವಾಗಿ ಮುಗಿದು, ಅದರ ಸಂಬಂಧವು ಮುಂದಿನ ವಾಕ್ಯಕ್ಕೆ ವಿಶೇಷವಿರದಿದ್ದರೆ ಪೂರ್ಣವಿರಾಮಚಿಹ್ನ ಕೊಡಬೇಕು. ಉದಾ:—ಬಳಿಕ ಶಿವನು ಅರ್ಜುನನಿಗೆ ವರವಿತ್ತು ಕೈಲಾಸಕ್ಕೆ ತೆರಳಿದನು.

೫. **ಪ್ರಶ್ನಚಿಹ್ನ**:—(?) ಪ್ರಶ್ನ ಕೇಳುವ ವಾಕ್ಯದ ಕೊನೆಗೆ ಪ್ರಶ್ನ ಚಿಹ್ನ ಬರೆಯಬೇಕು. ಉದಾ:—ಇವರಲ್ಲಿ ಯಾವನು ಜಾಣನು ?

೬. **ಉದ್ಗಾರವಾಚಕಚಿಹ್ನ** :— (!) ಆನಂದ, ಭೀತಿ, ಚಮತ್ಕಾರ, ಸ್ತುತಿರೂಪ ನಿಂದೆ, ದುಃಖ, ನಗೆ ಮಂತಾದ ಮನೋವಿಕಾರಗಳ ಆಕಸ್ಮಿಕ ಉದ್ವೇಗಗಳನ್ನು ವ್ಯಕ್ತಗೊಳಿಸುವ ಶಬ್ದಗಳ ಹಾಗು ಅವ್ಯಯಗಳ ಮುಂದೆ, ಒಮ್ಮೊಮ್ಮೆ ಸಂಬೋಧನ ವಿಭಕ್ತಿಯ ಮುಂದೆ ಉದ್ಗಾರವಾಚಕಚಿಹ್ನ ಕೊಡುತ್ತಾರೆ. ಉದಾ:—ವಾಹವಾ ! ಭಲೆ ! ಮಗನೇ ! ಶಹಬಾಸ್ ! ಅಯ್ಯೋ ! ಹಾವು ! ೮ ಮೊಳ ಹಾರಿದನು ! ನೀನು ಮರಪಂಡಿತನು ! ಭಪ್ಪರೆ ಹುಡುಗ ಹೌದು ! ದಿನಾಲು ಒಂದು ಪಾಟಿ ಕಳಕೋ ! ಹರಹರ ! ಎಂಥ ಕೆಟ್ಟಹೊತ್ತು ಬಂತು ! ಆ ಅಯ್ಯನವರು ಎಂಥ ಒಳ್ಳೆಯವರು ! ಬೆಳದಿಂಗಳಿಂದ ಎಷ್ಟು ಆನಂದವಾಗುತ್ತದೆ !

೭. **ಕಂಸಚಿಹ್ನ** :— (()) ವಾಕ್ಯಾರ್ಥವನ್ನು ಸ್ಪಷ್ಟೀಕರಿಸುವದಕ್ಕೆ ಶಬ್ದ-ಪದಗಳನ್ನು ಹೆಚ್ಚಿಗೆ ಹಾಕಿ ಕಂಸ ಹಾಕುತ್ತಾರೆ. ಕಂಸದೊಳಗಿನ ಪದವಾಕ್ಯಗಳನ್ನು ಓದದಿದ್ದರೂ ಅರ್ಥಕ್ಕೆ ಕೊರತೆ ಬರದಂಥ ಪ್ರಸಂಗವಿರಬೇಕು. ಕಂಸವು, ವರ್ತುಳಕಂಸ, ಚೌಕ ಕಂಸ [ ], ಸರಳರೇಖಾಕಂಸ —···—, ಹೀಗೆ ಮೂರು ತೆರನಾಗಿರುವದು. ಉದಾ:—ನಾವು ಹವೆಯಿಂದ (ವಿಶೇಷವಾಗಿ ಪ್ರಾಣವಾಯುವಿನಿಂದ) ಬದುಕುತ್ತೇವೆ. ಆಕಳಪಿಷ್ಟೆ (ಸಗಣಿ) ಯಿಂದ ಕಾಡಿಗೆ ಹೋಗುತ್ತದೆ.

೮. **ವಿಗ್ರಹಚಿಹ್ನ**:— (—) ಸಮಾಸದೊಳಗಿನ ಶಬ್ದಗಳ ನಡುವೆ, ಹಾಗು ಬರಹದ ಸಾಲಿನ ಕೊನೆಗೆ ಅದೇ ಶಬ್ದವು ಬಂದಾಗ ವಿಗ್ರಹಚಿಹ್ನ ಕೊಡಬೇಕು. ಉದಾ:—ರಾಮ-ಲಕ್ಷ್ಮಣರು ; ರಾಜ-ನೀತಿ ; ಸಿಟ್ಟು-ಮಾಡಿದನು ; ಗಿಳಿ-ಮೂಗಿ.

೯. **ಅವತರಣಚಿಹ್ನ**:— (' ' " ") ಲೇಖವನ್ನಾಗಲಿ, ಗ್ರಂಥವನ್ನಾಗಲಿ ಬರೆಯುವಾಗ ಬೇರೊಂದು ಗ್ರಂಥದ ಲೇಖವನ್ನು ತಮ್ಮ ಬರಹದಲ್ಲಿ ಇದ್ದಕ್ಕಿದ್ದಂತೆ ಬರೆಯುವಾಗ, ಬೇರೊಬ್ಬರ ಭಾಷಣದ ಭಾಗವನ್ನು ತಮ್ಮ ಲೇಖದಲ್ಲಿ ಬರೆಯುವಾಗ, ಇಲ್ಲವೆ ಎರಡನೆಯವರು ಆಡಿದ ಮಾತನ್ನು ಪೂರ್ಣ

ಸರಿಯಾಗಿ ಹೇಳಬೇಕಾದಾಗ, ಅವುಗಳ ಆರಂಭದಲ್ಲಿ " ಹೀಗೆ, ಕೊನೆಯಲ್ಲಿ " ಹೀಗೆ ಚಿಹ್ನಮಾಡುತ್ತಾರೆ. ಇವೇ ಅವತರಣ ಚಿಹ್ನಗಳು. ಸಣ್ಣವಾಕ್ಯವಿದ್ದರೆ ' ' ಹೀಗೆ, ದೊಡ್ಡ ಭಾಗವಿದ್ದರೆ " " ಹೀಗೆ ಬರೆಯಬೇಕು. ಉದಾ:- ನ್ಯೂಟನನು " ಎಲ್ಲ ಪದಾರ್ಥಗಳ ಕಣಗಳಲ್ಲಿ ಆಕರ್ಷಣಶಕ್ತಿ ಇರುತ್ತದೆ " ಎಂಬ ತತ್ತ್ವವನ್ನು ಹುಡುಕಿ ತೆಗೆದನು. ನಮ್ಮ ಶ್ರುತಿಗಳಲ್ಲಿ ' ಸತ್ಯಮಾತಾಡು, ಧರ್ಮವನ್ನಾಚರಿಸು ' ಎಂದು ಹೇಳಲ್ಪಟ್ಟದೆ. ಅಧ್ಯಕ್ಷರು ಸಭೆಯಲ್ಲಿ " ಒಕ್ಕಟ್ಟಾಗಿರಿ, ಭಾಷೆಯ ಅಭಿಮಾನ ತಾಳಿರಿ " ಎಂದು ಹೇಳಿದರು. ರಾಮದಾಸರು ' ಸಾವಧಾನ ' ಎಂಬ ಶಬ್ದವು ಕಿವಿಗೆ ಬಿದ್ದಕೂಡಲೆ, ಮದುವೆಯನ್ನು ಒಲ್ಲೆನೆಂದು ಓಡಿಹೋದರು.

೧೦ **ಅವಗ್ರಹಚಿಹ್ನ**:—(ऽ, ऽऽ) ಸಂಸ್ಕೃತ ಸಂಧಿಗಳಲ್ಲಿ ೨ ನೇ ಪದವು ದೀರ್ಘವಾಗಿದ್ದರೆ ऽ ಈ ಚಿಹ್ನವನ್ನೂ, ಸಂಧಿಯಾದ ಎರಡೂ ಸ್ವರಗಳು ದೀರ್ಘವಾಗಿದ್ದರೆ ऽऽ ಈ ಚಿಹ್ನವನ್ನೂ ಬರೆಯುತ್ತಾರೆ. ಅಕಾರವು ಲುಪ್ತವಾದಲ್ಲಿಯೂ ऽ ಹಾಕುತ್ತಾರೆ. ಇವೇ ಅವಗ್ರಹಚಿಹ್ನಗಳು. ಇವು ಸಂಸ್ಕೃತ ಗ್ರಂಥಗಳಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಟ್ಟಿರುವವು. ಉದಾ:— ರಾಮ+ಆಜ್ಞೆ=ರಾಮಾऽಜ್ಞೆ ಜಟಾ+ಆಚಾರ್ಯ=ಜಟಾऽऽಚಾರ್ಯ, ಮನಃ+ ಅನುರಾಗ=ಮನೋऽನುರಾಗ.

(೭) ನಿಬಂಧಲೇಖನದಲ್ಲಿ ನೆನಪಿನಲ್ಲಿಡತಕ್ಕ ಮಾತುಗಳು:—

೧. ಯಾವದೊಂದು ವಿಷಯವನ್ನು ಕಾರಣವಿಲ್ಲದೆ ಬೆಳೆಸುತ್ತ ಹೋಗಬಾರದು. ಕೊಟ್ಟ ವಿಷಯಕ್ಕೆ ಸಂಬಂಧಿಸಿದ ಮುದ್ದೆಗಳನ್ನು ಮೊದಲು ಗೊತ್ತುಮಾಡಿ, ಅವುಗಳನ್ನು ಕುರಿತು ಬರೆಯಬೇಕು. ೨. ಮುದ್ದೆಗಳು ಸಮರ್ಥನಕ್ಕೆ ತಕ್ಕವುಗಳಿರಬೇಕು. ಕೊಟ್ಟ ವಿಷಯವನ್ನು ಯೋಗ್ಯವಾದ ಉದಾಹರಣೆಗಳಿಂದ ಸ್ಪಷ್ಟೀಕರಿಸತಕ್ಕದ್ದು. ೩. ಪರೀಕ್ಷೆಯಲ್ಲಿ ನಿಬಂಧ ಬರೆಯುವಾಗ ವಿದ್ಯಾರ್ಥಿಗಳು ತಮ್ಮ ಪಾಂಡಿತ್ಯವನ್ನು ಪರೀಕ್ಷಕರಿಗೆ ತೋರಿಸಬೇಕೆಂಬ ಒಣ ಹೆಮ್ಮೆಯಿಂದ ತಮಗೆ ಗೊತ್ತಿಲ್ಲದ ಸಂಗತಿಗಳನ್ನು ಬರೆಯದೆ, ಗೊತ್ತಿದ್ದದ್ದನ್ನೇ ಸರಿಯಾಗಿಯೂ ಶುದ್ಧವಾಗಿಯೂ ಬರೆಯಬೇಕು. ೪. ಯಾವ ಸಂದರ್ಭದಲ್ಲಿ ಯಾವ ಶಬ್ದಗಳನ್ನುಉಪಯೋಗಿಸಬೇಕೆಂಬವನ್ನು ತಿಳಕೊಳ್ಳಬೇಕು. ಯಾಕಂ

ದರೆ ನಿಬಂಧವು ಚಲೋದಾಗುವದು ಇಲ್ಲವೆ ಕೆಟ್ಟದಾಗುವದು ಶಬ್ದಯೋಜನೆಯನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಶಬ್ದಯೋಜನೆಗೆ ಹೆಚ್ಚು ಲಕ್ಷಗೊಡತಕ್ಕದ್ದು. ೫. ಕೂಡಿದ ಮಟ್ಟಿಗೆ ಶುದ್ಧ ಕನ್ನಡ ಶಬ್ದಗಳನ್ನೇ ಉಪಯೋಗಿಸಬೇಕು. ಅವು ಸಿಗದಿದ್ದರೆ, ವಿದ್ವಜ್ಜನರ ಮಾತಿನಲ್ಲಿ ರೂಢವಾದ ಬೇರೆ ಶಬ್ದಗಳನ್ನು ಉಪಯೋಗಿಸಬಹುದು. ಅಚ್ಚಗನ್ನಡ ಶಬ್ದಗಳಿದ್ದಲ್ಲಿ, ಅವುಗಳಿಗೆ ಬದಲಾಗಿ ಬೇರೆ ಭಾಷೆಯ ಶಬ್ದಗಳನ್ನು ಉಪಯೋಗಿಸುವದು ಸರಿಯಲ್ಲ. ಒಂದು ಶಬ್ದವನ್ನು ಉಪಯೋಗಿಸಿದನಂತರ ಮತ್ತೆ ಅದೇ ಶಬ್ದನನ್ನೇ ಉಪಯೋಗಿಸುವದು ಅವಶ್ಯವಿದ್ದರೆ, ಪುನರುಕ್ತಿಯಾಗಬಾರದೆಂದು ಅದೇ ಅರ್ಥವುಳ್ಳ ಬೇರೆ ಶಬ್ದಗಳನ್ನು ಉಪಯೋಗಿಸಬಹುದು. ೬. ನಿಬಂಧ ಬರೆಯುವದಕ್ಕೆ ಪ್ರಾರಂಭ ಮಾಡುವದಕ್ಕಿಂತ ಮೊದಲು ಕೊಟ್ಟ ವಿಷಯವನ್ನು ಕುರಿತು ಚನ್ನಾಗಿ ವಿಚಾರಮಾಡಬೇಕು. ಎಷ್ಟೋ ವಿದ್ಯಾರ್ಥಿಗಳು ಕೊಟ್ಟ ವಿಷಯದ ಬಗ್ಗೆ ಸ್ವಲ್ಪವಾದರೂ ವಿಚಾರ ಮಾಡದೆ ಒಮ್ಮೆಲೆ ಬರೆಯಹತ್ತುತ್ತಾರೆ. ಅದರಿಂದ ಅವರು ಒಮ್ಮೊಮ್ಮೆ ನಿಬಂಧದ ಮಧ್ಯದಲ್ಲಿ ಬರೆಯಬೇಕಾದದ್ದನ್ನು ಮೊದಲೇ ಬರೆದುಬಿಡುತ್ತಾರೆ. ಆರಂಭದಲ್ಲಿ ಬರೆಯ ಬೇಕಾದವನ್ನು ಕೊನೆಯಲ್ಲಿ ಬರೆಯುತ್ತಾರೆ. ಅದರಿಂದ ನಿಬಂಧವೆಲ್ಲ ಕೆಟ್ಟು ಹೋಗಿ, ಅದೇ ವಿಷಯವನ್ನು ಪುನಃ ಬರೆಯಬೇಕಾಗುತ್ತದೆ. ಹೀಗಾಗುವದರಿಂದ ಪರೀಕ್ಷೆಯಲ್ಲಿ ಎಷ್ಟೋ ವಿದ್ಯಾರ್ಥಿಗಳಿಗೆ ಅತಿಮಹತ್ವವಾದ ನಿಬಂಧ ವಿಷಯವನ್ನು ಬಿಟ್ಟೇ ಬಿಡಬೇಕಾಗುತ್ತದೆ. ಈ ತೊಂದರೆಯನ್ನು ದೂರಪಡಿಸುವದಕ್ಕಾಗಿ, ಕೊಟ್ಟ ವಿಷಯವನ್ನು ಕುರಿತು ಸ್ವಲ್ಪ ಹೊತ್ತು ಯೋಚಿಸಿ, ನಮ್ಮ ಮನಸ್ಸಿನಲ್ಲಿ ಬಂದ ಬೇರೆ ಬೇರೆ ಮುದ್ದೆಗಳ ಟಿಪ್ಪಣಿಯನ್ನು ಒಂದು ಕಾಗದದ ಮೇಲೆ ಬರೆದಿಡಬೇಕು. ಆ ಮೇಲೆ ನಿಬಂಧದ ಆರಂಭದಲ್ಲಿಯೂ, ಮಧ್ಯದಲ್ಲಿಯೂ, ಕೊನೆಯಲ್ಲಿಯೂ ಬರೆಯತಕ್ಕ ವಿಚಾರಗಳನ್ನು ಕ್ರಮದಿಂದ ಅಲ್ಲಲ್ಲಿ ಬರೆಯಬೇಕು. ನಿಬಂಧ ಬರೆಯಲಿಕ್ಕೆ ಬಹಳ ವೇಳೆಯಿದ್ದರೆ, ಆ ಸಂಬಂಧದ ಮುದ್ದೆಗಳನ್ನು ಕುರಿತು ವಿಸ್ತಾರವಾಗಿ ಬರೆಯಬೇಕು. ಇಲ್ಲದಿದ್ದರೆ ಅವುಗಳಲ್ಲಿ ಮಹತ್ವದ ಮುದ್ದೆಗಳನ್ನಷ್ಟೇ ವಿಶೇಷವಾಗಿ ವಿವರಿಸಿ, ಉಳಿದವುಗಳನ್ನು ಕುರಿತು ಸಂಕ್ಷೇಪವಾಗಿ ಬರೆಯಬೇಕು. ೭. ಎಷ್ಟೋ ಜನರು ಉಪೋದ್ಘಾತದಲ್ಲಿಯೇ ನಿಬಂಧದ ವಿಷಯವನ್ನು ವರ್ಣಿಸುತ್ತಾರೆ. ಇದು ಸರಿಯಲ್ಲ. ಉಪೋದ್ಘಾತವು

ಮಿತಿಮೀರಿ ದೊಡ್ಡದಾದರೆ, ಮುಖ್ಯವಿಷಯವನ್ನು ಲಕ್ಷಗೊಟ್ಟು ಓದುವದಕ್ಕೆ ವಾಚಕರು ಬೇಸರಗೊಳ್ಳುತ್ತಾರೆ. ಆದ್ದರಿಂದ ಉಪೋದ್ಘಾತವನ್ನು ಆದಷ್ಟು ಸ್ವಲ್ಪದರಲ್ಲಿ ಬರೆಯಬೇಕು. ೮. ಕೊಟ್ಟ ವಿಷಯದಲ್ಲಿ ಬೇರೆ ಬೇರೆ ಭಾಗಗಳನ್ನು ಮಾಡುವಾಗ, ಮೊದಲನೇ ಭಾಗದಲ್ಲಿ ವಿಷಯದ ಉಪೋದ್ಘಾತವೂ ಎರಡನೇದರಲ್ಲಿ ಅದರ ಮಧ್ಯವೂ, ಮೂರನೇದರಲ್ಲಿ ಅದರ ಉಪಸಂಹಾರವೂ ಬರುವಂತಿರಬೇಕು. ಆಗಾಗ್ಗೆ ಆಯಾ ಭಾಗಗಳಿಗೆ ಯೋಗ್ಯವಾಗಿರುವ ದೃಷ್ಟಾಂತಗಳನ್ನು ಕೊಡಬೇಕು. ಕಲ್ಪಿತದೃಷ್ಟಾಂತಗಳನ್ನು ಸಂಕ್ಷೇಪವಾಗಿ ಉದಹರಿಸಬೇಕು; ಮತ್ತು ಸಾಧಕ ಬಾಧಕ ಪ್ರಮಾಣಗಳನ್ನು ಕೊಟ್ಟು, ಅವುಗಳ ಸಹಾಯದಿಂದ ಸ್ವಂತ ಮತವನ್ನು ಸಿದ್ಧಮಾಡುವದರಿಂದ ಆ ವಿಷಯವು ವಾಚಕರ ಮನಸ್ಸಿನಲ್ಲಿ ಪೂರ್ಣವಾಗಿ ಬಿಂಬಿಸುವದು.

(೮) ನಿಬಂಧದ ಭೇದಗಳ ನಿರೂಪಣವು:—

ನಿಬಂಧಗಳು ಮೂರು ಜಾತಿಯವಿರುತ್ತವೆಂದು ಹೇಳಿರುತ್ತವಷ್ಟೇ.

೧. ಮನುಷ್ಯ, ಪ್ರಾಣಿ, ಸ್ಥಳ, ವನಸ್ಪತಿ, ಯಂತ್ರ ಇವೇ ಮುಂತಾದ ವಸ್ತುಗಳ ವರ್ಣನೆಗಳು ವರ್ಣನಪರ ನಿಬಂಧಗಳಾಗುತ್ತವೆ. ಇಂಥ ನಿಬಂಧಗಳನ್ನು ಬರೆಯುವಾಗ ವಿಷಯದ ಭಾಗಗಳನ್ನು ಕೆಳಗೆ ತೋರಿಸಿದಂತೆ ಮಾಡಿ, ಅವುಗಳ ವಿಷಯವಾಗಿ ಗೊತ್ತಿದ್ದದ್ದನ್ನು ಬರೆಯಬೇಕು. ಇಂಥ ವಿಷಯಗಳ ಬಗ್ಗೆ ಸ್ವಂತದ ಮತ ಕೊಡುವ ಅವಶ್ಯವು ಬಹುತರವಾಗಿ ಇರುವದಿಲ್ಲ. ಉದಾ:—

(ಅ) ಒಂದು ಸ್ಥಳವನ್ನು ವರ್ಣಿಸಬೇಕಾದರೆ, ಈ ಪ್ರಕಾರ ವಿಭಾಗಗಳನ್ನು ಮಾಡಬಹುದು:-೧. ಅದರ ಹೆಸರು, ೨. ಅದರ ಕ್ಷೇತ್ರಫಲ, ಜನಸಂಖ್ಯೆ ಇತ್ಯಾದಿ. ೩. ಅದು ಇರುವ ಸ್ಥಳ–ಅಂದರೆ ಯಾವ ಜಿಲ್ಹೆಯಲ್ಲಿ, ಯಾವ ನದಿಯ ದಂಡೆಯ ಮೇಲೆ, ಯಾವ ಪರ್ವತದ ಬಳಿಯಲ್ಲಿ, ಇಲ್ಲವೆ ಬೇರೆ ಸ್ಥಲ ವಿಶೇಷ, ೪. ಅದರ ಸ್ವಾಭಾವಿಕ ವರ್ಣನೆ–ಅಂದರೆ ಅಲ್ಲಿಯ ಹವೆ, ನೀರು, ಹುಟ್ಟುವಳಿ, ಸುತ್ತಮುತ್ತಲಿರುವ ಸ್ಥಳ ಮುಂತಾದವುಗಳು. ೫. ಅಲ್ಲಿದ್ದ ವಿಶೇಷ ಸಂಗತಿಗಳು–ಅಂದರೆ ಮನೆ, ಗುಡಿ, ಶಾಲೆ, ಕಚೇರಿ, ನದಿ, ಪೂಲು, ಕೆರೆ, ಬಾವಿ ಮುಂತಾದವುಗಳು. ೬. ಅಲ್ಲಿಯ ಜನರ ಸ್ಥಿತಿಗತಿ, ಧರ್ಮ, ಭಾಷೆ,

ವ್ಯಾಪಾರ, ಉದ್ಯೋಗ ಮುಂತಾದವುಗಳು. ೭. ಆ ಸ್ಥಳವು ಇತಿಹಾಸಪ್ರಸಿದ್ಧ ವಿದ್ದರೆ, ಅದರ ಕಾರಣ.

(ಬ) **ಯಾವದೊಂದು ಪ್ರಾಣಿಯ ಬಗ್ಗೆ ಬರೆಯಬೇಕಾದರೆ, ಈ ಪ್ರಕಾರ ವಿಭಾಗಗಳನ್ನು ಮಾಡಬಹುದು**:-೧. ಅದರ ಸ್ವಾಭಾವಿಕ ಗುಣಧರ್ಮ—ಅಂದರೆ ಅದರ ಜಾತಿ ಆಕಾರ ಶಕ್ತಿ ಮುಂತಾದವುಗಳು. ೨. ಅದರ ಮೂಲಸ್ಥಾನ ೩. ಅದರ ಸ್ವಭಾವವರ್ಣನೆ—ಉಗ್ರ ಅಥವಾ ಶಾಂತ ? ಮನುಷ್ಯ ರಿಗೆ ಈಲಾಗುವವೋ ಇಲ್ಲವೋ? ಇತ್ಯಾದಿ. ೪. ಅವನ್ನು ಹಿಡಿಯುವ ರೀತಿ. ೫. ಅದರಿಂದ ಮನುಷ್ಯರಿಗಾಗುವ ಲಾಭ—ಹಾನಿಗಳು.

(ಕ) **ಒಂದು ಯಂತ್ರವನ್ನು ವರ್ಣಿಸಬೇಕಾದರೆ, ಈ ಪ್ರಕಾರ ವಿಭಾಗಗಳನ್ನು ಮಾಡಬಹುದು**:—೧. ಅದರ ಆಕಾರ, ಪ್ರಕಾರ ಮುಂತಾ ದವುಗಳು. ೨. ಅದು ಯಾವ ಪದಾರ್ಥಗಳಿಂದ ಮಾಡಲ್ಪಟ್ಟಿರುವದು ? ೩. ಅದು ಯಾವದೇಶದಲ್ಲಿ ಹುಟ್ಟಿತು ? ಅದನ್ನು ಗೊತ್ತುಹಚ್ಚಿದವರು ಯಾರು ? ೪. ಅವ ರಿಂದಾಗುವ ಲಾಭಗಳು.

೨. **ಯಾವದೊಂದು ಕಥೆಯನ್ನಾಗಲಿ ಚರಿತ್ರವನ್ನಾಗಲಿ ಹೇಳುವದೇ ಕಥನಪರ ನಿಬಂಧವು.** ಇತಿಹಾಸದೊಳಗಿನ ಚರಿತ್ರಗಳೂ ಕಲ್ಪಿತ ಕಥೆಗಳೂ ಕಥನಪರ ನಿಬಂಧಗಳಲ್ಲಿ ಬರುತ್ತವೆ. ಇಂಥ ನಿಬಂಧಗಳನ್ನು ಬರೆಯಬೇಕಾದರೆ ಬಹಳ ಶ್ರಮ ಹತ್ತುವದಿಲ್ಲ. ಯಾಕಂದರೆ ಯಾವದೊಂದು ಐತಿಹಾಸಿಕ ವಿಷಯವನ್ನು ಕಾಲಾನುರೋಧದಿಂದ ವರ್ಣಿಸಿದರೆ ಕೆಲಸ ತೀರುತ್ತದೆ. ಅಂದರೆ ಆ ಸಂಗತಿಯು ಅಥವಾ ಕಥೆಯು ಯಾವ ಕಾಲದಲ್ಲಿ, ಯಾವ ದೇಶದಲ್ಲಿ, ಹಾಗು ಯಾವ ರೀತಿಯಲ್ಲಿ ಸಂಭವಿಸಿತು ? ಎಂಬದನ್ನು ಹೇಳಬೇಕು. ಇಂಥ ನಿಬಂಧಗಳ ಮಾದರಿಗಳು ವಿದ್ಯಾರ್ಥಿಗಳು ಓದುವ ಪುಸ್ತಕಗಳಲ್ಲಿ ವಿಪುಲವಾಗಿವೆ. ಶಾಲೆಯಲ್ಲಿ ಕಲಿಯುವ ಇತಿಹಾಸವೂ, ವಾಚ ನಪುಸ್ತಕಗಳಲ್ಲಿ ಕೊಟ್ಟ ಪ್ರಸಿದ್ಧಪುರುಷರ ಚರಿತ್ರಗಳೂ, ಕಾವ್ಯನಾಟಕಾ ದಿಗಳಲ್ಲಿ ಬರೆದಿರುವ ಸುರಸ ಕಥೆಗಳೂ, ಪಂಚತಂತ್ರ—ಹಿತೋಪದೇಶಗ ಳೊಳಗಿನ ಕಥೆಗಳೂ ಕಥನಪರ ನಿಬಂಧಗಳಲ್ಲಿಯೇ ಬರುತ್ತವೆ. ಈ ತರದ ಲೇಖಗಳು ವಿದ್ಯಾರ್ಥಿಗಳ ಮುಂದೆ ಮೇಲಿಂದಮೇಲೆ ಬರುವದರಿಂದಲೂ, ಅವು

ಗಳಲ್ಲಿದ್ದ ಹೊಸ ರಚನೆಯನ್ನೂ, ಹೊಸ ವಿಚಾರವನ್ನೂ, ಹೊಸಕಲ್ಪನೆಗಳನ್ನೂ ಗ್ರಹಿಸಿಕೊಳ್ಳಲಿಕ್ಕೆ ಬಹಳ ಶ್ರಮವು ಬೇಕಾಗುವದಿಲ್ಲಾದ್ದರಿಂದಲೂ ಇಂಥ ನಿಬಂಧಗಳನ್ನು ಬರೆಯುವದು ಸುಲಭವು. ಇವುಗಳಲ್ಲಿ ಉಪಸಂಹಾರವು (ಕೊನೆಯಲ್ಲಿ ಬರೆಯುತಕ್ಕ ತಾತ್ಪರ್ಯವು) ಮಾತ್ರ ಸ್ವಲ್ಪ ಕಠಿಣವಾದದ್ದು. ಆದರೂ ಈ ತೊಂದರೆಯು ಸಹ ಇಸಾಪನೀತಿಕಥೆಗಳನ್ನು ಓದಿದರೆ ಬಹುತರವಾಗಿ ದೂರಾಗುವದು. ಯಾವದೊಂದು ಕಥನಪರ ನಿಬಂಧ ಬರೆಯುಬೇಕಾದರೆ, ಕೆಳಗೆ ಕೊಟ್ಟ ವಿಭಾಗಗಳನ್ನು ಮಾಡಿ, ಆ ಪ್ರತಿಯೊಂದು ವಿಭಾಗವನ್ನು ಕುರಿತು ಗೊತ್ತಿದ್ದದ್ದನ್ನು ಬರೆಯುಬೇಕು:—

೧. ಕೊಟ್ಟ ಕಥೆಯು ಅಥವಾ ಚರಿತ್ರವು ಸಂಭವಿಸುವದಕ್ಕಿಂತ ಪೂರ್ವದ ಸ್ವಲ್ಪ ಇತಿಹಾಸ. ೨. ಆ ಸಂಗತಿಗಳು ಒದಗುವದಕ್ಕೆ ಕಾರಣಗಳು. ೩. ಅವನ್ನು ಕುರಿತು ನೆನಪಿನಲ್ಲಿಡತಕ್ಕ ಮಾತುಗಳು. ೪. ಅದರ ಪರಿಣಾಮ ೫. ತಾತ್ಪರ್ಯ. ಉದಾ:—

(ಅ) ಯಾವನೊಬ್ಬ ಪ್ರಸಿದ್ಧ ಪುರುಷನ ಚರಿತ್ರವನ್ನು ಬರೆಯುಬೇಕಾದರೆ ಕಾಲಾನುಕ್ರಮದಿಂದ ಎಲ್ಲ ಸಂಗತಿಗಳನ್ನು ಬರೆಯುಬೇಕು. (ಬ) ಯಾವದೊಂದು ಕಲೆಯ ಬಗ್ಗೆ ಬರೆಯುಬೇಕಾದರೆ, ಈ ಪ್ರಕಾರ ವಿಭಾಗಗಳನ್ನು ಮಾಡಬಹುದು:-೧. ಅದು ಎಂದು ಮತ್ತು ಹೇಗೆ ಹುಟ್ಟಿತು ! ೨. ಅದರ ಇತಿಹಾಸ, ಮತ್ತು ಅದರಲ್ಲಾದ ಸುಧಾರಣೆಗಳು. ೩. ಅದರ ಸದ್ಯದ ಸ್ಥಿತಿ. ೪. ಅದರಲ್ಲಿದ್ದ ದೋಷಗಳನ್ನು ತಿದ್ದುವ ಬಗೆ. ೫. ಅದರಿಂದಾಗುವ ಲಾಭಹಾನಿಗಳು. ೬. ಅದರ ಬಗ್ಗೆ ನಮ್ಮ ಸ್ವಂತ ವಿಚಾರಗಳು. ೭. ತಾತ್ಪರ್ಯ.

೩. ಯಾವದೊಂದು ವಿಷಯವನ್ನು ಪೂರ್ಣವಾಗಿ ಆಲೋಚಿಸಿ, ಸ್ವಂತ ವಿಚಾರಗಳನ್ನಾಗಲಿ ಮತವನ್ನಾಗಲಿ ಸ್ಥಾಪಿಸಿ ಹೇಳುವಂಥ ನಿಬಂಧಕ್ಕೆ ಚಿಂತನಪರನಿಬಂಧವೆಂಬ ಹೆಸರು. ಇಂಥ ನಿಬಂಧವು ಮೇಲೆ ಹೇಳಿದ ಎರಡು ತರದ ನಿಬಂಧಗಳಿಗಿಂತ ಹೆಚ್ಚು ಕಠಿಣವಿದ್ದು, ಅದನ್ನು ಬರೆಯುಬೇಕಾದರೆ ವಿಷಯಜ್ಞಾನ, ಭಾಷಾಜ್ಞಾನ, ಮತ್ತು ವಿಚಾರಶಕ್ತಿ ಇವು ಬಹಳೇ ಬೇಕಾಗುತ್ತವೆ. ಇಂಥ ನಿಬಂಧಗಳನ್ನು ಬರೆಯುವವನಿಗೆ ಎಷ್ಟೋ ಹಳೇ ಮತಗಳನ್ನು ಖಂಡಿಸಬೇಕಾಗುತ್ತದೆ; ಹೊಸ ಮತಗ

ಳನ್ನು ಸ್ಥಾಪಿಸಬೇಕಾಗುತ್ತದೆ; ಮತ್ತು ಇಷ್ಟಾನಿಷ್ಟ ಹಾಗು ಯೋಗ್ಯಾಯೋಗ್ಯ ಸಂಗತಿಗಳನ್ನು ನಿರ್ಣಯಿಸಬೇಕಾಗುತ್ತದೆ. ಸಾರಾಂಶ, ಮೊದಲಿನ ಎರಡು ಪ್ರಕಾರಗಳಿಗಿಂತ ಈ ಜಾತಿಯ ನಿಬಂಧಗಳನ್ನು ಬರೆಯುವವನು ಬಹಳ ವಿಚಾರಮಾಡಿ ಬರೆಯಬೇಕಾಗತ್ತದೆ. ಇದಲ್ಲದೆ ಇಂಥಾದ್ದೇ ವಿಷಯವು ಈ ಭಾಗದೊಳಗೆ ಬರುತ್ತದೆಂಬ ನಿಯಮವನ್ನು ಸಹ ಹೇಳಲಿಕ್ಕೆ ಬರುವದಿಲ್ಲ. ಇದರೊಳಗೆ ಬೇಕಾದ ವಿಷಯವು ಬರಬಹುದು; ಇಷ್ಟೇ ಅಲ್ಲ, ಒಮ್ಮೊಮ್ಮೆ ಯಾವದೊಂದು ವಿಷಯದ ಬಗ್ಗೆ ಬರೆಯುವಾಗ ಮೂರೂ ತರದ ನಿಬಂಧಗಳು ಬರಬಹುದಾದ್ದರಿಂದ, ಅದು ಯಾವ ತರದ ನಿಬಂಧವಿರುತ್ತದೆಂದು ಹೇಳುವದು ಕಠಿಣವು. ಬರೆಯುವವನಲ್ಲಿ ಜ್ಞಾನ ಮತ್ತು ಕುಶಲತೆ ಹೆಚ್ಚಿದ್ದಂತೆ ಚಿಂತನಪರನಿಬಂಧವನ್ನು ಬೇಕಾದಷ್ಟು ಬೆಳಿಸಬಹುದಾದಕಾರಣ, ಇಂಥ ನಿಬಂಧಗಳಲ್ಲಿ ಮೇಲೆ ಹೇಳಿದಂತೆ ಇಂಥಿಂಥ ಭಾಗಗಳನ್ನು ಮಾಡಬಹುದೆಂಬ ನಿಯಮವನ್ನು ಸಹ ಹೇಳಲಿಕ್ಕೆ ಬರುವದಿಲ್ಲ. ಆದರೂ ಇಂಥ ವಿಷಯದಲ್ಲಿ ಸಹ ಕೆಲವು ವಿಭಾಗಗಳನ್ನು ಮಾಡಿ, ಪ್ರತಿಯೊಂದು ಭಾಗದ ವಿಷಯಕ್ಕೆ ಗೊತ್ತಿದ್ದದ್ದನ್ನು ಬರೆಯುವದೇ ಒಳ್ಳೇದು. ಆದ್ದರಿಂದ ಇಂಥ ವಿಷಯವನ್ನು ಬರೆಯುವದಿದ್ದರೆ ಕೆಳಗೆ ತೋರಿಸಿದಂತೆ ವಿಭಾಗಗಳನ್ನು ಮಾಡಬಹುದು :—

೧. ಅದರ ಸಾಮಾನ್ಯಾರ್ಥ ; ಮತ್ತು ಗೊತ್ತಿದ್ದರೆ, ಅದರ ಮೂಲಾರ್ಥ. ೨. ವಿಷಯದ ಮೇರೆ— ಅಂದರೆ ಅದರಲ್ಲಿ ಬರುವ ಮತ್ತು ಬರದಿರುವ ಬೇರೆ ವಿಷಯಗಳನ್ನು ಹೇಳಬೇಕು. ೩. ಕೊಟ್ಟ ವಿಷಯವನ್ನು ಕುರಿತು ಸ್ವಂತ ಮತ ; ಮತ್ತು ಆ ಮತಕ್ಕೆ ಪುಷ್ಟಿ ಕೊಡುವಂಥ ದೃಷ್ಟಾಂತಗಳೂ ಗ್ರಂಥೋಕ್ತ ಪ್ರಮಾಣಗಳೂ. ೪. ವಿರುದ್ಧ ಮತಗಳ ನಿರಾಕರಣೆ. ೫. ಉಪಸಂಹಾರ (ಕಡೆಗೆ ಇಂಥಿಂಥ ಕಾರಣಗಳಿಂದ ಇಂಥಿಂಥ ಪರಿಣಾಮಗಳಾಗುತ್ತವೆಂಬದನ್ನು ತೋರಿಸಿ, ಸ್ವಂತ ಮತವನ್ನು ಸ್ಪಷ್ಟವಾಗಿ ಬರೆಯಬೇಕು.) ಉದಾ :—

(ಅ) ಮಿತವ್ಯಯ:—

೧. ಮಿತ=ಮಿತಿಮೀರದಿದ್ದ ; ವ್ಯಯ=ಖರ್ಚು. ಮಿತವ್ಯಯವೆಂದರೆ, ನಿಯಮಿತತನದಿಂದ ಖರ್ಚುಮಾಡುವದು : ಅಂದರೆ ಆದಾಯವಿದ್ದಂತೆ, ಯೋ

ಗ್ಯಾಯೋಗ್ಯ ವಿಚಾರಮಾಡಿ ಖರ್ಚುಮಾಡೋಣ. ೨. ಮಿತವ್ಯಯದ ಅವಶ್ಯಕತೆ. ೩. ಜಮಾಖರ್ಚಿನ ಉಪಯೋಗ. ೪. ವ್ಯರ್ಥ ಖರ್ಚುಮಾಡುವ ಕಾರಣಗಳು :—ಮದುವೆ-ಮುಂಜೆಗಳಲ್ಲಿ ಸಾಲ ತೆಗೆದು ಒಣ ಹೆಮ್ಮೆಗೆ ಬಿದ್ದು ಅಗತ್ಯವಲ್ಲದ ವಸ್ತುಗಳನ್ನು ಕೊಳ್ಳೋಣ, ಮದ್ದು, ಬಾಣ, ಬಿರಸು, ನಾಚು ಮುಂತಾದ ಡಂಭಾಚಾರದ ಸೊಬಗುಗಳನ್ನು ಮಾಡೋಣ ಇತ್ಯಾದಿ. ೫. ಅಗತ್ಯವಲ್ಲದ ಸ್ವಲ್ಪ ಖರ್ಚಿನ ವಿಷಯದಲ್ಲಿ ಸಹ ತಾತ್ಸಾರ ಮಾಡಬಾರದು. ಯಾಕಂದರೆ ಇಂಥ ಸಣ್ಣ ಸಣ್ಣ ಖರ್ಚಿನ ಬಾಬುಗಳನ್ನೇ ಒಟ್ಟುಗೂಡಿಸಿದರೆ, ಅವು ಒಂದು ದೊಡ್ಡ ರಕಮಿಗೆ ಸರಿಯಾಗುತ್ತವೆ. ೬. ಸ್ವಲ್ಪ ಖರ್ಚಿನಿಂದ ಬಹಳ ಲಾಭವಾಗುವಂತಿದ್ದರೆ, ಅದನ್ನು ಅವಶ್ಯವಾಗಿ ಮಾಡಬೇಕು. ಇಲ್ಲದಿದ್ದರೆ, ಹಿಡಿ ಜೋಳಕ್ಕಾಗಿ ಪಡಿ ಜೋಳ ಕಳಕೊಳ್ಳಬೇಕಾಗುತ್ತದೆ. ೭. ಮಿತವ್ಯಯವೆಂದರೆ ಜಿಪುಣತನವಲ್ಲ. ೮. ಉಪಸಂಹಾರ.

(ಬ) ಪ್ರದರ್ಶನ:—

೧. ಶಬ್ದಾರ್ಥ. ೨. ಉತ್ಪತ್ತಿಕಾಲ. ೩. ಈ ದೇಶದಲ್ಲಿ ಅದರ ಪೂರ್ವಸ್ವರೂಪ. ೪. ಜಾತ್ರೆ ಮುಂತಾದವುಗಳ ಉದ್ದೇಶಗಳು. ೫. ಸದ್ಯಕ್ಕೆ ಜಾತ್ರೆಗಳ ಅವಶ್ಯಕತೆಯುಂಟೋ ಇಲ್ಲವೋ? ೬. ಪ್ರದರ್ಶನದಿಂದಾಗುವ ಲಾಭಗಳು. ೭. ಆ ಲಾಭಗಳನ್ನು ನಮ್ಮ ಜನರು ಎಷ್ಟು ಮಟ್ಟಿಗೆ ಉಪಯೋಗಮಾಡಿಕೊಳ್ಳುವರು? ೮. ಉಪಸಂಹಾರ.

(ಕ) ಸಾಲ:—

೧. ಸಾಲವೆಂದರೇನು? ೨. ಸಾಲದ ಕಾರಣಗಳು. ೩. ಸಾಲ ತೆಗೆಯುವ ತಿಳಿಗೇಡಿತನ. ೪. ಸಾಲಕ್ಕಿಂತ ಮಿತವ್ಯಯವು ಒಳ್ಳೇದು. ೫. ಸಾಲವು ಗೆಳೆತನವನ್ನು ಕೆಡಿಸುವದು. ೬. ಸಾಲವು ನಾಶಕ್ಕೆ ಮೂಲ. ೭. ಸಾಲದಿಂದ ಸ್ವಾತಂತ್ರ್ಯ ನಾಶವಾಗುವದು. ೮. ಸಾಲಗಾರನ ಗಳಿಕೆ ಸಾವುಕಾರನ ಪಾಲಾಗುವ ಬಗೆ. ೯. ಸಾಲ ತೆಗೆಯುವ ಯೋಗ್ಯ ಸಮಯಗಳು. ೧೦. ಉಪಸಂಹಾರ.

೨ನೇ ಪ್ರಕರಣ.

ವರ್ಣನಪರ ನಿಬಂಧಗಳು.

(೧) ಆಟಗಳು (ದೇಶೀಯ ಮತ್ತು ಪಾಶ್ಚಾತ್ಯ).

೧. ಆಟಗಳ ಅವಶ್ಯಕತೆ:—

ಚಿಕ್ಕ ಹುಡುಗರನ್ನು ಯಾವದೊಂದು ಆಟದಲ್ಲಿ ತೊಡಗಿಸುವದು ಒಳ್ಳೇದು. ಇಲ್ಲದಿದ್ದರೆ ಅವರು ಗಿಡವೇರುವದರಲ್ಲಿ, ಇಲ್ಲವೆ ಕೆಟ್ಟ ಹುಡುಗರ ಸಂಗಡ ತೋಟದೊಳಗೆ ಹೊಕ್ಕು ತೋಟಿಗನ ಅಪ್ಪಣೆಯಿಲ್ಲದೆ ಹಣ್ಣುಹಂಪಲಗಳನ್ನು ಕದಿಯುವದರಲ್ಲಿ, ಇಲ್ಲವೆ ಬೇರೆ ಯಾವದೊಂದು ಕೆಟ್ಟ ಕೆಲಸ ಮಾಡುವದರಲ್ಲಿ ಹೊತ್ತುಗಳೆಯುವರು. ಆದ್ದರಿಂದ ಅವರು ಮನೆಯಲ್ಲಿಯೂ ಬೈಲೊಳಗೂ ಆಡತಕ್ಕ ಆಟಗಳ ಯೋಜನೆ ಮಾಡುವದು ಒಳ್ಳೇದು.

೨. ಪ್ರಕಾರಗಳು:—

ಸದ್ಯಕ್ಕೆ ಎಷ್ಟೋ ಆಟಗಳು ರೂಢಿಯಲ್ಲಿರುವವು. ಅವುಗಳಲ್ಲಿ ಫೂಟ್‌ಬಾಲ, ಟಗ್ ಅ ವಾರ್, ಹಾಕಿ, ಟೆನಿಸ್, ಕ್ರಿಕೆಟ್, ಡ್ರಿಲ್ ಮುಂತಾದವು ಪಾಶ್ಚಾತ್ಯ ಆಟಗಳು. ತಿಳ್ಳಿ, ಖೋ, ಫಣಿಚಂಡು, ಲಗ್ಯೋಚಂಡು, ಆನೆಕಿರ್, ಕಾನಕಾನ ಉತ್ತತ್ತಿ, ಗಣೇಶನ ಆಟ, ಹುಡ್‌ತುತು ಮುಂತಾದವು ದೇಶೀಯ ಆಟಗಳು. ಓಡೋಣ, ಜಿಗಿಯೋಣ, ಈಸೋಣ, ಬಾಕ್ಸಿಂಗ (ಮುಷ್ಟಿಪ್ರಹಾರದ ಮಲ್ಲಯುದ್ಧ) ಜಿಮನ್ಯಾಸ್ಟಿಕ್ಸ (ತಾಲೀಮು ಮಾಡೋಣ) ಮುಂತಾದ ಆಟಗಳು ಈ ದೇಶಕ್ಕೂ ಪಾಶ್ಚಾತ್ಯ ದೇಶಗಳಿಗೂ ಸಾಮಾನ್ಯವಾಗಿರುವವು.

೩. ಅವುಗಳ ಸದ್ಯದ ಸ್ಥಿತಿ:—

ಸುಮಾರು ಐವತ್ತು ವರ್ಷಗಳ ಪೂರ್ವದಲ್ಲಿ ಶಾಲಾಮಾಸ್ತರರು ಹುಡುಗರ ಆಟಗಳ ಕಡೆಗೆ ಏನೂ ಲಕ್ಷಗೊಡುತ್ತಿದ್ದಿಲ್ಲ. ಆದರೆ ಇತ್ತಿತ್ತಲಾಗಿ ಅಂದರೆ ಇಂಗ್ಲಿಷ ಸರಕಾರದವರ ಆಡಳತೆಯು ನಮ್ಮ ದೇಶದಲ್ಲಿ ಪೂರ್ಣವಾಗಿ ನೆಲೆ

ಗೊಂಡುದರಿಂದ ಅವರು ಹುಡುಗರ ಮಾನಸಿಕ, ನೈತಿಕ, ಮತ್ತು ಶಾರೀರಿಕ ಶಿಕ್ಷಣದ ಬಗ್ಗೆ ಎಷ್ಟು ಜಾಗರೂಕರಾಗಿರುವರೆಂಬದನ್ನು ಹೇಳುವ ಕಾರಣವಿಲ್ಲ. ಸದ್ಯಕ್ಕೆ ಪ್ರಾಥಮಿಕ ಹಾಗು ಇಂಗ್ಲಿಷಶಾಲೆಗಳಲ್ಲಿ ಶಾರೀರಿಕ ಶಿಕ್ಷಣವು ಕೆಲ ಮಟ್ಟಿಗೆ ಐಚ್ಛಿಕವಿಷಯವಾದಾಗ್ಯೂ, ಸ್ವಲ್ಪಕಾಲದಲ್ಲಿಯೇ ಸರಕಾರದವರು ಅದನ್ನು ಮುಖ್ಯವಾಗಿ ಕಲಿಯತಕ್ಕ ವಿಷಯಗಳಲ್ಲಿಯೇ ಸೇರಿಸುವವರಿದ್ದಾರೆ.

ಮೇಲೆ ಹೇಳಿದ ದೇಶೀಯ ಮತ್ತು ಪಾಶ್ಚಾತ್ಯ ಆಟಗಳನ್ನು ವರ್ಣಿಸದೆ, ಅವುಗಳ ಗುಣಾವಗುಣಗಳನ್ನಷ್ಟೇ ಈ ಕೆಳಗೆ ಹೇಳಿರುವೆವು. ಅದರಲ್ಲೂ ವಿಶೇಷವಾಗಿ ಪಾಶ್ಚಾತ್ಯ ಆಟಗಳ ಗುಣದೋಷಗಳನ್ನು ಕೊಟ್ಟಿರುವೆವು.

೪. **ಪಾಶ್ಚಾತ್ಯ ಆಟಗಳು:—**

ಫೂಟ್‌ಬಾಲ.

ಇದೊಂದು ಉತ್ತಮವಾದ ಆಟವು. ಅದರಿಂದ ಮೈಯೊಳಗಿನ ಸರಗಳು ಸಡಿಲಾಗಿ ಮೈಯಲ್ಲಿ ಒಳ್ಳೇ ಚಟಿವಟಿಕೆಯುಂಟಾಗುತ್ತದೆ. ಹುಡುಗರಿಗೆ ಏನೂ ಅಪಾಯವಾಗುವದಿಲ್ಲ. ದೊಡ್ಡವರಿಗೆ ಮಾತ್ರ ಒಮ್ಮೊಮ್ಮೆ ಅಪಾಯವಾಗುವ ಸಂಭವವುಂಟು. ಈ ಆಟವನ್ನು ಚಳಿಗಾಲದಲ್ಲಿ ಆಡತಕ್ಕದ್ದು. ಬಹಳ ಬಿಸಿಲು ಇದ್ದಾಗ ಆಡಕೂಡದು.

ಟಗ್ ಅಫ್ ವಾರ್.

ಇದನ್ನು ಸಶಕ್ತರಾದ ಹುಡುಗರೂ ಹರಿಯುದವರೂ ಆಡತಕ್ಕದ್ದು. ಅಶಕ್ತರಾದವರೂ ಮುದುಕರೂ ಅದರ ಗೋಜೆಗೆ ಹೋಗಬಾರದು. ಯಾಕಂದರೆ ಅದರಿಂದ ಎದೆಗೆ ಬಹಳೇ ಅಪಾಯವಾಗುವದಲ್ಲದೆ, ಒಮ್ಮೊಮ್ಮೆ ಅದು ಎದೆಯನ್ನು ಸೀಳಿ ಬಿಡುತ್ತದೆ.

ಹಾಕಿ

ಈ ಆಟವು ಎಷ್ಟೋ ಅಂಶಗಳಲ್ಲಿ ಫೂಟ್‌ಬಾಲ ಆಟದಂತೆಯೇ ಇರುವದು. ಅದರಲ್ಲಿ ಮೋರೆಯ ಮೇಲೆ ಪೆಟ್ಟು ತಾಕುವ ಸಂಭವವು ಬಹಳ ಉಂಟು. ಅದರಿಂದ ಶರೀರದ ಒಂದೇ ಮಗ್ಗಲಿಗೆ ಮಾತ್ರ ವ್ಯಾಯಾಮವಾಗುತ್ತದೆಂದು ಕೆಲವರ ಮತವದೆ. ಆದರೂ ಯಾವದೊಂದು ಶಾಲೆಯಲ್ಲಿ ಪಾಶ್ಚಾತ್ಯ

ಆಟಗಳನ್ನು ಹೊಸದಾಗಿ ಆರಂಭಿಸುವದಾದರೆ ಈ ಆಟವನ್ನೇ ಆಡಿಸುವದು ಉತ್ತಮ. ಯಾಕಂದರೆ ಇದಕ್ಕೆ ಹತ್ತುವ ಖರ್ಚು ತೀರ ಕಡಿಮೆ.

ಟೆನಿಸ್.

ಇದೊಂದು ಸ್ವಲ್ಪ ವೇಳೆಯಲ್ಲಿ ಸಾಕಷ್ಟು ವ್ಯಾಯಾಮ ಕೊಡುವ ಉತ್ತಮವಾದ ಆಟವು. ಅದರಿಂದ ಯಾವ ಅಪಾಯವೂ ಆಗುವದಿಲ್ಲ. ಮಾತ್ರ ಅದಕ್ಕೆ ಬಹಳ ಖರ್ಚು ಬರುತ್ತದೆ. ಅದು ಪ್ರಾಥಮಿಕ ಮತ್ತು ಇಂಗ್ಲಿಷ ಶಾಲೆಗಳಲ್ಲಿ ಆಡತಕ್ಕ ಆಟವಲ್ಲ. ಇಂಗ್ಲಿಷ ಕಾಲೇಜಗಳಲ್ಲಿ ಆಡಲಿಕ್ಕೆ ಅಡ್ಡಿಯಿಲ್ಲ.

ಕ್ರಿಕೆಟ್:—ಪಾಶ್ಚಾತ್ಯ ಆಟಗಳಲ್ಲಿ ಈ ಆಟವು ಬಹಳೇ ಲೋಕಪ್ರಿಯವಾದದ್ದು. ಅದು ಬಹಳ ಹೊತ್ತು ಆಡಲಿಕ್ಕೆ ಬರುವಂತಿದೆ. ಆದರೆ ಚಲೋ ಆಡುವವರಿಗೆನೇ ಮಾತ್ರ ಇದೊಂದು ಅತ್ಯುತ್ತಮವಾದ ಆಟವು. ಚಲೋ ಆಡಲಿಕ್ಕೆ ಬಾರದಿದ್ದ ಜನರಿಗೆ ಚಲೋ ಆಡುವವರ ಆಟವನ್ನು ನೋಡುತ್ತ ಸುಮ್ಮನೆ ಕೈಜೋಡಿಸಿಕೊಂಡು ಕೂಡುವದೊಂದೇ ಲಾಭವು. ಅಂಥವರ ವೇಳೆಯು ವ್ಯರ್ಥ ಹೋದಂತಾಗುವದು. ಇದಲ್ಲದೆ ಇದು ಕೇವಲ ಶ್ರೀಮಂತಜನರು ಆಡುವ ಆಟವು. ಇದಕ್ಕೆ ಹಣ, ವೇಳೆ, ಮತ್ತು ಸ್ಥಳ ಬಹಳ ಬೇಕು. ಇದನ್ನು ನಾಲ್ವತ್ತು ವರ್ಷಗಳ ವಯುಸ್ಸಿನ ತನಕ ಆಡಬಹುದು. ಐವತ್ತು ವರ್ಷಗಳ ವಯುಸ್ಸಿನವರೆಗೆ "ವಿಕೆಟ್"ದ ಹತ್ತರ ನಿಂತು ಚಂಡು ನಿಲ್ಲಿಸುವ ಕೆಲಸ ಮಾಡಬಹುದು. ಶಾಲೆಯಲ್ಲಿ ಆಡತಕ್ಕ ಆಟಗಳಲ್ಲಿ ಇದನ್ನು ಸೇರಿಸತಕ್ಕದ್ದೋ ಇಲ್ಲವೋ ಎಂಬದನ್ನೂ, ಬಹಳ ಹೊತ್ತು ಬಿಸಲಿನಲ್ಲಿ ನಿಂತು ಆಡುವವರಿಗೆ ಶರೀರಕ್ಕೆ ಹಿತವಾಗುವದೋ ಇಲ್ಲವೋ ಎಂಬವನ್ನೂ ಖಂಡಿತವಾಗಿ ಹೇಳಲಾಗದು. ಆದರೂ ಇತ್ತಿತ್ತಲಾಗಿ ಇಂಗ್ಲಿಷ ಶಾಲೆಗಳಲ್ಲಿಯೂ ಕಾಲೇಜದಲ್ಲಿಯೂ ಇದು ಬಹಳೇ ಪ್ರಚಾರದಲ್ಲಿ ಬಂದಿರುವದು.

ಈ ಆಟದಿಂದ ಮೈಯೊಳಗಿನ ಎಲ್ಲ ನರಗಳು ಗಟ್ಟಿಯಾಗುವವು. ಒಳ್ಳೇ ಚಟವಟಿಕೆಯೂ, ನಿರ್ಣಯ ಮಾಡುವ ಶಕ್ತಿಯೂ, ಮನಸ್ಸಿನ ಉದಾರತನವೂ, ಪ್ರಾಮಾಣಿಕತನವೂ, ಸಭ್ಯತನವೂ, ಅಂಪಾಯರನ ಅಂದರೆ ಆಟವು ಸರಿಯಾಗಿ ನಡೆದದೆಯೋ ಇಲ್ಲವೋ ಎಂಬದನ್ನು ಹೇಳುವದಕ್ಕೆ ನೇಮಿಸಲ್ಪಟ್ಟ ಅಧಿಕಾರಿಯ ಮತಕ್ಕೆ ಅಧೀನವಾಗುವದೂ, ಜಯವು ದೊರೆದಾಗ ಸ್ವಾಭಾವಿಕವಾಗಿ

ಹುಟ್ಟುವ ಗರ್ವವನ್ನು ಬಿಟ್ಟುಗೊಟ್ಟು ನಮ್ರತನದಿಂದಿರುವದೂ, ಅಪಜಯವಾದರೂ ಮನಸ್ಸಿನ ಸ್ವಾಸ್ಥ್ಯವನ್ನು ಕಳಕೊಳ್ಳದೆ ಮತ್ತು ಪ್ರತಿಪಕ್ಷದವರ ವಿಷಯವಾಗಿ ಕಿಂಚಿತ್ತಾದರೂ ಹಗೆತನವನ್ನು ಮಾಡದೆ ಅವರ ಕೂಡ ಸ್ನೇಹಭಾವದಿಂದ ಇರುವದೂ, ಸಾರಾಂಶ ವ್ಯವಹಾರದಲ್ಲಿ ಅಡಿಗಡಿಗೆ ಬೇಕಾಗುವ ಗುಣಗಳೇ ಕ್ರಿಕೆಟ್ ಆಟ ಆಡುವವರಲ್ಲಿ ಉಂಟಾಗುವವು.

ಡ್ರಿಲ್:— ಡ್ರಿಲ್ ಅಂದರೆ ಕವಾಯಿತು. ಅದು ದ್ವಿವಿಧವಾಗಿರುವದು. ಯುದ್ಧದ ವೇಳೆಯಲ್ಲಿ ಬೇಕಾಗುವ ಕವಾಯಿತು ಕಲಿಯುವದಕ್ಕಾಗಿ ಶಿಪಾಯಿಗಳು ಮಾಡುವ ವ್ಯಾಯಾಮವು ಮೊದಲನೇದು. ಇದಕ್ಕೆ ಇಂಗ್ಲಿಷದಲ್ಲಿ "ಮಿಲಿಟರಿ ಡ್ರಿಲ್" ಎಂದೆನ್ನುತ್ತಾರೆ. ಶಾಲೆಗಳಲ್ಲಿ ಹುಡುಗರು ಕಲಿಯುವ ಡ್ರಿಲ್ ಎರಡನೇದು. ಕೈಕಾಲುಗಳ ಚಲನವಲನದಿಂದ ಶರೀರವನ್ನು ವಿಸ್ತಾರಗೊಳಿಸುವದೇ ಎರಡನೇ ತರದ ಡ್ರಿಲ್ಲಿನ ಮುಖ್ಯ ಉದ್ದೇಶವು. ಫೂಟಬಾಲ ಆಟದಿಂದ ಶರೀರದ ಅವಯವಗಳು ವಿಸ್ತಾರಗೊಳ್ಳುವಷ್ಟು ಡ್ರಿಲ್ಲಿನಿಂದ ವಿಸ್ತಾರಗೊಳ್ಳುವದಿಲ್ಲ. ಆದರೂ ಇದರಿಂದ ಎಷ್ಟೋ ಹುಡುಗರಿಗೆ ಒಳ್ಳೇ ವ್ಯಾಯಾಮ ಸಿಗುವಂತೆ ಮಾಡಬಹುದು. ಕ್ರಿಕೆಟ್ ಮುಂತಾದ ಆಟಗಳಿಗೆ ಹತ್ತುವ ವೆಚ್ಚವೂ ಸಾಮಾನುಗಳೂ ಇದಕ್ಕೆ ಬೇಕಾಗುವದಿಲ್ಲಾದ್ದರಿಂದ ಈ ವ್ಯಾಯಾಮವನ್ನು ಎಲ್ಲರೂ ಮಾಡಬಹುದು. ಆದರೆ ಅದನ್ನು ಮುಗ್ಗಲಗೇಡಿತನದಿಂದಲೂ ನೈಗಳ್ಳತನದಿಂದಲೂ ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ಅದನ್ನು ಮಾಡುವದಾದರೆ ಮನಸ್ಸುಗೊಟ್ಟು ತಪ್ಪಿಲ್ಲದೆ ಮಾಡಬೇಕು.

೪. ದೇಶೀಯ ಆಟಗಳು:—

ತಿಳ್ಳಿ:— ಈ ದೇಶದ ಆಟಗಳಲ್ಲಿ ಮುಖ್ಯವಾದದ್ದು ಲೋಕಪ್ರಿಯವಾದದ್ದೂ ಆಗಿರುವದು. ಕ್ರಿಕೆಟ್, ಟೆನಿಸ್ ಮುಂತಾದ ಪಾಶ್ಚಾತ್ಯ ಆಟಗಳಿಗೆ ಬೇಕಾಗುವಂತೆ ಇದಕ್ಕೆ ಹಣವು ಬೇಕಾಗುವದಿಲ್ಲ. ಒಂದು ಸಪಾಟ ಬೈಲಿನ ಹೊರತಾಗಿ ಇದಕ್ಕೆ ಮತ್ತೆ ಯಾವ ಸಾಧನವೂ ಬೇಡ. ಇದು ಶ್ರೀಮಂತ ಹುಡುಗರಿಗೂ ಬಡ ಹುಡುಗರಿಗೂ ಸಮನಾಗಿ ಸಾಧ್ಯವಾಗಿರುವದರಿಂದ ಬಹಳ ಲೋಕಪ್ರಿಯವಾದ ಆಟವಾಗಿದೆ. ಇದರಿಂದ ಶರೀರಕ್ಕೆ ಒಳ್ಳೇ ವ್ಯಾಯಾಮವು ದೊರಿಯುವದರಿಂದ, ಅನ್ನವು ಚನ್ನಾಗಿ ಪಚನವಾಗಿ ಶರೀರವು ನಿರೋಗಿಯಾಗುವದು.

ಖೋ :— ಇದಾದರೂ ದೇಶೀಯ ಆಟಗಳಲ್ಲಿ ಉತ್ತಮವಾದ ಆಟವು. ಇದಕ್ಕೆ ಹಣವು ಬೇಡ. ಇದನ್ನು ಹುಡುಗರೂ ಹರೆಯದವರೂ ಆಡತಕ್ಕದ್ದು. ವಯಸ್ಸಾದವರು ಮಾತ್ರ ಅದರ ಗೋಜೆಗೆ ಹೋಗಬಾರದು. ಯಾಕಂದರೆ ಅವರಲ್ಲಿ ಸಾಕಷ್ಟು ಚಪಲತನವೂ, ಓಡಾಟದ ಶ್ರಮನನ್ನು ತಾಳಿಕೊಳ್ಳುವ ಶಕ್ತಿಯೂ ಇರುವದಿಲ್ಲ. ಇದಲ್ಲದೆ ಈ ಆಟದಲ್ಲಿ ಒಮ್ಮೊಮ್ಮೆ ಮುಕ್ಕರಿಸಿ ಬೀಳುವ ಸಂಭವವೂ ಇರುವದು. ತಿಳ್ಳೀ ಆಟದಿಂದಾಗುವ ಲಾಭಗಳೇ ಈ ಆಟದಿಂದಾಗುತ್ತವೆ.

೩. ಈ ದೇಶಕ್ಕೂ ಪಾಶ್ಚಾತ್ಯ ದೇಶಗಳಿಗೂ ಸಾಮಾನ್ಯವಾದ ಆಟಗಳು :—

ಓಡೋಣ :— ಇದೊಂದು ಹುಡುಗರು ಆಡತಕ್ಕ ಉತ್ತಮವಾದ ಆಟವು. ಇದರಿಂದ ಶರೀರದ ಪ್ರತಿ ಒಂದು ಭಾಗಕ್ಕೆ ವ್ಯಾಯಾಮವು ದೊರೆಯುತ್ತದೆ. ಆದರೆ ಇದನ್ನು ದೊಡ್ಡವರು ಮಾತ್ರ ಎಂದೂ ಆಡಬಾರದು. ಯಾಕಂದರೆ ಅವರಿಂದ ಒಮ್ಮೊಮ್ಮೆ ಎದೆಯಲ್ಲಿ ನೋವು ಉಂಟಾಗಿ ಬಹಳೇ ಕೆಟ್ಟ ಪರಿಣಾಮವಾಗುತ್ತದೆ.

ಜಿಗಿಯೋಣ:— ಇದರಿಂದ ಕಾಲುಗಳಿಗೆ ಉತ್ತಮ ವ್ಯಾಯಾಮವಾಗುತ್ತದೆ. ಆದರೆ ಬೇರೆ ಯಾವ ಅವಯವಗಳಿಗೂ ವ್ಯಾಯಾಮವಾಗುವದಿಲ್ಲ. ಇದು ಕೂಡಲೇ ಬೇಸರಗೊಳಿಸುವದಲ್ಲದೆ ಕೆಲವುಸಲ ಅಪಾಯಕರವಾದದ್ದು. ಉದ್ದವಾದದ್ದೊಂದು ಕೋಲನ್ನು ನೆಲಕ್ಕೆ ಊರಿ ಅದರ ಸಹಾಯದಿಂದ ಬಹಳ ಎತ್ತರವಾಗಿಯೂ ದೂರದಲ್ಲಿಯೂ ಜಿಗಿಯುವದರಿಂದಲೂ ಒಳ್ಳೇ ವ್ಯಾಯಾಮವಾಗುತ್ತದೆ. ಆದರೆ ಅದರಿಂದ ಕಾಲಿಗೆ ಇಲ್ಲವೆ ಮೊಣಕೈಗೆ ಅಪಾಯವಾಗುವ ಸಂಭವವು ಬಹಳೇ ಉಂಟು.

ಈಸೋಣ :— ಇದು ಬಹಳೇ ಉತ್ತಮವಾದ ವ್ಯಾಯಾಮವು. ಇದರಿಂದ ಪ್ರತಿ ಒಂದು ಅವಯವಕ್ಕೂ ವ್ಯಾಯಾಮವು ದೊರೆದು ಶರೀರವು ವಿಸ್ತಾರಗೊಳ್ಳುವದು. ಅನುಕೂಲವಿದ್ದಲ್ಲಿ ಅದಕ್ಕೆ ಆದಷ್ಟು ಉತ್ತೇಜನ ಕೊಡತಕ್ಕದ್ದು. ಮಾತ್ರ ತಣ್ಣಗಿನ ಹವೆಯಲ್ಲಿ ಬಹಳ ಹೊತ್ತು ನೀರಿನಲ್ಲಿ ಈಸಾಡುವದು ಒಳಿತಲ್ಲ.

ಮುಷ್ಟಿಪ್ರಹಾರ :— ಇದೇನು ಕೆಟ್ಟ ವ್ಯಾಯಾಮವಲ್ಲ. ಆದರೆ ಎದೆಗೆ ಬಹಳೇ ಅಪಾಯಕರವಾದದ್ದು. ಇದಲ್ಲದೆ ಅದರಿಂದ ಪರಸ್ಪರರಲ್ಲಿ ವೈಮನಸ್ಯ

ವುಂಟಾಗುತ್ತದೆ. ಇಂಗ್ಲಿಷ ಜನರಲ್ಲಿ ಅದರ ಪ್ರಚಾರವು ತೀರ ಕಡಿಮೆ. ಆದಷ್ಟು ಮಟ್ಟಿಗೆ ಅದನ್ನು ಮಾಡದಿರುವದೇ ಉತ್ತಮವು. ಈ ವ್ಯಾಯಾಮಕ್ಕೆ ಇಂಗ್ಲಿಷದಲ್ಲಿ "ಬಾಕ್ಸಿಂಗ" ಎಂಬ ಹೆಸರು.

ತಾಲೀಮು ಮಾಡೋಣ:— ಇದಕ್ಕೆ ಇಂಗ್ಲಿಷದಲ್ಲಿ "ಜಿಮನ್ಯಾಸ್ಟಿಕ್ಸ" ಎಂದೆನ್ನುತ್ತಾರೆ. ಇದು ಇಂಗ್ಲಿಷ ಜನರಿಗೆ ಬಹುತರವಾಗಿ ಸೇರುವದಿಲ್ಲ. ಇದು ಕೇವಲ ಮನೆಯೊಳಗೆ ಮಾಡುವ ವ್ಯಾಯಾಮವಾದ್ದರಿಂದ ಇದನ್ನು ಮಾಡುವಾಗ ಸ್ವಚ್ಛವಾದ ಹವೆಯು ಸಿಗುವದಿಲ್ಲೆಂತಲೂ, ಇದರಿಂದ ಶರೀರದಲ್ಲಿ ಸಾಕಷ್ಟು ಚಟುವಟಿಕೆಯುಂಟಾಗುವದಿಲ್ಲೆಂತಲೂ ಅನ್ನುವದುಂಟು ಆದರೂ ಇದರಿಂದ ಮೈಯೊಳಗಿನ ಸ್ನಾಯುಗಳು ಒಳ್ಳೇ ಪುಷ್ಟಿಯನ್ನು ಹೊಂದಿ, ಮೈಕಟ್ಟು ಸೀಟಾಗಿಯೂ ಸ್ಥಿರವಾಗಿಯೂ ಆಗುವದು.

೬. ಪಾಶ್ಚಾತ್ಯ ಆಟಗಳ ಬಗ್ಗೆ ನೆನಪಿಡತಕ್ಕ ಮಾತುಗಳು:—

ಮೇಲೆ ಹೇಳಿದ ಪಾಶ್ಚಾತ್ಯ ಆಟಗಳಲ್ಲಿ ಯಾವ ಆಟಗಳು ಈ ದೇಶಕ್ಕೆ ಅನುಕೂಲವಾಗಿವೆ ಎಂಬದು ಇನ್ನೂ ಪೂರ್ಣವಾಗಿ ನಿರ್ಣಯವಾಗಿಲ್ಲ. ಯುರೋಪಖಂಡದವರಿಗೆ ಸರಿಬೀಳುವ ಆಟಗಳು ನಮ್ಮ ದೇಶದವರಿಗೆ ತಕ್ಕವಾಗಿವೆಯೋ ಇಲ್ಲವೋ ಎಂಬದನ್ನು ಪೂರ್ಣವಾಗಿ ವಿಚಾರಿಸತಕ್ಕದ್ದು. ಯಾಕಂದರೆ ಬಹಳ ಹೊತ್ತು ಆಡುವ ಆಟಗಳಿಂದ ಕೆಟ್ಟ ಪರಿಣಾಮಗಳಾಗುತ್ತವೆ. ಆದರೂ ಪಾಶ್ಚಾತ್ಯ ಆಟಗಳಲ್ಲಿ ಹಾಕೀ ಆಟವನ್ನು ಬಹಳ ಹೊತ್ತು ಆಡದಿದ್ದರೆ ಅದು ಈ ದೇಶದ ಹುಡುಗರ ಪ್ರಕೃತಿಗೆ ಸಲ್ಲುವದೆಂದು ಕೆಲವರು ಅನ್ನುವದುಂಟು.

೭. ಆಟಗಳನ್ನಾಡುವಾಗ ಸಾಮಾನ್ಯವಾಗಿ ನೆನಪಿಡತಕ್ಕ ಮಾತುಗಳು: —

ಒಂದು ಪಕ್ಷದವರು ಎರಡನೇ ಪಕ್ಷದವರ ಕೂಡ ನಿಷ್ಕಪಟದಿಂದಾಡೋಣ; ಶಾಂತವೃತ್ತಿಯನ್ನು ತಾಳೋಣ, ಅಂದರೆ ಆಟದಲ್ಲಿ ಜಯ ಹೊಂದದಾಗ ಅಳತೆಗೆಟ್ಟು ಬಡಿವಾರದ ಮತ್ತು ಸೊಕ್ಕಿನ ಮಾತುಗಳನ್ನು ಎಂದೂ ಆಡದಿರೋಣ; ಅಪಜಯವಾದರೂ ಧೈರ್ಯಗುಂದದೆ ಇರೋಣ; ಮತ್ತು ಪ್ರಾಮಾಣಿಕತನ, ಲಂಚದ ವಿಷಯವಾಗಿ ತಿರಸ್ಕಾರ, ಸರಳತನ, ಆಜ್ಞಾಧಾರಣ, ನಮ್ರತನ, ಉಲ್ಲಾಸವೃತ್ತಿ, ರಾಜನಿಷ್ಠೆ ಮುಂತಾದ ಗುಣಗಳ ಲಾಭಗಳನ್ನು ಮನಸ್ಸಿನಲ್ಲಿಟ್ಟು ಅದರಂತೆ ವರ್ತಿಸೋಣ.

೮. ಉಪಸಂಹಾರ :— ಆಟಗಳನ್ನಾಡುವದರಿಂದ ಶಾರೀರಿಕ ಲಾಭಗಳಲ್ಲದೆ ಮಾನಸಿಕ ಮತ್ತು ನೈತಿಕ ಲಾಭಗಳೂ ಆಗುವವು. ಆದ್ದರಿಂದ ಅವುಗಳನ್ನು ವಿಶೇಷವಾಗಿ ಹುಡುಗರು ಮತ್ತು ಕೆಲಮಟ್ಟಿಗೆ ದೊಡ್ಡವರು ಸಹ ಮೇಲೆ ಹೇಳಿದ ಗುಣದೋಷಗಳನ್ನು ಲಕ್ಷದಲ್ಲಿಟ್ಟು ಅವಶ್ಯವಾಗಿ ಆಡತಕ್ಕದ್ದು.

೨. ಇಂಡಿಯಾ ಗವ್ಹರ್ನಮೆಂಟ (ಹಿಂದುಸ್ತಾನ ಸರಕಾರ).

೧. ಹಿಂದುಸ್ತಾನದ ರಾಜ್ಯಕಾರಭಾರ ಸಾಗಿಸುವದಕ್ಕಾಗಿ ಇಂಗ್ಲಂಡದಲ್ಲಿ ಸೆಕ್ರೆಟರಿ ಆಫ ಸ್ಟೇಟ ಫಾರ ಇಂಡಿಯಾ (ಸ್ಟೇಟ ಸೆಕ್ರೆಟರಿ) ಎಂಬ ಅಧಿಕಾರಸ್ಥನನ್ನೂ ಅವನ ಕೌನ್ಸಿಲರರನ್ನೂ ನೇಮಿಸಿರುವರು. ಆದರೆ ಇಂಗ್ಲಂಡ ದೇಶವು ಹಿಂದುಸ್ತಾನ ದೇಶದಿಂದ ಬಹುದೂರವಿರುವದರಿಂದಲೂ, ಸ್ಟೇಟ ಸೆಕ್ರೆಟರಿಯ ಕಚೇರಿಯು ಲಂಡನ ಪಟ್ಟಣದಲ್ಲಿರುವದರಿಂದಲೂ ಹಿಂದುಸ್ತಾನವನ್ನಾಳುವದಕ್ಕಾಗಿ ಹಿಂದುಸ್ತಾನದಲ್ಲಿ ಬೇರೆ ಯಾವನೊಬ್ಬ ಅಧಿಕಾರಸ್ಥನಿರುವದು ಅವಶ್ಯವು. ಇದಕ್ಕಾಗಿ ಗವ್ಹರ್ನರ-ಜನರಲ ಹಾಗು ಅವನ ಕೌನ್ಸಿಲ ಈ ಅಧಿಕಾರಸ್ಥರನ್ನು ನೇಮಿಸಿರುವರು. ಈ ಸರಕಾರಕ್ಕೆ **ಇಂಡಿಯಾ ಗವ್ಹರ್ನಮೆಂಟ (ಹಿಂದುಸ್ತಾನ ಸರಕಾರ)** ಎಂಬ ಹೆಸರು.

೨. ಗವ್ಹರ್ನರ-ಜನರಲನೂ ಅವನ ಅಧಿಕಾರಗಳೂ:—

ಗವ್ಹರ್ನರ-ಜನರಲನು ಬಹುತರವಾಗಿ ಗ್ರೇಟಬ್ರಿಟನದ ಒಬ್ಬ ಶ್ರೀಮಂತ ಮನೆತನದವನಿದ್ದು, ಇಂಗ್ಲಂಡದ ಮುಖ್ಯ ಮಂತ್ರಿಯ ಸೂಚನೆಯ ಮೇರೆಗೆ ಇಂಗ್ಲಂಡದ ಅರಸನಿಂದಲೇ ನೇಮಿಸಲ್ಪಡುವನು. ಇಂಗ್ಲಂಡದ ಅರಸನ ಪ್ರತಿನಿಧಿಯಾಗಿ ಅವನು ಹಿಂದುಸ್ತಾನದಲ್ಲಿ ಐದು ವರ್ಷ ರಾಜ್ಯವಾಳುವನು. ಅವನ ಅಧಿಕಾರಗಳು ಯಾವವೆಂದರೆ :—

(೧) ಅವನು ಹಿಂದುಸ್ಥಾನದಲ್ಲಿ ಆಯಾ ಪ್ರಾಂತಗಳ ಗವ್ಹರ್ನರರಿಗೂ ಅಧಿಕಾರಿಗಳಿಗೂ ಮೇಲಧಿಕಾರಿಯಾಗಿರುವನು. (೨) ಅವನ ಸಮ್ಮತಿಯಿಲ್ಲದೆ ಯಾವ ಕಾಯದೆಯೂ ಮಾಡಲ್ಪಡಲಾರದು. (೩) ಅವನು ಮಾಡಿದ ನಿಯಮಗಳು ಆರು ತಿಂಗಳುಗಳ ವರೆಗೆ ಕಾಯುದೆಗಳಾಗಿ ನಡೆಯುವವು. (೪)

ಅವನಿಗೆ ಹಿಂದುಸ್ಥಾನದ ಸಂಸ್ಥಾನಿಕರ ಕೂಡ ವ್ಯವಹಾರ ಮಾಡುವ ಸಂಪೂರ್ಣ ಅಧಿಕಾರವುಂಟು. ಹಾಗು ಅವರ ರಾಜ್ಯಕಾರ್ಯಗಳಲ್ಲಿ ಕೈಹಾಕಬಹುದಲ್ಲದೆ, ಅವರನ್ನು ಪದಚ್ಯುತರನ್ನಾಗಿಯೂ ಮಾಡಬಹುದು. (೫) ನ್ಯಾಯಕೋರ್ಟು ಗಳು ಕಂಡು ಹಿಡಿದ ಅಪರಾಧಿಗಳನ್ನು ಅವನು ಅರಸನಂತೆ ಕ್ಷಮಿಸಬಹುದು.

ಈ ಪ್ರಕಾರ ಅವನಿಗೆ ಬಹಳ ಅಧಿಕಾರಗಳಿದ್ದರೂ, ಹಿಂದುಸ್ಥಾನದಲ್ಲಿ ಬೇರೆ ಅಧಿಕಾರಿಗಳಂತೆ ಸ್ಟೇಟ ಸೆಕ್ರೆಟರಿಯ ಹುಕುಮುಗಳನ್ನು ನಡಿಸಬೇಕಾಗುತ್ತದೆ.

೩. ಗವ್ಹರ್ನರ-ಜನರಲನ ಎಗ್ಝಿಕ್ಯುಟಿವ್ಹ ಕೌನ್ಸಿಲು:—

೧೭೭೩ ನೇ ಇಸವಿಯ ರೆಗ್ಯುಲೇಟಿಂಗ ಆಕ್ಟ ಆದಂದಿನಿಂದ ಗವ್ಹರ್ನರ ಜನರಲನ ಸಹಾಯಕ್ಕಾಗಿ ಒಂದು ಕೌನ್ಸಿಲು ನೇಮಿಸಲ್ಪಟ್ಟಿರುವದಷ್ಟೆ. ಆ ಕೌನ್ಸಿಲಿನ ಸಭಾಸದರನ್ನು ಮೊದಲು ಇಂಗ್ಲಿಷ ಈಸ್ಟ ಇಂಡಿಯಾ ಕಂಪನಿಯ ಡಾಯರೆಕ್ಟರ ಜನರೇ ನೇಮಿಸುತ್ತಿದ್ದರು. ಆವರೆ ೧೮೫೮ ನೇ ಇಸವಿಯಿಂದಿತ್ತಲಾಗಿ ಅವರನ್ನು ಸ್ಟೇಟ ಸೆಕ್ರೆಟರಿಯ ಸೂಚನೆಯ ಮೇರೆಗೆ ಇಂಗ್ಲಂಡದ ಅರಸನೇ ನೇಮಿಸುತ್ತಿರುವರು. ೧೯೧೯ ನೇ ಇಸವಿಯಲ್ಲಿ ಆ ಕೌನ್ಸಿಲಿನಲ್ಲಿ ಗವ್ಹರ್ನರ-ಜನರಲ್ ಹಾಗು ಕಮಾಂಡರ ಇನ್‌ಚೀಫ ಇವರಿಬ್ಬರ ಹೊರ್ತಾಗಿ ಬೇರೆ ಆರು ಮಂದಿ ಮೆಂಬರರು ಹೀಗೆ ಒಟ್ಟಿಗೆ ಎಂಟುಮಂದಿ ಸಭಾಸದರಾದರು. ಈ ಆರುಮಂದಿ ಮೆಂಬರರಲ್ಲಿ ಮೂವರು ಆಯ್.ಸಿ.ಎಸ್. ಪರೀಕ್ಷೆ ಕೊಟ್ಟವರೂ ಹಿಂದುಸ್ಥಾನದಲ್ಲಿ ಕನಿಷ್ಠ ಹತ್ತು ವರ್ಷ ಕೆಲಸಮಾಡಿದವರೂ, ಒಬ್ಬನು ಬ್ರಿಟಿಶ ಆಯಿಲ್ಲದಿಂದ ಬಂದವನೊಬ್ಬ ಬ್ಯಾರಿಸ್ಟರನೂ (ಕಾಯದೆ ಬಲ್ಲವ), ಉಳಿದವರಿಬ್ಬರು ವಿಶೇಷಜ್ಞರೂ ಆಗಿದ್ದರು. ೧೯೦೯ ನೇ ಇಸವಿಯಿಂದಿತ್ತಲಾಗಿ ಅವರಲ್ಲೊಬ್ಬನು ಇಂಡಿಯನನು (ಹಿಂದೀ) ಇರಬೇಕೆಂದು ಗೊತ್ತಾಗಿರುವದು. ೧೯೧೯ ನೇ ಇಸವಿಯ ಆಕ್ಟ ಆದಂದಿನಿಂದ ಗವ್ಹರ್ನರ-ಜನರಲನ ಕೌನ್ಸಿಲಿನಲ್ಲಿ ಕೆಲವು ಹೆಚ್ಚು ಕಡಿಮೆಗಳಾಗಿವೆ. ಮೆಂಬರರ ಸಂಖ್ಯೆಯು ಎಂಟಕ್ಕಿಂತ ಹೆಚ್ಚಾಗಿರಬಹುದು. ಮೆಂಬರರಲ್ಲಿ ಮೂವರು ಆಯ್. ಸಿ. ಎಸ್. ಪರೀಕ್ಷೆ ಕೊಟ್ಟವರೂ, ಹಿಂದುಸ್ಥಾನದಲ್ಲಿ ಕನಿಷ್ಠ ಹತ್ತು ವರ್ಷ ಕೆಲಸಮಾಡಿದವರೂ ಇರಬೇಕೆಂತಲೂ, ಒಬ್ಬನು ಬ್ರಿಟಿಶ-ಆಯಿಲ್ಲ ಇಲ್ಲವೆ ಹಿಂದುಸ್ಥಾನದಿಂದ ಆರಿಸಲ್ಪಟ್ಟ ಒಬ್ಬ ಕಾಯಿದೆ ಬಲ್ಲವನು ಇರಬೇಕೆಂತಲೂ, ಕೌನ್ಸಿಲಿನಲ್ಲಿ ಇಂಡಿಯನರ ಸಂಖ್ಯೆಯು ಮೂರರಕಿಂತ ಕಡಿಮೆಯಾಗಿರಬಾರದೆಂತಲೂ ಗೊತ್ತಾಗಿರುವದು.

ಯಾವ ವಿಷಯದಲ್ಲಾದರೂ ಗವ್ಹರ್ನರ-ಜನರಲನು ತನ್ನ ಕೌನ್ಸಿಲರರ ಬಹುಮತದಂತೆ ನಡಕೊಳ್ಳಬೇಕಾಗುತ್ತದೆ. ಆದರೆ ಹಿಂದುಸ್ಥಾನದ ಹಿತ-ಸುರಕ್ಷತೆ-ಶಾಂತತೆಗಳಿಗೆ ಸಂಬಂಧಿಸಿದ ವಿಷಯದಲ್ಲಿ ಮಾತ್ರ ಅವನು ಅವರ ಮತಗಳನ್ನುಲ್ಲಂಘಿಸಬಹುದು. ಇಂಥ ಪ್ರಸಂಗದಲ್ಲಿ ವಿರುದ್ಧಮತ ಕೊಟ್ಟ ಸಭಾಸದರು ಹೇಳಿದ ಕಾರಣಗಳನ್ನು ಸ್ಟೇಟ ಸೆಕ್ರೆಟರಿಯವರಿಗೆ ತಿಳಿಸಬೇಕಾಗುತ್ತದೆ.

೪. ರಾಜ್ಯಕಾರಭಾರ ಸಾಗಿಸುವ ಕ್ರಮವು:—

ಮೊದಲು ರಾಜ್ಯಕಾರಭಾರದ ಕೆಲಸವು ಸ್ವಲ್ಪವಿದ್ದಾಗ, ಅದು ಗವ್ಹರ್ನರಜನರಲನ ಕಡೆಗಿದ್ದು ಕೌನ್ಸಿಲಿನಲ್ಲಿ ಚರ್ಚಿಸಲ್ಪಡುತ್ತಿತ್ತು. ಇದರಿಂದ ಕೆಲಸಕ್ಕೆ ವಿಲಂಬವಾಗಿ ಅನಾನುಕೂಲತೆಯುಂಟಾಗುತ್ತಿತ್ತು. ರಾಜ್ಯಕಾರಭಾರದ ಕೆಲಸವು ಬೆಳೆಯುತ್ತ ಹೋದದ್ದರಿಂದ, ಅದರಲ್ಲಿ ಬೇರೆಬೇರೆ ಖಾತೆಗಳುಂಟಾಗಿ, ಒಂದೊಂದು ಖಾತೆಯು ಒಬ್ಬೊಬ್ಬ ಮೆಂಬರನ ಕಡೆಗೆ ಕೊಡಲ್ಪಟ್ಟಿದೆ. ಆಯಾ ಖಾತೆಗಳಿಗೆ ಸಂಬಂಧಿಸಿದ ಸಾಮಾನ್ಯವಾದ ಹಾಗು ಮಹತ್ವವಲ್ಲದ ಕೆಲಸಗಳನ್ನು ಆಯಾ ಖಾತೆಗಳ ಮೇಂಬರರೇ ನೋಡುವರು. ಆದರೆ ಯಾವದೊಂದು ಕೆಲಸವು ಮಹತ್ವವುಳ್ಳದ್ದಿದ್ದಲ್ಲಿ, ಆ ಸಂಬಂಧದ ಪತ್ರವ್ಯವಹಾರವನ್ನು ಆ ಖಾತೆಯ ಮೆಂಬರನು ತನ್ನ ಮತದೊಂದಿಗೆ ವ್ಹಾಯಿಸರಾಯನ ಕಡೆಗೆ ಕಳಿಸಬೇಕಾಗುತ್ತದೆ. ಅದಕ್ಕೆ ವ್ಹಾಯಿಸರಾಯನು ಒಪ್ಪಿಕೊಂಡಲ್ಲಿ ಅವನ ಹುಕುಮಿನ ಪ್ರಕಾರ ಆ ಕೆಲಸವು ಮಾಡಲ್ಪಡುವದು. ಆದರೆ ಮತಭೇದವಾದಲ್ಲಿ, ವ್ಹಾಯಿಸರಾಯನು ಆ ಪತ್ರವ್ಯವಹಾರವನ್ನು ಉಳಿದ ಮೆಂಬರರ ಕಡೆಗೆ ಕಳುಹಿಸಿಕೊಡುವನು. ಬಳಿಕ ಆ ಕೆಲಸವು ಕೌನ್ಸಿಲಿನಲ್ಲಿ ಸಂಪೂರ್ಣವಾಗಿ ಚರ್ಚಿಸಲ್ಪಡುವದು.

೫ ಗವ್ಹರ್ನರ-ಜನರಲನಿಗೆ ಅಧೀನವಾದ ಖಾತೆಗಳು:—

(೧) **ಫಾರೇನ ಡಿಪಾರ್ಟಮೆಂಟ**:—ಇದು ವ್ಹಾಯಿಸರಾಯನ ಕಡೆಗಿದ್ದು, ಏತದ್ದೇಶೀಯ ಸಂಸ್ಥಾನಗಳ ಕೂಡಲೂ, ಅಫಗಾನಿಸ್ತಾನ, ಇರಾಣ, ಅರಬಸ್ತಾನ, ತಿಬೇಟ, ಚೀನ, ಸಿಯಾಮ ಮುಂತಾದ ಸ್ವತಂತ್ರ ರಾಜ್ಯಗಳ ಕೂಡಲೂ ವ್ಯವಹಾರ ಮಾಡುವದುಂಟು. ಆಯಾ ಸಂಸ್ಥಾನಗಳಲ್ಲಿ ಏಜಂಟರನ್ನಾಗಲಿ ರೆಸಿಡೆಂಟರನ್ನಾಗಲಿ ನೇಮಿಸುವದೂ, ಬಲುಚಿಸ್ತಾನ, ಅಜಮೀರ, ಮಾಳವಾ, ನಾರ್ಥವೆಸ್ಟ ಫ್ರಂಟಿಯರ ಪ್ರಾಂತಗಳನ್ನಾಳುವದೂ ಈ ಖಾತೆಯ ಕೆಲಸಗಳು.

(೨) **ಹೋಮ ಡಿಪಾರ್ಟಮೆಂಟ** :—ಇದು ಆಯಾ ಪ್ರಾಂತಗಳ ಪೋಲೀಸ, ಜೇಲ, ದವಾಖಾನೆ, ಮ್ಯುನಿಸಿಪಾಲಿಟಿಗಳ ಆಡಳಿತವನ್ನು ಮೇಲ್ವಿಚಾರಣೆ ಮಾಡುವದು. ಇಂಡಿಯನ್ ಸಿವ್ಹಿಲ್ ಸರ್ವ್ಹಿಸ, ಇಂಡಿಯನ್ ಮೆಡಿಕಲ್ ಸರ್ವ್ಹಿಸ, ಇಂಪೀರಿಯಲ್ ಲಾಯಬ್ರರಿ, ರಿಕಾರ್ಡ ಆಫೀಸಗಳು ಇದಕ್ಕೆ ಅಧೀನವಾಗಿವೆ. ಈ ದೇಶದ ಪುರಾತನದ ಇತಿಹಾಸಪ್ರಸಿದ್ಧವಾದ ಕಟ್ಟಡಗಳನ್ನು ಸುರಕ್ಷಿತವಾಗಿಡುವ ಕೆಲಸವೂ ಈ ಖಾತೆಯು ಕಡೆಗಿರುವದು.

(೩) **ಲೆಜಿಸ್ಲೇಟಿವ್ಹ ಡಿಪಾರ್ಟಮೆಂಟ** :—ಹಿಂದುಸ್ತಾನದ ಸಲುವಾಗಿ ಮೊದಲಿದ್ದ ಕಾಯದೆಗಳನ್ನು ಸುಧಾರಿಸುವದೂ ಹೊಸಕಾಯದೆಗಳನ್ನು ಮಾಡುವದೂ ಈ ಖಾತೆಯ ಕೆಲಸವು.

(೪) **ಫಾಯನ್ಯಾನ್ಸ ಡಿಪಾರ್ಟಮೆಂಟ** :—ಆಯಾ ಪ್ರಾಂತಗಳ ಖರ್ಚಿನ ಬಾಬುಗಳನ್ನು ಮೇಲ್ವಿಚಾರಣೆ ಮಾಡುವದೂ, ಹಿಂದುಸ್ತಾನ ಸರಕಾರಕ್ಕೊಳಗಾದ ಸೈನ್ಯ-ಪೋಸ್ಟ-ಟೆಲಿಗ್ರಾಫ-ಕಸ್ಟಮ ಖಾತೆಗಳ ಖರ್ಚಿನ ಬಾಬುಗಳನ್ನು ವ್ಯವಸ್ಥೆಪಡಿಸುವದೂ, ಇಡೀ ಹಿಂದುಸ್ತಾನ ದೇಶದ ಉತ್ಪನ್ನದ ಮೇಲಿನ ಕರವನ್ನು ಕೂಡಿಸುವದೂ, ವಾರ್ಷಿಕ ಬಜೆಟ್ ಅಂದರೆ ವರ್ಷದಲ್ಲಾಗುವ ಆದಾಯ-ಖರ್ಚುಗಳ ಅಂದಾಜಿನ ಪಟ್ಟಿಯನ್ನು ಸಿದ್ಧಗೊಳಿಸುವದೂ ಈ ಖಾತೆಯು ಕೆಲಸಗಳು.

(೫) **ರೆವ್ಹಿನ್ಯು ಮತ್ತು ಆಗ್ರಿಕಲ್ಚರ ಡಿಪಾರ್ಟಮೆಂಟ** :—ಭೂಕಂದಾಯವನ್ನು ಗೊತ್ತುಪಡಿಸುವದೂ, ಆಯಾ ಪ್ರಾಂತಗಳಲ್ಲಿ ದುರ್ಭಿಕ್ಷ ನಿವಾರಣಾರ್ಥ ಹಾಗು ಮಾರ್ಗ-ಪೂಲು-ಕಾಲುವೆಗಳನ್ನು ಕಟ್ಟಿಸುವದಕ್ಕಾಗಿ ಮಾಡಲ್ಪಟ್ಟ ವ್ಯವಸ್ಥೆಯನ್ನು ಮೇಲ್ವಿಚಾರಣೆ ಮಾಡುವದೂ, ಸಾಗುವಳಿಯನ್ನು ಸುಧಾರಿಸುವದಕ್ಕಾಗಿ ಪ್ರಯೋಗಗಳನ್ನು ಮಾಡುವದೂ ಈ ಖಾತೆಯು ಕೆಲಸಗಳು.

(೬) **ಕಾಮರ್ಸ ಮತ್ತು ಇಂಡಸ್ಟ್ರಿ ಡಿಪಾರ್ಟಮೆಂಟ**:—ಪೋಸ್ಟ, ಟೆಲಿಗ್ರಾಫ, ಕಸ್ಟಮ, ಉದ್ಯೋಗ, ವ್ಯಾಪಾರಗಳ ಬಗ್ಗೆ ವ್ಯವಸ್ಥೆ ಮಾಡುವದೂ, ಗಿರಣಿಗಳಲ್ಲಿ ಹೆಂಗಸರೂ ಹುಡುಗರೂ ಇಂತಿಷ್ಟೇ ತಾಸು ಕೆಲಸಮಾಡತಕ್ಕದ್ದೆಂಬದನ್ನು ಗೊತ್ತುಪಡಿಸುವದೂ ಈ ಖಾತೆಯು ಕೆಲಸಗಳು.

(೭) **ಎಜ್ಯುಕೇಶನ್ ಡಿಪಾರ್ಟಮೆಂಟ**:— ವಿದ್ಯಾಖಾತೆ, ಸ್ಯಾನಿಟೇಶನ್, ಸ್ಥಾನಿಕ ಸ್ವರಾಜ್ಯ (ಮ್ಯುನಿಸಿಪಾಲಿಟಿ-ಲೋಕಲ್ ಬೋರ್ಡ್) ಗಳ ಬಗ್ಗೆ ಈ ಖಾತೆಯು ವಿಚಾರಿಸುವದು.

(೮) **ಆರ್ಮಿ ಡಿಪಾರ್ಟಮೆಂಟ**:— ಇದು ಕಮಾಂಡರ-ಇನ್-ಚೀಫನ ಕಡೆಗಿದ್ದು, ಅವನು ಸೈನ್ಯ, ಕ್ಯಾಂಟನಮೆಂಟ, ಕೋಟೆಗಳ ಸಂಬಂಧವಾಗಿ ವಿಚಾರಿಸುವನು.

ಮೇಲ್ಕಾಣಿಸಿದ ಪ್ರತಿ ಒಂದು ಖಾತೆಯು ಒಬ್ಬ ಕೌನ್ಸಿಲಮೆಂಬರನ ಕಡೆಗಿದ್ದು, ಅವನ ಸಹಾಯಕ್ಕಾಗಿ ಸೆಕ್ರೆಟರಿ, ಅಂಡರ ಸೆಕ್ರೆಟರಿ. ಅಸಿಸ್ಟಂಟ ಸೆಕ್ರೆಟರಿ, ಹಾಗೂ ಎಷ್ಟೋ ಕಾರಕೂನರು ನೇಮಿಸಲ್ಪಟ್ಟಿರುವರು.

೬. ಹಿಂದುಸ್ತಾನ ಸರಕಾರಕ್ಕೊಳಪಟ್ಟ ವಿಷಯಗಳು:— ಇವು ಇಡೀ ಹಿಂದುಸ್ತಾನ ದೇಶಕ್ಕೆ ಸಂಬಂಧಿಸಿರುವವು. ಅವು ಯಾವವೆಂದರೆ— (೧) ಪರರಾಷ್ಟ್ರಕ್ಕೂ ಏತದ್ದೇಶೀಯ ಸಂಸ್ಥಾನಗಳಿಗೂ ಸಂಬಂಧಿಸಿದ ವಿಷಯಗಳು. (೨) ಸೈನ್ಯ-ಹಡಗುಪಡೆಗಳ ಖಾತೆಗಳು. (೩) ರೇಲ್ವೆ-ಪೋಸ್ಟ-ಟೆಲಿಗ್ರಾಫ ಖಾತೆಗಳು. (೪) ದೇಶದ ಸಾರ್ವತ್ರಿಕ ಸಾಲ, ನಾಣ್ಯ, ಬ್ಯಾಂಕ, ಇನ್‌ಶುರನ್ಸ, ವ್ಯಾಪಾರಗಳು. (೫) ಇಂಪೀರಿಯಲ್ ಸರ್ವ್ಹಿಸ. (೬) ಆಯಾ ಪ್ರಾಂತಗಳಿಗೊಳಗಾದ ಪ್ರದೇಶಗಳಲ್ಲಿ ಬದಲಾವಣೆ ಮಾಡುವದು. (೭) ಸೆನ್ಸಸ್ ಅಂದರೆ ಜನರ ಖಾನೇಸುಮಾರಿ.

೭. ಹಿಂದುಸ್ತಾನ ಸರಕಾರಕ್ಕೂ ಪ್ರಾಂತಿಕ ಸರಕಾರಕ್ಕೂ ಇರುವ ಸಂಬಂಧ :—

ಮೊದಲು ಮುಂಬಯಿ, ಮದ್ರಾಸ, ಬಂಗಾಲ ಪ್ರಾಂತಗಳಲ್ಲಿಯ ಬ್ರಿಟಿಶರ ಠಾಣ್ಯಾಗಳು ಪರಸ್ಪರ ಸ್ವತಂತ್ರಗಳಾಗಿದ್ದವು. ಇದರಿಂದ ಕೆಲಸಕ್ಕೆ ವಿಲಂಬವಾಗುತ್ತಿದ್ದದ್ದಲ್ಲದೆ, ಮತಭೇದವಾಗಿ ಕಲಹಗಳೂ ಆಗುತ್ತಿದ್ದವು. ಆದ್ದರಿಂದ ಮುಂಬಯಿ-ಮದ್ರಾಸ ಪ್ರಾಂತಗಳು ಬಂಗಾಲ ಪ್ರಾಂತದ ಗವ್ಹರ್ನರನಿಗೆ ಕೆಲಮಟ್ಟಿಗೆ ಅಧೀನವಾಗಿರಬೇಕೆಂದು ಗೊತ್ತಾಯಿತು. ಮುಂದೆ ಗವ್ಹರ್ನರ-ಜನರಲನ ಅಧಿಕಾರವು ಬೆಳೆಯುತ್ತ ಹೋಗಿ, ಹಿಂದುಸ್ತಾನದ ಪ್ರತಿ ಒಂದು ಪ್ರಾಂತಿಕ ಸರಕಾರವು ಗವ್ಹರ್ನರ-ಜನರಲನಿಗೆ ಸಂಪೂರ್ಣ ಅಧೀನವಾಗಿ ಅವನ ಹುಕುಮಿನಂತೆ

ನಡಕೊಳ್ಳತಕ್ಕದ್ದೆಂದು ೧೯೧೯ನೇ ಇಸ್ವಿಯ ಆಕ್ಟಿನ ಪ್ರಕಾರ ಗೊತ್ತಾಯಿತು. ಆದರೆ ೧೯೧೯ನೇ ಇಸ್ವಿಯ ಆಕ್ಟದಿಂದ ಪ್ರಾಂತಿಕ ಸರಕಾರದ ಮೇಲಿದ್ದ ಹಿಂದುಸ್ಥಾನ ಸರಕಾರದ ಅಧಿಕಾರವು ಎಷ್ಟೋ ಮಟ್ಟಿಗೆ ಕಡಿಮೆಯಾಗಿರುವದು. ಹಿಂದುಸ್ಥಾನ ಸರಕಾರದವರು ಮಾಡುತ್ತಿದ್ದ ಎಷ್ಟೋ ಕೆಲಸಗಳು ಪ್ರಾಂತಿಕ ಸರಕಾರದವರ ಕಡೆಗೆ ಬಂದಿರುವವು. ಆದರೂ ಹಿಂದುಸ್ಥಾನ ಸರಕಾರಕ್ಕೊಳಗಾದ ವಿಷಯಗಳಿಗೆ ಪ್ರಾಂತಿಕ ಸರಕಾರದವರ ಆಡಳಿತವು ತೊಂದರೆ ಮಾಡುತ್ತಿದ್ದಲ್ಲಿ, ಇಲ್ಲವೆ ಎರಡು ಪ್ರಾಂತಿಕ ಸರಕಾರದವರು ಯಾವದೊಂದು ವಿಷಯದ ಬಗ್ಗೆ ಮತಭೇದಪಟ್ಟಲ್ಲಿ ಹಿಂದುಸ್ಥಾನ ಸರಕಾರದವರು ಪ್ರಾಂತಿಕ ಸರಕಾರದವರಿಗೆ ಕೊಟ್ಟ ವಿಷಯಗಳಲ್ಲಿ ಕೈಹಾಕುವದುಂಟು. ಇದಲ್ಲದೆ ಹೊಸ ಕಾಯದೆಗಳನ್ನು ಮಾಡುವ ಇಲ್ಲವೆ ಸೂಚಿಸುವ ಅಧಿಕಾರವು ಹಿಂದುಸ್ಥಾನ ಸರಕಾರದವರ ಕಡೆಗೆ ಮಾತ್ರ ಉಳಿದಿರುವದು.

(೩) ಖಂಡಾಳೆ ಘಟ್ಟ

ಮುಂಬಯಿಯಿಂದ ಉಗೆಬಂಡಿಯಲ್ಲಿ ಕೂತು ಪುಣೆಯ ಮಾರ್ಗವಾಗಿ ಪ್ರವಾಸ ಮಾಡಲು ಮೊದಲು ಸುಮಾರು ಐವತ್ತು ಅರುವತ್ತು ಮೈಲುಗಳ ವರೆಗೆ ಉಗೆಬಂಡಿಯು ಸಪಾಟ ಬೈಲಿನಲ್ಲಿ ಹಾಯ್ದು ಹೋಗುವದು. ಆದರೆ ಇಷ್ಟು ಮಾರ್ಗ ದಾಟಿದ ಕೂಡಲೆ ಆ ಬಂಡಿಯು ಘಟ್ಟಗಳ ಮೇಲೆ ಮೆಲ್ಲಮೆಲ್ಲನೆ ವಕ್ರಗತಿಯಿಂದ ಏರಹತ್ತುತ್ತದೆ. ಪಶ್ಚಿಮ ಹಿಂದುಸ್ಥಾನದಲ್ಲಿರುವ ಪರ್ವತಾವಳಿಯು ಸುಮಾರು ಆರುಸಾವಿರ ಫೂಟು ಎತ್ತರವಿದ್ದು, ಅದು ಪಶ್ಚಿಮ ಸಮುದ್ರದ ದಂಡೆಯಿಂದ ಸುಮಾರು ಮೂವತ್ತು ಮೈಲುಗಳ ಅಂತರದಲ್ಲಿ ದಕ್ಷಿಣೋತ್ತರವಾಗಿ ಸುಮಾರು ಮುನ್ನೂರು ಮೈಲು ವಿಸ್ತಾರವಾದ ಒಂದು ದೊಡ್ಡ ಗೋಡೆಯನ್ನು ಕಟ್ಟಿದಂತೆ ನಿಂತಿರುವದು. ಇದೇ ಪರ್ವತಾವಳಿಯ ಶಾಖೆಗಳಾದ **ಮಾಥೆರಾನ, ಮಾವುಲಿ** ಎಂಬ ಪರ್ವತಗಳು ಪಡುವಣಕಡಲಿಗೂ ಸಹ್ಯಾದ್ರಿಗೂ ನಡುವೆ ಇರುವ ಕೊಂಕಣ ಸೀಮೆಯಲ್ಲಿರುತ್ತವೆ. ಘಟ್ಟಗಳನ್ನು ದಾಟಿದ ಮೇಲೆ ಕೆಲವು ಶಾಖೆಗಳು ಮೂಡಣ ದಂಡೆಯ ಕಡೆಗೆ ಇಳಿಜಾರಾಗುತ್ತ ಹೋದದ್ದರಿಂದ, ಕೃಷ್ಣಾ, ಭೀಮಾ, ಗೋದಾವರಿ ನದಿಗಳು ಈ ಸಹ್ಯಪರ್ವತದಲ್ಲಿ

ಹುಟ್ಟಿ ಪೂರ್ವಾಭಿಮುಖಿಗಳಾಗಿ ಹರಿದು ದೂರದಲ್ಲಿರುವ ಬಂಗಾಲ ಉಪಸಾಗರಕ್ಕೆ ಕೂಡುತ್ತವೆ. ಈ ನದಿಗಳ ಉಗಮಸ್ಥಾನಗಳು ಪಶ್ಚಿಮದಂಡೆಯಿಂದ ಸುಮಾರು ಐವತ್ತು ಅರುವತ್ತು ಮೈಲು ಅಂತರದಲ್ಲಿರುತ್ತವೆ. ಮಳೆಗಾಲದಲ್ಲಿ ಉಗೆಬಂಡಿಯಲ್ಲಿ ಪ್ರವಾಸಮಾಡುವವರು ಈ ಪರ್ವತಗಳ ಅಂದಕ್ಕೆ ಬೆರಗಾಗುತ್ತಾರೆ. ಈ ದೇಶಗಳ ಭಾಗದಲ್ಲಿ ಬೆಳೆದ ಹಚ್ಚನ್ನ ಹುಲ್ಲಿನ ಕಡೆಗೆ ದೃಷ್ಟಿಯು ಹಾಯಲು, ವನಲಕ್ಷ್ಮಿಯು ಹಸರು ದುಕೂಲವನ್ನುಟ್ಟಿಕೊಂಡಂತೆ ಆ ಭಾಗವು ಕಂಗೊಳಿಸುವದು. ಅಲ್ಲಿರುವ ದೊಡ್ಡ ದೊಡ್ಡ ನೀರಿನ ಪ್ರವಾಹಗಳು ಅರ್ಭಟಿಸಿ ಅಟ್ಟಹಾಸದಿಂದ ಎತ್ತರವಾದ ಗುಡ್ಡಗಳ ಮೇಲಿಂದ ಕೆಳಗೆ ಬೀಳುತ್ತವೆ. ಆದರೆ ಉಗೆಬಂಡಿಯಲ್ಲಿ ಕುಳಿತು ಹೋಗುವಾಗ ಮನಸ್ಸನ್ನು ಆಹ್ಲಾದಗೊಳಿಸುವ ಈ ಉತ್ಕೃಷ್ಟವಾದ ಪರ್ವತಾವಳಿಯ ಶೋಭೆಯನ್ನು ನೋಡಲಿಕ್ಕೆ ಅವಕಾಶವು ದೊರೆಯುವದಿಲ್ಲ. ಯಾಕಂದರೆ ಈ ಸೌಂದರ್ಯಕ್ಕೆ ಮೆಚ್ಚಿ ಉತ್ಸುಕನಾದ ಪ್ರೇಕ್ಷಕನು ನೋಡೇನೆಂದರೆ, ನಿಯಮಿತವಾದ ದಾರಿಯನ್ನು ಬಿಟ್ಟು ಸ್ವಲ್ಪಾದರೂ ಅತ್ತಿತ್ತ ಸರಿಯದೆ ಕಠಿಣವಾದ ಲೋಹಮಾರ್ಗವನ್ನು ಹಿಡಿದು ಅದಕ್ಕೆ ಸರಿಯಾಗಿ ಕಠಿಣವಾದ ಹೃದಯದಿಂದ ಒಂದೇಸವನೆ ಓಡುವಂಥ ಉಗೆಬಂಡಿಯಲ್ಲಿ ಕುಳಿತು ಹೋಗಬೇಕಾಗುವದರಿಂದ, ಈ ತರದ ಸೃಷ್ಟಿಸೌಂದರ್ಯದಿಂದುಂಟಾಗುವ ಸುಖಕ್ಕೆ ಎರವಾಗುತ್ತಾನೆ. ಪಶ್ಚಿಮ ಹಿಂದುಸ್ಥಾನದ ಪರ್ವತಗಳ ಶೋಭಾವಲೋಕನದಿಂದುಂಟಾಗುವ ಸುಖವನ್ನು ಚನ್ನಾಗಿ ಉಪಭೋಗಿಸಬೇಕಾದರೆ, ಈ ಘಟ್ಟಗಳ ಮೇಲೆ ಕಾಲು-ನಡಿಗೆಯಿಂದ ಪ್ರವಾಸಮಾಡಬೇಕು. ಇಂಥ ಪ್ರವಾಸಿಕರು **ಇಗತಪುರಿ** ಅಥವಾ **ಖಂಡಾಳೆಯಿಂದ** ಹೊರಡಬೇಕು. ಇಗತಪುರಿಯಿಂದ ಸ್ವಲ್ಪ ಅಂತರದಲ್ಲಿ ದಕ್ಷಿಣಮಹಾರಾಷ್ಟ್ರದಲ್ಲಿ ಅತ್ಯುನ್ನತವಾದ "**ತುಲಸೀಬಾಯಿ**" ಎಂಬ ಶಿಖರವು ಹತ್ತುತ್ತದೆ. ಈ ಸ್ಥಳದಿಂದ ಸಮೀಪದಲ್ಲಿಯೇ ಇರುವ ಪರ್ವತಗಳಲ್ಲಿ ಭವ್ಯವಾದ ಕೋಟೆಗಳೂ ಕೊತ್ತಳಗಳೂ ಮಹಾರಾಷ್ಟ್ರದೇಶದ ಪ್ರಾಚೀನಕಾಲದ ವೈಭವವನ್ನು ಸೂಚಿಸುತ್ತವೆ. ಸದ್ಯಕ್ಕೆ ನಾಶಹೊಂದಿದ ಈ ಭವ್ಯವಾದ ಕೋಟೆಗಳಲ್ಲಿ ಹಳೇ ಹೌದುಗಳೂ, ಹಾಳಾದ ಹಗೆಗಳೂ, ಹೆಗ್ಗಣಗಳ ಹಿಕ್ಕಿಗಳಿಂದ ತುಂಬಿದ ಭಂಡಾರಗಳೂ, ಒಡೆದು ಹಾಕಿದ ತೋಫುಗಳೂ ಇವೇ ಮುಂತಾದ ಪುರಾತನದ ಕುರುಹುಗಳನ್ನು ಕಾಣಬಹುದು. ಇವೇ ಪರ್ವತಗಳ ಮಗ್ಗಲಲ್ಲಿ ಕೊರೆಯಲ್ಪಟ್ಟ

ಕಾರ್ಲೆ, ಭಾಜ ಎಂಬ ಜೈನರ ಸುಂದರವಾದ ಗುಡಿಗಳು ದಾರಿಕಾರರ ವಿಶ್ರಾಂತಿಸ್ಥಾನಗಳಾಗಿವೆ. ಇಲ್ಲಿ ಗಡುತರವಾಗಿ ಮುಂದೆ ಹಾದಿರುವ ಬಂಡೆಗಲ್ಲುಗಳ ಕೆಳಗೆ ಕುಳಿತು ತಮ್ಮ ಪೂರ್ವಜರ ಶಿಲ್ಪಕಲಾಕೌಶಲ್ಯವನ್ನು ಕಂಡು ಪಥಿಕರು ಬೆರಗಾಗುತ್ತಾರೆ. ಖಂಡಾಳೆಘಟ್ಟದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂಥ ಭವ್ಯವಾದ ನೋಟಗಳು ವಿಪುಲವಾಗಿರುವವು. ಆದರೆ ಇವೆಲ್ಲಕ್ಕೂ ಮೇಲಾದ ವನಶೋಭೆಯು "**ಡ್ಯೂಕ್ಸ ನೋಜ**" (ಡ್ಯೂಕನ ಮೂಗು) ಎಂಬ ಶಿಖರವಲ್ಲಿ ಕಂಡುಬರುವದು. ಈ ಶಿಖರವು ಖಂಡಾಳೆಘಟ್ಟದಿಂದ ಸುಮಾರು ಆರೇಳು ಮೈಲುಗಳ ಅಂತರದಲ್ಲಿರುವದು.

ಈ ಘಟ್ಟದ ತುದಿಯ ಮೇಲೆ ನಿಂತು ಮೂರುಸಾವಿರ ಫೂಟು ಕೆಳಗಿರುವ ಕೊಂಕಣದ ಬೈಲಿನ ಕಡೆಗೆ ನೋಡಲು, ಕೊಳೆಗಳೂ ಹಳ್ಳಗಳೂ ನೀಲವರ್ಣದ ಮಂಜಿನಲ್ಲಿ ಮಸುಕುಮಸುಕಾಗಿ ಕಾಣುವವು. ಅರಬೀ ಸಮುದ್ರದಿಂದ ಬರುವ ಶೀತಲವಾದ ಗಾಳಿಯು ಗುಡ್ಡವನ್ನೇರುವ ಶ್ರಮವನ್ನು ಹೊಯಿದೋಡಿಸಿ ಮನಸ್ಸನ್ನು ಆನಂದಗೊಳಿಸುವದು. ಆದರೆ ಗುಡ್ಡ ಹತ್ತುವ ಶ್ರಮದಿಂದ ಶರೀರದಲ್ಲಿ ಉಷ್ಣತೆಯು ಹೆಚ್ಚಾಗುವದರಿಂದ, ಒಮ್ಮೆಲೆ ತಂಗಾಳಿಗೆ ಮೈಗೊಡುವದು ಸರಿಯಲ್ಲ. ಸ್ವಲ್ಪಹೊತ್ತು ವಿಶ್ರಮಿಸಿ ತಿರುಗಿ ಖಂಡಾಳೆಗೆ ಮುಟ್ಟುವದರೊಳಗೆ ಪರ್ವತವನ್ನು ಹತ್ತಿಳಿಯುವದರಿಂದ ಒಳ್ಳೇ ಹಸಿವು ಹುಟ್ಟುವದು. ಈ ತರದ ಪ್ರವಾಸವು ಭೂಮಿಯಲ್ಲಿ ಯಾವತ್ತೂ ಔಷಧಗಳಿಂದುಂಟಾಗುವ ಗುಣಕ್ಕಿಂತಲೂ ಹೆಚ್ಚಿನ ಆರೋಗ್ಯವನ್ನುಂಟುಮಾಡುವದು.

(೪) ಜಾತ್ರೆ.

೧. ಯಾವದೊಂದು ಹಬ್ಬದ ನಿಮಿತ್ತಕ್ಕಾಗಲಿ, ದೇವರ ಆರಾಧನೆಗಾಗಲಿ, ಸಾಧುಸತ್ಪುರುಷರ ಪುಣ್ಯತಿಥಿಗಾಗಲಿ ವರ್ಷದಲ್ಲೊಂದು ದಿನ ಗೊತ್ತುಮಾಡಿದ ಸ್ಥಳದಲ್ಲಾಗುವ ಜನಸಮ್ಮೇಲನಕ್ಕೆ **ಜಾತ್ರೆ**ಯೆನ್ನುವರು. ನಮ್ಮ ಪೂರ್ವಜರು ಶಿಕ್ಷಣ, ಜ್ಞಾನ, ವ್ಯಾಪಾರ, ಸುಧಾರಣೆ ಮೊದಲಾದವುಗಳ ಅಭಿವೃದ್ಧಿಗಾಗಿ ಮಾಡಿದ ಸಾಧನಗಳಲ್ಲಿ ಜಾತ್ರೆಯೊಂದಾಗಿದೆ.

೨. ಆರಂಭಕಾಲ:—ನಮ್ಮ ದೇಶದಲ್ಲಿ ಜಾತ್ರೆ ನೆರೆಯುವ ಪರಿಪಾಠವು ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದಿದೆ. ಈ ವರೆಗೂ ಹಿಂದುಸ್ಥಾನದಲ್ಲಿ ಎಷ್ಟೋ ಕಡೆಯಲ್ಲಿ ಜಾತ್ರೆಗಳು ನಡೆಯುತ್ತಲಿವೆ. ಮೌರ್ಯವಂಶದ ಚಕ್ರವರ್ತಿಯಾದ ಅಶೋಕನ ಕಾಲವೆಂದರೆ, ಈ ಹೊತ್ತಿಗೆ ಸುಮಾರು ಎರಡು ಸಾವಿರ ವರ್ಷಗಳಾದವು. ಅವನು ತನ್ನ ಶಿಲಾಲೇಖಗಳಲ್ಲಿ ಜಾತ್ರೆಗಳ ಬಗ್ಗೆ ಉಲ್ಲೇಖಿಸಿರುವನು. ಅಂದಮೇಲೆ ಇದಕ್ಕೂ ಮುಂಚೆ ಎಷ್ಟೋ ವರ್ಷಗಳಿಂದ ಈ ಪರಿಪಾಠವು ನಮ್ಮ ದೇಶದಲ್ಲಿ ರೂಢವಾಗಿರಬೇಕು.

೩. ಉಪಯೋಗ:—ಮಹಾಪರಾಕ್ರಮದಿಂದ ಲೋಕಕಲ್ಯಾಣವನ್ನು ಮಾಡಿದಂಥ ಯಾವನೊಬ್ಬ ದೇವರ ಇಲ್ಲವೆ ಮಹಾತ್ಮನ ಸ್ಮಾರಕವಾಗಿ ಜಾತ್ರೆ ನೆರೆಯುವದುಂಟು. ಜಾತ್ರೆ ನೆರೆಯುವ ದಿವಸ ನಮ್ಮ ಮನಸ್ಸು ಜಾಗೃತವಾಗಿ, ಆ ದೇವರು ಇಲ್ಲವೆ ಮಹಾಪುರುಷನು ಮಾಡಿದಂತೆ ನಾವಾದರೂ ಮಹತ್ಕೃತ್ಯಗಳನ್ನು ಮಾಡಿ ಲೋಕಹಿತವನ್ನುಂಟುಮಾಡಬೇಕೆಂಬ ಪ್ರೇರಣೆಯು ನಮ್ಮ ಮನಸ್ಸಿನಲ್ಲಿ ಹುಟ್ಟುತ್ತದೆ.

ಜಾತ್ರೆಯ ದಿವಸ ಪ್ರತಿಯೊಂದು ಮನೆಯಲ್ಲಿ ಹಿರಿಯರಾದವರು ತಮ್ಮ ಮಕ್ಕಳಿಗೆ ಆ ಸಂಗತಿಯ ಬಗ್ಗೆ ಕಥೆಗಳನ್ನಾಗಲಿ ಪದ್ಯಗಳನ್ನಾಗಲಿ ಹೇಳಿ ಉಪದೇಶ ಮಾಡುವರು. ಆದ್ದರಿಂದ ಆ ಸಂಗತಿಯು ಅವರ ಮನಸ್ಸಿನಲ್ಲಿ ಪರಂಪರೆಯಾಗಿಯೂ ಅಬಾಧಿತವಾಗಿಯೂ ಚಿರಕಾಲ ಉಳಿಯುವದಲ್ಲದೆ ಅವರಿಗೆ ಒಂದು ಬಗೆಯ ಶಿಕ್ಷಣವು ದೊರೆಯುವದು.

ಪ್ರಾಚೀನ ಕಾಲದಲ್ಲಿ ಈಗಿದ್ದಂತೆ ಪ್ರವಾಸಮಾಡುವ ಸಾಧನಗಳು ಬಹಳವಾಗಿದಿಲ್ಲ. ಆಗ ಜಾತ್ರೆಗಳಿಂದ ವ್ಯಾಪಾರಸ್ಥರಿಗೆ ತಮ್ಮ ತಮ್ಮ ಜಿನಸುಗಳನ್ನು ಅದಲುಬದಲು ಮಾಡುವದಕ್ಕಾಗಿ ಬಹಳೇ ಅನುಕೂಲವಾಗುತ್ತಿತ್ತು. ಯಾಕಂದರೆ ಜಾತ್ರೆಯ ದಿವಸ ವ್ಯಾಪಾರಸ್ಥರು ಆಯಾ ದೇಶಗಳಲ್ಲಿ ಹುಟ್ಟುವ ಧಾನ್ಯಗಳನ್ನೂ, ಕಲಾಕೌಶಲ್ಯಗಳ ಒಡವೆಗಳನ್ನೂ, ದನಕರುಗಳನ್ನೂ ವ್ಯಾಪಾರಕ್ಕಾಗಿ ತರುತ್ತಿದ್ದರು. ಆಗ ಇಂಥ ಜಿನಸುಗಳನ್ನು ಕೊಳ್ಳಲಪೇಕ್ಷಿಸುವವರು ತೊಂದರೆಯಿಲ್ಲದೆ ತಮಗೆ ಬೇಕಾದಷ್ಟು ಒಮ್ಮೆಲೆ ಮತ್ತು ಒಂದೇ ಸ್ಥಳದಲ್ಲಿ ಕೊಳ್ಳಬಹುದಾಗಿತ್ತು.

ಜಾತ್ರೆಯು ದಿವಸ ಮಾರಾಟಕ್ಕಾಗಿ ತಂದ ಒಡವೆಗಳಲ್ಲಿ ಕಂಡುಬಂದ ಗುಣದೋಷಗಳನ್ನರಿತು, ಆಯಾ ಶಿಲ್ಪಿಗಳು ತಾವು ಮಾಡುವ ಒಡವೆಗಳಲ್ಲಿ ಸುಧಾರಣೆ ಮಾಡಬಹುದು.

ಜಾತ್ರೆಯು ದಿವಸ ಎಷ್ಟೋ ದೇಶಗಳ ಜನರು ಒತ್ತಟ್ಟಿಗೆ ನೆರೆಯುವದರಿಂದ ಅವರಲ್ಲಿ ಸ್ನೇಹವುಂಟಾಗುವದಲ್ಲದೆ, ಅವರಿಗೆ ಪರಸ್ಪರರ ವಿಚಾರಗಳೂ ನೀತಿನಡಾವಳಿಗಳೂ ತಿಳಿದು, ಅವರ ಆಕುಂಚಿತವಾದ ಮನಸ್ಸು ವಿಸ್ತಾರಗೊಳ್ಳುವದು. ಹಿಂದಕ್ಕೆ ಬೌದ್ಧ ಧರ್ಮದ ಭಿಕ್ಷುಗಳು ಜಾತ್ರೆಯ ದಿವಸ ನೆರೆದಂಥ ಜನರಿಗೆ ತಮ್ಮ ಧರ್ಮತತ್ವಗಳನ್ನು ಚನ್ನಾಗಿ ಬೋಧಿಸಿ, ಅವರನ್ನು ಬುದ್ಧರನ್ನಾಗಿ ಮಾಡಿದ ಉದಾಹರಣೆಗಳು ಇತಿಹಾಸದಲ್ಲಿ ಹೇರಳವಾಗಿ ಸಿಗುವವು.

೪. **ಉಪಸಂಹಾರ**:—ಪ್ರಾಚೀನ ಕಾಲದಲ್ಲಿ ಜಾತ್ರೆಗಳಿಂದಾಗುತ್ತಿದ್ದ ಕೆಲಸವನ್ನು ಈಗಿನ ಪುಸ್ತಕಗಳೂ, ವರ್ತಮಾನಪತ್ರಗಳೂ, ಪ್ರದರ್ಶನಗಳೂ, ಪ್ರವಾಸ ಮಾಡುವ ಸುಲಭಸಾಧನಗಳೂ ಕೆಲಮಟ್ಟಿಗೆ ಮಾಡುತ್ತವೆಂಬದು ನಿಜವು. ಆದರೂ ಈಗಲೂ ಜಾತ್ರೆಗಳಿಂದ ಬಹಳೇ ಪ್ರಯೋಜನವುಂಟು.

---

(೫) ಟಪಾಲಖಾತೆ.

೧. ಒಂದು ಊರಿಂದ ಮತ್ತೊಂದು ಊರಿಗೆ ಅತ್ಯಲ್ಪವೆಚ್ಚದಿಂದ ಮತ್ತು ಅತ್ಯಲ್ಪ ವೇಳೆಯಲ್ಲಿ ಜನರ ಯೋಗ-ಕ್ಷೇಮ ಸಮಾಚಾರದ ಪತ್ರಗಳನ್ನು ಮುಟ್ಟಿಸುವ ಖಾತೆಗೆ "**ಟಪಾಲಖಾತೆ**" ಎಂದೆನ್ನುವರು. ಇದಕ್ಕೆ ಇಂಗ್ಲಿಷದಲ್ಲಿ "**ಪೋಸ್ಟ ಆಫೀಸ**" ಎಂಬ ಹೆಸರು. ಇಂಗ್ಲಿಷ ಸರಕಾರದ ಅಧಿಕಾರಕ್ಕೊಳಗಾದ ಎಷ್ಟೋ ಖಾತೆಗಳಲ್ಲಿ ಇದೊಂದು ಅತ್ಯುಪಯುಕ್ತವಾದ ಖಾತೆಯು. ಆದರೆ ಕಾಗದಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಲಪಿಸುವ ಕೆಲಸವನ್ನು ಸರಕಾರದವರೇ ಮಾಡಬೇಕೆಂಬ ನಿಯಮವಿಲ್ಲ. ಸಾಧ್ಯ ಮತ್ತು ಅನುಕೂಲವಿದ್ದರೆ, ಬೇರೆ ಜನರು ಕೂಡ ಈ ಕೆಲಸವನ್ನು ಕೈಕೊಳ್ಳಬಹುದು. ಆದರೆ ಅದು ಸರಕಾರದ ಕೈಯಲ್ಲಿಯೇ ಇರುವದು ಹೆಚ್ಚು ಅನುಕೂಲವಾಗಿ ಕಂಡು ಬಂದದ್ದರಿಂದ, ಅದನ್ನು ಸರಕಾರವೇ ಕೈಕೊಂಡಿರುವದು.

೨. ಟಪಾಲಖಾತೆಯೂ ಪೂರ್ವದಲ್ಲಿ ಪತ್ರವ್ಯವಹಾರ ಮಾಡುವ ಸಾಧನಗಳೂ:—ಪೂರ್ವದಲ್ಲ ಅಂದರೆ ಟಪಾಲಖಾತೆಯು ಸ್ಥಾಪಿಸಲ್ಪಡುವದಕ್ಕಿಂತ ಮುಂಚೆ ಕಾಗದಗಳನ್ನು ಕಳಿಸುವದಾದರೆ, ಒಬ್ಬ ಕೂಲಿಯುವನನ್ನು ಪ್ರತ್ಯೇಕವಾಗಿ ನೇಮಿಸಬೇಕಾಗುತ್ತಿತ್ತು. ಇದಕ್ಕಾಗಿ ಬಹಳೇ ವೆಚ್ಚವೂ ತೊಂದರೆಯೂ ಒದಗುತ್ತಿದ್ದವು. ಇಷ್ಟಾದರೂ ಆ ಕೆಲಸವು ಸ್ವಲ್ಪ ವೇಳೆಯಲ್ಲಿ ಆಗುತ್ತಿದ್ದಿಲ್ಲ. ಆದ್ದರಿಂದ ಅತಿಮಹತ್ವದ ವರ್ತಮಾನವನ್ನು ತೀವ್ರವಾಗಿ ತಿಳಿಸುವದು ಅಸಾಧ್ಯವಾಗಿತ್ತು. ಆದರೆ ಈಗ ಟಪಾಲಖಾತೆಯ ಸಹಾಯದಿಂದ ಅರ್ಧಾಣೆಯನ್ನಾಗಲಿ ಒಂದಾಣೆಯನ್ನಾಗಲಿ ವೆಚ್ಚ ಮಾಡಿದರೆ ನಮ್ಮ ಕೆಲಸವಾಗುತ್ತದೆ; ಇಷ್ಟೇ ಅಲ್ಲ, ಒಂದೂವರಿ ಆಣೆಯನ್ನಾಗಲಿ ಎರಡಾಣೆಯನ್ನಾಗಲಿ ಖರ್ಚುಮಾಡಿದರೆ, ಗ್ರೇಟಬ್ರಿಟನ್ ಮತ್ತು ಅಯರ್ಲಂಡ ದೇಶಗಳ ಯಾವದೇ ಊರಿಗೆ ಕಾಗದವನ್ನು ಕಳುಹಬಹುದು.

೩. ಟಪಾಲಖಾತೆಯ ಒಳಗುಟ್ಟು:— ಒಂದು ಕಾಗದದೊಡನೆ ಬೇರೆ ನೂರಾರು ಕಾಗದಗಳನ್ನು ಕಳುಹಿಸುವದರಲ್ಲಿ ಇಬ್ಬರು ಪಾಲುಗಾರರು ಕೂಡಿದರೆ, ಅದಕ್ಕೆ ಹತ್ತುವ ವೆಚ್ಚವನ್ನು ಇಬ್ಬರೂ ಸಮನಾಗಿ ಹಂಚಿಕೊಳ್ಳಬಹುದು. ನೂರು ಜನರು ಕೂಡಿದರೆ, ಒಟ್ಟು ಹತ್ತುವ ವೆಚ್ಚದಲ್ಲಿ ನೂರರಲ್ಲೊಂದು ಪಾಲು ಒಬ್ಬೊಬ್ಬನಿಗೆ ಬೀಳುವದು. ದೇಶದವರೆಲ್ಲರೂ ಕೂಡಿದರೆ, ಆ ವೆಚ್ಚವನ್ನು ಎಲ್ಲರಲ್ಲಿಯೂ ಸಮನಾಗಿ ಹಂಚಬಹುದು. ಹೀಗೆ ಮಾಡುವದರಿಂದ ಪ್ರತಿಯೊಬ್ಬನಿಗೆ ಅತ್ಯಲ್ಪ ಖರ್ಚು ಬರುತ್ತದೆಂಬದು ಸ್ಪಷ್ಟವದೆ. ಇದೇ ಟಪಾಲಖಾತೆಯ ಒಳಗುಟ್ಟು.

೪. ಟಪಾಲಖಾತೆಯ ಬೇರೆ ಬೇರೆ ಶಾಖೆಗಳು:—ಟಪಾಲಖಾತೆಯಲ್ಲಿ ಅನೇಕ ಶಾಖೆಗಳಿರುವವು. (೧) ಈ ಖಾತೆಯ ಮುಖಾಂತರವಾಗಿ ಊರಿಂದೂರಿಗೆ ಕಾಗದಗಳನ್ನು ತಲಪಿಸುವಂತೆ ಹಣವನ್ನು ಕಳುಹಬಹುದುದು. ಈ ಶಾಖೆಗೆ " **ಮನಿ ಆರ್ಡರ ಬ್ರ್ಯಾಂಚ** " ಎನ್ನುವರು. ಸ್ವಲ್ಪ ವೆಚ್ಚದಿಂದ ದೊಡ್ಡ ದೊಡ್ಡ ರಕಮುಗಳನ್ನು ಸುರಕ್ಷಿತವಾಗಿಯೂ ತೀವ್ರವಾಗಿಯೂ ಊರಿಂದೂರಿಗೆ ಕಳುಹಬಹುದು. (೨) ಅದರಂತೆಯೇ **ರೆಜಿಸ್ಟ್ರೇಶನ್** ಮತ್ತು **ಇನ್‌ಶುರನ್ಸ** ಶಾಖೆಗಳಿರುವವು. ಇವುಗಳ ಮುಖಾಂತರವಾಗಿ ಪುಸ್ತಕ, ಒಡವೆ, ಬಟ್ಟೆ ಮೊದಲಾದವುಗಳನ್ನು ಸುರಕ್ಷಿತವಾಗಿ ಕಳುಹಬಹುದು. (೩)

"**ಸೇವ್ಹಿಂಗ್ಸ ಬ್ಯಾಂಕ**" ಎಂಬದು ಮೂರನೇ ಶಾಖೆಯು. ನಮ್ಮ ಆದಾಯ ದಲ್ಲಿ ವೆಚ್ಚವು ಹೋಗಲಾಗಿ ಏನಾದರೂ ಶಿಲ್ಕು ಉಳಿದರೆ, ಅದನ್ನು ಈ ಶಾಖೆ ಯಲ್ಲಿಡಬಹುದು. ಇಲ್ಲಿಟ್ಟ ರಕಮು ನಮಗೆ ಬೇಕಾದಾಗ ಸಿಗುವದಲ್ಲದೆ, ಅದಕ್ಕೆ ಸರಕಾರದವರು ನಮಗೆ ನೂರಕ್ಕೆ ವರ್ಷಕ್ಕೆ ಮೂರು ರೂಪಾಯಿ ಚಕ್ರ ಬಡ್ಡಿ ಕೊಡುವರು. ಇದರಿಂದ ಸ್ವಲ್ಪಾದರೂ ಹಣ ಉಳಿಸಬೇಕೆಂಬ ಅಭಿಲಾ ಷೆಯೂ ಅದರ ಸಹಕಾರಿಯಾದ ಮಿತವ್ಯಯವೆಂಬ ಸದ್ಗುಣವೂ ಜನರಲ್ಲಿ ಹುಟ್ಟುವವು. (೪) **ಟೆಲಿಗ್ರಾಫ್ ಆಫೀಸು.** ಯಾವದೊಂದು ಸುದ್ದಿಯನ್ನು ತಂತಿಯ ಮಾರ್ಗವಾಗಿ ಕಳುಹುವ ಶಾಖೆಯು ಸಹ ಟಪಾಲಖಾತೆಯಲ್ಲಿಯೇ ಸೇರಿರುವದು. ಇದರ ಸಹಾಯದಿಂದ ಈ ದೇಶದ ಅಥವಾ ಪರದೇಶದ ಈ ಶಾಖೆ ಯಿದ್ದ ಯಾವದೇ ಊರಿಗೆ ಯಾವದೇ ಸಮಾಚಾರವನ್ನು ಅತಿತೀವ್ರವಾಗಿ ಕಳು ಹಬಹುದು. ಇದರಲ್ಲಿ ಸ್ವಲ್ಪ ಅವಕಾಶವಿಟ್ಟು ಕಳುಹಿಸಲ್ಪಡುವ ತಾರು (**ಆರ್ಡಿ ನರಿ**), ಕೂಡಲೇ ಕಳುಹಿಸಲ್ಪಡುವ ತಾರು (**ಎಕ್ಸಪ್ರೆಸ್**), ಹೀಗೆ ಎರಡು ಪ್ರಕಾರಗಳುಂಟು. ಮೊದಲನೇದಕ್ಕೆ ಹನ್ನೆರಡು ಆಣೆ, ಎರಡನೇದಕ್ಕೆ ಒಂದೂ ವರಿ ರೂಪಾಯಿ ವೆಚ್ಚ ಬೀಳುವದು. ಆದರೆ ಎರಡರಲ್ಲಿಯೂ ಕಳುಹಿಸಲ್ಪಡುವ ಶಬ್ದಗಳು ಹನ್ನೆರಡೇ ಸರಿ. ಈ ಹನ್ನೆರಡು ಶಬ್ದಗಳಲ್ಲಿ ತಾರು ಕಳುಹಿಸುವವನ ಮತ್ತು ತಕೊಳ್ಳುವವನ ವಿಳಾಸಕ್ಕಾಗಿ ಹತ್ತುವ ಶಬ್ದಗಳು ಸಹ ಕೂಡುತ್ತವೆ. ಹನ್ನೆರಡಕ್ಕಿಂತ ಹೆಚ್ಚು ಶಬ್ದಗಳನ್ನು ಕಳುಹಿಸುವದಿದ್ದಲ್ಲಿ ಮೊದಲನೇದರಲ್ಲಿ ಪ್ರತಿಯೊಂದು ಶಬ್ದಕ್ಕೆ ಒಂದು ಆಣೆ, ಎರಡನೇದರಲ್ಲಿ ಎರಡು ಆಣೆ ಹೆಚ್ಚು ಖರ್ಚು ಬರುವದು.

ಇತ್ತಿತ್ತಲಾಗಿ "ಮಲೇರಿಯಾ" ಎಂಬ ಚಳಿಜ್ವರದ ಬೇನೆಯನ್ನು ನಾಶ ಗೊಳಿಸುವಂಥ "ಕ್ವಿನೈನ್" ಎಂಬ ಔಷಧವು ಟಪಾಲಖಾತೆಯಲ್ಲಿ ಮಾರಾಟ ಕ್ಕಾಗಿ ಸಿಗುವಂತೆ ಅನುಕೂಲಮಾಡಿದ್ದಾರೆ.

೫. **ಉಪಸಂಹಾರ:**—ಇಂಗ್ಲಿಷ ಸರಕಾರಕ್ಕೊಳಗಾದ ಮುಲಕೀ ಖಾತೆಗಳಲ್ಲಿ ಟಪಾಲಖಾತೆಯು ಎಲ್ಲಕ್ಕೂ ಅಗ್ರವಾದದ್ದೂ ಉಪಯುಕ್ತವಾ ದದ್ದೂ ಎಂಬದು ಸ್ಪಷ್ಟವದೆ. ಅದರಿಂದ ಜನರಿಗೆ ಬಳ್ಳೇ ಪ್ರಯೋಜನವಾಗಿದೆ. ಅದರಲ್ಲಿ ಎಲ್ಲರೂ ಪೂರ್ಣ ನಂಬಿಗೆಯನ್ನಿಟ್ಟಿರುವರು. ಇದು ಎಲ್ಲಕ್ಕೂ ಹೆಚ್ಚು

ಲೋಕಪ್ರಿಯವಾದ ಸಂಸ್ಥೆಯು. ಇದರ ಕೆಲಸವು ದಿನದಿನಕ್ಕೆ ಹೆಚ್ಚೆಚ್ಚು ಬೆಳೆಯುತ್ತಲಿದ್ದು, ಜನರಿಗೆ ಹೆಚ್ಚೆಚ್ಚು ಕಲ್ಯಾಣವಾಗುತ್ತಲಿದೆ.

---

(೬) ತಂಬಾಕ.

ದಾರಿದ್ರ್ಯ ಶೀಲೋಽಪಿ ನರಸ್ತಮಾಖುಂ ನೈವ ಮುಂಚತಿ ।
ನಿವಾರಿತೋಽಪಿ ಮಾರ್ಜಾರಸ್ತಮಾಖುಂ ನೈವ ಮುಂಚತಿ ॥

ಅರ್ಥ:—ಬೆಕ್ಕು ಹೊಡೆಯಲ್ಪಟ್ಟರೂ ತಮಾಖುಂ ಅಂದರೆ (ಆ) ಇಲಿಯನ್ನು ಹೇಗೆ ಎಂದೂ ಬಿಡುವದಿಲ್ಲವೋ, ಹಾಗೆಯೇ ಮನುಷ್ಯನಿಗೆ ತಂಬಾಕದ ಚಟವು ಒಮ್ಮೆ ಹತ್ತಿತೆಂದರೆ, ಅವನು ದರಿದ್ರನಾದಾಗ್ಯೂ ಅದನ್ನು ಎಂದೂ ಬಿಡುವದಿಲ್ಲ.

೧. **ಮೂಲಸ್ಥಾನ**:—ತಂಬಾಕದ ಗಿಡವು ಮೊದಲು ನಮ್ಮ ದೇಶದಲ್ಲಿಯೇ ಹುಟ್ಟಿತೆಂದು ಎಷ್ಟೋ ಜನರು ಅನ್ನುವದುಂಟು. ಇದಕ್ಕೆ ಅವರು, ಸಂಸ್ಕೃತದಲ್ಲಿ **ಬಾಣಭಟ್ಟನು** ಬರೆದ ಕಾದಂಬರಿ ಪುಸ್ತಕದಲ್ಲಿ "ಪರಿಪೀತಧೂಮವರ್ತಿರುಪಸ್ಪೃಶ್ಯ ಚ ಗೃಹೀತತಾಂಬೂಲಃ" ಎಂಬ ವಾಕ್ಯವೇ ಆಧಾರವಾಗಿರುವದೆಂದು ಹೇಳುವರು. ಆದರೆ ನಿಜವಾಗಿ ಅದು ಪರದೇಶದಿಂದ ಈ ದೇಶಕ್ಕೆ ಬಂದ ಗಿಡವು. ಅದರ ಮೂಲಸ್ಥಾನವು ಅಮೇರಿಕಾ ಖಂಡವು. ಮೊದಲು ಅದಕ್ಕೆ "**ನಿಕೋಟಿಯಾನಂ ಟುಬಾಕುಂ**" ಎಂದು ಅನ್ನುತ್ತಿದ್ದರು. ೧೪೯೨ ನೇ ಇಸವಿಯಲ್ಲಿ **ಕೋಲಂಬಸನು** ಅಮೇರಿಕಾ ಖಂಡವನ್ನು ಗೊತ್ತು ಹಚ್ಚಿದಾಗ ಅದು ಅವನಿಗೆ ಗೊತ್ತಾಯಿತು. ಅಲ್ಲಿಂದ ಅವನು ಅದನ್ನು ಯುರೋಪಖಂಡಕ್ಕೆ ತಂದನು. ಮುಂದೆ ೧೫೨೪ ನೇ ಇಸವಿಯಲ್ಲಿ **ವಾಸ್ಕೋಡಿಗಾಮಾ** ಎಂಬ ಪೋರ್ತುಗೀಸರ ದಳಪತಿಯು ಅದನ್ನು ಹಿಂದುಸ್ತಾನಕ್ಕೆ ತಂದನು ಯುರೋಪಖಂಡದವರು ಅದಕ್ಕೆ ಸಂಕ್ಷೇಪವಾಗಿ "**ಟ್ಯಾಂಕು**" ಎಂದು ಕರೆಯುತ್ತಿದ್ದರು. ಆದರೆ ನಮ್ಮ ದೇಶದವರಿಗೆ ಈ ಉಚ್ಚಾರವು ತುಸು ಬಿಕ್ಕಟ್ಟಾಗಿ ತೋರಿದ್ದರಿಂದ ಅವರು ಅದಕ್ಕೆ **ತಂಬಾಕ** ಎಂದು ಅನ್ನಹತ್ತಿದರು. ಆ ಹೆಸರು ಈಗ್ಯೂ ರೂಢಿಯಲ್ಲುಂಟು.

೨. **ತಯಾರಮಾಡುವ ರೀತಿ:**—ತಂಬಾಕವು ಒಂದು ಗಿಡದ ಎಲೆಯು. ಈ ಗಿಡವು ಮೂರರಿಂದ ನಾಲ್ಕು ಫೂಟುಗಳ ವರೆಗೆ ಎತ್ತರವಾಗಿ ಬೆಳೆದು ಕಣ್ಣಿಗೆ ಬಲು ಚಂದ ಕಾಣುವದು. ಇದಕ್ಕೆ ಹರವಾದ ಎಲೆಗಳಿರುತ್ತವೆ. ಎಲೆಗಳು ಬಲಿತು ಹಣ್ಣಾದ ಕೂಡಲೆ ಅವುಗಳನ್ನು ಕೊಯಿದು ರಾತ್ರಿಯಲ್ಲಿ ಮಾಳಿಗೆಯ ಮೇಲಾಗಲಿ, ಅಂಗಳದೊಳಗಾಗಲಿ, ಹೊಲದೊಳಗಾಗಲಿ ಹರವುತ್ತಾರೆ. ಆ ಮೇಲೆ ಅವುಗಳನ್ನು ಒಂದು ಕುಣಿಯೊಳಗೆ ಹಾಕಿ ಮಣ್ಣು ಮುಚ್ಚಿ ಕೆಲವು ದಿವಸಗಳ ವರೆಗೆ ಹಾಗೆಯೇ ಬಿಡುತ್ತಾರೆ. ಆ ಮೇಲೆ ಅವುಗಳನ್ನು ತೆಗೆದು ಸೂಡುಗಟ್ಟಿ ಮಾರಾಟಕ್ಕೆ ಕಳುಹುತ್ತಾರೆ.

೩. **ಉಪಯೋಗ:**—ಹಿಂದುಸ್ತಾನದವರಿಗಿಂತ ಯುರೋಪಖಂಡದವರಿಗೆ ತಂಬಾಕವು ಮೊದಲು ಗೊತ್ತಾಗಿದ್ದರೂ ಯುರೋಪಖಂಡದವರು ಅದನ್ನು ಸೇದುವದರಲ್ಲಿಯೇ ಮಾತ್ರ ಉಪಯೋಗಿಸುತ್ತಿದ್ದರು. ಆದರೆ ನಮ್ಮ ದೇಶದವರು ಅದನ್ನು ಸೇದುವದರಲ್ಲಿಯೂ, ತಿನ್ನುವದರಲ್ಲಿಯೂ, ನಾಶಿಪುಡಿ ಮಾಡುವದರಲ್ಲಿಯೂ ಉಪಯೋಗಿಸುವದುಂಟು. ಇದಲ್ಲದೆ ತಂಬಾಕದ ಎಲೆಯು ಔಷಧಕ್ಕಾಗಿಯೂ ಉಪಯೋಗಿಸಲ್ಪಡುತ್ತದೆ.

೪. **ಪರಿಣಾಮಗಳು:**—ತಂಬಾಕನ್ನು ಉಪಯೋಗಿಸುವ ಜನರು ಭ್ರಮಿಷ್ಟರಿರುತ್ತಾರೆ. ತಲೆಶೂಲೆಯಂತೂ ಅವರ ಸಂಗಡಲೇ ಹುಟ್ಟಿದೆಯೋ ಏನೋ ಎಂಬಂತೆ ಯಾವಾಗಲೂ ಅವರಿಗೆ ಗಂಟುಬಿದ್ದಿರುತ್ತದೆ. ಅವರಿಗೆ ನಿದ್ರೆಯು ಅಪರೂಪವು. ಸ್ವಸ್ಥ ಚಿತ್ತದ ಗುರ್ತು ಇರುವದೇ ಇಲ್ಲ. ಮೋರೆಯು ಬಾಡಿ ಬತ್ತಿಯಾಗಿರುವದು. ವಿಷವಂತೂ ಅವರ ತವರಮನೆಯು. ಅವರ ಕೈಕಾಲುಗಳಿಗೆ ವರಟಿಗಳಂತೂ ತಪ್ಪುವದೇ ಇಲ್ಲ. ಕಣ್ಣುಗಳು ಯಾವಾಗಲೂ ಉರಿಯುತ್ತಿರುತ್ತವೆ. ಬಾಯಿಯಿಂದ ಅಸಹ್ಯವಾದ ದುರ್ಗಂಧವು ಬರುತ್ತಿರುತ್ತದೆ. ಅನ್ನಪಚನವೆಂಬದು ಅವರ ಶತ್ರುವು. ತಲೆತಿರುಗೋಣವೆಂಬದು ಅವರ ಜೀವದ ಗೆಳೆಯನು. ಗಂಟಲಲ್ಲಿ ಯಾವಾಗಲೂ ಗುಸು ಗುಸು ಅನ್ನುತ್ತಿರುತ್ತದೆ. ನೇತ್ರಮಾಂದ್ಯವಂತೂ ಸಹಜವು. ಈ ಅವಗುಣಗಳು ಎಷ್ಟೋ ಜನರ ಅನುಭವಕ್ಕೆ ಬರುತ್ತಿದ್ದರೂ, ದಿನದಿನಕ್ಕೆ ತಂಬಾಕದ ಪ್ರಚಾರವು ಬೆಳೆಯುತ್ತ ನಡೆದದೆ. ದುರ್ದೈವದಿಂದ ತಂಬಾಕದ ಚಟವು ಒಮ್ಮೆ ಹತ್ತಿತೆಂದರೆ, ಅದನ್ನು ಬಿಡುವದಾಗುವದಿಲ್ಲ. ಆದ್ದರಿಂದ ಮೊದಲಿನಿಂದಲೇ ಅದಕ್ಕೆ ಆಸ್ಪದ ಕೊಡದಿರುವದು ಉತ್ತಮವು.

೭. ಏನಾವಮಾ ಕಾಲುವೆ.

೧. ಪ್ರಾಚೀನ ಮತ್ತು ಅರ್ವಾಚೀನ ಕಾಲಗಳಲ್ಲಾದ ಕೆಲವು ಅತ್ಯದ್ಭುತವಾದ ಕೃತಿಗಳೂ ಅವುಗಳ ಭೇದಗಳೂ:—ಜಗತ್ತಿನಲ್ಲಿ ಕಾಲಕಾಲಕ್ಕೆ ಎಷ್ಟೋ ಮಂದಿ ಮಹಾಪುರುಷರು ಜನ್ಮಹೊಂದಿ, ಬಾಳಿ, ಮಡಿದು ಹೋಗಿರುವರು. ಈ ಮಹಾಪುರುಷರಲ್ಲಿ ಕೆಲವರು ಉದ್ಗ್ರಂಥಗಳನ್ನು ಬರೆದು ತಮ್ಮ ಅನುಭವಗಳನ್ನೂ ಕಲ್ಪನಾಶಕ್ತಿಯನ್ನೂ ಜನರಿಗೆಲ್ಲ ಅರಿತುಕೊಳ್ಳಲಿಕ್ಕೆ ಅನುವು ಮಾಡಿಕೊಟ್ಟಿರುವರು. ಕೆಲವರು ತಮ್ಮ ಅಗಾಧವಾದ ಕಲ್ಪನಾಶಕ್ತಿಯಿಂದ ಅಲೌಕಿಕವಾದ ಕೆಲವು ಮೂರ್ತಕೃತಿಗಳನ್ನು ನಿರ್ಮಾಣ ಮಾಡಿ ಜನರನ್ನೆಲ್ಲ ಆಶ್ಚರ್ಯಗೊಳಿಸಿರುವರು. ಪ್ರಾಚೀನಕಾಲದ ರೋಮ, ಗ್ರೀಕ ಸಾಮ್ರಾಜ್ಯಗಳ ಉತ್ಕರ್ಷಕಾಲದಲ್ಲಾದ ಇಂಥ ಕೆಲವು ಕೃತಿಗಳು ಘನಪಂಡಿತರನ್ನು ಕೂಡ ಆಶ್ಚರ್ಯಗೊಳಿಸಲು, ಇವುಗಳಿಗೆ "**ಜಗದೊಳಗಿನ ಏಳು ಸೋಜಿಗಗಳು**" ಎಂದು ಹೇಳುವ ಪರಿಪಾಠವಿದ್ದದ್ದು ಇಂದಿಗೂ ರೂಢವಾಗಿದೆ. ಅವುಗಳೊಳಗೆ **ಬಾಬಿಲನ್ನದ ತೂಗಾಡುವ ತೋಟ, ನೈಲನದಿಯ ಒಡ್ಡು, ಆಲಿಂಪಿಯಸ್ ಪರ್ವತದ ಮೇಲೆ ಮಾಡಿಟ್ಟ ಮೂರ್ತಿಗಳು** ಬರುತ್ತವೆ. ಆದರೆ ಅರ್ವಾಚೀನ ಕಾಲದಲ್ಲಾದ ಭೌತಿಕಶಾಸ್ತ್ರ ಶೋಧದ ಬಲದಿಂದ ಕ್ರಮೇಣ ಜಗತ್ತಿನಲ್ಲಿ ತಲೆದೋರುತ್ತ ನಡೆದ ಅತ್ಯದ್ಭುತವಾದ ಕೃತಿಗಳನ್ನು ನೋಡಿದರೆ ಇವು ನಿಸ್ತೇಜವಾಗಿ ತೋರುವವು. ಆದರೆ ಆಗಿನ ಪರಿಸ್ಥಿತಿಗೆ ಅನುಕೂಲವಾದ ಸಾಧನಗಳಿಂದ ಏರ್ಪಟ್ಟ ಆ ಕೃತ್ಯಗಳು ಸಾಮಾನ್ಯವೆಂದು ಅನ್ನಲಾಗದು. **ಧವರಾಜನ ಲೋಹಸ್ತಂಭ, ವೇರೂಳ ಮುಂತಾದವುಗಳಲ್ಲಿರುವ ಗುಡ್ಡಗಳೊಳಗೆ ಕೊರೆದು ಮಾಡಿದ ಗುಡಿಗಳು**, ದಿಲ್ಲಿಯಲ್ಲಿರುವ **ಕುತುಬಮಿನಾರ**, ಆಗ್ರಾದಲ್ಲಿರುವ **ತಾಜಮಾಹಾಲ**, ಶ್ರವಣಬೆಳಗುಳದಲ್ಲಿರುವ ೪೫ ಫೂಟು ಎತ್ತರವಾದ **ಗೋಮತೇಶ್ವರನ ಮೂರ್ತಿ**, ಇವೇ ಮುಂತಾದವುಗಳು ಭಾರತೀಯರ ಪ್ರಾಚೀನಕಾಲದ ಅತ್ಯಗಾಧವಾದ ಕಲ್ಪನಾಶಕ್ತಿಯನ್ನು ತೋರಿಸುತ್ತವೆ.

ಮನುಷ್ಯನು ತನ್ನ ಅಗಾಧವಾದ ಕಲ್ಪನಾಶಕ್ತಿಯಿಂದುಂಟುಮಾಡಿದ ಇಂಥ ಕೃತಿಗಳಲ್ಲಿ ಎರಡು ವರ್ಗಗಳನ್ನು ಕಲ್ಪಿಸಬಹುದು. (೧) ಕೇವಲ ಆಸಾ

ಾರಣ ಕಲ್ಪಕತನವನ್ನು ತೋರಿಸುವಂಥವು ೧ನೆಯ ವರ್ಗದವು. (೨) ಮಾನವ
ೋಟಿಯ ಐಹಿಕಸುಖಕ್ಕೆ ಅನುಕೂಲತೆಯನ್ನುಂಟುಮಾಡುವಂಥವು ೨ನೆಯ
ರ್ಗದವು.

ಮೇಲೆ ಹೆಸರುಗೊಂಡು ಹೇಳಿದ ಸಂಗತಿಗಳಲ್ಲಿ ನೈಲ ನದಿಯ ಒಡ್ಡಿನ
ೊರತು ಉಳಿದವುಗಳೆಲ್ಲ ಕೇವಲ ಶಿಲ್ಪಚಾತುರ್ಯ, ಕಲ್ಪಕತನ ಮುಂತಾದ
ನುಷ್ಯನ ಅಲೌಕಿಕ ಬುದ್ಧಿಸಾಮರ್ಥ್ಯವನ್ನು ಒಡೆದು ತೋರಿಸುವವಲ್ಲವೆ,
ನುಷ್ಯನ ಐಹಿಕ ಸುಖಕ್ಕೆ ಅನುಕೂಲತೆಯನ್ನುಂಟುಮಾಡುವಂಥವಲ್ಲವೆಂ
ದು ವಾಚಕರಿಗೆ ಸಹಜವೇ ತಿಳಿಯುವಂತಿದೆ. ಇಂಥವುಗಳು ನಷ್ಟವಾದರೆ
ಂದು ಅದ್ಭುತ ಕಲ್ಪನೆಯ ಅಥವಾ ಬುದ್ಧಿಸಾಮರ್ಥ್ಯದ ಮಾದರಿಯು ನಷ್ಟ
ಾಯಿತೆಂದು ಖೇದವಾಗಬಹುದು. ಆದರೆ ನೈಲನದಿಯ ಒಡ್ಡು ನಷ್ಟವಾದರೆ
ೋಟ್ಯವಧಿ ಜನರ ಜೀವನವು ನಷ್ಟವಾಗುವದಲ್ಲದೆ, ಶೋಧಕರ ಶೋಧದ
ಪ್ರಗತಿಯು ಕುಂಠಿತವಾಗುವದು. ಈ ಎರಡು ಬಗೆಯ ಅದ್ಭುತಕೃತ್ಯಗಳಲ್ಲಿ,
ನರ ಯೋಗಕ್ಷೇಮಕ್ಕೆ–ಕಿಂಬಹುನಾ ಸರ್ವತೋಮುಖದಿಂದಾಗುವ ಪ್ರಗ
ಗೆ ಕಾರಣವಾಗಿರುವ ಪನಾಮಾಕಾಲುವೆಯ ರಚನೆ–ಪ್ರಯೋಜನಗಳನ್ನು
ುರಿತು ಇಲ್ಲಿ ಬರೆಯುವೆವು.

೨. **ಕಾಲುವೆಯ ಭೇದಗಳು** :—ಕಾಲುವೆಗಳಲ್ಲಿ ಕೇವಲ ಕೃಷಿ
ರ್ಮಕ್ಕೆ ಅನುಕೂಲವಾದ ಕಾಲುವೆಗಳೆಂತಲೂ ವ್ಯಾಪಾರೋದ್ಯೋಗಕ್ಕೆ ಸಹಾ
ುಕರವಾಗಿರುವ ಕಾಲುವೆಗಳೆಂತಲೂ ಎರಡು ಭೇದಗಳನ್ನು ಮಾಡಬಹುದು.
ೊದಲನೆಯ ವರ್ಗದ ಕಾಲುವೆಗಳನ್ನು ಆಯಾ ದೇಶದ ಪರಿಸ್ಥಿತಿಗನುಸರಿಸಿ
ನರು ಇಲ್ಲವೆ ಅರಸರು ತಮ್ಮ ತಮ್ಮ ದೇಶಗಳಲ್ಲಿ ಮಾಡಿಕೊಂಡಿರುವರು.
ೊಡ್ಡ ನದಿಗಳಿಂದಾದ ಇಂಥ ಕಾಲುವೆಗಳು ಎರಡೂ ಕಾರ್ಯಗಳನ್ನು ಮಾಡು
ವು. ಆದರೆ ಇಂಥ ಕಾಲುವೆಗಳು ಕಡಿಮೆ. ಇಂಥವುಗಳನ್ನು ಆಯಾ ದೇಶದ
ರು ಅಲ್ಲಲ್ಲಿ ಮಾಡಿಕೊಂಡು ಅವುಗಳ ಮೇಲೆ ತಮ್ಮದೇ ಸ್ವಾಮಿತ್ವವನ್ನು ನಡೆ
ುತ್ತಿರುವರು. ಆದರೆ ಸುಯೇಜ, ಪನಾಮಾ ಕಾಲುವೆಗಳು ಜಗತ್ತಿಗೆಲ್ಲ ಪ್ರಯೋ
ನಕರವಾಗಿರುವವು. ಆದ್ದರಿಂದ ಈ ಕಾಲುವೆಗಳು ಒಂದೇ ರಾಷ್ಟ್ರದವಾಗಿ
ದೆ, ಇಂಟರನ್ಯಾಶನಲ್ ಅಂದರೆ ಎಲ್ಲ ರಾಷ್ಟ್ರದವಾಗಿರತಕ್ಕದ್ದೆಂದು ಬಹುತರ

ವಾಗಿ ಯಾವತ್ತೂ ರಾಷ್ಟ್ರಗಳು ಅನ್ನುವದುಂಟು. ಸುಯೇಜ ಕಾಲುವೆಯ ಎಲ್ಲ ರಾಷ್ಟ್ರದ್ದೆಂದು ಮುಖ್ಯ ಮುಖ್ಯ ರಾಷ್ಟ್ರಗಳ ಪ್ರತಿನಿಧಿಗಳು ಕೂಡಿ ನಿರ್ಣಯ ಮಾಡಿರುವರಷ್ಟೇ. ಅದರಂತೆಯೇ ಪನಾಮಾ ಕಾಲುವೆಯಾದರೂ ಒಂದ ರಾಷ್ಟ್ರದ್ದಾಗಿರದೆ ಯಾವತ್ತೂ ರಾಷ್ಟ್ರಗಳಿಗೂ ಸಾಮಾನ್ಯವಾಗಿರತಕ್ಕದ್ದು ವಾಸ್ ವಿಕವೇ ಸರಿ.

ಆದರೆ ಅಮೇರಿಕಾಖಂಡದ ಸಂಯುಕ್ತ ಸಂಸ್ಥಾನದವರೇ ಪನಾಮ ಕಾಲುವೆ ಕಟ್ಟಿಸಲಿಕ್ಕೆ ಮುಂದಾಳುಗಳಾಗಿ ಅದರ ಸಂಬಂಧದ ಯಾವತ್ತೂ ಖರ್ಚನ್ನು ತಾವೇ ಕೈಕೊಂಡಿರುವದರಿಂದ, ಆ ಕಾಲುವೆಯು ಕೇವಲ ತಮಗೆ ಸಂಬಂಧಿಸಿರತಕ್ಕದ್ದೆಂತಲೂ, ಅದರ ಮೇಲೆ ಬೇರೆ ಯಾವ ರಾಷ್ಟ್ರದ ಅಧಿಕ ರವೂ ಇರದೆ ಕೇವಲ ತಮ್ಮದೇ ಸ್ವಾಮಿತ್ವವು ಇರಬೇಕೆಂತಲೂ ಅನ್ನುವರು. ಈ ಪ್ರಶ್ನೆಯ ನಿರ್ಣಯವು ಕಾಲಾವಧಿಯಲ್ಲಿ ಆಗತಕ್ಕದ್ದದೆ.

೩. ಪನಾಮಾ ಕಾಲುವೆಯಾಗುವದಕ್ಕಿಂತ ಮೊದಲ ತಟ್ಟುತ್ತಿದ್ದ ತೊಂದರೆಗಳೂ, ಆ ಕಾಲುವೆಯನ್ನು ಕಟ್ಟಿಸುವದ ರಲ್ಲಿ ಬೇರೆ ಬೇರೆ ರಾಷ್ಟ್ರದವರು ಮಾಡಿದ ಪ್ರಯತ್ನಗಳೂ:—

ಪಾಶ್ಚಾತ್ಯರಲ್ಲಿ ಹೊಸ ಭೂಮಿಯನ್ನು ಗೊತ್ತುಹಚ್ಚುವ ಹವ್ಯಾಸ ಹುಟ್ಟಿದಂದಿನಿಂದ ಅಂದರೆ ೧೫ ನೆಯ ಶತಮಾನದ ಅಂತ್ಯದಿಂದ ಸಮುದ್ರಸ ಚಾರವು ಪ್ರಬಲವಾಯಿತು. ಅಮೇರಿಕಾಖಂಡವು ಗೊತ್ತಾಯಿತು. ಆಸ್ಟ್ರೇಲಿಯ ಮುಂತಾದ ದ್ವೀಪಗಳ ಶೋಧವಾಯಿತು. ಹಿಂದುಸ್ತಾನಕ್ಕೆ ಬರುವ ಜಲಮ ರ್ಗವು ಶೋಧಿಸಲ್ಪಟ್ಟಿತು. ಈ ಫಲಫಲಿತವಾದ ದೇಶಗಳನ್ನು ಕಂಡು ಬಾಯ ರೆತು ಪಾಶ್ಚಾತ್ಯರು ತಮಗೆ ಸಾಧಿಸಿದಲ್ಲಿ ಒಕ್ಕಲಾಗಿ ನಿಲ್ಲತೊಡಗಿದರು. ಈ ವ ತಿಗಳಲ್ಲಿ ನಿಂತವರು ಒಕ್ಕಲತನದಿಂದಲೂ ಖನಿಗಳ ಉದ್ಯೋಗದಿಂದಲೂ ಅಪಾ ಸಂಪತ್ತಿಯನ್ನು ಬೆಳೆಸಲಾರಂಭಿಸಿದರು. ಈ ಸಂಪತ್ತನ್ನು ತಮ್ಮ ದೇಶಕ್ಕೂ ಬೇರೆ ದೇಶಗಳಿಗೂ ಒಯ್ಯಬೇಕಾದರೆ ಹೆಚ್ಚು ವೇಳೆಯು ಹಿಡಿಯಹತ್ತಿತು ಮೇಲಾಗಿ ಉಗಿಯಂತ್ರಗಳು ಇನ್ನೂ ಪ್ರಚಾರದಲ್ಲಿ ಬಂದಿದ್ದಿಲ್ಲ. ಇವೆಲ್ಲ ಕಾರಣ ಗಳಿಂದ ಸುಯೇಜ ಹಾಗು ಪನಾಮಾ ಸಂಯೋಗಭೂಮಿಗಳನ್ನು ಕಡಿದು ಕಾ ಲುವೆ ಮಾಡಬೇಕೆಂಬ ಹವ್ಯಾಸವು ಅಂದಿನಿಂದಲೂ ಯುರೋಪಿಯನ್ನರ ಮ

ನಲ್ಲಿ ಕಟ್ಟಿಯುತ್ತಿತ್ತು. ಬೇರೆ ಬೇರೆ ರಾಷ್ಟ್ರದ ಜನರು ಬೇರೆ ಬೇರೆಯಾಗಿ ಈ ರ್ಯವನ್ನು ಕೊನೆಗಾಣಿಸಲಿಕ್ಕೆ ಹೆಣಗುತ್ತಿರುವಾಗ, ಫ್ರಾನ್ಸದ ಲೆಸಿಪ್ಸನೆಂಬ ಲ್ಪಿಕನು ಸುಯೇಜ ಕಾಲುವೆಯ ಕೆಲಸವನ್ನು ಕೈಕೊಂಡು ೧೮೭೦ ರಲ್ಲಿ ಮು ಸಿದನು. ಅಂದಿನಿಂದ ಏಶಿಯಾ-ಆಫ್ರಿಕಗಳೊಡನೆ ವ್ಯಾಪಾರ ನಡಿಸಲಿಕ್ಕೆ ುರೋಪದವರಿಗೆ ಹಗುರಾಯಿತು. ಆದರೂ ಅಮೇರಿಕದಲ್ಲಿ ನಿಂತ ಇಂಗ್ಲಿಷ ಗೂ, ಕಾನಡಾ-ಯುನಾಯಿಟೆಡ್‌ಸ್ಟೇಟ್ಸ ಎಂಬ ವಸತಿಗಳಲ್ಲಿರುವವರಿಗೂ, ಕ್ಷಿಣ-ಮಧ್ಯ ಅಮೇರಿಕದಲ್ಲಿ ವಾಸಮಾಡಿದ ಸ್ಪೇನ-ಪೋರ್ತುಗಾಲದವರಿಗೂ ನಾಮಾ ಸಂಯೋಗ ಭೂಮಿಯಿಂದ ದೊಡ್ಡ ಆತಂಕವಾಗಿತ್ತು. ೧೯೦೦ ನೆಯ ಸವಿಯಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನದವರಿಗೂ ಸ್ಪೇನದವರಿಗೂ ್ಯಾಸಿಫಿಕ್ ಮಹಾಸಾಗರದೊಳಗಿನ ಫಿಲಿಪಾಯಿನ್ ನಡುಗಡ್ಡೆಯ ಬಳಿಯಲ್ಲಿ ಳಗವೆಸಗಲು, ಸಂಯುಕ್ತಸಂಸ್ಥಾನದವರಿಗೆ ತಮ್ಮ ಪೂರ್ವದಂಡೆಯ ಹಡ ಪಡೆಯನ್ನು ಪಶ್ಚಿಮದಂಡೆಗೆ ತರುವದು ದುಸ್ತರವಾಯಿತು. ಮೇಲಾಗಿ ರ್ವ ಅಮೇರಿಕದ ಯಾವತ್ತು ಸರಕುಗಳು ಯುರೋಪದ ಮಾರ್ಗವಾಗಿ ಯಕ್ಕೆ ಬರಬೇಕಾಯಿತು. ಈ ತೊಂದರೆಗಳನ್ನು ಮನದಂದು, ಆ ದೇಶದ ರಕಾರದವರು ೧೯೦೧ ರಲ್ಲಿ ಈ ಕಾಲುವೆಯ ಕಾರ್ಯವನ್ನು ಕೈಕೊಂಡರು.

ಇಷ್ಟರೊಳಗೆ ಲೆಸಿಪ್ಸನು ಒಂದು ಕಂಪನಿಯನ್ನು ಏರ್ಪಡಿಸಿ, ಕಾಲುವೆಯ ಲಸವನ್ನು ಪ್ರಾರಂಭಮಾಡಿ, ೧೮೮೦ ರಲ್ಲಿ ದಿವಾಳಿ ತೆಗೆದನು. ಬಳಿಕ ುತ್ತೊಂದು ಕಂಪನಿಯು ಹೊರಟು ಅದೇ ಮಾರ್ಗವನ್ನು ಹಿಡಿಯಿತು. ಕಡೆಗೆ ಮೇರಿಕೆಯ ಸರಕಾರದವರು ೧೨ ಕೋಟಿ ರೂಪಾಯಿಗಳನ್ನು ಲೆಸಿಪ್ಸನ ಂಪನಿಗೆ ಕೊಟ್ಟು, ತಾವೇ ಆ ಕೆಲಸವನ್ನು ಮೇಲ್ವಿಚಾರಣೆ ಮಾಡಹತ್ತಿದರು. ದರೆ ಪನಾಮಾ ಸಂಸ್ಥಾನವು ಕೋಲಂಬಿಯಕ್ಕೆ ಸೇರಿತ್ತು. ಸಾಮೋಪಾಯ ಂದ ಕೋಲಂಬಿಯದವರು ಒಡಂಬಡಲಿಲ್ಲ. ಬಳಿಕ ಭೇದೋಪಾಯದಿಂದ ನಾಮಾ ಸಂಸ್ಥಾನಕ್ಕೆ ಸ್ವಾತಂತ್ರ್ಯ ಕೊಡಿಸಿ, ಅಲ್ಲಿಯ ಪ್ರಜಾಸತ್ತಾಕರಾಜ್ಯದ ಧಿಕಾರಿಯಿಂದ ತಮಗೆ ಅನುಕೂಲವಾದ ಕರಾರುಗಳನ್ನು ಮಾಡಿಕೊಂಡರು.

ಇಷ್ಟೆಲ್ಲ ಆದ ಬಳಿಕ ಎಂಥ ಕಾಲುವೆಯನ್ನು ಮಾಡಬೇಕೆಂಬ ಚರ್ಚೆಯು ದ್ಭವಿಸಿತು. “ ಭವತಿ ನ ಭವತಿ ” ಆಗಿ. ನಿರ್ಣಿತದ ಕಾಲುವೆಯು ಬೇಗನೆ

ಆಗುತ್ತದೆಂತಲೂ ಅದಕ್ಕೆ ಖರ್ಚು ಕಡಿಮೆ ಬರುವದೆಂತಲೂ ಶಾಸ್ತ್ರಜ್ಞರು ಅಭಿಪ್ರಾಯಪಡಲು, ಆ ಮಾದರಿಯ ಕಾಲುವೆಯ ಕೆಲಸಕ್ಕೆ **ಕರ್ನಲ್ ಜಾರ್ಜ ಡಬ್ಲ್ಯು ಗೀಥಾಲ್ಸ** ಎಂಬವನನ್ನು ನೇಮಿಸಿ, ಆ ಕಾರ್ಯವನ್ನು ಆರಂಭಮಾಡಿದರು.

೪. ಪನಾಮಾ ಕಾಲುವೆಯ ರಚನೆ:—ಪನಾಮಾ ಕಾಲುವೆಯು ಐವತ್ತು ಮೈಲು ಉದ್ದವಾಗಿಯೂ, ४೫ ಫೂಟು ಆಳವಾಗಿಯೂ, ಬುಡದಲ್ಲಿ ೩೦೦ ರಿಂದ ೧೦೦೦ ಫೂಟು ಅಗಲವಾಗಿಯೂ ಇರುವದು. ಅದರ ಮಧ್ಯಭಾಗದಲ್ಲಿ ನೀರಿನ ಸಪಾಟಿಯು ಸಮುದ್ರದ ಪಾತಳಿಯಿಂದ ೮೫ ಫೂಟು ಎತ್ತರವದೆ. ಅಟ್ಲಾಂಟಿಕ್ ಮಹಾಸಾಗರದೊಳಗಿಂದ ಬರುವ ಹಡಗಗಳಿಗೆ **ಗಾಟೂನ**ದಲ್ಲಿ ಒಮ್ಮೆಲೆ ೮೫ ಫೂಟು ಎತ್ತರವಾದ ಸಪಾಟಿಯ ಮೇಲೆ ಹತ್ತಿ ಹೋಗಬೇಕಾಗುತ್ತದೆ.

ಅಟ್ಲಾಂಟಿಕ್ ಮಹಾಸಾಗರದ ದಂಡೆಯಲ್ಲಿರುವ **ಕೋಲನ್** ಅಥವಾ **ಅಸ್ಪಿನ್‌ವಾಲ** ಎಂಬ ಪಟ್ಟಣದಿಂದ ದಕ್ಷಿಣ ಪ್ಯಾಸಿಫಿಕ್ ಮಹಾಸಾಗರದ ದಂಡೆಯಲ್ಲಿರುವ ಪನಾಮಾ ಪಟ್ಟಣದ ವರೆಗೆ ಈ ಕಾಲುವೆಯನ್ನು ಕಡಿದಿರುವರು. ಇದು ಅಟ್ಲಾಂಟಿಕದಲ್ಲಿರುವ **ಲಾಯಮನ್** ಆಖಾತದಿಂದ ಆರಂಭವಾಗಿರುವದು. ಮುಂದಿನ ಸಪಾಟಪ್ರದೇಶವನ್ನು **ಚಾಗ್ರೀಸ**ವೆಂಬ ಮಹಾನದಿಯೂ ಅದರ ಶಾಖೋಪಶಾಖೆಗಳೂ ಮಳೆಗಾಲದಲ್ಲಿ ಜಲಮಯ ಮಾಡುವವು. ಇಂಥವುಗಳಿಗೆ ಒಡ್ಡು ಹಾಕುವದು ಅಸಾಧ್ಯವೆಂದು ಬಗೆದು, **ಗಾಟೂನ** ಹಾಗು **ಗಾಂಬೋಆ** ಎಂಬ ಗ್ರಾಮಗಳ ಮಧ್ಯದ ಸಪಾಟಾದಂಥ ಸಮುದ್ರಪಾತಳಿಯಿಂದ ಸುಮಾರು ೩೦೦ ಫೂಟು ಎತ್ತರವಾದ ಪ್ರದೇಶದಲ್ಲಿ ಆ ಎಲ್ಲ ನೀರನ್ನು ಸಂಚಯಮಾಡಬೇಕೆಂದು ಮೇಲೆ ಉಲ್ಲೇಖಿಸಿದ ಕೊಲ್ಲಿಯ ಬದಿಯಿಂದ ಚಾಗ್ರೀಸ ನದಿಯ ಪ್ರವಾಹಕ್ಕೆ ಬಲವುಳ್ಳ ತಡೆಯನ್ನು ಕಟ್ಟಿ, ೧೬४ ಚೌರಸ ಮೈಲು ಪ್ರದೇಶದಲ್ಲೆಲ್ಲ ನೀರನ್ನು ಕಟ್ಟಿ, ದೊಡ್ಡದೊಂದು ಸರೋವರವನ್ನುಂಟುಮಾಡಿದರು. ಇದರಲ್ಲಿ ಆ ನದಿಯ ಪ್ರವಾಹವು ಹೆಚ್ಚಾಗಿ ಸಮುದ್ರಕ್ಕೆ ಹೋಗಲಿಕ್ಕೆ ಅನುಕೂಲವಾಗುವಂತೆ, ಆ ಒಡ್ಡಿನ ಮೇಲಿಂದ ಹಾದು ಹೋಗಲಿಕ್ಕೆ ೨೮೫ ಫೂಟು ಅಗಲಾದ, ೧೨೦೦ ಫೂಟಿನ ವರೆಗೆ ಉದ್ದಾದ

ದ್ದೊಂದು ಹೊಳಲಗಟ್ಟೆಯನ್ನು ಮಾಡಿರುವರು. ಅದರಿಂದ ಸರೋವರದ ನೀರು ಕಡಿಮೆಯಾಗದೆ ನದಿಯ ನೀರಿಗೂ ಆತಂಕವಿಲ್ಲದಂತಾಯಿತು. ಮುಂದೆ ಈ ಸರೋವರದಿಂದ ದೊಡ್ಡ ಹರಿಗಾಲುವೆಯನ್ನು ಮಾಡಿರುವರು. ಆ ಕಾಲುವೆಯು ಸಮುದ್ರದ ಕಡೆಗೆ ಇಳಕಲಾಗುತ್ತ ನಡೆದದೆ.

ಮೇಲೆ ಉಲ್ಲೇಖಿಸಿದ ಒತ್ತಿನಲ್ಲಿ ೭ ಮೈಲು ಮಾರ್ಗವನ್ನು ಕ್ರಮಿಸಿ ಬಂದಬಳಿಕ ನದಿಯ ಒಡ್ಡು ಹತ್ತುವದು. ಆ ಒಡ್ಡಿಗೆ ಹೊಂದಿ ಕಾಲುವೆಯು ಎರಡೂ ಬದಿಗೂ ೫೦-೬೦ ಫೂಟು ದಪ್ಪಾದ ಕಲ್ಲುಗೋಡೆಗಳನ್ನು ಕಟ್ಟಿ, ಅವುಗಳ ಮೇಲಿಂದ ಇಳಿಬಿಡಲಿಕ್ಕೆ ಬರುವಂಥ ಬಾಗಿಲುಗಳನ್ನು ಹಚ್ಚಿರುವರು. ಈ ಬಾಗಿಲುಗಳು ೬-೭ ಅಂತಸ್ತಿನಷ್ಟು ಎತ್ತರವಿದ್ದು ४೦೦ ರಿಂದ ೮೦೦ ಟನ್ನಿನ ವರೆಗೆ ಜಡವಿರುವವು. ಇಂಥ ಮೂರು ಬಾಗಿಲುಗಳು ತುಸು ಅಂತರದಲ್ಲಿರುವವು. ಹಡಗಗಳು ೭ ಮೈಲು ಬಂದ ಬಳಿಕ ಮೊದಲನೆಯ ಬಾಗಿಲು ತೆರೆದು ಅವು ಒಳಗೆ ಬಂದ ಬಳಿಕ ಮುಚ್ಚಿಕೊಳ್ಳುವದು. ಬಳಿಕ ಅದರಲ್ಲಿ ದೊಡ್ಡ ದೊಡ್ಡ ನಳಗಳ ದ್ವಾರದಿಂದ ನೀರು ತುಂಬಲು, ಅಲ್ಲಿಯ ನೀರಿನ ಸಪಾಟಿಯು ಎರಡನೆಯ ಮೂರನೆಯ ಬಾಗಿಲುಗಳಲ್ಲಿರುವ ನೀರಿನ ಸಪಾಟಿಯಷ್ಟಾಗುವದು. ಅಲ್ಲಿಂದ ಎರಡನೆಯ ಬಾಗಿಲು ತೆರೆಯಲ್ಪಟ್ಟು ಹಡಗವು ಒಳ ಸೇರುವದು. ಇದೇ ಕ್ರಮದಿಂದ ಮೂರನೆಯ ಬಾಗಿಲುದಾಟಿ ಆ ಕೃತ್ರಿಮ ಸರೋವರದೊಳಗಿಂದ ೨೨ ಮೈಲು ಮಾರ್ಗ ಕ್ರಮಿಸಿ, ಮುಂದೆ ಹಳ್ಳದಂಥ ಕಾಲುವೆಯಲ್ಲಿ ಸೇರುವದು. ಬಳಿಕ ೩೦ ಫೂಟು ಇಳುವಾದ ನೀರಿನಲ್ಲಿ ಎರಿಕೆಯ ಸ್ಥಳದಲ್ಲಿದ್ದ ಬಾಗಿಲುಗಳೊಳಗಿಂದ ಹೊರಟು, ಬಂದಂತೆ ಹಾದು ಪ್ಯಾಸಿಫಿಕ್ ಸಾಗರವನ್ನು ಸೇರುವದು.

ಈ ಬಾಗಿಲುಗಳನ್ನು ದಾಟುವಾಗ ಹಡಗದ ಯಂತ್ರಗಳು ನಡೆಯುತ್ತಿರುವದಿಲ್ಲ. ಬಾಗಿಲುಗಳ ಉಭಯಪಾರ್ಶ್ವಗಳಲ್ಲಿದ್ದ ಯಂತ್ರಗಳು ಜಡವಾದ ಕಬ್ಬಿಣ ಸರಪಳಿಗಳ ಸಹಾಯದಿಂದ ಹಡಗವನ್ನು ನಡಿಸುತ್ತವೆ. ಇವೆಲ್ಲ ಕಾರ್ಯಗಳನ್ನು ಅಂದರೆ ಬಾಗಿಲು ತೆರೆಯೋಣ, ಮುಚ್ಚೋಣ, ಹಡಗ ನಡಿಸೋಣ ಮುಂತಾದ ಕಾರ್ಯಗಳನ್ನು ವಿದ್ಯುತ್ತಿನಿಂದ ನಡೆಯುವ ಯಂತ್ರಗಳೇ ಮಾಡುತ್ತವೆ.

ನೋಡಿರಿ, ಈ ಅದ್ಭುತವಾದ ಕಲ್ಪನೆಯೂ ರಚನೆಯೂ ಎಷ್ಟು ಆಶ್ಚರ್ಯಕರವಾಗಿರುವವು ! ಇವುಗಳ ವರ್ಣನೆಯೇ ನಮಗೆ ಅರಿದಾಗಿ ತೋರುವದು. ಪ್ರತ್ಯಕ್ಷವಾಗಿ ಆ ಬಾಗಿಲುಗಳು, ಅವು ಮೇಲೆ ಕೆಳಗೆ ಸರಿದಾಡುವ ಬಗೆ, ಕೇವಲ ಒಬ್ಬನೇ ಒಬ್ಬ ಮನುಷ್ಯನು ಒಂದು ಕೈದಿರುವಿದರೆ ಗತಿ ಪಡೆಯುವ ರೀತಿ, ಮುಂತಾದವುಗಳನ್ನು ನೋಡಿದರಂತೂ ನಮ್ಮ ಮತಿಯು ತೀರ ಕುಂಠಿತವಾಗಬಹುದು.

೫. ಪನಾಮಾ ಕಾಲುವೆಯಿಂದಾಗುವ ಲಾಭಗಳು: —

ಸದ್ಯಕ್ಕೆ ಸ್ಯಾನಫ್ರಾನ್ಸಿಸ್ಕೋದಿಂದ ಲಿವ್ಹರಪೂಲ ಪಟ್ಟಣಕ್ಕೆ ಮಾಗಲೆನ್ ಸ್ಟ್ರೇಟದ ಮಾರ್ಗವಾಗಿ ಹಾದು ಹೋಗಬೇಕಾಗಿರುವ ಕಾರಣ, ಈ ಪ್ರವಾಸವು ಹದಿನಾಲ್ಕು ಸಾವಿರ ಮೈಲಿನದು ಆಗುತ್ತದೆ. ಐದರೆ ಪನಾಮಾ ಕಾಲುವೆಯ ಮಾರ್ಗದಿಂದ ಆ ಅಂತರವು ಎಂಟು ಸಾವಿರ ಮೈಲು ಮಾತ್ರ ಆಗುವದು.

ಯುರೋಪ ಮತ್ತು ಆಫ್ರಿಕಾ ಖಂಡಗಳಿಂದ ಚೀನ, ಪಶ್ಚಿಮ ಅಮೇರಿಕಾ, ಆಸ್ಟ್ರೇಲೇಸಿಯಾ ಮುಂತಾದ ಪ್ರದೇಶಗಳಿಗೆ ಹೋಗುವವಕ್ಕೆ ಸರಳ ಮಾರ್ಗವಾಗುವದು.

ಸ್ಯಾನ ಫ್ರಾನ್ಸಿಸ್ಕೊ ಮತ್ತು ನ್ಯೂಆರ್ಕ ಪಟ್ಟಣಗಳ ನಡುವೆ ಈ ಕಾಲುವೆಯ ಮಾರ್ಗದಿಂದ ಪ್ರವಾಸಮಾಡಿದರೆ ಆ ದಾರಿಯು ಎಂಟು ಸಾವಿರ ಮೈಲು ಕಡಿಮೆಯಾಗುವದು. ಹಾಗು ಬರಹೋಗುವ ವೆಚ್ಚವಾದರೂ ಬಹಳೇ ಕಡಿಮೆಯಾಗುವದು.

ಅಮೇರಿಕದೊಳಗೆ ಹುಟ್ಟುವ ಅಸಂಖ್ಯಾತವಾದ ವ್ಯಾಪಾರದ ಜಿನಸುಗಳು ಪ್ಯಾಸಿಫಿಕ್ ಸಮುದ್ರದ ಧಡದಲ್ಲಿರುವ ದೇಶಗಳಿಗೆ ವ್ಯಾಪಾರಕ್ಕಾಗಿ ಹೆಚ್ಚಾಗಿ ಒಯ್ಯಲ್ಪಡುವವು.

ಅಮೇರಿಕಕ್ಕೂ ಚೀನ, ಜಪಾನ, ರಸಿಯಾ, ಪೂರ್ವದ್ವೀಪಕಲ್ಪಗಳು ಇವುಗಳಿಗೂ ಸಂಬಂಧವು ಹೆಚ್ಚು ಬೆಳೆಯುವದರಿಂದ ಇವುಗಳಲ್ಲಿಯ ವ್ಯಾಪಾರ-ರಾಜಕರಣಗಳ ಸ್ವರೂಪಗಳಲ್ಲಿ ಸ್ಥಿತ್ಯಂತರವಾಗಬಹುದು. ಈವರೆಗೆ ಅಮೇರಿಕವು ಯುರೋಪದ ಷಡ್ರಾಷ್ಟ್ರಗಳ ಅಥವಾ ಪೂರ್ವಗೋಲಾರ್ಧದ ಯಾವದೊಂದು ರಾಜಕರಣದಲ್ಲಿ ತಟಸ್ಥವೃತ್ತಿಯನ್ನು ಧರಿಸಿತ್ತು. ಆದರೆ ಇನ್ನು ಮುಂದೆ ಹೀಗಾಗುವದು ಅಸಂಭವವಾಗಿ ತೋರುತ್ತದೆ.

---

(೮) ಪುಸ್ತಕಾಲಯ.

೧. ಬೇರೆ ಬೇರೆ ಭಾಷೆಗಳಲ್ಲಿ ಮತ್ತು ಬೇರೆ ಬೇರೆ ವಿಷಯಗಳ ಸಂಬಂಧವಾಗಿ ಬರೆಯಲ್ಪಟ್ಟ ಪುರಾಣ, ಇತಿಹಾಸ, ನಾಟಕ, ಕಾದಂಬರಿ ಮೊದಲಾದ ಗ್ರಂಥಗಳು ಸರ್ವರಿಗೂ ಓದಲಿಕ್ಕೆ ಸುಲಭವಾಗಿ ದೊರೆಯಬೇಕೆಂದು ಯಾವದೊಂದು ಸಂಘದವರು ಅವುಗಳನ್ನು ಒಟ್ಟುಗೂಡಿಸಿ ಯಾವದೊಂದು ಕಟ್ಟಡದಲ್ಲಿಡುವರು. ಅಂಥ ಕಟ್ಟಡಕ್ಕೆ **ಪುಸ್ತಕಾಲಯ** ಅಥವಾ **ಪುಸ್ತಕಶಾಲೆ** ಎಂಬ ಹೆಸರು. ಪುಸ್ತಕಾಲಯಗಳಲ್ಲಿ ಮೇಲ್ಕಾಣಿಸಿದ ಪುಸ್ತಕಗಳ ಹೊರತಾಗಿ ಬೇರೆ ಬೇರೆ ದೇಶಗಳಲ್ಲಿ ಒದಗುವ ಸಂಗತಿಗಳನ್ನು ತಿಳಿಸುವಂಥ ಮತ್ತು ಬೇರೆ ಬೇರೆ ಭಾಷೆಗಳಲ್ಲಿ ಪ್ರತಿದಿವಸ ಇಲ್ಲವೆ ವಾರದಲ್ಲೊಂದು ಸಾರೆ ಛಾಪಿಸಲ್ಪಡುವ ವರ್ತಮಾನ ಪತ್ರಗಳೂ, ಮಾಸಿಕ ಪುಸ್ತಕಗಳೂ ತ್ರೈಮಾಸಿಕ ಪುಸ್ತಕಗಳೂ ಇರುತ್ತವೆ. ಇಂಥ ಸಾರ್ವಜನಿಕಪುಸ್ತಕಾಲಯಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಹಳವಾಗಿರುತ್ತವೆ.

(೨) **ಸಾಗಿಸುವ ಕ್ರಮ**:—ಎಷ್ಟೋ ಶ್ರೀಮಂತ ಜನರು ಸಾರ್ವಜನಿಕ ಪುಸ್ತಕಾಲಯಗಳಿಗಾಗಿ ಬೇಕಾಗುವ ಮತ್ತು ಬಹಳ ಬೆಲೆ ಬಾಳುವ ಎಷ್ಟೋ ಪುಸ್ತಕಗಳನ್ನು ಕಾಣಿಕೆಯಾಗಿ ಕೊಡುವರು. ಉಳಿದ ಪುಸ್ತಕಗಳನ್ನು ಪುಸ್ತಕಾಲಯಗಳ ಸಭಾಸದರು ಕೊಳ್ಳುವರು. ಇದಕ್ಕಾಗಿ ಬೇಕಾಗುವ ಹಣವನ್ನು ಕೂಡಿಸುವದಕ್ಕಾಗಿ ಅವರು ಪ್ರತಿಯೊಬ್ಬ ಸಭಾಸದನು ತಿಂಗಳಿಗೆ ಇಂತಿಷ್ಟು ವರ್ಗಣಿ ಹಣ ಕೊಡತಕ್ಕದ್ದೆಂದು ಗೊತ್ತುಮಾಡುವರು. ಪುಸ್ತಕಗಳ ಹಾಗು ವೆಚ್ಚದ ಸಂಬಂಧವಲ್ಲಿ ಒಳ್ಳೇ ವ್ಯವಸ್ಥೆಯನ್ನಿಡುವದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸುವರು. ಅವನಿಗೆ ಇಂಗ್ಲಿಷದಲ್ಲಿ "ಲೈಬ್ರೇರಿಯನ್" ಎಂದು ಅನ್ನುವರು. ಪುಸ್ತಕಾಲಯಗಳಲ್ಲಿ ಸಣ್ಣ ಸಣ್ಣ ಪುಸ್ತಕಗಳನ್ನು ಕನ್ನಡಿಯ ಕಪಾಟುಗಳಲ್ಲಿಡುವರು. ಅವುಗಳನ್ನು ತೆಗೆದುಕೊಂಡು ಓದಿ ಇದ್ದಲ್ಲಿಯೇ ಇಡಬಹುದು. ಆದರೆ ದೊಡ್ಡ ಪುಸ್ತಕಗಳನ್ನು ಮಾತ್ರ ಪುಸ್ತಕಾಲಯಗಳ ಅಧಿಕಾರಿಗಗಳನ್ನು ಕೇಳಿ ಇಸುಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಪುಸ್ತಕಾಲಯಗಳನ್ನು ಚನ್ನಾಗಿ ಸಾಗಿಸುವದರಲ್ಲಿ ಯಾವನಿಗೂ ಬಹಳ ತೊಂದರೆಯಾಗದೆ ಸಾರ್ವಜನಿಕ ಹಣದಿಂದ ಈ ಕೆಲಸವು ತಡೆಯಿಲ್ಲದೆ ಸಾಗುವದು.

೩ **ಉಪಯೋಗ:**—ಮನುಷ್ಯನ ಜ್ಞಾನಾಭಿವೃದ್ಧಿಗೆ ಸಾರ್ವಜನಿಕ ಪುಸ್ತಕಾಲಯಗಳು ಅವಶ್ಯವಾಗಿ ಬೇಕು. ಸ್ವಂತ ಹಣವನ್ನು ಖರ್ಚುಮಾಡಿ ಬಹಳ ಬೆಲೆಬಾಳುವ ಪುಸ್ತಕಗಳನ್ನು ಕೊಂಡುಕೊಳ್ಳುವಷ್ಟು ಯೋಗ್ಯತೆಯಿಲ್ಲದ ಜನರಿಗೆ ಪುಸ್ತಕಾಲಯುಗಳಿಂದ ಒಳ್ಳೇ ಲಾಭವಾಗುತ್ತದೆ. ದೊಡ್ಡ ದೊಡ್ಡ ವಿಷಯುಗಳನ್ನುದ್ದೇಶಿಸಿ ಬರೆದ ಗ್ರಂಥಗಳು ಸ್ವಲ್ಪ ಬೆಲೆಗೆ ದೊರೆಯುವದಿಲ್ಲ. ಜ್ಞಾನಸಂಪಾದನಾರ್ಥವಾಗಿ ಬಹಳ ಬೆಲೆಬಾಳುವ ಪುಸ್ತಕಗಳನ್ನು ಕೆಲಮಟ್ಟಿಗಾದರೂ ಓದಬೇಕಾಗುವದು. ಇಂಥ ಗ್ರಂಥಗಳನ್ನು ಪ್ರತ್ಯೇಕವಾಗಿ ಕೊಂಡುಕೊಳ್ಳುವಷ್ಟು ಸಾಮರ್ಥ್ಯವಿಲ್ಲದವರಿಗೆ ಪುಸ್ತಕಾಲಯುಗಳಿಲ್ಲದಿದ್ದರೆ ವಿದ್ಯಾಧ್ಯಯನಕ್ಕೆ ಮಹತ್ತರವಾದ ಪ್ರತಿಬಂಧವುಂಟಾಗುತ್ತದೆ. ಶ್ರೀಮಂತರಿಗೂ ಸಹ ಇಂಥ ಪುಸ್ತಕಗಳನ್ನು ಕೊಳ್ಳುವದು ಕಠಿಣವೇ ಸರಿ. ಇಂಗ್ಲಿಷಭಾಷೆಯಲ್ಲಿ ಬರೆದ "ಎನ್‌ಸೈಕ್ಲೊಪಿಡಿಯಾ" ಎಂಬ ಪುಸ್ತಕದ ಬೆಲೆಯು ಸುಮಾರು ನೂರಾಐವತ್ತು ರೂಪಾಯಿ ಇರುವದು. ಇಷ್ಟು ಹಣ ಖರ್ಚುಮಾಡಿ ಅದನ್ನು ಕೊಳ್ಳುವ ಸಾಮರ್ಥ್ಯವು ಬಡವರಿಗಿರುವದಿಲ್ಲ. ಅದರಂತೆಯೇ ಸಂಸ್ಕೃತದಲ್ಲಿ ಬರೆದ ಭಾರತ, ರಾಮಾಯಣ, ಭಾಗವತ ಮುಂತಾದ ಗ್ರಂಥಗಳು ಬಹಳ ಬೆಲೆಬಾಳುತ್ತವೆ. ಇಂಥ ಗ್ರಂಥಗಳು ಬಹುತರವಾಗಿ ಪುಸ್ತಕಾಲಯುಗಳಲ್ಲಿಯೇ ದೊರೆಯುವವಲ್ಲದೆ ಸಾಧಾರಣ ಜನರಲ್ಲಿ ದೊರೆಯುವದು ಕಡಿಮೆ.

ಇದಲ್ಲದೆ ಒಳ್ಳೇ ವ್ಯವಸ್ಥೆಯುಳ್ಳ ವಾಚನಮಂದಿರಗಳಲ್ಲಿ ಅನೇಕ ಮಹತ್ವದ ಪುಸ್ತಕಗಳು ದೊರೆಯುವದರಿಂದಲೂ, ವಿದ್ಯಾಭಿವೃದ್ಧಿಗೆ ಬೇಕಾದ ಬೇರೆ ಅನೇಕ ಸಾಧನಗಳು ಇರುವದರಿಂದಲೂ ಅಭ್ಯಾಸವು ಸುಲಭಸಾಧ್ಯವಾಗುತ್ತದೆ. ಮನೆಯಲ್ಲಿ ಮಂದಿ ಮಕ್ಕಳ ಒದರಾಟ ಚೀರಾಟಗಳ ಮೂಲಕ ಅಭ್ಯಾಸವು ಚನ್ನಾಗಿ ಸಾಗಲಾರದು. ಆದರೆ ಪುಸ್ತಕಾಲಯುಗಳು ಬಹುತರವಾಗಿ ಜನರ ಗೊಂದಲದಿಂದ ದೂರ ಇರುವದರಿಂದಲೂ, ಅಲ್ಲಿ ಪೂರ್ಣ ಶಾಂತತೆ ಇರುವದರಿಂದಲೂ ಓದುವವರಿಗೆ ಒಳ್ಳೇ ಪ್ರೋತ್ಸಾಹವುಂಟಾಗುವದು. ಏಕಚಿತ್ತದಿಂದ ಓದುತ್ತಿರುವ ಎಷ್ಟೋ ಸರಸ್ವತೀಕರುಣಾನೇಕ್ಷಿಗಳಾದ ಜನರನ್ನು ನೋಡಿದರೆ, ನಾವಾವರೂ ಅವರಂತೆಯೇ ಓದಬೇಕೆಂಬ ಅಭಿಲಾಷೆಯು ಸ್ವಾಭಾವಿಕವಾಗಿ ಹುಟ್ಟುವದು. ಆದ್ದರಿಂದ ಇಂಥ ಪುಸ್ತಕಾಲಯುಗಳಿಗೆ ದಿನಾಲು ಓದುವದಕ್ಕೋಸ್ಕರ ಹೋಗುವದು ಒಳ್ಳೇದು.

(೯) ಪ್ರಾವ್ಹಿನ್‌ಶಲ್ ಗವ್ಹರ್ನಮೆಂಟ (ಪ್ರಾಂತಿಕ ಸರಕಾರ).

೧. ಆರಂಭಕಾಲ.—ಪ್ರಾಂತಿಕ ಸರಕಾರವು ಇತ್ತಲಾಗಿ ಉಂಟಾದ ಕೆಲವು ರಾಜಕೀಯ ಕಾರಣಗಳಿಂದ ಸ್ಥಾಪಿಸಲ್ಪಟ್ಟು ಮೆಲ್ಲಮೆಲ್ಲನೆ ಬೆಳೆದಿರುತ್ತಿದ್ದೇ. ಆದರೂ ಅದು ಹಿಂದುಸ್ಥಾನ ಸರಕಾರಕ್ಕಿಂತ ಮುಂಚೆಯೇ ಆರಂಭವಾಗಿರುವದು. ರೆಗ್ಯುಲೇಟಿಂಗ ಆಕ್ಟು ಆಗುವದಕ್ಕಿಂತ ಮೊದಲು ರಾಜ್ಯದಾಡಳಿತದ ಪದ್ಧತಿಯು ಪ್ರೆಸಿಡೆನ್ಸಿ ಸಿಸ್ಟಿಮ್ (ಇಲಾಖಾ ಪದ್ಧತಿ) ಎಂಬ ಹೆಸರಿನಿಂದಲೇ ನಡೆಯುತ್ತಿತ್ತು. ಅಂದರೆ ಈಸ್ಟ ಇಂಡಿಯಾ ಕಂಪನಿಯವರ ವಖಾರಗಳೂ ಅವುಗಳ ಸುತ್ತಲು ಸಂಪಾದಿಸಿದ ಸೀಮೆಗಳೂ ಒಬ್ಬ ಪ್ರೆಸಿಡೆಂಟ ಮತ್ತು ಅವನ ಆಲೋಚನಾಸಭೆ ಇವರ ಅಧಿಕಾರಕ್ಕೊಳಗಾಗಿದ್ದವು. ಆ ಪ್ರೆಸಿಡೆಂಟ ಮತ್ತು ಆಲೋಚನಾ ಸಭೆಯುವರಿಗೆ ಅನುಕ್ರಮವಾಗಿ ಗವ್ಹರ್ನರ ಮತ್ತು ಕೌನ್ಸಿಲ್ ಎಂದು ಕರೆಯುತ್ತಿದ್ದರು. ಅವರ ಮೇಲೆ ಕೋರ್ಟ ಆಫ ಡಾಯರೆಕ್ಟರರೇ ಮುಖ್ಯಾಧಿಕಾರಿಗಳಾಗಿದ್ದರು. ಇಂಥ ಸೀಮೆಗಳಲ್ಲಿ ಮುಂಬಯಿ ಮತ್ತು ಮದ್ರಾಸ ಇವೇ ಮುಖ್ಯವಾಗಿದ್ದವು. ರೆಗ್ಯುಲೇಟಿಂಗ ಆಕ್ಟು ಆದಂದಿನಿಂದ ಮುಂಬಯಿ ಮತ್ತು ಮದ್ರಾಸ ಪ್ರಾಂತಗಳು ಬಂಗಾಲ ಪ್ರಾಂತದ ಗವ್ಹರ್ನರನ ಕೈಕೆಳಗೆ ಬಂದು ಅವನಿಗೆ ಗವ್ಹರ್ನರ-ಜನರಲ್ ಎಂದು ಕರೆಯಹತ್ತಿದರು. ಮುಂದೆ ಈಸ್ಟ ಇಂಡಿಯಾ ಕಂಪನಿಯವರು ಹೆಚ್ಚೆಚ್ಚು ಪ್ರಾಂತಗಳನ್ನು ಸಂಪಾದಿಸಿದ್ದರಿಂದ, ಹಾಗು ಕೆಲವು ಪ್ರಾಂತಗಳು ಬ್ರಿಟಿಶ ರಾಜ್ಯಕ್ಕೆ ಸೇರಿದ್ದರಿಂದ ಕೆಲವು ಪ್ರಾಂತಗಳ ಮೇಲೆ ಲೆಫ್ಟನಂಟ ಗವ್ಹರ್ನರರನ್ನೂ, ಕೆಲವುಗಳ ಮೇಲೆ ಚೀಫ ಕಮಿಶನರರನ್ನೂ ನೇಮಿಸಿರುವರು.

೨. ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳೂ ಅವುಗಳ ಮೇಲಧಿಕಾರಿಗಳೂ:—೧೯೨೦ನೇ ಇಸವಿಯ ವರೆಗೆ ಬ್ರಿಟಿಶ ಇಂಡಿಯಾದಲ್ಲಿ ರಾಜ್ಯದಾಡಳಿತಕ್ಕಾಗಿ ಕೆಳಗೆ ತೋರಿಸಿದ ಪ್ರಾಂತಗಳು ಮಾಡಲ್ಪಟ್ಟಿದ್ದವು.

(೧) ಮುಂಬಯಿ, ಮದ್ರಾಸ, ಮತ್ತು ಬಂಗಾಲ ಈ ಮೂರು ಇಲಾಖೆಗಳು. ಗವ್ಹರ್ನರರೂ ಅವರ ಕೌನ್ಸಿಲುಗಳೂ ಅವುಗಳ ಮೇಲಧಿಕಾರಿಗಳು. (೨) ಪಂಜಾಬ, ಬಿಹಾರ ಮತ್ತು ಓರಿಸಾ, ಬರ್ಮಾ, ಹಾಗು ಅಯೋಧ್ಯಾ ಮತ್ತು ಆಗ್ರಾ ಸಂಯುಕ್ತಪ್ರಾಂತಗಳು ಹೀಗೆ ನಾಲ್ಕು ಪ್ರಾಂತಗಳು. ಲೆಫ್ಟ್

ನಂಟ ಗವ್ಹರ್ನರರೂ ಅವರ ಎಗ್ಝಿಕ್ಯೂಟಿವ್ಹ ಕೌನ್ಸಿಲುಗಳೂ ಈ ಪ್ರಾಂತಗಳ ಮೇಲಧಿಕಾರಿಗಳು. (೩) ದಿಲ್ಲಿ, ಅಸಾಮ, ವರ್ಹಾಡ ಮತ್ತು ಮಧ್ಯಪ್ರಾಂತಗಳು, ಹಾಗು ನಾರ್ಥವೆಸ್ಟ ಫ್ರಂಟಿಯರ ಪ್ರಾವ್ಹಿನ್ಸ ಹೀಗೆ ನಾಲ್ಕು ಪ್ರಾಂತಗಳು. ಇವು ಚೀಫ ಕಮಿಶನರರ ಕೈಕೆಳಗಿನವು. ಅವುಗಳಿಗೆ ಎಗ್ಝಿಕ್ಯೂಟಿವ್ಹ ಕೌನ್ಸಿಲುಗಳಿಲ್ಲ.

(೪) ಬ್ರಿಟಿಶ ಬಲುಚಿಸ್ತಾನ, ಅಜಮೀರ—ಮಾಳವಾ, ಕುರ್ಗ ಮತ್ತು ಅಂದಮಾನ ನಡುಗಡ್ಡೆಗಳು. ಇವು ಗವ್ಹರ್ನರ-ಜನರಲನ ಏಜಂಟರ ಕೈಕೆಳಗಿನವು.

ಆದರೆ ೧೯೧೯ನೇ ಇಸವಿಯ ಆಕ್ಟದಿಂದ ಆಯಾ ಪ್ರಾಂತಗಳ ಸ್ಥಿತಿಯೂ ಅವುಗಳನ್ನಾಳುವ ಮೇಲಧಿಕಾರಿಗಳ ಹೆಸರುಗಳೂ ಬದಲಾಗಿರುವವು. ಈಗುಂಟಾದ ಪ್ರಾಂತಗಳು ಯಾವವೆಂದರೆ:—

(೧) **ಮುಂಬಯಿ, ಮದ್ರಾಸ, ಬಂಗಾಲ, ಸಂಯುಕ್ತ ಪ್ರಾಂತ, ಪಂಜಾಬ, ಬಿಹಾರ** ಮತ್ತು **ಓರಿಸಾ, ಮಧ್ಯಪ್ರಾಂತ,** ಹಾಗು **ಅಸಾಮು** ಈ ಎಂಟು ಪ್ರಾಂತಗಳು. ಇವುಗಳಲ್ಲಿ ಪ್ರತಿ ಒಂದು ಪ್ರಾಂತವು ಗವ್ಹರ್ನರ-ಇನ್-ಕೌನ್ಸಿಲ ಹಾಗು ಅವನ ಮಂತ್ರಿಗಳಿಂದ ಆಳಲ್ಪಡುತ್ತಲಿದೆ. ಈ ಪ್ರಾಂತಗಳಿಗಿದ್ದ ಎಗ್ಝಿಕ್ಯೂಟಿವ್ಹ ಕೌನ್ಸಿಲುಗಳ ಮೆಂಬರರ ಸಂಖ್ಯೆಯು ಗೊತ್ತಾಗಿರುವದಿಲ್ಲ. ಆದರೂ ಅವರ ಸಂಖ್ಯೆಯು ನಾಲ್ಕಕ್ಕಿಂತ ಹೆಚ್ಚಿರಕೂಡದು. ಅವರಲ್ಲೊಬ್ಬನು ಹಿಂದುಸ್ತಾನದಲ್ಲಿ ಕನಿಷ್ಠ ೧೨ ವರ್ಷ ಕೆಲಸ ಮಾಡಿದವನಿರಬೇಕು. ಸಣ್ಣ ಪ್ರಾಂತಗಳಲ್ಲಿ ಮೆಂಬರರ ಸಂಖ್ಯೆಯು ೨ ಇದ್ದು, ಅವರಲ್ಲೊಬ್ಬನು ಸರಕಾರೀ ಉದ್ಯೋಗಸ್ಥನಲ್ಲದ ಇಂಡಿಯನನಿರಬೇಕು. ದೊಡ್ಡ ಪ್ರಾಂತಗಳ ಕೌನ್ಸಿಲಿನ ಮೆಂಬರರಲ್ಲಿ ಇಬ್ಬರು ಸರಕಾರೀ ಉದ್ಯೋಗಸ್ಥರಲ್ಲದ ಇಂಡಿಯನರಿರಬೇಕು. ದೊಡ್ಡ ಪ್ರಾಂತಗಳ ಕೌನ್ಸಿಲಿನ ಮೆಂಬರರಲ್ಲಿ ಇಬ್ಬರು ಸರಕಾರೀ ಉದ್ಯೋಗಸ್ಥರಾಗಿದ್ದು, ಅವರಲ್ಲೊಬ್ಬನೂ ಇಂಡಿಯನನಿರದಿದ್ದ ಪಕ್ಷದಲ್ಲಿ ಆ ಕೌನ್ಸಿಲಿನಲ್ಲಿ ಇಬ್ಬರು ಸರಕಾರೀ ಉದ್ಯೋಗಸ್ಥರಲ್ಲದಂಥ ಇಂಡಿಯನರು ಮೆಂಬರರಾಗಿರಲಿಕ್ಕೇ ಬೇಕು. (೨) **ಬರ್ಮಾ** ಪ್ರಾಂತವು ಇವನ್ನು ಲೆಫ್ಟಿನಂಟ ಗವ್ಹರ್ನರನು ಆಳುವನು. (೩) **ದಿಲ್ಲಿ** ಮತ್ತು **ನಾರ್ಥವೆಸ್ಟ**

ಫ್ರಂಟಿಯರ ಪ್ರೊವ್ಹಿನ್ಸ ಈ ಎರಡು ಪ್ರಾಂತಗಳು ಚೀಫಕಮಿಶನರನ ಕಡೆಗಿವೆ. ಅವನಿಗೆ ಕೌನ್ಸಿಲು ಇಲ್ಲ. (೪) **ಬ್ರಿಟಿಶ ಬಲುಚಿಸ್ತಾನ,** ಮತ್ತು **ಅಜಮೀರ-ಮಾಳವಾ** ಪ್ರಾಂತಗಳು. ಇವೆರಡೂ ಗವ್ಹರ್ನರ-ಜನರಲನ ಏಜಂಟನ ಕೈಕೆಳಗಿವೆ (೫) **ಕುರ್ಗ** ಪ್ರಾಂತವು. ಇದು ಮೈಸೂರದ ರೆಸಿಡೆಂಟಿನ ಕಡೆಗಿರುವದು. (೬) **ಅಂದಮಾನ ನಡುಗಡ್ಡೆಗಳು.** ಇವು ಪಿನಲ್ ಸೆಟಲ್‌ಮೆಂಟ್ಸ ಆಫ ಪೋರ್ಟ ಬ್ಲೇರದ ಸುಪರಿಂಟೆಂಡೆಂಟನ ಕಡೆಗಿವೆ.

೩. ಆಯಾ ಪ್ರಾಂತಗಳಿಗಿರುವ ವಿಶೇಷವಾದ ಅಧಿಕಾರಗಳು:—

ಮುಂಬಯಿ, ಮದ್ರಾಸ, ಮತ್ತು ಬಂಗಾಲ ಈ ಮೂರು ಪ್ರಾಂತಗಳಿಗೆ ಉಳಿದ ಪ್ರಾಂತಗಳಿಗಿಂತ ಕೆಲವು ಹೆಚ್ಚು ಅಧಿಕಾರಗಳುಂಟು. ಅವು ಯಾವವೆಂದರೆ:— (೧) ಆ ಪ್ರಾಂತಗಳ ಗವ್ಹರ್ನರರು ಬಹುತರವಾಗಿ ಶ್ರೀಮಂತ ಮನೆತನದವರಿದ್ದು, ಇಂಗ್ಲಂಡದಿಂದಲೇ ನೇಮಿಸಿ ಕಳುಹಿಸಲ್ಪಡುವರು. (೨) ಅವರು ಯಾವದೊಂದು ವಿಷಯದ ಬಗ್ಗೆ ಸ್ಟೇಟಸೆಕ್ರೆಟರಿಯವರ ಕೂಡ ಸ್ವತಂತ್ರವಾಗಿ ಪತ್ರವ್ಯವಹಾರಮಾಡಬಹುದು. (೩) ಅವರು ವ್ಹಾಯಿಸರಾಯನ ಮಂಜೂರಿಯಿಲ್ಲದೆ ಲೆಜಿಸ್ಲೇಟಿವ್ಹ ಕೌನ್ಸಿಲುಗಳ ಮೆಂಬರರನ್ನು ನೇಮಿಸಬಹುದು. (೪) ಅವರಿಗೆ ಉಳಿದ ಪ್ರಾಂತಗಳ ಗವ್ಹರ್ನರರಿಗಿಂತ ಹೆಚ್ಚು ಸಂಬಳವೂ ಸ್ವತಂತ್ರತೆಯೂ ಇರುವವು.

ಉಳಿದ ಪ್ರಾಂತಗಳ ಗವ್ಹರ್ನರರಿಗೆ ಸಂಬಳವು ಕಡಿಮೆ. ಅವರನ್ನು ಇಂಗ್ಲಂಡದ ಅರಸನು ಗವ್ಹರ್ನರ-ಜನರಲನ ಅಭಿಪ್ರಾಯ ಪಡೆದು ನೇಮಿಸುವನು. ಅವರು ಅವಶ್ಯವಾಗಿ ಇಂಗ್ಲಂಡದಿಂದಲೇ ಬಂದವರಿರಬೇಕೆಂತಲ್ಲ. ಆಯ್.ಸಿ.ಎಸ್ (ಇಂಡಿಯನ್ ಸಿವ್ಹಿಲ್ ಸರ್ವ್ಹಿಸ)ದ ಮೆಂಬರರೂ ಆಗಿರಬಹುದು.

ಚೀಫ ಕಮಿಶನರರೂ ಏಜಂಟರೂ ಆಯ್.ಸಿ.ಎಸ್‌ದ ಮೆಂಬರರಾಗಿದ್ದು, ಅವರನ್ನು ವ್ಹಾಯಿಸರಾಯನೇ ನೇಮಿಸುವದರಿಂದ, ಅವರು ಅವನ ಕೈಕೆಳಗಿನ ಅಧಿಕಾರಿಗಳಾಗಿ ಅವನಿಗೆ ಅಧೀನರಾಗಿರುವರು.

೪. ಪ್ರಾಂತಿಕ ಸರಕಾರಕ್ಕೊಳಪಟ್ಟ ವಿಷಯಗಳು:—

ಪೋಲೀಸ, ಸಿವ್ಹಿಲ್ ಮತ್ತು ಕ್ರಿಮಿನಲ್ ನ್ಯಾಯ ಕೋರ್ಟುಗಳು, ಸೆರೆಮನೆ, ಭೂತೆರಿಗೆ, ವಿದ್ಯೆ, ಔಷಧ, ಆರೋಗ್ಯತೆ, ಕಟ್ಟಡ, ಮಾರ್ಗಗಳು,

ಅರಣ್ಯ, ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ ಲೋಕಲ್‌ಬೋರ್ಡ—ಇವು ಪ್ರಾಂತಿಕ ಸರಕಾರಕ್ಕೊಳಗಾದ ವಿಷಯಗಳು.

ರಾಜ್ಯಕಾರಭಾರವು:— ೧೯೧೯ನೇ ಇಸವಿಯ ಆಕ್ಟಿನ ಪ್ರಕಾರ ಪ್ರಾಂತಗಳ ರಾಜ್ಯಕಾರಭಾರದಲ್ಲಿ **ಕಾದಿಟ್ಟ ವಿಷಯಗಳೂ** (Reserved subjects) **ಕೊಟ್ಟ ವಿಷಯಗಳೂ** ('Transferred subjects) ಎಂಬ ಎರಡು ಭಾಗಗಳಾಗಿರುವವು.

ಕಾದಿಟ್ಟ ವಿಷಯಗಳು ಗವ್ಹರ್ನರ-ಇನ್-ಕೌನ್ಸಿಲನ ಕಡೆಗಿದ್ದು, ಆ ಕೌನ್ಸಿಲಿನ ಪ್ರತಿಯೊಬ್ಬ ಮೆಂಬರನು ಅವುಗಳಲ್ಲಿ ಯಾವದೊಂದು ವಿಶಿಷ್ಟವಾದ ವಿಷಯವನ್ನು ವಿಚಾರಿಸುವನು. ಇರಿಗೇಶನ್, ಲ್ಯಾಂಡರೆವ್ಹಿನ್ಯು, ಫ್ಯಾಮಿನ್ ರಿಲೀಫ, ನ್ಯಾಯಕೋರ್ಟು, ಪೋಲೀಸ, ಸೆರೆಮನೆ, ಸಾಲ, ಕರಗಳು— ಇವು ಕಾದಿಟ್ಟ ವಿಷಯಗಳಲ್ಲಿ ಬರುತ್ತವೆ. ಇವುಗಳ ಸಂಬಂಧದಿಂದಾದ ಹುಕುಮುಗಳು ಗವ್ಹರ್ನರ-ಜನರಲ್-ಇನ್-ಕೌನ್ಸಿಲನು ಮಾಡಿದ ಹುಕುಮುಗಳೆಂದು ತಿಳಿಯತಕ್ಕದ್ದು.

ವಿದ್ಯೆ, ಆರೋಗ್ಯತೆ, ಆಗ್ರಿಕಲ್ಚರ, ಫಾರೆಸ್ಟ, ಸ್ಥಾನಿಕಸ್ವರಾಜ್ಯ, ಔದ್ಯೋಗಿಕಸಂಸ್ಥೆ-ಇವು ಕೊಟ್ಟ (Transferred) ವಿಷಯಗಳು. ಅವು ಹಿಂದೀ ಮಂತ್ರಿಗಳ (Indian Ministers) ಕಡೆಗಿರುವವು. ಈ ಮಂತ್ರಿಗಳು ಲೆಜಿಸ್ಲೇಟಿವ್ಹ ಕೌನ್ಸಿಲುಗಳಲ್ಲಿ ಆರಿಸಲ್ಪಟ್ಟ ಮೆಂಬರರಾಗಿದ್ದು, ಗವ್ಹರ್ನರನಿಂದ ನೇಮಿಸಲ್ಪಡುವರು. ಅವರು ಲೆಜಿಸ್ಲೇಟಿವ್ಹ ಕೌನ್ಸಿಲುಗಳಿಗೆ ಜವಾಬುದಾರರಾಗಿರುತ್ತಾರೆ. ಮಂತ್ರಿಯು ಯೋಜಿಸಿದ ಯಾವದೊಂದು ರಾಜಕೀಯ ತತ್ವವು ಲೆಜಿಸ್ಲೇಟಿವ್ಹ ಕೌನ್ಸಿಲರಿಗೆ ಸಮ್ಮತವಾಗದಿದ್ದಲ್ಲಿ, ಅವರು ಅವನಿಗೆ ತನ್ನ ಕೆಲಸಕ್ಕೆ ರಾಜೀನಾಮೆ ಕೊಡುವಂತೆ ಅಗತ್ಯಪಡಿಸಬಹುದು. ಹೀಗಾದಲ್ಲಿ, ಗವ್ಹರ್ನರನು ಲೆಜಿಸ್ಲೇಟಿವ್ಹ ಕೌನ್ಸಿಲಿನಲ್ಲಿ ಆರಿಸಲ್ಪಟ್ಟ ಮೆಂಬರರಲ್ಲಿ ಮತ್ತೊಬ್ಬನನ್ನು ಹೊಸದಾಗಿ ಮಂತ್ರಿಯನ್ನಾಗಿ ನೇಮಿಸುವನು. ಎಗ್ಸಿಕ್ಯೂಟಿವ್ಹ ಕೌನ್ಸಿಲಿನ ಮೆಂಬರನಿಗಿದ್ದಷ್ಟೇ ಅಧಿಕಾರವೂ ಸಂಬಳವೂ ಮಂತ್ರಿಗಳಿಗಿರುವವು. ಆದರೂ ಅವಶ್ಯವಿದ್ದಲ್ಲಿ ಗವ್ಹರ್ನರನು ಅವರ ಕೆಲಸಗಳಲ್ಲಿ ಕೈಹಾಕಬಹುದಲ್ಲದೆ, ಅವರನ್ನು ಕೆಲಸದಿಂದ ತೆಗೆದುಹಾಕಬಹುದು. ಗವ್ಹರ್ನರ—

ಮಂತ್ರಿಗಳ ನಡುವೆ ಮತಭೇದವಾದಲ್ಲಿ, ಮಂತ್ರಿಯು ತನ್ನ ಕೆಲಸಕ್ಕೆ ರಾಜೀನಾಮೆ ಕೊಡಬಹುದು; ಇಲ್ಲವೆ ಗವ್ಹರ್ನರರನು ಅವನನ್ನು ಕೆಲಸದಿಂದ ತೆಗೆದುಹಾಕಬಹುದು. ಹೀಗಾದಲ್ಲಿ ಗವ್ಹರ್ನರರನು ಬೇರೊಬ್ಬನನ್ನು ಮಂತ್ರಿಯನ್ನಾಗಿ ನೇಮಿಸುವನು. ಹೊಸದಾಗಿ ನೇಮಿಸಲ್ಪಟ್ಟ ಮಂತ್ರಿಯೂ ಭಿನ್ನಮತದವನಾಗಿ, ಅವನಿಗೆ ಕೌನ್ಸಿಲಿನ ಮೆಂಬರರ ಸಹಾಯವಿಲ್ಲದಿದ್ದಲ್ಲಿ, ಇಲ್ಲವೆ ಕೌನ್ಸಿಲಿನ ಮೆಂಬರರಲ್ಲಿ ಯಾವನೂ ಮಂತ್ರಿಯಾಗಿ ಗವ್ಹರ್ನರನು ಹೇಳಿದಂತೆ ನಡಕೊಳ್ಳಲು ಸಮ್ಮತಿಸದಿದ್ದಲ್ಲಿ, ಗವ್ಹರ್ನರನಿಗೆ ಆ ಲೆಜಿಸ್ಲೇಟಿವ್ಹ ಕೌನ್ಸಿಲವನ್ನು ತೆಗೆದುಹಾಕಿ ಬೇರೊಂದು ಹೊಸ ಕೌನ್ಸಿಲು ಆರಿಸಲ್ಪಡುವವರೆಗೂ ಕೊಟ್ಟ ವಿಷಯಗಳ ಸಂಬಂಧವಾಗಿ ತಾನೇ ಕಾರಭಾರ ನಡಿಸುವ ಅಧಿಕಾರವುಂಟು. ಆದರೆ ಹೊಸದಾಗುಂಟಾದ ಕೌನ್ಸಿಲಿನಲ್ಲಿ ಸಹ ಮೊದಲಿದ್ದ ಹಳೇ ಮೆಂಬರರೇ ಮತ್ತೆ ಹೊಸ ಮೆಂಬರರಾಗಿಯೂ ಮೊದಲು ಮಂತ್ರಿಗಳಾಗಿದ್ದವರೇ ಮತ್ತೆ ಹೊಸ ಮಂತ್ರಿಗಳಾಗಿಯೂ ಆರಿಸಲ್ಪಟ್ಟಲ್ಲಿ, ಗವ್ಹರ್ನರನು ಮಂತ್ರಿಗಳ ಅಭಿಪ್ರಾಯದಂತೆ ನಡಕೊಳ್ಳಬೇಕಾಗುವದು.

ರಾಜ್ಯಕಾರಭಾರ ಸಾಗಿಸುವದಕ್ಕಾಗಿ ಪ್ರತಿಯೊಂದು ಪ್ರಾಂತದಲ್ಲಿ ಒಂದು ದೊಡ್ಡ ಕಚೇರಿಯುಂಟು. ಅದಕ್ಕೆ **ಸೆಕ್ರೆಟೇರಿಯಟ್** ಎಂಬ ಹೆಸರು. ಸರಕಾರದ ಕೆಲಸವು ಆಯಾ ಡಿಪಾರ್ಟಮೆಂಟುಗಳಲ್ಲಿ ವಿಭಾಗಿಸಲ್ಪಟ್ಟು, ಪ್ರತಿಯೊಂದು ಡಿಪಾರ್ಟಮೆಂಟು ಕೌನ್ಸಿಲಿನ ಒಬ್ಬ ಮೆಂಬರನ ಕಡೆಗಾಗಲಿ ಮಂತ್ರಿಯ ಕಡೆಗಾಗಲಿ ಒಪ್ಪಿಸಲ್ಪಟ್ಟಿರುವದು. ಹಾಗು ಪ್ರತಿಯೊಬ್ಬ ಮೆಂಬರನ ಇಲ್ಲವೆ ಮಂತ್ರಿಯ ಕಚೇರಿಯಲ್ಲಿ ಎಷ್ಟೋ ಅಧಿಕಾರಸ್ಥರೂ ಕಾರಕೂನರೂ ಇದ್ದು, ಅವರ ಮೇಲೊಬ್ಬ ಸೆಕ್ರೆಟರಿಯು ನೇಮಿಸಲ್ಪಟ್ಟಿರುವನು. ಅವನು "ಆಯ್-ಸಿ-ಎಸ್"ದ ಮೆಂಬರನಾಗಿರುವನು. ಅವನು ತನ್ನ ಖಾತೆಯ ಮೆಂಬರನಿಗೆ ಇಲ್ಲವೆ ಮಂತ್ರಿಗೆ ಜವಾಬದಾರನಾಗಿರುವನು.

---

(೧೦) ಮುದ್ರಣ.

೧. ಮುದ್ರಣವೆಂದರೆ ಅಚ್ಚುಹಾಕೋಣ. ಈ ಯುಕ್ತಿಯು ಗೊತ್ತು ಹಚ್ಚಲ್ಪಟ್ಟು ಸುಮಾರು ನೂರಿನ್ನೂರು ವರ್ಷಗಳಾದವು. ಇದು ಮೊದಲು ಯುರೋ

ಪ ಖಂಡದಲ್ಲಿ ಹುಟ್ಟಿತೆಂದು ಕೆಲವರ ಮತವಿದೆ. ಆದರೆ ಯುರೋಪ ಖಂಡದವರಿಗೆ ಗೊತ್ತಾಗುವದಕ್ಕಿಂತ ಮೊದಲು ಐನೂರು ಆರುನೂರು ವರ್ಷಗಳಾಚೆ ಅದು ಚೀನದೇಶದಲ್ಲಿ ಹುಟ್ಟಿತೆಂದು ಇತಿಹಾಸದಲ್ಲಾಗಿ ಕೆಲವರು ಗೊತ್ತುಹಚ್ಚಿದ್ದಾರೆ. ಯಾವ ದೇಶದಲ್ಲಿಯೇ ಹುಟ್ಟಿರಲಿ, ಸುಧಾರಣೆಯ ಕುರುಹಾದ ಈ ಯುಕ್ತಿಯು ಯುರೋಪ ಖಂಡದಿಂದಲೇ ನಮ್ಮ ದೇಶಕ್ಕೆ ಬಂತೆಂದು ಖಂಡಿತವಾಗಿ ಹೇಳಬಹುದು.

೨. **ಪ್ರಕಾರಗಳು**:—ಮುದ್ರಣದಲ್ಲಿ ಶಿಲಾಛಾಪೆ, ಮೊಳೆಗಳಿಂದ ಮಾಡಲ್ಪಡುವಛಾಪೆ, ಹೀಗೆ ಮುಖ್ಯವಾಗಿ ಎರಡು ಪ್ರಕಾರಗಳುಂಟು. ಮೊದಲನೇದರಲ್ಲಿ ಒಂದು ತರದ ಮಸಿ ಮಾಡಿ, ಅದರಿಂದ ಹಳದೀಬಣ್ಣದ ಕಾಗದದ ಮೇಲೆ ಅಕ್ಷರಗಳನ್ನು ಬರೆದು, ಆ ಕಾಗದವನ್ನು ಸುಣ್ಣದ ಕಲ್ಲಿನ ಮೇಲೆ ಹಾಕಿ ಒತ್ತಿ ತೀಡಲು, ಅಕ್ಷರಗಳು ಆ ಕಲ್ಲಿನ ಮೇಲೆ ತಿರುವು ಮುರವು ಮೂಡುತ್ತವೆ. ಬಳಿಕ ಆ ಕಲ್ಲನ್ನು ಯಂತ್ರದೊಳಗಿಟ್ಟು, ಅದರ ಮೇಲೆ ಮಸಿ ಹಚ್ಚುವ ಲಟ್ಟಣಿಗೆಯನ್ನಾಡಿಸಿ, ಮೇಲೆ ಬಿಳೇ ಕಾಗದವನ್ನು ಹಾಕಿ ಯಂತ್ರದ ಸಹಾಯದಿಂದ ಒತ್ತಿ ತೀಡಲು, ಕಲ್ಲಿನ ಮೇಲಿನ ಅಕ್ಷರಗಳು ಆ ಕಾಗದದ ಮೇಲೆ ಸರಿಯಾಗಿ ಮೂಡುವವು. ಎರಡನೇದರಲ್ಲಿ ಉಕ್ಕಿನ ಮೊಳೆಗಳನ್ನು ಮಾಡಿ ಅವುಗಳ ತುದಿಗಳಲ್ಲಿ ಅಕ್ಷರಗಳನ್ನು ಕೊರೆದು ತಾಮ್ರದ ದಪ್ಪನ್ನ ತಗಡಿನಲ್ಲಿ ಹೊಡೆಯಲು, ಅದರಲ್ಲಿ ಅಕ್ಷರಗಳು ನಾಟುತ್ತವೆ. ಆ ಮೇಲೆ ಆ ತಗಡನ್ನು ಸಾಚೆಯ ಕೆಳಗೆ ಹಚ್ಚಿ ಅದರೊಳಗೆ ಸೀಸು, ಆಂಟಿಮನಿ ಎಂಬ ಧಾತುಗಳನ್ನು ಕೂಡಿಸಿ ಕರಗಿಸಿ ಸಿದ್ಧಮಾಡಿದ ರಸವನ್ನು ಎರೆದ ಕೂಡಲೆ ಅಕ್ಷರಗಳ ಮೊಳೆಗಳು ಹುಟ್ಟುವವು. ಈ ಮೇರೆಗೆ ಹೊಯಿದ ಮೊಳೆಗಳನ್ನು ಹೊಂದಿಸಿ ಸಾಲ್ಗೊಳಿಸಿ ಒಂದು ಕಬ್ಬಿಣದ ಚೌಕಟ್ಟಿನೊಳಗಿಟ್ಟು ಬಿಗಿಮಾಡಿ ಮಸಿಹಚ್ಚುವ ಲಟ್ಟಣಿಗೆಯನ್ನಾಡಿಸಿ ಮೇಲೆ ಬಿಳೇ ಕಾಗದವನ್ನುಹಾಕಿ ಒತ್ತಲು, ಅಕ್ಷರಗಳು ಚನ್ನಾಗಿ ಮೂಡುವವು.

೩. **ಗುಣದೋಷಗಳು**:—ಶಿಲಾಛಾಪೆಯಿಂದ ದಿನವೊಂದಕ್ಕೆ ಸಾವಿರ ಎರಡು ಸಾವಿರ ಕಾಗದಗಳನ್ನು ಮುದ್ರಿಸಬಹುದು. ಆದರೆ ಮೊಳೆಯ ಛಾಪೆಯಿಂದ ಇಪ್ಪತ್ತು, ಮೂವತ್ತು ಸಾವಿರ ಕಾಗದಗಳನ್ನು ಛಾಪಿಸಬಹುದು. ಕಲ್ಲ ಮೇಲಿನ ಅಕ್ಷರಗಳಿಗಿಂತ ಮೊಳೆಗಳಿಂದ ಮುದ್ರಿಸಿದ ಅಕ್ಷರಗಳು ಹೆಚ್ಚು ಚಂದ

ವಿರುತ್ತವೆ. ಶಿಲಾಛಾಪೆಗಿಂತ ಮೊಳೆಗಳಿಂದ ಕೆಲಸವು ತೀವ್ರವಾಗುವದರಿಂದ ಬಹುತರ ಎಲ್ಲ ತರದ ಪುಸ್ತಕಗಳನ್ನು ಮೊಳೆಗಳಿಂದಲೇ ಮುದ್ರಿಸುವದುಂಟು.

೪. **ಲಾಭಗಳು**:—ಅಚ್ಚು ಹಾಕುವ ಯುಕ್ತಿಯು ಗೊತ್ತಾಗುವದಕ್ಕಿಂತ ಮೊದಲು ಪುಸ್ತಕಗಳನ್ನು ಕೈಯಿಂದ ಬರೆಯುತ್ತಿದ್ದರು. ಆದರೆ ಕೈಬರಹಕ್ಕೆ ಶ್ರಮವೂ ವೇಳೆಯೂ ಬಹಳ ಹತ್ತುತ್ತಿದ್ದವಲ್ಲದೆ ಅಕ್ಷರಗಳು ಸ್ಪಷ್ಟವಾಗಿಯೂ ಚನ್ನಾಗಿಯೂ ಆಗುತ್ತಿದ್ದಿಲ್ಲ. ಅಚ್ಚುಹಾಕುವ ಯುಕ್ತಿಯು ಗೊತ್ತಾದಂದಿನಿಂದ ಪುಸ್ತಕಗಳು ಬೇಕಾದಷ್ಟು ಅಗ್ಗವಾಗಿ ದೊರೆಯುಹತ್ತಿವೆ. ಅದರಿಂದ ವಿದ್ಯಾಕಲಾಕೌಶಲ್ಯಗಳ ಅಭಿವೃದ್ಧಿಯೂ ಲೋಕಸುಧಾರಣೆಯೂ ದಿನದಿನಕ್ಕೆ ಹೆಚ್ಚಾಗುತ್ತ ನಡೆದವೆ. ಮುದ್ರಣಕಲೆಯಿರದಿದ್ದರೆ, ಮನುಷ್ಯರೆಲ್ಲರೂ ಚಿರಕಾಲ ಅಜ್ಞಾನಾವಸ್ಥೆಯೊಳಗೇ ಇರಬೇಕಾಗುತ್ತಿತ್ತು. ನಮ್ಮ ದೇಶದಲ್ಲಿ ಇಂಗ್ಲಿಷರ ರಾಜ್ಯವಾದ ತರುವಾಯ ಈ ಕಲೆಯು ನಮಗೆ ಗೊತ್ತಾಯಿತು. ಹೀಗಿದ್ದರೂ ಇಷ್ಟು ಸ್ವಲ್ಪ ಕಾಲದಲ್ಲಿಯೇ ಹೊಸವೂ ಹಳೆಯವೂ ಎಷ್ಟೋ ಗ್ರಂಥಗಳು ಮುದ್ರಿಸಲ್ಪಟ್ಟಿರುತ್ತವೆ. ಅವುಗಳ ಬೆಲೆಯು ಬಹಳ ಸ್ವಲ್ಪ ಇರುವದರಿಂದ ಬಡವರು ಸಹ ಅವುಗಳನ್ನು ಕೊಳ್ಳಬಹುದು. ಅಚ್ಚುಹಾಕುವ ಯುಕ್ತಿಯು ನಮ್ಮ ದೇಶಕ್ಕೆ ಬರುವದಕ್ಕಿಂತ ಮೊದಲು ಮಹಾಭಾರತ, ರಾಮಾಯಣ, ಭಾಗವತ ಮುಂತಾದ ಪುಸ್ತಕಗಳಿಗೆ ನೂರಿನ್ನೂರು ರೂಪಾಯಿ ಬೆಲೆ ಕೊಟ್ಟರೂ ಅವು ದೊರೆಯುತ್ತಿದ್ದಿಲ್ಲ. ಆದರೆ ಅವೇ ಪುಸ್ತಕಗಳು ಈಗ ಮುದ್ರಿಸಲ್ಪಟ್ಟಿರುವದರಿಂದ ಹತ್ತು, ಹನ್ನೆರಡು ರೂಪಾಯಿಗೊಂದರಂತೆ ಅವುಗಳ ಪ್ರತಿಗಳನ್ನು ಬೇಕಾದಷ್ಟು ಕೊಳ್ಳಬಹುದು.

ಮೊದಲು ಬಹಳ ಬೆಲೆ ಬಾಳುವ ಪುಸ್ತಕಗಳನ್ನು ಕೊಂಡಾಗ್ಯೂ ಅವು ಕೈಯಿಂದ ಬರೆಯಲ್ಪಟ್ಟವಾದ್ದರಿಂದ ಅವುಗಳೊಳಗಿನ ಅಕ್ಷರಗಳು ಅಚ್ಚುಕಟ್ಟಾಗದೆ, ಗಿಜಿಬಿಜಿಯಾಗಿಯೂ ಅಂದಗೇಡಿಗಳಾಗಿಯೂ ಇರುತ್ತಿದ್ದವು; ಮತ್ತು ಕೈಯಿಂದ ಬರೆದ ಅಕ್ಷರಗಳು ದೊಡ್ಡವಾಗಿ ಕಾಗದಗಳು ಬಹಳ ಬೇಕಾಗುತ್ತಿದ್ದದರಿಂದ ಗ್ರಂಥವು ಬಹಳೇ ದೊಡ್ಡದಾಗುತ್ತಿತ್ತು. ಆದರೆ ಮುದ್ರಣದಿಂದ ಅಕ್ಷರಗಳು ಅಚ್ಚುಕಟ್ಟಾಗಿಯೂ, ಚಂದವಾಗಿಯೂ, ಸಣ್ಣಾಗಿಯೂ, ಸ್ಪಷ್ಟವಾಗಿಯೂ ಇರುವವಲ್ಲದೆ ಕಾಗದಗಳ ವೆಚ್ಚವು ಕಡಿಮೆಯಾಗುತ್ತದೆ. ಮೊದಲು ಮೇಲ್ಪಾಣಿಸಿದ ಪುಸ್ತಕಗಳನ್ನು ಕೈಯಿಂದ ಬರೆಯಬೇಕಾದ್ದರಿಂದ ಅವುಗಳ

ಒಂದೇ ಪ್ರತಿಯನ್ನು ಬರೆಯುವದು ಸಹ ಕಠಿಣವಾಗಿತ್ತು. ಅದಾದರೂ ಬಹು ಬೇಗ ನಾಶಹೊಂದುತ್ತಿತ್ತು. ಆದರೆ ಈಗ ಮುದ್ರಣದ ಸಹಾಯದಿಂದ ಅವೇ ಪುಸ್ತಕಗಳ ಸಾವಿರಾರು ಪ್ರತಿಗಳನ್ನು ಛಾಪಿಸಬಹುದು. ಅವುಗಳಲ್ಲೊಂದು ಪ್ರತಿಯು ನಾಶವಾದರೂ ಬೇರೊಂದು ಪ್ರತಿಯು ದೊರಕುವಂತಿರುವದು.

ಸೃಷ್ಟಿಕರ್ತನು ತನ್ನ ವಿಚಾರಗಳನ್ನು ಸೃಷ್ಟಿನಿರ್ಮಾಣದಲ್ಲಿ ತೋರಿಸುವಂತೆ ಮನುಷ್ಯನು ತನ್ನ ಕಲ್ಪನೆಗಳನ್ನು ಪುಸ್ತಕರೂಪವಾದ ಸೃಷ್ಟಿಯಲ್ಲಿ ಕಾಣಿಸುವನು. ಮನುಷ್ಯನ ಮನಸ್ಸಿನಲ್ಲಿ ಆಗಾಗ್ಗೆ "ನೀರ ಮೇಲಣ ಗುಳ್ಳೆಯಂದದಿ ತೋರಿ ಅಡಗುವ" ವಿಚಾರಗಳನ್ನು ಒಟ್ಟುಗೂಡಿಸುವದಕ್ಕೂ ಶಾಶ್ವತವಾಗಿ ಮಾಡುವದಕ್ಕೂ ಪುಸ್ತಕದಂಥ ಉತ್ತಮವಾದ ಸಾಧನವು ಬೇರೆ ಯಾವದೂ ಇಲ್ಲ. ತಂದೆತಾಯಿಗಳು ತಮ್ಮ ಸಂತತಿಗೆ ಆಸ್ತಿಯನ್ನು ಬಿಟ್ಟುಗೊಟ್ಟು ಹೋಗುವಂತೆ ಪೂರ್ವಕಾಲದ ವಿದ್ವಾಂಸರು ಮುಂದೆ ಹುಟ್ಟುವವರು ಯಥೇಚ್ಛವಾಗಿ ಉಪಭೋಗಿಸಲೆಂದು ಲೋಕಹಿತಾರ್ಥವಾಗಿ ಪುಸ್ತಕಗಳೆಂಬ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಅವರು ಸತ್ತು ಹೋದಾಗ್ಯೂ ಅವರು ತಾವು ಬರೆದ ಗ್ರಂಥಗಳ ರೂಪದಿಂದ ಚಿರಂಜೀವಿಗಳಾಗಿಯೇ ಇರುವರು. ಇಂಥ ಗ್ರಂಥಗಳು ಚಿರಕಾಲ ಉಳಿಯಬೇಕಾದರೆ, ಮುದ್ರಣದಂಥ ಉತ್ತಮವಾದ ಸಾಧನವು ಮತ್ತೆ ಯಾವದೂ ಇಲ್ಲ.

ಮುದ್ರಣಯಂತ್ರದಿಂದ ಪುಸ್ತಕಗಳು ಮಾತ್ರ ಛಾಪಿಸಲ್ಪಡುತ್ತವೆಂತಲ್ಲ. ವರ್ತಮಾನಪತ್ರ, ಮಾಸಪತ್ರಿಕೆ, ತ್ರೈಮಾಸಪತ್ರಿಕೆ ಮುಂತಾದವುಗಳೂ ಛಾಪಿಸಲ್ಪಡುತ್ತವೆ. ಆದ್ದರಿಂದ ಮುದ್ರಣಕಲೆಯು ಜನರ ಜ್ಞಾನಾಭಿವೃದ್ಧಿಗೆ ಕಾರಣವಾಗಿರುತ್ತದೆಂಬ ಮಾತು ಸ್ಪಷ್ಟವದೆ. ಅದರಿಂದ ಯುರೋಪ ಖಂಡವು ಒಳ್ಳೇ ಏಳಿಗೆಯನ್ನು ಹೊಂದುತ್ತ ನಡೆದದೆ. ಪೂರ್ವಕಾಲದ ಶಾಸ್ತ್ರಗಳು ಪೂರ್ಣಾವಸ್ಥೆಯನ್ನು ಹೊಂದಿರುತ್ತವೆ. ವಿದ್ಯೆಯಂತೂ ಶಿಖರಕ್ಕೆ ಮುಟ್ಟಿದೆ.

೫. **ನೆನಪಿನಲ್ಲಿಡತಕ್ಕ ಮಾತು**:—ಅಚ್ಚು ಹಾಕುವದರಿಂದ ಪುಸ್ತಕಗಳು ಕಡೆತನಕ ಉಳಿಯುವದರಿಂದಲೂ ಕಾಲಗತಿಯಿಂದ ಮಕ್ಕಳು, ಮಮ್ಮಕ್ಕಳು ಮೊದಲಾದ ಪೀಳಿಗೆಗೆಲ್ಲ ಮುಟ್ಟುವದರಿಂದಲೂ ಗ್ರಂಥಕರ್ತರು ನೀತಿಗೆ ವಿರುದ್ಧವಾದ ವಿಚಾರಗಳಿಂದ ಇಲ್ಲವೆ ಅಸತ್ಯಜ್ಞಾನದಿಂದ ತಮ್ಮ ಸಂತತಿಯವರ ಮನಸ್ಸು ಕಲುಷಿತವಾಗಬಾರದಂತೆ ಎಚ್ಚರಬಟ್ಟು ಗ್ರಂಥಗಳನ್ನು

ಬರೆಯುತಕ್ಕದ್ದು. ಅನೀತಿ ಹುಟ್ಟಿಸುವದರಲ್ಲಿ ಬುದ್ಧಿಯನ್ನು ಖರ್ಚುಮಾಡುವ ಗ್ರಂಥಕರ್ತರು ಒಂದು ಬಗೆಯ ವೈರಿಗಳಾಗುವರೆಂದು ಖಂಡಿತವಾಗಿ ಹೇಳಬಹುದು. ಯಾಕಂದರೆ ಅಸತ್ಯಜ್ಞಾನದಿಂದ ಏನೂ ಉಪಯೋಗವಾಗುವದಿಲ್ಲ; ಇಷ್ಟೇ ಅಲ್ಲ, ಅದು ಅಜ್ಞಾನಕ್ಕಿಂತಲೂ ಬಹಳೇ ಕೆಟ್ಟದು. ಕೆಟ್ಟ ಔಷಧಗಳನ್ನು ಸೇವಿಸುವದಕ್ಕಿಂತ ಔಷಧಗಳನ್ನೇ ತಕ್ಕೊಳ್ಳದಿರುವದು ನೂರು ಪಾಲಿಗೆ ಬೇಕು. ಇದೇ ಮೇರೆಗೆ ಮನುಷ್ಯನು ತೀರ ಅಜ್ಞಾನಿಯಾಗಿದ್ದರೂ ಸಾಗಬಹುದು. ಆದರೆ ಅವನಲ್ಲಿ ಅಸತ್ಯಜ್ಞಾನವುಂಟಾದರೆ, ಬಹಳೇ ಅನರ್ಥವಾಗುವದು. ಆದ್ದರಿಂದ ಗ್ರಂಥಕರ್ತರೂ ಬೇರೆ ಲೇಖಕರೂ ಜನರಲ್ಲಿ ಅನೀತಿಯನ್ನೂ ಅಸತ್ಯಜ್ಞಾನವನ್ನೂ ಹುಟ್ಟಿಸುವಂಥ ಲೇಖಗಳನ್ನು ಬರೆಯುವದಕ್ಕೋಸ್ಕರ ಮುದ್ರಣಕಲೆಯನ್ನು ಎಂದೂ ಉಪಯೋಗಿಸಬಾರದೆಂಬ ಮಾತನ್ನು ಮರೆಯಬಾರದು.

(೧೧) ವರ್ತಮಾನಪತ್ರ.

೧. ವರ್ತಮಾನಪತ್ರವೆಂದರೆ ವಾರದಲ್ಲೊಂದು ಸಾರೆಯಾಗಲಿ ಎರಡು ಸಾರೆಯಾಗಲಿ ಪ್ರತಿದಿವಸವಾಗಲಿ ಅಚ್ಚುಹಾಕಲ್ಪಡುವ ಸುದ್ದಿಯ ಪತ್ರವು. ಈ ಪತ್ರದಲ್ಲಿ ಬಹುತರವಾಗಿ ಆಯಾ ಕಾಲದಲ್ಲಿ ನಡೆಯುವ ಸುದ್ದಿಗಳು ಪ್ರಕಟಿಸಲ್ಪಡುವವಲ್ಲದೆ ಧಾರ್ಮಿಕ, ಸಾಮಾಜಿಕ, ರಾಜಕೀಯ, ಔದ್ಯೋಗಿಕ ಮತ್ತು ಶಾಸ್ತ್ರೀಯ ವಿಷಯಗಳು ಸಹ ವಿವೇಚಿಸಲ್ಪಡುವವು.

೨. **ಉಪಯೋಗ**:—ವರ್ತಮಾನಪತ್ರಗಳ ಉಪಯೋಗವು ಮುಖ್ಯವಾಗಿ ಎರಡು ತರದ್ದಿರುತ್ತದೆ. ಪತ್ರಕರ್ತರು ತಮ್ಮ ಕರ್ತವ್ಯಗಳನ್ನು ನಿಷ್ಪಕ್ಷಪಾತದಿಂದಲೂ ನಿರ್ಭೀತಿಯಿಂದಲೂ ಮಾಡಿದರೆ, ಸರಕಾರೀ ಅಧಿಕಾರಸ್ಥರು ಕಾಯದೆಗನುಸರಿಸಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುವಲ್ಲಿ ಹೆಚ್ಚು ಜಾಗರೂಕರಾಗುವರು. ಇರುಳಿನಲ್ಲಿ ದಾರಿಗಳಲ್ಲಿ ಹಚ್ಚುವ ದೀಪಗಳಿಂದಲೂ ಪೋಲೀಸರ ಗಸ್ತುಗಳಿಂದಲೂ ಆಗುವ ಉಪಯೋಗವೇ ಪತ್ರಕರ್ತರ ಟೀಕೆಯಿಂದಾಗುತ್ತದೆ. ಸರಕಾರೀ ಅಧಿಕಾರಸ್ಥರು ತಮ್ಮ ತಮ್ಮ ಕರ್ತವ್ಯಗಳನ್ನು ಒಳ್ಳೇ ರೀತಿಯಿಂದ ಜರುಗಿಸಿದರೆ ಪ್ರಜೆಗಳಿಗೆ ಅನೇಕತರದ ಲಾಭಗಳಾಗುತ್ತವೆ. ಎಲ್ಲ ಸಂಗತಿಗಳು ಬಹಿರಂಗವಾಗಿ ಆಗಹತ್ತಿದರೆ, ಲಂಚ ಮುಂತಾದ ಅನ್ಯಾ

ಯದ ಪ್ರಕಾರಗಳಾಗುವ ಸಂಭವವು ಬಹಳ ಕಡಿಮೆ. ಇಂಗ್ಲಂಡದ ರಾಜ್ಯಕಾರಭಾರಗಳು ವರ್ತಮಾನಪತ್ರಗಳ ಮುಖಾಂತರವಾಗಿ ಜನರ ಮುಂದಿಡಲ್ಪಡುವದರಿಂದ ಬಹುತರವಾಗಿ ಯಾವ ಅನ್ಯಾಯವೂ ಮುಚ್ಚಲ್ಪಡುವದಿಲ್ಲ ಆದ್ದರಿಂದ ಪತ್ರಕರ್ತರ ಗಸ್ತಿಯು ನಿದ್ರೆಗೊಳ್ಳದೆಯೂ ಕರ್ತವ್ಯಪರಾಙ್ಮುಖವಾಗದೆಯೂ ಸರಕಾರಕ್ಕೆ ಅನುಕೂಲವಾಗಿರತಕ್ಕದ್ದು.

ವರ್ತಮಾನಪತ್ರಗಳ ಎರಡನೇ ಉಪಯೋಗವು ಲೋಕಸ್ಥಿತಿಗೆ ಸಂಬಂಧಿಸಿರುವದು. ಲೋಕಸ್ಥಿತಿಯು ಸುಧಾರಿಸಲಿಕ್ಕೆ ವರ್ತಮಾನಪತ್ರಗಳಂಥ ಉತ್ತಮವಾದ ಸಾಧನವು ಮತ್ತೆ ಯಾವದೂ ಇಲ್ಲ. ನಮಗೆ ಹಿತಕಾರಕವಾದ ಸಂಗತಿಗಳು ಯಾವವು ? ಅಹಿತಕಾರಕವಾದವುಗಳು ಯಾವುವು ? ಹಳೇ ನಡತೆಗಳಲ್ಲಿ ಬಿಡತಕ್ಕಂಥವು ಯಾವವು ? ಹೊಸವುಗಳಲ್ಲಿ ಗ್ರಹಿಸತಕ್ಕಂಥವು ಯಾವವು ? ಇವೇ ಮುಂತಾದ ಮಹತ್ವದ ಸಾಮಾಜಿಕ ವಿಷಯಗಳನ್ನೂ, ಬ್ರಿಟಿಶ್ ಸಾಮ್ರಾಜ್ಯದಿಂದ ನಮ್ಮ ದೇಶಕ್ಕುಂಟಾದ ಲಾಭಗಳು ಯಾವವು ? ನಮ್ಮ ಜನರ ನಿಜವಾದ ಹಕ್ಕುಗಳು ಯಾವವು ? ಅವುಗಳನ್ನು ಸಂಪಾದಿಸಲಿಕ್ಕೆ ನಾವು ಏನು ಮಾಡತಕ್ಕದ್ದು ? ದರಿದ್ರಾವಸ್ಥೆಯಿಂದ ಜನರು ಹೇಗೆ ಮುಕ್ತರಾಗುವರು ? ಈವರೆಗೆ ಲೋಕ ಕಲ್ಯಾಣಾರ್ಥವಾಗಿ ಯಾವ ಯಾವ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು? ಅವುಗಳ ಸ್ಥಿತಿಯೇನಾಯಿತು? ಇವೇ ಮುಂತಾದ ರಾಜಕೀಯ ವಿಷಯಗಳನ್ನೂಕುರಿತು ವರ್ತಮಾನಪತ್ರಗಳ ಮುಖಾಂತರವಾಗಿ ಊಹಾಪೋಹಮಾದರೆ ದೊಡ್ಡ ದೊಡ್ಡ ಗ್ರಂಥಗಳುಂಟಾಗಿ ಜನರಿಗೆ ಬಹಳೇ ಕಲ್ಯಾಣವಾಗಬಹುದು.

೩. ಸದ್ಯದ ಸ್ಥಿತಿ:—ನಮ್ಮ ದೇಶದಲ್ಲಿ ವರ್ತಮಾನಪತ್ರಗಳು ಬಳಕೆಯಲ್ಲಿ ಬಂದು ಈ ಹೊತ್ತಿಗೆ ಸುಮಾರು ಅರುವತ್ತು ವರ್ಷಗಳಾಗಿದ್ದು, ನಮ್ಮ ಕರ್ನಾಟಕ ಪ್ರಾಂತದಲ್ಲಿ ಸದ್ಯಕ್ಕೆ ಏನಿಲ್ಲೆಂದರೂ ನಾಲ್ವತ್ತು ನಾಲ್ವತ್ತೈದು ಪತ್ರಗಳು ಹೊರಡುತ್ತಿದ್ದಾಗ್ಯೂ, ಪತ್ರಕರ್ತರಿಗೆ ತಮ್ಮ ಮೇಲಿನ ಭಾರವು ನಿಜವಾಗಿ ಎಷ್ಟಿರುವದೆಂಬದು ಸಂಪೂರ್ಣವಾಗಿ ತಿಳಿದಂತೆ ತೋರುವದಿಲ್ಲ. ಇತ್ತಿತ್ತಲಾಗಂತೂ ಸಣ್ಣ ಗ್ರಾಮಗಳಲ್ಲಿ ಕೂಡ ವರ್ತಮಾನಪತ್ರಗಳು ಹೊರಡಹತ್ತಿವೆ. ಮುದ್ರಣಯಂತ್ರವನ್ನು ಸ್ಥಾಪಿಸುವದೂ, ವರ್ತಮಾನಪತ್ರ ತೆಗೆಯುವದೂ ಒಂದು ಬಗೆಯ ಹೊಟ್ಟೆಹೊರಕೊಳ್ಳುವ ಸಾಧನಗಳಾಗಿವೆ. ಹೀಗಾಗಿ ವಿದ್ಯಾಪ್ರಸಾರಕ್ಕೆ ಮತ್ತು ಸಾಮಾಜಿಕ ಸುಧಾರಣೆಗೆ ಅವಶ್ಯವಾಗಿ ಬೇಕಾದಂಥ ವರ್ತ

ಮಾನಪತ್ರಗಳಂಥ ಸಾಧನಗಳು ಬಹುತರವಾಗಿ ಜ್ಞಾನಲವದುರ್ವಿದಗ್ಧರಾದ
(ಹಸಿಬಿಸಿಪಂಡಿತರಾದ) ಜನರ ಕೈಯಲ್ಲಿಯೇ ಇರುವದರಿಂದ, ಅವುಗಳಿಂದ ಜಗ
ತ್ತಿಗೆಷ್ಟು ಉಪಯೋಗವಾಗುವದಿಲ್ಲ. ಆದಕಾರಣ ವರ್ತಮಾನಪತ್ರಗಳನ್ನು ಬರೆ
ಯುವ ಉದ್ಯೋಗವನ್ನು ವಿಶೇಷಜ್ಞರು ಕೈಕೊಂಡರೆ, ಲೋಕಕಲ್ಯಾಣಕ್ಕೆ ಒಳ್ಳೇ
ಸಹಾಯವಾಗುವದೆಂಬದಕ್ಕೆ ಏನೂ ಸಂದೇಹವಿಲ್ಲ.

೪. ಕೆಲವು ಆಕ್ಷೇಪಗಳು:— ವರ್ತಮಾನಪತ್ರಗಳನ್ನು ಖಂಡಿತ
ವಾಗಿ ಓದಕೂಡದೆಂದು ಕೆಲವರ ಮತವದೆ. ಅವರು ಅನ್ನುವದೇನಂದರೆ,
"ವರ್ತಮಾನಪತ್ರಗಳನ್ನು ಓದುವದರಲ್ಲಿ ದಿನಾಲು ಒಂದೆರಡು ತಾಸು ಕಳೆಯು
ವದರ ಬದಲು ಅದೇ ವೇಳೆಯನ್ನು ಜ್ಞಾನವನ್ನುಂಟುಮಾಡುವ ಯಾವದಾದ
ರೊಂದು ಪುಸ್ತಕ ಓದುವದರಲ್ಲಿ ಕಳೆದರೆ ಹೆಚ್ಚು ಲಾಭವಾಗುವದು". ಈ ಆಕ್ಷೇ
ಪವು ಕೆಲಮಟ್ಟಿಗೆ ನಿಜವಿದ್ದಾಗ್ಯೂ, ವರ್ತಮಾನಪತ್ರಗಳನ್ನು ಓದುವದರಿಂದ
ಹಾನಿಯುಂಟೆಂದು ಎಷ್ಟುಮಾತ್ರಕ್ಕೂ ಅನ್ನಕೂಡದು. ಯಾಕಂದರೆ ವರ್ತಮಾ
ನಪತ್ರಗಳನ್ನೋದುವದರಿಂದ ಮನಸ್ಸಿಗೆ ಒಂದು ಬಗೆಯ ವಿಶ್ರಾಂತಿಯು ದೊರೆ
ಯುತ್ತದೆ. ಮಾನಸಿಕ ಶ್ರಮವು ಶಾರೀರಿಕ ಶ್ರಮಕ್ಕಿಂತಲೂ ಹೆಚ್ಚು ಬೇಸರಗೊ
ಳಿಸುವದು. ಸ್ವಲ್ಪ ಶ್ರಮ ಮಾಡಿದರೂ ಮನಸ್ಸು ಕೂಡಲೇ ದಣಿಯುತ್ತದೆ.
ಗಹನವಾದ ವಿಷಯಗಳನ್ನೋದಿ ಬೇಸತ್ತುಹೋದ ಮನಸ್ಸನ್ನು ಪುನಃ ಅದೇ
ತರದ ವಿಷಯಗಳಲ್ಲಿಯೇ ತೊಡಗಿಸಿದರೆ ತಲೆ ತಿರುಗಬಹುದು. ಇದಲ್ಲದೆ ಮನ
ಸ್ಸನ್ನು ಒತ್ತಾಯಪಡಿಸಿದರೂ, ಅದರಿಂದ ಯಾವ ಲಾಭವೂ ತಟ್ಟುವದಿಲ್ಲ.
ಯಾಕಂದರೆ ಮನಸ್ಸಿಲ್ಲದೆ ಓದಿದ ವಿಷಯಗಳು ನೆನಪಿನಲ್ಲಿ ಉಳಿಯುವದೇ ಇಲ್ಲ.
ಅಂದಮೇಲೆ ವ್ಯರ್ಥ ಶ್ರಮಮಾಡಿ ಉಪಯೋಗವೇನು! ಇದಲ್ಲದೆ ಕೇವಲ ಇಹ
ವೃತ್ತ, ಆಯಾ ರೋಗಗಳಿಗೆ ತಪ್ಪದೆ ಗುಣಕೊಡುವ ಔಷಧಗಳೆಂದು ಸುಳ್ಳೇ
ಸಾರಿಹೇಳುವ ಪ್ರಕಟನೆ, ಬಾಜಾರಭಾವ, ವಗೈರೆವಗೈರೆ, ಚಂದಾದಾರರಿಗೆ ವಿಸ
ಯಪೂರ್ವಕವಾದ ಸೂಚನೆ ಮುಂತಾದ ಕ್ಷುಲ್ಲಕವಾದ ಸುದ್ದಿಗಳಿಂದ ತುಂಬಿ
ಹೋಗಿರುವ ಪತ್ರಗಳು ವಸ್ತುತಃ ವರ್ತಮಾನಪತ್ರಗಳೇ ಅಲ್ಲ. ಮೇಲೆ ಹೇಳಿ
ದಂತೆ ರಾಜಕೀಯ, ಸಾಮಾಜಿಕ, ಔದ್ಯೋಗಿಕ ಮುಂತಾದ ಮಹತ್ವವುಳ್ಳ ವಿವಿಧ
ವಿಷಯಗಳನ್ನು ಕುರಿತು ಧಾರಾಳವಾಗಿ ಚರ್ಚೆಮಾಡುವ ಪತ್ರಗಳೇ ನಿಜವಾದ
ವರ್ತಮಾನಪತ್ರಗಳು. ಇಂಥ ವರ್ತಮಾನಪತ್ರಗಳನ್ನೋದುವದು ಕೆಟ್ಟದ್ದೆಂದು
ಎಂದೂ ಅನ್ನಲಾಗದು.

(೧೨) ವಿಮಾನ ಮತ್ತು ಆಕಾಶಯಾನ.

೧. ಆಕಾಶದೊಳಗೆ ಹವೆಯು ಮೇಲೆ ತೇಲಾಡುತ್ತ ಹೋಗುವ ವಾಹನಕ್ಕೆ ವಿಮಾನವೆಂಬ ಹೆಸರು.

೨. **ಉತ್ಪತ್ತಿ:**—ಹೊಗೆ, ಉಗೆ ಮುಂತಾದ ಪದಾರ್ಥಗಳು ಹವೆಗಿಂತ ಹೆಚ್ಚು ಹಗುರಿರುವದರಿಂದ ಹವೆಯು ಮೇಲೆ ತೇಲಾಡುತ್ತವೆಂಬ ತತ್ವವನ್ನರಿತು, **ಮಾಂಉಂಟ ಗೋಲ್‌ಫಿಅರನು** ೧೭೮೫ನೆಯ ಇಸವಿಯಲ್ಲಿ ಆಕಾಶದಲ್ಲಿ ಹಾರುವ ವಿಮಾನವನ್ನು ಸಿದ್ಧಪಡಿಸಿದನು. ಒಂದು ಹಗುರಾದ ಚೀಲದಲ್ಲಿ ಕಾದ ಹವೆಯನ್ನು ತುಂಬಿದ ಕೂಡಲೇ ಆ ಚೀಲವು ಆಕಾಶದೊಳಗೆ ಮೇಲಮೇಲಕ್ಕೇರಹತ್ತಿತು. ಇದನ್ನು ನೋಡಿ ಅವನು ಒಂದು ವಿಮಾನವನ್ನು ಸಿದ್ಧಪಡಿಸಿದನು. ಅಂದಿನಿಂದ ವಿಮಾನಗಳಾಗಹತ್ತಿದವು.

೩. **ಅದರಲ್ಲಾದ ಸುಧಾರಣೆ:**—ಮೊಟ್ಟಮೊದಲು ವಿಮಾನಗಳನ್ನು ಹಾರಿಸುವದಕ್ಕಾಗಿಯೇ ಉಪಯೋಗಿಸುತ್ತಿದ್ದರು. ಅವುಗಳಲ್ಲಿ ಕುಳಿತು ಹೋಗಲಿಕ್ಕೆ ಬರುವ ಯಾವ ಯೋಜನೆಯೂ ಇದ್ದಿಲ್ಲ. ಆದರೆ ಇತ್ತಲಾಗಿ ಎಷ್ಟೋ ಸುಧಾರಣೆಗಳಾಗಿ ಈಗ ಬೇಕಾದಷ್ಟು ಎತ್ತರದಲ್ಲಿ, ಬೇಕಾದ ದಿಕ್ಕಿನಲ್ಲಿ, ಮತ್ತು ಬೇಕಾದಷ್ಟು ವೇಗದಿಂದ ಉಗೆಬಂಡಿ, ಉಗೆಹಡಗಗಳಲ್ಲಿ ಕುಳಿತು ಹೋಗುವಂತೆ ವಿಮಾನಗಳಲ್ಲಿಯೂ ಕುಳಿತು ಆಕಾಶದೊಳಗೆ ಪ್ರವಾಸಮಾಡಲಿಕ್ಕೆ ಬರುವಂತೆ ಮಾಡಿರುತ್ತಾರೆ. ಇವುಗಳಿಗೆ **ಆಕಾಶಯಾನ**ಗಳೆನ್ನುವರು.

೪. **ಆಕಾಶಯಾನಗಳ ಪ್ರಕಾರಗಳು:**— ಆಕಾಶಯಾನಗಳಲ್ಲಿ ಎರಡು ಪ್ರಕಾರಗಳುಂಟು. ಹೈಡ್ರೋಜನ್ ಎಂಬ ವಾಯುವನ್ನು ಸಣ್ಣ ಸಣ್ಣ ಚೀಲಗಳಲ್ಲಿ ತುಂಬಿ, ಅವುಗಳನ್ನು ದೊಡ್ಡದೊಂದು ಗೋಲಾಕಾರದ ಇಲ್ಲವೆ ಬಾಳೇಹಣ್ಣಿನ ಆಕಾರದ ಚೀಲದೊಳಗೆ ಹಾಕುವರು. ಆಮೇಲೆ ಆ ದೊಡ್ಡ ಚೀಲವನ್ನು ಆಕಾಶದಲ್ಲಿ ಬಿಟ್ಟಕೂಡಲೇ ಅದು ಹವೆಯು ಮೇಲೆ ತೇಲಾಡುತ್ತ ಮೇಲಕ್ಕೇರುತ್ತದೆ. ಇದೇ ಚೀಲಕ್ಕೆ ಜೋಡಿಸಿದ್ದೊಂದು ಬುಟ್ಟಿಯಿರುವದು. ಆ ಬುಟ್ಟಿಯಾದರೂ ಚೀಲದ ಸಂಗಡ ಮೇಲಕ್ಕೇರುವದು. ಅದರೊಳಗೆ ಕುಳಿತು ಜನರು ಆಕಾಶದೊಳಗೆ ಹೋಗಬಹುದು. ಈ ತರದ ವಿಮಾನಗಳನ್ನು ಬೇಕಾದ ದಿಕ್ಕಿನಲ್ಲಿ ಒಯ್ಯುವದಕ್ಕಾಗಿ ಚುಕ್ಕಾಣಿಯನ್ನೂ ನೂಕುವದಕ್ಕಾಗಿ

ರೆಕ್ಕೆಗಳನ್ನೂ ಹಚ್ಚುತ್ತಾರೆ. ಉಗೆಹಡಗಗಳು ನೀರು ಕಡಿಯುತ್ತ ಹೋಗುವಂತೆ, ಇಂಥ ವಿಮಾನಗಳಾದರೂ ಆ ರೆಕ್ಕೆಗಳ ಸಹಾಯದಿಂದ ಹವೆಯನ್ನು ಕಡಿಯುತ್ತ ಮುಂದಕ್ಕೆ ಹೋಗುತ್ತವೆ. ಇವು ಮೊದಲನೇ ಪ್ರಕಾರದವು. ಕೆಲವು ದಿವಸಗಳ ಹಿಂದೆ **ಕಾಲುಂಟ ಝೆಪೆಲಿನ್** ಎಂಬವನು ಈ ತರದ ಆಕಾಶಯಾನದಲ್ಲಿ ಕುಳಿತು ಒಂದು ಸಾವಿರ ಮೈಲುಗಳನ್ನು ನಾಲ್ವತ್ತೆಂಟು ತಾಸುಗಳಲ್ಲಿ ಪ್ರಯಾಣಮಾಡಿದನೆಂದು ಹೇಳುತ್ತಾರೆ.

ಎರಡನೇ ಪ್ರಕಾರದ ಆಕಾಶಯಾನಗಳನ್ನು ನಡಿಸುವದರಲ್ಲಿ ಹೈಡ್ರೋಜನ್ ವಾಯುವನ್ನು ಉಪಯೋಗಿಸುವದಿಲ್ಲ. ಇಂಥ ವಿಮಾನಕ್ಕೆ ಜೋಡಿಸಿದ ರೆಕ್ಕೆಗಳು ಹವೆಯನ್ನು ಕಡಿಯುವದರಿಂದ ವಿಮಾನವು ಮುಂದಕ್ಕೆ ಸಾಗುತ್ತದೆ. ಪೆಟ್ರೋಲಿಯಮ್ ಎಂಬ ಎಣ್ಣೆಯ ಇಲ್ಲವೆ ಉಗೆಯ ಸಹಾಯದಿಂದ ಈ ರೆಕ್ಕೆಗಳು ತಿರುಗುತ್ತವೆ. ಇಂಥ ಆಕಾಶಯಾನಗಳನ್ನು ಕೆಲವು ಅಂತರದ ವರೆಗೆ ನೆಲದ ಮೇಲೆ ಗಾಲಿಗಳ ಸಹಾಯದಿಂದ ನಡಿಸಬೇಕಾಗುತ್ತದೆ. ಈ ಪ್ರಕಾರ ಅವುಗಳಲ್ಲಿ ಗತಿಯುಂಟಾದ ಕೂಡಲೆ ಅವು ನೆಲಬಿಟ್ಟು ಮೇಲಕ್ಕೇರಿ ಚುಕ್ಕಾಣಿಯ ಸಹಾಯದಿಂದ ಬೇಕಾದತ್ತ ಹೋಗಲಬಹುದು. ಪಕ್ಷಿಗಳಿಗಿದ್ದಂತೆ ಇವುಗಳಿಗಾದರೂ ಎರಡೂ ಮಗ್ಗಲಿಗೆ ಸಮಾಂತರವಾಗಿಯೂ ಸಮತೋಲವಾಗಿಯೂ ಒಂದರಮೇಲೊಂದು ಎರಡು ಅಥವಾ ಹೆಚ್ಚು ರೆಕ್ಕೆಗಳಿರುವವು. ಇಂಥ ವಿಮಾನಗಳ ಮಧ್ಯಭಾಗದಲ್ಲಿ ಒಬ್ಬಿಬ್ಬರಿಗೆ ಕೂಡಲಿಕ್ಕೆ ಸ್ಥಳವಿರುವದು.

೫. **ಉಪಯೋಗ**:-ಇತ್ತಿತ್ತಲಾಗಿ ವಿಮಾನಗಳಲ್ಲಿ ಎಷ್ಟೋ ಸುಧಾರಣೆಗಳಾಗಹತ್ತಿವೆ. ತೀರ ಹೊಸದಾಗಿ ಆದ ಸುಧಾರಣೆಯೆಂದರೆ, **ಏರೋಪ್ಲೇನ** ಎಂಬ ಆಕಾಶಯಾನಗಳು. ಅವುಗಳಲ್ಲೂ **ಮಾನೊಪ್ಲೇನ, ಬಾಯಪ್ಲೇನ** ಎಂಬ ಪ್ರಕಾರಗಳುಂಟು. ಸ್ವಲ್ಪ ವರ್ಷಗಳಲ್ಲಿಯೇ ನಮ್ಮ ಜನರು ಇವುಗಳಲ್ಲಿ ಕುಳಿತು, ಉಗೆಬಂಡಿ, ಉಗೆಹಡಗ, ವಿದ್ಯುಲ್ಲತೆಯ ಟ್ರಾಮು, ಮೋಟಾರಬಂಡಿ, ಬಾಯಸಿಕಲ್ ಮುಂತಾದವುಗಳಲ್ಲಿ ಕುಳಿತು ಪ್ರಯಾಣಮಾಡುವಂತೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿಬರುವರು. ಹತ್ತುವದಕ್ಕೂ ಇಳಿಯುವದಕ್ಕೂ ಬೇಕಾಗುವ "ಧಕ್ಕೆ" ಗಳನ್ನು ಅಲ್ಲಲ್ಲಿಗೆ ದೊಡ್ಡ ದೊಡ್ಡ ಮನೆಗಳ ಮೇಲುಪ್ಪರಿಗೆಗಳ ಮೇಲೆ ಕಟ್ಟುವರು. ಆಕಾಶಯಾನಗಳು ನಿಲ್ಲುವದಕ್ಕಾಗಿ ಅತ್ಯುನ್ನತವಾದ ಮನೆಗಳನ್ನು ಕಟ್ಟುವರು. ಉಗೆಬಂಡಿ, ಉಗೆಹಡಗಗಳು

ನೇಮಿಸಿದ ವೇಳೆಯಲ್ಲಿ ಊರಿಂದೂರಿಗೆ ಹೋಗಿ ಬರುವಂತೆ ಆಕಾಶಯಾನಗಳಾದರೂ ಹೆಚ್ಚು ವೇಗದಿಂದ ಹೋಗಿಬರುವವೆಂಬದರಲ್ಲಿ ಏನೂ ಸಂಶಯವಿಲ್ಲ.

೧೮೭೦ ನೇ ಇಸವಿಯಲ್ಲಿ ಫ್ರಾನ್ಸ ಮತ್ತು ಜರ್ಮನಿ ದೇಶಗಳ ನಡುವೆ ಯುದ್ಧ ನೆಸಗಲು, ಜರ್ಮನಿಯವರು ಫ್ರಾನ್ಸದ ರಾಜಧಾನಿಯಾದ ಪಾರೀಸ ಪಟ್ಟಣವನ್ನು ಮುತ್ತಿದರು. ಆಗ ಪಾರೀಸದವರಿಗೆ ಹೊರಗೆ ಹೋಗುವದಕ್ಕೂ ಒಳಗೆ ಬರುವದಕ್ಕೂ ದಾರಿಯೇ ಇಲ್ಲದಂತಾಯಿತು. ಆಗ ಅವರು ಆಕಾಶಯಾನಗಳ ಸಹಾಯದಿಂದ ಶತ್ರುಗಳ ಸಂಗಡ ಕಾದಿ, ಕಡೆಯಲ್ಲಿ ಜಯ ಹೊಂದಿದರು. ಸ್ವಲ್ಪ ವರ್ಷಗಳ ಹಿಂದೆ ಒದಗಿದ ರುಸೋ-ಜಪಾನಿಯರ ಯುದ್ಧದಲ್ಲೂ ಸಹ ಉಭಯಪಕ್ಷದವರು ಇವುಗಳನ್ನು ಉಪಯೋಗಿಸಿದರು. ಜರ್ಮನರ ಕೂಡ ಆದ ಮಹಾಯುದ್ಧದಲ್ಲಿ ಸಹ ಇವು ಬಹಳವಾಗಿ ಉಪಯೋಗಿಸಲ್ಪಟ್ಟವು.

---

(೧೩) ಸುಯೇಜ ಕಾಲುವೆ.

೧. ಆರಂಭ:—ಭೂಮಧ್ಯ ಮತ್ತು ಕೆಂಪುಸಮುದ್ರಗಳ ನಡುವೆ ಒಂದು ಇಕ್ಕಟ್ಟಾದ ಸಂಯೋಗಭೂಮಿಯುಂಟು. ಅದು ಏಶಿಯಾ-ಆಫ್ರಿಕ ಖಂಡಗಳನ್ನು ಕೂಡಿಸುತ್ತದೆ. ಕ್ರಿಸ್ತಶಕಕ್ಕೆ ಮುಂಚೆ ೫ನೇ ಶತಮಾನದಲ್ಲಿ ಅವೆರಡೂ ಸಮುದ್ರಗಳು ೯೨ ಮೈಲು ಉದ್ದವಾದ ಒಂದು ಕಾಲುವೆಯಿಂದ ಕೂಡಿಸಲ್ಪಟ್ಟವು. ಆದರೆ ಆ ಕಾಲುವೆಯು ಕಾಲಾಂತರದಲ್ಲಿ ಕೆಸರಿನಿಂದಲೂ ಉಸಬಿನಿಂದಲೂ ತುಂಬಿ ಹುಗಿಯಲ್ಪಟ್ಟು, ಆ ಸಮುದ್ರಗಳನ್ನು ಜೋಡಿಸುವ ಮಾರ್ಗವಿಲ್ಲದಂತಾಯಿತು. ಮುಂದೆ ಫ್ರಾನ್ಸ ದೇಶದ ಅರಸನಾದ **ನೆಪೋಲಿಯನ್ ಬೋನಾಪಾರ್ಟನು** ಈ ದೇಶಕ್ಕೆ ದಂಡೆತ್ತಿಕೊಂಡು ಬರುವದಕ್ಕಾಗಿ ಇದೇ ಸಮೀಪದ ಮಾರ್ಗವೆಂದು ತಿಳಿದು ತನ್ನ ಎಂಜಿನಿಯರರಿಗೆ (ಮಾರ್ಗ, ಕಾಲುವೆ ಮುಂತಾದ ಕೆಲಸ ಮಾಡಬಲ್ಲವರಿಗೆ) ಆ ಸಂಯೋಗಭೂಮಿಯೊಳಗಿಂದ ಹಾದು ಹೋಗುವಂತೆ ಒಂದು ಕಾಲುವೆ ಮಾಡುವದಕ್ಕೆ ಹೇಳಿದನು. ಆದರೆ ಅವರು ಅವನಿಗೆ ಆ ಸಮುದ್ರಗಳು ಸಮಭೂಮಿಯ ಮೇಲಿರುವದಿಲ್ಲೆಂತಲೂ, ಆಕಾರಣ ಕಾಲುವೆ ಮಾಡುವದಸಾಧ್ಯವೆಂತಲೂ ತಪ್ಪುತಿಳುವಳಿಕೆಯಿಂದ ಹೇಳಿದರು. ೧೮೪೭ನೇ ಇಸವಿಯಲ್ಲಿ ಇಂಗ್ಲಂಡ, ಫ್ರಾನ್ಸ, ಮತ್ತು ಆಸ್ಟ್ರಿಯಾ ದೇಶಗಳ

ಶಾಸ್ತ್ರಜ್ಞರು ಆ ಸಮುದ್ರಗಳು ಸಮಭೂಮಿಯ ಮೇಲಿರುವವೆಂದು ನಿರ್ಣಯಿಸಿದರು. ಮುಂದೆ ೧೮೫೪ ರಲ್ಲಿ ಫ್ರಾನ್ಸ ದೇಶದ ಸಾಹಸಿಗನಾದ **ಫರ್ಡಿನಾಂಡ ಡಿ ಲಿಸೆಪ್ಸ** ಎಂಬವನು ಆ ಸಂಯೋಗಭೂಮಿಯೊಳಗಿಂದ ಒಂದು ಕಾಲುವೆ ಮಾಡುವದಕ್ಕಾಗಿ ಇಜಿಪ್ತದೇಶದ ವ್ಹಾಯಿಸರಾಯನಿಂದ ಅಪ್ಪಣೆ ಪಡೆದು, ೧೮೬೯ ರಲ್ಲಿ ಅದನ್ನು ಸಂಪೂರ್ಣವಾಗಿ ಕಟ್ಟಿಸಿದನು. ಅಂದಿನಿಂದ ಹಡಗಗಳು ಆ ಮಾರ್ಗವಾಗಿ ಹೋಗಬರಹತ್ತಿರುವವು.

೨. ಉದ್ದಳತೆ:—ಆ ಕಾಲುವೆಯು ಸುಮಾರು ೧೦೦ ಮೈಲು ಉದ್ದವಾಗಿಯೂ ಮೇಲ್ಭಾಗದಲ್ಲಿ ೩೦೦ ಫೂಟು ಹಾಗು ಬುಡದಲ್ಲಿ ೭೨ ಫೂಟು ಅಗಲಾಗಿಯೂ, ೩೦ ಫೂಟು ಆಳವಾಗಿಯೂ ಇರುವದು. ಬಹುತರವಾಗಿ ಎಲ್ಲ ಕಡೆಯಲ್ಲಿಯೂ ಅದು ದೊಡ್ಡದಾದ ಒಂದೇ ಹಡಗವು ಹಾದುಹೋಗುವಷ್ಟು ಅಗಲಾಗಿರುವದು. ಆದರೂ ಬರುಹೋಗುವ ಹಡಗಗಳಿಗೆ ಸಾಕಷ್ಟು ಆಸ್ಪದ ಕೊಡುವದಕ್ಕಾಗಿ ಅಲ್ಲಲ್ಲಿಗೆ ಆಳವಾದ ಆಬಾತಗಳನ್ನು ಕಟ್ಟಿರುವರು. ಆ ಸ್ಥಳಗಳಲ್ಲಿ ಯಾವಾಗಲೂ ಒಂದಿಲ್ಲೊಂದು ಹಡಗವು ಇದ್ದೇ ಇರುತ್ತದೆ. ಅದು ಎಷ್ಟೋಸಾರೆ ಎರಡನೇ ಹಡಗವು ಹಾದುಹೋಗುವ ತನಕ ಅನೇಕ ತಾಸು ಅಲ್ಲಿಯೇ ನಿಲ್ಲಬೇಕಾಗುತ್ತದೆ.

೩. ದಾಟುವದಕ್ಕೆ ಹತ್ತುವ ವೇಳೆ:—ಆ ಕಾಲುವೆಯ ಮಾರ್ಗದಿಂದ ಒಂದೇ ಹಡಗವು ಹೋಗುವದಿದ್ದಲ್ಲಿ, ಅದನ್ನು ದಾಟುವದಕ್ಕೆ ಹದಿನಾರರಿಂದ ಇಪ್ಪತ್ತು ತಾಸು ಬೇಕಾಗುತ್ತವೆ. ಆದರೆ ಮೇಲೆ ಹೇಳಿದಂತೆ ಎಷ್ಟೋ ಹಡಗಗಳು ಬರುಹೋಗುವದರಿಂದಲೂ, ಎಷ್ಟೋ ಕಡೆಯಲ್ಲಿ ಒಂದು ಹಡಗವು ನಿಲ್ಲಬೇಕಾಗುವದರಿಂದಲೂ, ಎಷ್ಟೋಸಾರೆ ಹಡಗಗಳು ಕೆಸರಿನಲ್ಲಿ ಸಿಗಬೀಳುವದರಿಂದಲೂ ಹೆಚ್ಚು ವೇಳೆ ಹತ್ತುವದು. ಇದಲ್ಲದೆ ಆ ಕಾಲುವೆಯೊಳಗಿಂದ ಹಾದುಹೋಗುವ ಪ್ರತಿಯೊಂದು ಹಡಗದ ವೇಗವು ತಾಸಿಗೆ ಐದು ಮೈಲುಗಳಿಗಿಂತ ಹೆಚ್ಚಿರಕೂಡದು. ಯಾಕಂದರೆ ವೇಗವು ಹೆಚ್ಚಾದಲ್ಲಿ, ನೀರು ಹೊಯಿದಾಡುವದರಿಂದುಂಟಾಗುವ ದೊಡ್ಡದೊಡ್ಡ ತೆರೆಗಳು ದಂಡೆಗಳಿಗೆ ಜೋರಿನಿಂದ ಹೋಗಿ ಅಪ್ಪಳಿಸಿ ಎರಡೂ ದಂಡೆಗಳನ್ನು ಕೊರೆದು ಹಾಳುಮಾಡುವವು. ಆದ್ದರಿಂದ ಅಲ್ಲಿಂದ ಹೋಗುವ ಹಡಗಗಳು ತಾಸಿಗೆ ಐದು ಮೈಲಿನಂತೆ ಹೋಗುತ್ತವೋ ಇಲ್ಲವೋ ಎಂಬದನ್ನು ನೋಡುವದಕ್ಕಾಗಿ ಹಡಗಕ್ಕೊಬ್ಬನಂತೆ ಹಡ

ಗನಡಿಸುವವರನ್ನು ನೇಮಿಸಿರುವರು. ಬಹುತರವಾಗಿ ಸೂರ್ಯನ ಬೆಳಕಿನಲ್ಲಿಯೇ ಇಲ್ಲಿ ಪ್ರವಾಸಮಾಡುವರು. ರಾತ್ರಿಯಲ್ಲಿ ಪ್ರವಾಸ ಮಾಡುವದಿದ್ದಲ್ಲಿ, ನಿಚ್ಚಳವಾದ ಬೆಳದಿಂಗಳಲ್ಲಿ ಇಲ್ಲವೆ ವಿದ್ಯುತ್ತಿನ ದೀವಿಗೆಗಳ ಬೆಳಕಿನಲ್ಲಿ ಪ್ರವಾಸ ಮಾಡುವರು.

೪. **ಮಾರ್ಗದಲ್ಲಿರುವ ಬಂದರಗಳೂ, ಸರೋವರಗಳೂ, ನೋಟಗಳೂ:**— ಯುರೋಪಖಂಡದಿಂದ ಈ ದೇಶಕ್ಕೆ ಬರುವ ಪ್ರವಾಸಿಕರು ಈ ಕಾಲುವೆಯ ಉತ್ತರಕೊನೆಯಾದ ಮತ್ತು ಭೂಮಧ್ಯ ಸಮುದ್ರದ ಧಡವಲ್ಲಿರುವ **ಸೈಯುದ** ಎಂಬ ಬಂದರದಲ್ಲಿ ಇಳಿಯುವರು. ಈ ಬಂದರವು ಬಹಳ ಅಸಹ್ಯವಾದದ್ದೂ ಮಲಿನವಾದದ್ದೂ ಇರುವದು. ಹುಡಿಯಿಂದಲೂ, ನೊಣಗಳಿಂದಲೂ, ಕೆಟ್ಟನಾತದಿಂದಲೂ, ಕಿವಿಗಡಚಿಕ್ಕುವ ಸಪ್ಪಳದಿಂದಲೂ ಪ್ರವಾಸಿಕರು ಬೇಸರಗೊಳ್ಳುವರು. ಏಸಿಯಾ ಖಂಡದ ದೇಶಗಳೆಲ್ಲ ಹೀಗೆಯೇ ಇರುವವೋ ಏನೋ ಎಂಬ ಕಲ್ಪನೆಯು ಅವರ ಮನಸ್ಸಿನಲ್ಲಿ ಹುಟ್ಟುವದು. ಅಲ್ಲಿಂದ ಹೊರಟಮೇಲೆ ದಾರಿಯಲ್ಲಿ **ಮೆಂಝಾಲೆ ಟಿಮುಸೆ,** ಮತ್ತು **ಬಿಟರ ಲೇಕ್ಸ** (ಉಪ್ಪುನೀರಿನ ಸರೋವರಗಳು) ಎಂಬ ಸರೋವರಗಳು ಹತ್ತುತ್ತವೆ. ಟಿಮುಸೆ ಸರೋವರದ ಧಡದಲ್ಲಿ **ಇಸ್ಮಾಲಿಯಾ** ಎಂಬ ಹಾಳಾದ ಪಟ್ಟಣವದೆ. ಅಲ್ಲಿಂದ **ಸುಯೇಜ** ಬಂದರವೇ ಹತ್ತುವದು. ಈ ಎಲ್ಲ ಸರೋವರಗಳಲ್ಲಿ ರಾಜಹಂಸ ಮೊದಲಾದ ಅನೇಕಜಾತಿಯ ಪಕ್ಷಿಗಳಿರುವವು. ಈ ಮಾರ್ಗದಲ್ಲಿ ಎಷ್ಟೋ ಕಡೆಯಲ್ಲಿ ಅರಬಸ್ಥಾನ ದೇಶದ ಸಣ್ಣ ಸಣ್ಣ ಹುಡುಗ-ಹುಡಿಗೆಯರು ತಮ್ಮ ಕೊಳಲಿನ ವಾದ್ಯದಿಂದಲೂ ನರ್ತನದಿಂದಲೂ ಪ್ರವಾಸಿಕರನ್ನು ವಿನೋದಪಡಿಸಿ ಅವರಿಂದ ಇನಾಮು ಪಡೆಯುತ್ತಿರುತ್ತಾರೆ.

೫. **ಅದರಿಂದಾಗುವ ಲಾಭಗಳು:**— ಈ ಕಾಲುವೆಯಾಗುವದಕ್ಕಿಂತ ಮೊದಲು ಯುರೋಪಖಂಡದವರು ಏಸಿಯಾಖಂಡದ ಯಾವದೊಂದು ದೇಶಕ್ಕೆ ಬರಬೇಕಾದರೆ,ಆಫ್ರಿಕಾಖಂಡವನ್ನು ಸುತ್ತುಗಟ್ಟಿ ಬರಬೇಕಾಗುತ್ತಿತ್ತು. ಆದ್ದರಿಂದ ಅವರಿಗೆ ನಾಲ್ಕುಸಾವಿರ ಮೈಲು ಹೆಚ್ಚು ಪ್ರವಾಸಮಾಡಬೇಕಾಗುತ್ತಿತ್ತು. ಇವಲ್ಲದೆ ಅವರಿಗೆ ಆ ಪ್ರವಾಸದಲ್ಲಿ ಎಷ್ಟೋ ಗಂಡಾಂತರಗಳು ಒದಗುತ್ತಿದ್ದವು. ವೇಳೆಯೂ ಹಣವೂ ಬಹಳೇ ಹತ್ತುತ್ತಿದ್ದವು. ಲಂಡನ ಪಟ್ಟಣದಿಂದ ಮುಂಬಯಿ ಪಟ್ಟಣಕ್ಕೆ ಬರಬೇಕಾದರೆ ಮೊದಲು ೩ ತಿಂಗಳು ಹತ್ತುತ್ತಿ

ದ್ದವು. ಆದರೆ ಈ ಕಾಲುವೆಯ ಸಾಧನದಿಂದ ಅಲ್ಪವೇಳೆಯಲ್ಲಿ (ಹದಿನೈದು ದಿವಸಗಳಲ್ಲಿ) ಮತ್ತು ಸ್ವಲ್ಪ ಖರ್ಚಿನಿಂದ ಬರಬಹುದು. ಹಣ ಮತ್ತು ವೇಳೆ ಸ್ವಲ್ಪ ಹತ್ತುವದರಿಂದಲೂ, ಮಾರ್ಗದಲ್ಲಿ ಯಾವ ಗಂಡಾಂತರವೂ ಇಲ್ಲದ್ದರಿಂದಲೂ ಯುರೋಪ–ಏಶಿಯಾ ಖಂಡಗಳ ನಡುವೆ ವ್ಯಾಪಾರವು ಒಳ್ಳೇ ಭರಭರಾಟಿಯಿಂದ ನಡೆದಿರುವದು. ಹಾಗು ಪ್ರವಾಸಿಕರ ಸಂಖ್ಯೆಯು ಬಹಳೇ ಬೆಳೆದಿರುವದು. ಈ ಕಾಲುವೆಯಿಂದಾಗುವ ಲಾಭಗಳು ಕೇವಲ ಏಶಿಯಾ ಖಂಡದವರಿಗಷ್ಟೇ ಅಲ್ಲದೆ ಆಫ್ರಿಕಾ ಖಂಡದವರಿಗೂ ಸಂಬಂಧಿಸಿರುತ್ತವೆ. ಪೃಥ್ವಿಯು ಎರಡೂ ತುದಿಗಳು ಒಂದರಿಂದೊಂದು ದೂರವಾಗಿದ್ದರೂ, ಈ ಕಾಲುವೆಯ ಮೂಲಕ ಅವು ಸಮೀಪಿಸಿರುತ್ತವೆಂದೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ.

---

(೧೪) ಸೆಕ್ರೆಟರಿ ಆಫ ಸ್ಟೇಟ ಫಾರ ಇಂಡಿಯಾ ಮತ್ತು ಇಂಡಿಯಾ ಕೌನ್ಸಿಲು

೧. ಸೆಕ್ರೆಟರಿ ಆಫ ಸ್ಟೇಟ ಫಾರ ಇಂಡಿಯಾ:—

ಇಂಗ್ಲಂಡದ ಅರಸನು ಪಾರ್ಲಮೆಂಟಿನಲ್ಲಿ ಅಧಿಕಾರಹೊಂದಿದ ಬಣದವರಲ್ಲೊಬ್ಬನನ್ನು ತನ್ನ ಮುಖ್ಯಮಂತ್ರಿಯನ್ನಾಗಿ ಆರಿಸಿಕೊಳ್ಳುವನು. ಆ ಮುಖ್ಯಮಂತ್ರಿಯು ತನ್ನ ಸಹಾಯಕ್ಕಾಗಿ ಕ್ಯಾಬಿನೆಟ್ (ಮಂತ್ರಿಮಂಡಲ) ಎಂಬ ಆಲೋಚನಾ ಸಭೆಯನ್ನು ಮಾಡಿ ಆ ಮಂತ್ರಿಗಳೊಡನೆ ಬ್ರಿಟಿಶ ರಾಜ್ಯಕಾರಭಾರವನ್ನು ನಡಿಸುವನು. ೧೮೫೮ನೇ ಇಸವಿಯಲ್ಲಿ ಇಂಗ್ಲಂಡದ ವಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನದ ರಾಜ್ಯಕಾರಭಾರವನ್ನು ಬೋರ್ಡ ಆಫ ಕಂಟ್ರೋಲದವರ ಕಡೆಯಿಂದ ತಕ್ಕೊಂಡು, ಬ್ರಿಟಿಶ ಕ್ಯಾಬಿನೆಟದೊಳಗಿನವನೊಬ್ಬ ಮಂತ್ರಿಯ ಕಡೆಗೆ ಒಪ್ಪಿಸಿದರು. ಆ ಮಂತ್ರಿಯು ಇಂಗ್ಲಂಡದ ಅರಸರ ಪ್ರತಿನಿಧಿಯಾಗಿ ಇಂಗ್ಲಂಡದಲ್ಲಿ ಮಾಡತಕ್ಕ ಹಿಂದುಸ್ತಾನ ದೇಶಕ್ಕೆ ಸಂಬಂಧಿಸಿದ ಕೆಲಸಗಳನ್ನು ಸಾಗಿಸುವನು. ಆ ಮಂತ್ರಿಪ್ರತಿನಿಧಿಗೆ "**ಸೆಕ್ರೆಟರಿ ಆಫ ಸ್ಟೇಟ ಫಾರ ಇಂಡಿಯಾ** ಅಥವಾ **ಸ್ಟೇಟ ಸೆಕ್ರೆಟರಿ**" ಎಂದು ಕರೆಯುವರು. ಅವನ ಕಚೇರಿಗೆ '**ಇಂಡಿಯಾ ಆಫೀಸ**' ಎಂಬ ಹೆಸರು. ಅದು ಲಂಡನ ಪಟ್ಟಣದಲ್ಲಿದೆ. ಅದು ನೆರೆಯುವ ಕಟ್ಟಡಕ್ಕೆ '**ಇಂಡಿಯಾ ಹೌಸ**' ಎಂಬ ಹೆಸರು.

ಸ್ಟೇಟ ಸೆಕ್ರೆಟರಿಯು ಸಹಾಯಕ್ಕಾಗಿ ಇಬ್ಬರು ಅಂಡರ ಸೆಕ್ರೆಟರಿಗಳಿರುವರು. ಅವರಲ್ಲೊಬ್ಬನು ಬ್ರಿಟಿಶ ಕ್ಯಾಬಿನೆಟದ ಮೆಂಬರನಾಗಿರುವನು; ಮತ್ತೊಬ್ಬನು ಕಾಯಮು ಅಧಿಕಾರಸ್ಥನಿರುವನು. ಇದಲ್ಲದೆ ಇಂಡಿಯಾ ಆಫೀಸಿನಲ್ಲಿ ಸೆಕ್ರೆಟರಿಗಳೂ, ಅಸಿಸ್ಟಂಟ ಸೆಕ್ರೆಟರಿಗಳೂ, ಕಾರಕೂನರೂ, ಒಬ್ಬ ಕಾಯದೆ ಬಲ್ಲವನೂ, ಒಬ್ಬ ಅಕಾವುಂಟಂಟ ಜನರಲನೂ, ಬೇರೆ ಅಧಿಕಾರಸ್ಥರೂ ನೇಮಿಸಲ್ಪಟ್ಟಿರುವರು. ೧೯೨೦ನೇ ಇಸವಿಯ ವರೆಗೆ ಈ ಎಲ್ಲ ಅಧಿಕಾರಸ್ಥರ ಸಂಬಳವು ಹಿಂದುಸ್ತಾನದ ಉತ್ಪನ್ನದೊಳಗಿಂದಲೇ ಕೊಡಲ್ಪಡುತ್ತಿತ್ತು. ಆದರೆ ಈಗ ಅದನ್ನು ಬ್ರಿಟಿಶ ರೆವ್ಹಿನ್ಯುದೊಳಗಿಂದ ಕೊಡಹತ್ತಿರುವರು.

೨. ಸ್ಟೇಟ ಸೆಕ್ರೆಟರಿ ಹಾಗು ಬ್ರಿಟಿಶ ಪಾರ್ಲಮೆಂಟ ಇವರಲ್ಲಿ ಪರಸ್ಪರ ಸಂಬಂಧ:—

ಸ್ಟೇಟ ಸೆಕ್ರೆಟರಿಯು ಕ್ಯಾಬಿನೆಟ (ಮಂತ್ರಿಮಂಡಲ) ದಲ್ಲೊಬ್ಬ ಮೆಂಬರನಾಗಿರುವದರಿಂದ, ಅವನು ಬ್ರಿಟಿಶ ಪಾರ್ಲಮೆಂಟಿಗೆ ಜವಾಬದಾರನಾಗಿರುವನು. ಅವನು ಕೆಲಮಟ್ಟಿಗೆ ತನ್ನ ಕೌನ್ಸಿಲರರಿಗೂ ಕೆಲಮಟ್ಟಿಗೆ ಸ್ಟ್ಯಾಂಡಿಂಗ ಕಮಿಟಿಯವರಿಗೂ ಅಧೀನನಾಗಿದ್ದು, ಹಿಂದುಸ್ತಾನದ ಬಗ್ಗೆ ಪಾರ್ಲಮೆಂಟಿನವರು ಕೇಳಿದ ಪ್ರಶ್ನೆಗೆ ಉತ್ತರಕೊಡಬೇಕಾಗುವದು ೧೯೧೯ನೇ ಇಸವಿಯ ಆಕ್ಟು ಆದಂದಿನಿಂದ ಅವನ ಸಂಬಳವು ಬ್ರಿಟಿಶ ರೆವ್ಹಿನ್ಯುದೊಳಗಿಂದ ಕೊಡಲ್ಪಡುತ್ತಿದ್ದು, ಪಾರ್ಲಮೆಂಟಿನವರು ಅವನು ಮಾಡುವ ಕೆಲಸಗಳ ಬಗ್ಗೆ ವಿಶೇಷ ವಿಚಾರ ಮಾಡಹತ್ತಿರುವರಲ್ಲದೆ ಅವಶ್ಯವಿದ್ದಲ್ಲಿ ಅವನ ಮೇಲೆ ತಪ್ಪು ಹೊರಿಸಿ ಅವನ ಸಂಬಳವನ್ನೂ ಕಡಿಮೆ ಮಾಡಬಹುದು. ತಾನು ಮಾಡುವ ಕೆಲಸಗಳ ಅವಶ್ಯಕತೆಯನ್ನೂ ಕಾರಣಗಳನ್ನೂ ಅವನು ಪಾರ್ಲಮೆಂಟಿನವರಿಗೆ ಹೇಳುವನು. ಯಾವದೊಂದು ಸಂಗತಿಯ ಬಗ್ಗೆ ಹೊಸದಾಗಿ ಖರ್ಚು ಮಾಡತಕ್ಕದ್ದಿದ್ದಲ್ಲಿ ಆ ಬಗ್ಗೆ ಅವರ ಅಪ್ಪಣೆ ತಕ್ಕೊಳ್ಳಬೇಕಾಗುತ್ತದೆ. ಹಾಗು ಹಿಂದುಸ್ತಾನದ ನೈತಿಕ ಮತ್ತು ಭೌತಿಕ ಪ್ರಗತಿಯ ಬಗ್ಗೆ ಅವರಿಗೆ ತಿಳಿಸಬೇಕಾಗುತ್ತದೆ.

೩. ಸ್ಟೇಟ ಸೆಕ್ರೆಟರಿಯ ಅಧಿಕಾರಗಳೂ ಕರ್ತವ್ಯಗಳೂ:—

ಅವನು ಹಿಂದುಸ್ತಾನಕ್ಕೆ ಸಂಬಂಧಿಸಿದ ಯಾವತ್ತು ಸಂಗತಿಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಇಂಗ್ಲಂಡದ ಅರಸನಿಗೆ ತಿಳಿಸುವನು. ವ್ಹಾಯಿಸರಾಯ ಮೊದಲಾದ ಬೇರೆ ಬೇರೆ ಅಧಿಕಾರಸ್ಥರಿಗೆ ಹುಕುಮು ಕೊಡುವ ಹಾಗು

ಅವಶ್ಯವಿದ್ದಲ್ಲಿ ಅವರನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವು ಅವನಿಗುಂಟು. ಅವನು ವ್ಹಾಯಿಸರಾಯನಿಂದಲೂ ಗವ್ಹರ್ನರರಿಂದಲೂ ತನಗೆ ಬೇಕಾದ ಮಾಹಿತಿಯನ್ನು ತರಿಸಿಕೊಳ್ಳಬಹುದು. ಹಿಂದುಸ್ತಾನ ಸರಕಾರದವರಾಗಲಿ ಪ್ರಾಂತಿಕ ಸರಕಾರದವರಾಗಲಿ ತಮಗೆ ಮಾಡಬೇಕಾದ ಯಾವತ್ತು ಮಹತ್ವದ ಸಂಗತಿಗಳ ಬಗ್ಗೆ ಅವನ ಸಮ್ಮತಿಯನ್ನು ತಕ್ಕೊಳ್ಳಬೇಕಾಗುವದು. ಹಿಂದುಸ್ತಾನ ಸರಕಾರದವರು ಯಾವದೊಂದು ದೇಶದ ಕೂಡ ಯುದ್ಧ ಹೂಡುವದಿದ್ದಲ್ಲಿ, ಅವನ ಅಪ್ಪಣೆ ಪಡಕೊಳ್ಳತಕ್ಕದ್ದು. ಹಿಂದುಸ್ತಾನದಲ್ಲಿ ವ್ಹಾಯಿಸರಾಯನನ್ನುಳಿದು ಬೇರೆ ಬೇರೆ ದೊಡ್ಡ ಅಧಿಕಾರಸ್ಥರನ್ನು ನೇಮಿಸುವ ಅಧಿಕಾರವು ಅವನಿಗುಂಟು. ಹಿಂದುಸ್ತಾನದಿಂದ ಹೋಗುವ ಯಾವತ್ತು ಸರಕಾರೀ ಕಾಗದಪತ್ರಗಳು ಅವನಿಗೆ ಕಳಿಸಲ್ಪಡುವವು; ಹಾಗು ಹಿಂದುಸ್ತಾನಕ್ಕೆ ಬರುವ ಸರಕಾರೀ ಕಾಗದ ಪತ್ರಗಳನ್ನು ಅವನು ಸಹಿ ಮಾಡುವನು. ಈ ಪ್ರಕಾರ ಹಿಂದುಸ್ತಾನ ಸರಕಾರ ಸಂಬಂಧವಾಗಿ ಅವನಿಗೆ ಬಹಳ ಅಧಿಕಾರಗಳುಂಟು. ಆದರೂ ಬ್ರಿಟಿಶ್ ಪಾರ್ಲಮೆಂಟಿನವರ ಬೆಂಬಲವು ಅವನಿಗೆ ಅವಶ್ಯವಾದದ್ದು.

೧೯೧೯ನೇ ಇಸವಿಯ ಆಕ್ಟದಿಂದ ಅವನ ಅಧಿಕಾರವು ಕೆಲಮಟ್ಟಿಗೆ ಕಡಿಮೆಯಾಗಿರುವದು. ಕೊಟ್ಟ ವಿಷಯಗಳಲ್ಲಂತೂ (Transferred subjects) ಅವನು ಕೈಹಾಕುವಂತಿಲ್ಲ. ಹಾಗು ಪ್ರಾಂತಿಕ ಸರಕಾರದ ಕಾದಿಟ್ಟ ವಿಷಯಗಳ (Reserved subjects) ಬಗ್ಗೆ ಆ ಸರಕಾರದವರೂ ಅವರ ಕೌನ್ಸಿಲುಗಳೂ ಏಕಮತದವರಾದರೆ, ಆ ವಿಷಯಗಳಲ್ಲೂ ಅವನು ಬಹುತರವಾಗಿ ಕೈ ಹಾಕಲಾರನು.

೪. ಸ್ಟೇಟ ಸೆಕ್ರೆಟರಿಯೂ ಅವನ ಸಹಾಯಕ್ಕಾಗಿದ್ದ ಇಂಡಿಯಾ ಕೌನ್ಸಿಲೂ:—

ಸ್ಟೇಟ ಸೆಕ್ರೆಟರಿಯ ಸಹಾಯಕ್ಕಾಗಿದ್ದ ಕೌನ್ಸಿಲಿನಲ್ಲಿ ಮೆಂಬರರ ಸಂಖ್ಯೆಯು ಆಯಾ ಕಾಲದಲ್ಲಿ ಬೇರೆಯಾಗಿರುವದು. ಸನ್ ೧೯೧೯ರಲ್ಲಿ ೧೦ಕ್ಕಿಂತ ಕಡಿಮೆಯೂ ೧೪ಕ್ಕಿಂತ ಹೆಚ್ಚಾಗಿಯೂ ಇದ್ದಿಲ್ಲ. ಮೆಂಬರರಲ್ಲಿ ೯ ಜನರು ಹಿಂದುಸ್ತಾನದಲ್ಲಿ ಕನಿಷ್ಠ ೧೦ ವರ್ಷ ಇದ್ದವರು ಇಲ್ಲವೆ ಕೆಲಸ ಮಾಡಿದವರಾಗಿದ್ದಲ್ಲದೆ ಅವರನ್ನು ಮೆಂಬರರನ್ನಾಗಿ ನೇಮಿಸುವ ಕಾಲಕ್ಕೆ ಅವರು ಹಿಂದುಸ್ತಾನ ಬಿಟ್ಟು ಬೇರೆ ಕಡೆಯಲ್ಲಿ ೫ ವರ್ಷಕ್ಕಿಂತ ಹೆಚ್ಚು ಕಾಲ ವಾಸಮಾಡಿ

ಕೊಂಡವರಾಗಿದ್ದಿಲ್ಲ. ಅವರು ಸ್ಟೇಟ ಸೆಕ್ರೆಟರಿಯಿಂದ ನೇಮಿಸಲ್ಪಟ್ಟು, ೫ ವರ್ಷ ಕೆಲಸ ಮಾಡಬೇಕೆಂದು ಗೊತ್ತಾಗಿತ್ತು. ಅವರನ್ನು ಕೆಲಸದಿಂದ ತೆಗೆದು ಹಾಕುವದಿದ್ದಲ್ಲಿ, ಇಂಗ್ಲಂಡದ ಅರಸನ ಹಾಗು ಪಾರ್ಲಮೆಂಟಿನವರ ಹೊರ್ತಾಗಿ ಬೇರೆ ಯಾರಿಗೂ ಅಧಿಕಾರವಿದ್ದಿಲ್ಲ.

೧೯೦೭ನೇ ಇಸವಿಯಿಂದಿತ್ತಲಾಗಿ ಮೇಲ್ಕಾಣಿಸಿದ ಕೌನ್ಸಿಲಿನಲ್ಲಿ ಇಬ್ಬರು ಇಂಡಿಯನರು ಮೆಂಬರರಾಗಿರಬೇಕೆಂದು ಗೊತ್ತಾಗಿರುವದು. ೧೯೧೯ನೇ ಇಸವಿಯ ಆಕ್ಟದಿಂದ ಈ ಕೌನ್ಸಿಲಿನಲ್ಲಿ ಕೆಲವು ಹೆಚ್ಚುಕಡಿಮೆಗಳಾಗಿವೆ. ಸದ್ಯಕ್ಕೆ ಮೆಂಬರ ಜನರ ಸಂಖ್ಯೆಯು ೮ ಕ್ಕಿಂತ ಕಡಿಮೆಯೂ ೧೨ ಕ್ಕಿಂತ ಹೆಚ್ಚಾಗಿಯೂ ಇರುವದಿಲ್ಲ. ಇವರಲ್ಲಿ ಅರ್ಧ ಜನರು ಹಿಂದುಸ್ಥಾನದಲ್ಲಿ ಕನಿಷ್ಠ ೧೦ ವರ್ಷ ಇದ್ದವರು ಇಲ್ಲವೆ ಕೆಲಸಮಾಡಿದವರಾಗಿರಬೇಕಲ್ಲದೆ, ಅವರನ್ನು ಮೆಂಬರರನ್ನಾಗಿ ನೇಮಿಸುವ ಕಾಲಕ್ಕೆ ಅವರು ಹಿಂದುಸ್ಥಾನ ಬಿಟ್ಟು ಬೇರೆ ಕಡೆಯಲ್ಲಿ ೫ ವರ್ಷಕ್ಕಿಂತ ಹೆಚ್ಚುಕಾಲ ವಾಸಮಾಡಿದವರಿರಕೂಡದು. ಅವರು ೫ ವರ್ಷ ಕೆಲಸ ಮಾಡತಕ್ಕದ್ದು. ಅವರ ವಾರ್ಷಿಕ ಸಂಬಳವು ೧೨೦೦ ಪೌಂಡು. ಇದಲ್ಲದೆ ಇಂಡಿಯನ್ ಮೆಂಬರರಿಗೆ ವರ್ಷಕ್ಕೆ ೬೦೦ ಪೌಂಡು ಅಲಾವುನ್ಸ (ಭತ್ತೆ) ದೊರಕುವದು. ಕೌನ್ಸಿಲು ತಿಂಗಳಲ್ಲೊಂದು ಸಾರೆ ನೆರೆಯುವದು.

ಇಂಡಿಯಾ ಕೌನ್ಸಿಲಿನ ಕೆಲಸವು ಬಹು ಮಟ್ಟಿಗೆ ಸ್ಟೇಟ ಸೆಕ್ರೆಟರಿಗೆ ಆಲೋಚನೆ ಹೇಳುವ ಸಂಬಂಧವಾಗಿಯೇ ಇರುವದು. ಎಷ್ಟೋ ವಿಷಯಗಳಲ್ಲಿ ಸ್ಟೇಟ ಸೆಕ್ರೆಟರಿಯು ತನ್ನ ಕೌನ್ಸಿಲರರಿಗೆ ಅಧೀನನಾಗಿರುವದಿಲ್ಲ. ಯುದ್ಧ, ಒಪ್ಪಂದ ಮುಂತಾದ ಜರೂರಿನ ಹಾಗು ಗುಪ್ತವಾದ ವಿಷಯಗಳ ಸಂಬಂಧದಿಂದಲೂ ಪರದೇಶೀಯ ಸಂಸ್ಥಾನಗಳ ಸಂಬಂಧದಿಂದಲೂ ಅವನು ತನ್ನ ಕೌನ್ಸಿಲರರ ಆಲೋಚನೆಗಳನ್ನು ಕೇಳಬೇಕೆಂಬ ನಿರ್ಬಂಧವಿಲ್ಲ. ಇಂಥ ವಿಷಯಗಳಲ್ಲಿ ಅವರನ್ನು ವಿಚಾರಿಸದೆ ಸ್ವತಂತ್ರವಾಗಿ ಹುಕುಮು ಕೊಡಬಹುದು. ಆದರೂ ಅವನು ಆ ಬಗ್ಗೆ ಕಾರಣಗಳನ್ನು ಹೇಳಬೇಕಾಗುವದು. ಸಾಮಾನ್ಯವಾದ ವಿಷಯಗಳಲ್ಲಿ ಕೌನ್ಸಿಲರರ ಆಲೋಚನೆಗಳನ್ನು ವಿಚಾರಿಸಬೇಕಾಗುತ್ತದೆ. ಆದರೆ ಅವರ ಅಭಿಪ್ರಾಯದಂತೆ ನಡಕೊಳ್ಳಲೇಬೇಕೆಂಬದಿಲ್ಲ. ಆದರೆ ಪಾರ್ಲಮೆಂಟಿನವರು ಗೊತ್ತುಮಾಡಿಕೊಟ್ಟ ಕೆಲವು ವಿಶಿಷ್ಟವಾದ ಸಂಗತಿಗಳಲ್ಲಿ ಮಾತ್ರ ಅವನು ತನ್ನ ಕೌನ್ಸಿಲರರ ಬಹುಮತದಂತೆ ನಡಕೊಳ್ಳಬೇಕಾಗುತ್ತದೆ.

ಅವು ಯಾವವೆಂದರೆ— (೧) ಹಿಂದುಸ್ತಾನದ ಜಮಾಬಂದೀ ವಸೂಲಿನ ವೆಚ್ಚವು. (೨) ಹಿಂದುಸ್ತಾನದಲ್ಲಿ ಆಯಾ ಅಧಿಕಾರಸ್ಥರ ಸಂಬಳ, ಫರ್ಲೋ, ಪೆನ್‌ಶನಗಳ ಸಂಬಂಧದ ನಿಯಮಗಳಲ್ಲಿ ಹೆಚ್ಚುಕಡಿಮೆ ಮಾಡುವದು. (೩) ಇಂಡಿಯನ್ ಸಿವ್ಹಿಲ್ ಸರ್ವ್ಹಿಸದಲ್ಲಿ ಇಂಡಿಯನರನ್ನು ನೇಮಿಸುವದು. (೪) ವಾಯಿಸರಾಯರ ಕೌನ್ಸಿಲಿನಲ್ಲಿ ತಾತ್ಕಾಲಿಕ ನೇಮಣೂಕುಗಳನ್ನು ಮಾಡುವದು.

(೧೫) ಸ್ಥಾನಿಕ ಸ್ವರಾಜ್ಯ

೧. **ಅರ್ಥ**:—ಸದ್ಯಕ್ಕೆ ಹಿಂದುಸ್ತಾನದಲ್ಲಿ ಇಂಗ್ಲಿಷರು ಆಳುತ್ತಿರುವರಷ್ಟೇ. ಈ ದೇಶದ ಪ್ರತಿಯೊಂದು ಊರಲ್ಲಿ ಅವರು ಮಾಡತಕ್ಕ ಸಾರ್ವಜನಿಕ ಕೆಲಸಗಳು ಬಹುವಿಧವಾಗಿರುವವು. ಈ ಯಾವತ್ತು ಕೆಲಸಗಳನ್ನು ಸರಕಾರದವರೇ ಮಾಡಬೇಕೆಂದರೆ, ಬಹಳೇ ವೆಚ್ಚವೂ ಶ್ರಮವೂ ಹತ್ತುವವು. ಆ ಕಾರಣ ಅವರು ಆ ಕೆಲಸಗಳಲ್ಲಿ ಅತಿ ಮಹತ್ವವಾದವುಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು, ಉಳಿದ ಸಣ್ಣ ಪುಟ್ಟ ಕೆಲಸಗಳನ್ನು ಅಲ್ಲಲ್ಲಿಯ ಪ್ರತಿಷ್ಠಿತರಾದ ಜನರ ಕೈಯಿಂದಲೇ ಮಾಡಿಸುತ್ತಿರುವರು. ಇಂಥ ಸಣ್ಣ ಪುಟ್ಟ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿರುವ ಪ್ರತಿಷ್ಠಿತ ಜನರ ವ್ಯವಸ್ಥೆಗೆ **ಸ್ಥಾನಿಕ ಸ್ವರಾಜ್ಯ** ಎಂಬ ಹೆಸರು.

೨. **ಉದ್ದೇಶ**:—ಕುಟುಂಬಕ್ಕೆ ತಾಯಿತಂದೆಗಳ ಸಂಬಂಧವಿದ್ದಂತೆ, ದೇಶಕ್ಕೆ ಸರಕಾರದ ಸಂಬಂಧವಿರುವದು. ಜಾಣನಾದ ತಂದೆಯು ತನ್ನ ಮಕ್ಕಳಿಗೆ ಕುಟುಂಬರಕ್ಷಣೆ ಮಾಡುವ ವಿದ್ಯೆಯನ್ನು ಕಲಿಸುವದಕ್ಕಾಗಿ ಕೆಲಮಟ್ಟಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಅವರ ಸಮ್ಮತಿಯನ್ನು ತಕ್ಕೊಳ್ಳುವನು. ಅದರಿಂದ ಅವರು ದೊಡ್ಡವರಾದಮೇಲೆ ತಮ್ಮ ಕರ್ತವ್ಯಗಳನ್ನು ಹೇಗೆ ಮಾಡಬೇಕೆಂಬದನ್ನು ಚಿಕ್ಕವರಿರುವಾಗಲೇ ಕಲಿಯುವದುಂಟು. ಅದರಂತೆಯೇ ನಾವು ಸಾರ್ವಜನಿಕ ಕಾರ್ಯಗಳನ್ನು ಯೋಗ್ಯವಾಗಿ ನಡಿಸುವದಕ್ಕೆ ಸಮರ್ಥರಾಗಬೇಕೆಂತಲೂ, ಇಂಥ ಕೆಲಸಗಳಿಗೆ ಹತ್ತುವ ಹಣ (**ಲೋಕಲ್ ಫಂಡ**)ದ ವಿನಿಮಯವು ಸರಿಯಾಗಿರುವದೋ? ಇಲ್ಲವೋ? ಎಂಬದನ್ನು ನಾವೆಲ್ಲರೂ ನೋಡಬೇಕೆಂತಲೂ ನಮ್ಮ ದಯಾಳು ಬ್ರಿಟಿಶ ಸರಕಾರದವರು ಆಯಾ ಕಾರ್ಯಗಳನ್ನು ನಮ್ಮ ಕೈಯಿಂದಲೇ ಮಾಡಿಸುತ್ತಿರುವರು.

ಮೇಲೆ ಹೇಳಿದಂತೆ ಸ್ಥಾನಿಕ ಸ್ವರಾಜ್ಯದ ಉದ್ದೇಶಗಳು ದ್ವಿವಿಧವಾಗಿರುವವು. (೧) ಸಾರ್ವಜನಿಕ ಕೆಲಸಗಳ ವೆಚ್ಚಕ್ಕೆ ಹತ್ತುವ ಹಣ (ಲೋಕಲ್ ಫಂಡ)ದ ಯೋಗ್ಯ ವ್ಯವಸ್ಥೆಯ ಕಡೆಗೆ ವಿಶೇಷ ಲಕ್ಷಗೊಡುವದು, ಮತ್ತು (೨) ರಾಜ್ಯದಾಡಳಿತದ ವಿದ್ಯೆಯನ್ನು ಕಲಿಯುವದು. ಮೊದಲನೇ ಉದ್ದೇಶವನ್ನು **ಲಾರ್ಡ ಮೇಯೋ** ದೊರೆಗಳು ೧೮೭೦ನೇ ಇಸವಿಯಲ್ಲಿ ಮುಂದಕ್ಕೆ ತಂದರು. ಎರಡನೇ ಉದ್ದೇಶವು **ಲಾರ್ಡ ರಿಪನ್** ದೊರೆಗಳ ಕಾಲದಲ್ಲಿ ಅಂದರೆ ೧೮೮೧—೮೨ರಲ್ಲಿ ಫಲಿತವಾಯಿತು. ಲಾರ್ಡ ರಿಪನ್ನರ ತರುವಾಯ ಬಂದ ವ್ಹಾಯಿಸರಾಯರು ಇವೆರಡೂ ಉದ್ದೇಶಗಳನ್ನು ಪ್ರಚಾರದಲ್ಲಿ ತರುವದಕ್ಕೆ ಯತ್ನಿಸಿರುವರು. ಹಿಂದುಸ್ಥಾನದ ರಾಜ್ಯದಾಡಳಿತವು ೧೮೫೮ನೇ ಇಸವಿಯಲ್ಲಿ ಇಂಗ್ಲಂಡದ ಅರಸರ ಕೈಸೇರುವದಕ್ಕಿಂತ ಮೊದಲೇ ಅಂದರೆ ೧೮೫೦ ನೇ ಇಸವಿಯಲ್ಲಿ **ಈಸ್ಟ ಇಂಡಿಯಾ ಕಂಪನಿಯವರು** ಮುಂಬಯಿ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಿಗೆ ಮ್ಯುನಿಸಿಪಾಲಿಟಿಯ ಅಧಿಕಾರಗಳನ್ನು ಕೊಟ್ಟಿದ್ದರು. ಆದರೆ ಸ್ಥಾನಿಕ ಸ್ವರಾಜ್ಯದ ಪದ್ಧತಿಯು ೧೮೮೪ನೇ ಇಸವಿಯಲ್ಲಿ ಪೂರ್ಣವಾಗಿ ಬಳಕೆಯಲ್ಲಿ ಬಂತು. ಇದಕ್ಕೂ ಮೊದಲು ಮ್ಯುನಿಸಿಪಾಲಿಟಿಗಳಿಗೆ ಈಗಿನಷ್ಟು ಸ್ವತಂತ್ರವಾದ ಅಧಿಕಾರವಿದ್ದಿಲ್ಲ. ಅವು ಮಾಡುವ ಕೆಲಸಗಳ ಸಂಬಂಧದಿಂದ ಸರಕಾರೀ ಅಧಿಕಾರಸ್ಥರ ಮೇಲ್ವಿಚಾರಣೆಯಾಗುತ್ತಿದ್ದ ಕಾರಣ ಅವು ಆ ಅಧಿಕಾರಸ್ಥರಿಗೆ ಕೇವಲ ಅಧೀನವಾಗಿಯೇ ಇದ್ದವು. ಆನಂತರ ಸರಕಾರದವರು ಕೆಲವು ಕೆಲಸಗಳಲ್ಲಿ ಏನೂ ಕೈಹಾಕಬಾರದೆಂತಲೂ, ಬೇರೆ ಕೆಲವು ಕೆಲಸಗಳಲ್ಲಿ ಕೆಲಮಟ್ಟಿಗೆ ಮಾತ್ರ ಕೈಹಾಕಬೇಕೆಂತಲೂ ನಿರ್ಣಯಮಾಡಿದ್ದರಿಂದ, ಜನರು ತಮ್ಮ ತಮ್ಮ ಸಾರ್ವಜನಿಕ ಸ್ಥಾನಿಕ ಕೆಲಸಗಳನ್ನು ಹೆಚ್ಚು ಲಕ್ಷಗೊಟ್ಟು ತಮ್ಮ ಸ್ವಂತದ ಕೆಲಸಗಳನ್ನು ಮಾಡುವಂತೆ ಮಾಡುತ್ತಿರುವರು.

೩. **ಆರಂಭಕಾಲ** :—ಪ್ರಾಚೀನ ಕಾಲದ ಅರಸರು ವಿಶೇಷವಾಗಿ ಅಂಜಿಕೆ-ಜುಲುಮೆಗಳ ಬಲದಿಂದಲೇ ರಾಜ್ಯವಾಳುತ್ತಿದ್ದರು. ಸಹಾನುಭೂತಿ ಹಾಗು ಪ್ರೀತಿ ಇವುಗಳ ಬಲದಿಂದ ಆಳಿದ ಅರಸರ ಉದಾಹರಣೆಗಳು ತೀರ ಕಡಿಮೆ. ಆದರೆ ಇತ್ತಿತ್ತಲಾಗಿ ಜನರಲ್ಲಿ ಶಿಕ್ಷಣವು ಹೆಚ್ಚೆಚ್ಚು ಬೆಳೆಯುತ್ತ ಹೋದ ಹಾಗೆ ರಾಜ್ಯದಲ್ಲೆಲ್ಲ ಶಾಂತತೆಯುಂಟಾಗಿ ಪ್ರಜೆಗಳು ಹೆಚ್ಚೆಚ್ಚು ಸಂತುಷ್ಟರೂ ರಾಜನಿಷ್ಠರೂ ಆಗುತ್ತಾರೆಂಬುದು ಕಂಡುಬಂದದೆ. ಆದರೂ ದೇಶದಲ್ಲಿ ಅನೇಕ

ಜನರನ್ನು ರಾಜ್ಯಕಾರಭಾರ ಸಾಗಿಸುವದಕ್ಕೆ ಯೋಗ್ಯರನ್ನಾಗಿ ಮಾಡುವದು ಸುಲಭವಾದ ಮಾತಲ್ಲ. ಅವರಲ್ಲಿ ವಿದ್ಯಾಪ್ರಸಾರವಾಗಬೇಕಾದರೆ, ಎಷ್ಟೋ ವರ್ಷ ಹತ್ತುವವು. ಆದ್ದರಿಂದ ರಾಜ್ಯಕಾರಭಾರ ಮಾಡುವ ಯೋಗ್ಯತೆಯೂ ವರೂ ಅವರಲ್ಲಿ ಕ್ರಮವಾಗಿ ಬರುವದು. ಈ ಪದ್ಧತಿಯು ಪ್ರಚಾರದಲ್ಲಿ ಬಂದಂದಿನಿಂದ ಆಯಾ ತೊಂದರೆಗಳನ್ನೂ ಅವಿಚಾರಗಳನ್ನೂ ದೂರಪಡಿಸುವದಕ್ಕಾಗಿ ಸರಕಾರವು ಕೈಹಾಕುತ್ತಿದ್ದರೂ, ನಾವು ಮಾಡುವ ತಪ್ಪುಗಳನ್ನು ನಾವೇ ಅರಿತುಕೊಂಡು ಬುದ್ಧಿವಂತರಾಗಬೇಕೆಂಬ ಉದ್ದೇಶವಿರುತ್ತದೆ. ಅದರಂತೆಯೇ ಈ ದೇಶದ ಕಾಯದೆ, ವಿದ್ಯೆ, ಸೇನೆ ಮುಂತಾದ ಮಹತ್ವದ ಸಾರ್ವಜನಿಕ ಸಂಗತಿಗಳ ಕಾರಭಾರವನ್ನು ತಮ್ಮ ಕೈಯಲ್ಲಿಟ್ಟುಕೊಂಡು, ಉಳಿದ ಕೇವಲ ಸ್ಥಾನಿಕ ಕಾರ್ಯಗಳನ್ನು ಅಂದರೆ ರಸ್ತೆ, ದವಾಖಾನೆ, ಮಾರ್ಕೆಟ, ಬೀದಿಗಳಲ್ಲಿ ದೀಪ ಹಚ್ಚುವದೂ ಉಡುಗುವದೂ ಮುಂತಾದವುಗಳ ಬಗ್ಗೆ ಮೇಲ್ವಿಚಾರಣೆ ಮಾಡುವ ಕೆಲಸವನ್ನು ಸ್ಥಾನಿಕ ಅಧಿಕಾರಸ್ಥರಿಗೆ ಮಾತ್ರ ಒಪ್ಪಿಸಿರುವರು.

೪. **ಭಾಗಗಳು**:—ಸ್ಥಾನಿಕ ಸ್ವರಾಜ್ಯದಲ್ಲಿ (೧) ಮ್ಯುನಿಸಿಪಾಲಿಟಿ, (೨) ಡಿಸ್ಟ್ರಿಕ್ಟ ಲೋಕಲ್‌ಬೋರ್ಡ, (೩) ತಾಲೂಕ ಲೋಕಲ್‌ಬೋರ್ಡ, (೪) ಹಳ್ಳಿಯ ಕೂಟಗಳು ಎಂಬ ನಾಲ್ಕು ಭಾಗಗಳುಂಟು.

(೧) **ಮ್ಯುನಿಸಿಪಾಲಿಟಿಗಳು** ಮೂರು ಪ್ರಕಾರದವು. (ಅ) ಕಲಕತ್ತಾ, ಮದ್ರಾಸ, ಮತ್ತು ಮುಂಬಯಿ ಪಟ್ಟಣಗಳ ಮ್ಯುನಿಸಿಪಾಲಿಟಿಗಳಿಗೆ ಕಾರಪೊರೇಶನ್ಸ ಎಂದು ಅನ್ನುವರು. ಮುಂಬಯಿ ಕಾರಪೊರೇಶನದಲ್ಲಿ ೭೨ ಮೆಂಬರರಿರುವರು. ಇವರಲ್ಲಿ ೧೬ ಜನರನ್ನು ಸರಕಾರದವರು ನೇಮಿಸುವರು. ಉಳಿದವರನ್ನು ಜನರು ಆರಿಸುವರು. ಪ್ರೆಸಿಡೆಂಟ (ಅಧ್ಯಕ್ಷ) ನನ್ನು ಮೆಂಬರರು ಆರಿಸುವರು. ಮ್ಯುನಿಸಿಪಾಲಿಟಿಯ ಕೆಲಸವು ಮ್ಯುನಿಸಿಪಲ್ ಕಮಿಶನರನೆಂಬ ಒಬ್ಬ ಸರಕಾರೀ ಉದ್ಯೋಗಸ್ಥನ ಕಡೆಗೂ ಸ್ಟ್ಯಾಂಡಿಂಗ ಕಮಿಟಿಯ ಕಡೆಗೂ ಒಪ್ಪಿಸಲ್ಪಟ್ಟಿರುವದು. ಆ ಕಮಿಟಿಯಲ್ಲಿ ೧೨ ಮಂದಿ ಮೆಂಬರರಿದ್ದು, ಅವರಲ್ಲಿ ೪ ಜನರನ್ನು ಸರಕಾರದವರು ನೇಮಿಸುವರು; ಉಳಿದವರನ್ನು ಮೆಂಬರರು ಆರಿಸುವರು. ಕಲಕತ್ತಾ ಮತ್ತು ಮದ್ರಾಸ ಕಾರಪೊರೇಶನಗಳ ಕೆಲಸವು ಪ್ರೆಸಿಡೆಂಟನ ಕಡೆಗಿದ್ದು, ಅವನನ್ನು ಸರಕಾರದವರು ನೇಮಿಸುವರು. (ಬ) ಡಿಸ್ಟ್ರಿಕ್ಟಗಳ ಮುಖ್ಯ ಠಾಣ್ಯಗಳಾದ ಬೇರೆ ಪಟ್ಟಣಗಳಲ್ಲಿ ಡಿಸ್ಟ್ರಿಕ್ಟ ಮ್ಯುನಿಸಿಪಾಲಿಟಿಗಳುಂಟು. ಅವುಗಳಲ್ಲಿ

ಜನರಿಂದ ಆರಿಸಲ್ಪಟ್ಟ ಮೆಂಬರರ ಸಂಖ್ಯೆಯು ಕಡಿಮೆ ಇರುವದು. ಪ್ರೆಸಿಡೆಂಟನು ಸರಕಾರೀ ಉದ್ಯೋಗಸ್ಥನಾಗಲಿ ಸರಕಾರದಿಂದ ನೇಮಿಸಲ್ಪಟ್ಟವನಾಗಲಿ ಇರುವನು. (ಕ) ಸುಧಾರಣೆಯಲ್ಲಿ ಹಿಂದುಳಿದ ಕೆಲವು ಪಟ್ಟಣಗಳ ಮ್ಯುನಿಸಿಪಾಲಿಟಿಗಳ ಮೆಂಬರರನ್ನು ಸರಕಾರದವರೇ ಆರಿಸಿರುವರು; ಹಾಗು ಒಬ್ಬ ಸರಕಾರೀ ಉದ್ಯೋಗಸ್ಥನನ್ನು ಪ್ರೆಸಿಡೆಂಟನನ್ನಾಗಿ ನೇಮಿಸುವರು.

(೨) **ಡಿಸ್ಟ್ರಿಕ್ಟ ಲೋಕಲ್ ಬೋರ್ಡ್**:—ಪ್ರತಿಯೊಂದು ಡಿಸ್ಟ್ರಿಕ್ಟಿಗೆ ಡಿಸ್ಟ್ರಿಕ್ಟ ಲೋಕಲ್‌ಬೋರ್ಡವಿರುವದು. ಮೆಂಬರರಲ್ಲಿ ಸುಮಾರು ಅರ್ಧ ಜನರು ಜನರಿಂದ ಆರಿಸಲ್ಪಡುವರು. ಪ್ರೆಸಿಡೆಂಟನು ಸರಕಾರೀ ಉದ್ಯೋಗಸ್ಥನಲ್ಲದವನು.

(೩) **ತಾಲೂಕ ಲೋಕಲ್ ಬೋರ್ಡ**:—ಪ್ರತಿಯೊಂದು ತಾಲೂಕಿಗೆ ತಾಲೂಕ ಲೋಕಲ್‌ಬೋರ್ಡವಿರುವದು. ಮೆಂಬರರಲ್ಲಿ ಅರ್ಧ ಜನರು ಸರಕಾರದಿಂದಲೂ ಅರ್ಧ ಜನರು ಜನರಿಂದಲೂ ಆರಿಸಲ್ಪಡುವರು. ಪ್ರೆಸಿಡೆಂಟನು ಸರಕಾರೀ ಉದ್ಯೋಗಸ್ಥನಾಗಿರುವನು.

(೪) **ಹಳ್ಳಿಯ ಕೂಟಗಳು** :—ಇವು ಪಟ್ಟಣಗಳಲ್ಲಿ ಮ್ಯುನಿಸಿಪಾಲಿಟಿಗಳು ಮಾಡುವ ಕೆಲಸಗಳನ್ನಷ್ಟೇ ಅಲ್ಲದೆ ಹಳ್ಳಿಯ ಯಾವತ್ತು ಕಾರಭಾರವನ್ನು ಸಾಗಿಸುವವು. ಬಹುಕಾಲದಿಂದ ಹಿಂದುಸ್ತಾನದ ಆಯಾ ಹಳ್ಳಿಗಳ ವ್ಯವಸ್ಥೆಯು ಅಲ್ಲಿಯ ಕೆಲವು ಜನರ ಕೈಯಲ್ಲಿಯೇ ಇತ್ತು. ಈ ಪದ್ಧತಿಗೆ "**ಪಂಚಾಯತ ಪದ್ಧತಿ**" ಎಂಬ ಹೆಸರು. ಈಗಾದರೂ ಬ್ರಿಟಿಶ ಸರಕಾರದವರು ಹಳ್ಳಿಗಳ ಆಡಳಿತದಲ್ಲಿ ಆ ಪದ್ಧತಿಯನ್ನೇ ಸಾಗಿಸುತ್ತಿರುವರು. ಪಂಚಾಯತರ ಮುಖ್ಯಸ್ಥನಿಗೆ ಪಟೇಲ ಎಂದು ಅನ್ನುವರು. ಅವನು ತನ್ನ ಕಡೆಗಿರುವ ಹಳ್ಳಿಯ ಇಲ್ಲವೆ ಹಳ್ಳಿಗಳ ಶಾಂತತೆ, ಆರೋಗ್ಯತೆ, ಶಿಕ್ಷಣ ಮುಂತಾದವುಗಳ ಬಗ್ಗೆ ವ್ಯವಸ್ಥೆಯಿಡುವನು. ಇದಲ್ಲದೆ ಹಳ್ಳಿಯ ಲೆಕ್ಕಪತ್ರಗಳನ್ನೂ, ಹಳ್ಳಿಯ ಜಮೀನುಗಳು ಯಾವವು! ಅವುಗಳಿಂದ ಸರಕಾರಕ್ಕೆ ಬರತಕ್ಕ ತೆರಿಗೆ ಎಷ್ಟು! ಮುಂತಾದ ಸಂಗತಿಗಳನ್ನು ತೋರಿಸುವ ರೆಜಿಸ್ಟರವನ್ನೂ ಇಡುವದಕ್ಕಾಗಿ ಒಬ್ಬ ಕಾರಕೂನನೂ (ಕುಲಕರ್ಣಿ), ಹಳ್ಳಿಯಲ್ಲಿ ಪೋಲೀಸ ಕೆಲಸ ಮಾಡುವದಕ್ಕಾಗಿ ಒಬ್ಬ ಚೌಕೀದಾರನೂ ಇರುವರು. ಪೂರ್ವಕಾಲದಲ್ಲಿ ಪಟೇಲ-ಕುಲಕರ್ಣಿ-ಚೌಕೀದಾರ ಈ ಮೂರು ಅಧಿಕಾರಸ್ಥರನ್ನು ಹಳ್ಳಿಯ ಜನರೇ ಆರಿಸುತ್ತಿದ್ದರು. ಆದರೆ ಈಗ ಅವರನ್ನು ಸರಕಾರದವರೇ ನೇಮಿಸುತ್ತಿದ್ದು, ಅವರಿಗೆ ಸರಕಾರದಿಂದಲೇ

ಸಂಬಳವು ದೊರೆಯುತ್ತಿರುವದು.

೫. ಲೋಕಲ್‌ಬೋರ್ಡ ಹಾಗು ಮ್ಯುನಿಸಿಪಾಲಿಟಿಗಳ ಕರ್ತವ್ಯಗಳು:—

ಮರಗಳು ಸಾಲುಸಾಲಾಗಿರುವ ರಾಜಮಾರ್ಗ, ರಸ್ತೆ, ಬೀದಿ, ಕಾಲುವೆ, ಪೂಲು, ದವಾಖಾನೆ, ಧರ್ಮಶಾಲೆ, ಶಾಲೆ, ಮಾರ್ಕೆಟ, ಕೆರೆ, ಬಾವಿ, ಮೊದ್ದ ದೊಡ್ಡ ಜಲಾಶಯಗಳು ಮುಂತಾದವುಗಳನ್ನು ಕಟ್ಟಿಸುವದೂ ಅವನ್ನು ದುರುಸ್ತ ಮಾಡಿಸುವದೂ ಇವೇ ಕೆಲಸಗಳು ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳ ಕರ್ತವ್ಯಗಳಾಗಿವೆ. ಈ ಕೆಲಸಗಳಿಗೆ ಹತ್ತುವ ಹಣ ಕೂಡಿಸುವದಕ್ಕಾಗಿ ಲೋಕಲ್‌ಬೋರ್ಡ ಮತ್ತು ಮ್ಯುನಿಸಿಪಾಲಿಟಿಗಳು ಜನರ ಮೇಲೆ ಕರಕಟ್ಟುವರು.

ಲೋಕಲ್‌ಬೋರ್ಡಗಳು ಕಟ್ಟುವ ಕರಗಳು ಯಾವವೆಂದರೆ:—(೧) ಮನೆಪಟ್ಟಿ (೨) ರಸ್ತೆಯಲ್ಲಿ ತಿರುಗಾಡುವ ಚಕ್ಕಡಿ-ದನಕರುಗಳ ಮೇಲಿನ ಸುಂಕ, (೩) ಯಾರಾದರೂ ಮಾರ್ಗದಲ್ಲಿ ಚಪ್ಪರ ಅಥವಾ ಮಂಟಪ ಹಾಕಿಸಿದರೆ, ಅವರು ಪ್ರತಿ ದಿವಸಕ್ಕೆ ಪ್ರತಿ ಚೌರಸ ಯಾರ್ಡಿಗೆ ಮೂರು ಪೈಯಂತೆ ಕೊಡತಕ್ಕ ಬಾಡಿಗಿ ಹಣ, (೪) ಚಕ್ಕಡಿ ನಿಲ್ಲುವ ಸ್ಥಳ, ಮಾರ್ಕೆಟ, ಯಾವದೊಂದು ಹಬ್ಬದ ಇಲ್ಲವೆ ಜಾತ್ರೆಯ ದಿವಸ ಬೇಕಾಗುವ ಸಾರ್ವಜನಿಕ ಸ್ಥಳ, ಮುಂತಾದ ಸ್ಥಳಗಳನ್ನು ಉಪಯೋಗಿಸಿದರೆ, ಅದಕ್ಕಾಗಿ ಕೊಡಬೇಕಾದ ಬಾಡಿಗಿ. (೫) ನೀಲಗಿರಿ ಮುಂತಾದ ಪ್ರದೇಶಗಳಲ್ಲಿ ರೈತರು ವರ್ಷಕ್ಕೆ ಕೊಡುವ ಲಾವಣೀಹಣದ ಮೇಲೆ ಒಂದು ರೂಪಾಯಿಗೆ ಎರಡು ಆಣೆಗಳಂತೆ, ಮತ್ತು ಬೇರೆ ಪ್ರದೇಶಗಳಲ್ಲಿ ಒಂದು ರೂಪಾಯಿಗೆ ಒಂದು ಆಣೆಯಂತೆ ಕಟ್ಟಲ್ಪಡುವ ಭೂಮಿಯ ಮೇಲಿನ ತೆರಿಗೆ, ಇವೇ ಮುಂತಾದವುಗಳು.

ಮ್ಯುನಿಸಿಪಾಲಿಟಿಗಳು ಕಟ್ಟುವ ಕರಗಳು :—

(೧) ಜನರು ಮಾಡುವ ವ್ಯವಸಾಯದ ಅಥವಾ ವ್ಯಾಪಾರದ ಮೇಲಿನ ಕರ, (೨) ವರ್ಷಕ್ಕೊಮ್ಮೆ ಕೊಡುವ ಗೇಣಿಯ ಮೇಲೆ ನೂರಕ್ಕೆ ೭॥ ಟಕ್ಕೆ ಮೀರದಿದ್ದ ಮನೆಯ ಮತ್ತು ಭೂಮಿಯ ಮೇಲಿನ ಕರ, (೩) ಮನೆ ಮತ್ತು ಭೂಮಿ ಇವುಗಳಿಂದ ವರ್ಷಕ್ಕೆ ಬರುವ ಬಾಡಿಗೆಯ ಮೇಲೆ ನೂರಕ್ಕೆ ನಾಲ್ಕಕ್ಕಿಂತ ಹೆಚ್ಚಾಗದ ನೀರಿನ ಕರ, (೪) ಪಲ್ಲಕ್ಕಿ, ಮೇಣೆ, ಚಕ್ಕಡಿ, ಎತ್ತು, ಕುದುರೆ ಇವುಗಳ ಮೇಲಿನ ಕರ, (೫) ಬೇರೆ ಸ್ಥಳಗಳಿಂದ ಊರೊಳಗೆ ಸಾಮಾನು ಹೇರಿಕೊಂಡು

ಬರುವ ಚಕ್ಕಡಿ ಹಾಗು ಪಶುಗಳ ಮೇಲಿನ ಸುಂಕ, ಇವೇ ಮುಂತಾದವುಗಳು.

ಇದಲ್ಲದೆ ಎಷ್ಟೋ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಜನರಿಗೆ ಆರೋಗ್ಯವಾಗಬೇಕೆಂತಲೂ, ಅವರಿಗೆ ದಣುವಾರಿಸಿಕೊಳ್ಳಲಿಕ್ಕೆ ಯೋಗ್ಯವಾದ ಸ್ಥಳಗಳಿರಬೇಕೆಂತಲೂ ಅಲ್ಲಲ್ಲಿಗೆ ಉಪವನಗಳೂ ತೋಟಗಳೂ ಮಾಡಲ್ಪಟ್ಟಿರುತ್ತವೆ. ಇವುಗಳ ವ್ಯವಸ್ಥೆಯನ್ನಾದರೂ ಮ್ಯುನಿಸಿಪಾಲಿಟಿಯವರೇ ಮಾಡುವರು. ಊರೊಳಗೆ ಮಹಾಮಾರಿ, ಪಿಡುಗು ಮುಂತಾದ ಸಾಂಸರ್ಗಿಕ ರೋಗಗಳು ಹುಟ್ಟಿದರೆ, ಊರ ಹೊರಗೆ ಪ್ರತ್ಯೇಕವಾಗಿ ಚಾವಣಿಗಳನ್ನು ಕಟ್ಟಿಸುವದೂ, ಪಿಡುಗಿನಿಂದ ದೂಷಿತವಾದ ಮನೆಗಳನ್ನು ಸ್ವಚ್ಛವಾಗಿ ತೊಳೆದು ರೋಗದ ಸುಂಕವನ್ನು ಹೋಗಲಾಡಿಸುವದೂ, ಇವೇ ಮುಂತಾದ ಕೆಲಸಗಳನ್ನಾದರೂ ಮ್ಯುನಿಸಿಪಾಲಿಟಿಯವರೇ ಮಾಡುವದುಂಟು.

೬. ಅದರಂತೆಯೇ ಮುಂಬಯಿ, ಕಲಕತ್ತಾ, ಮದ್ರಾಸ, ಕರಾಚಿ ಮುಂತಾದ ಸ್ಥಳಗಳಲ್ಲಿ "**ಪೋರ್ಟ ಟ್ರಸ್ಟ**" ಎಂಬ ಕಮಿಟಿಗಳಿರುವವು. ಈ ಕಮಿಟಿಯ ಮೆಂಬರರಲ್ಲಿ ಕೆಲವರು ಸರಕಾರದಿಂದ ನೇಮಿಸಲ್ಪಡುವರು; ಕೆಲವರು ಜನರಿಂದ ಆರಿಸಲ್ಪಡುವರು. ಹಡಗು ನಡಿಸುವ ಕಾರಖಾನೆಗಳನ್ನು ನಡಿಸುವದೂ, ಬಂದರಗಳಲ್ಲಿ ದೀಪಗಳನ್ನು ಹಚ್ಚಿಸುವದೂ, ಹಡಗುನಡಿಸುವವರ ಹಾಗೂ ಬಂದರಗಳಲ್ಲಿ ಕಾಯಲಿಟ್ಟ ಪೋಲೀಸರ ಸಂಬಳವನ್ನು ಕೊಡುವದೂ ಅವರ ಕೆಲಸಗಳಾಗಿವೆ.

೭. **ಉಪಸಂಹಾರ:—** ಸಾರಾಂಶವೇನೆಂದರೆ, ಸ್ಥಾನಿಕಸ್ವರಾಜ್ಯದಿಂದ ನಮ್ಮ ಹಿಂದುಸ್ತಾನ ದೇಶಕ್ಕೆ ಬಹಳೇ ಲಾಭವಾಗಿದೆ. ಈ ಪದ್ಧತಿಯು ಉತ್ತಮವಾದದ್ದೆಂದು ಹೇಳುವ ಅವಶ್ಯವಿಲ್ಲ. ಯಾಕಂದರೆ ಒಂದು ದೇಶದ ಕೊರತೆಗಳು ಆ ದೇಶದಲ್ಲಿರುವ ನಿವಾಸಿಗಳಿಗೆ ತಿಳಿಯುವಷ್ಟು ಪರದೇಶದವರಿಗೆ ಗೊತ್ತಾಗುವದಿಲ್ಲ. ಇದಲ್ಲದೆ ಮೇಲೆ ಹೇಳಿದಂತೆ ಸಣ್ಣ ಸಣ್ಣ ಸ್ಥಾನಿಕ ಕಾರ್ಯಗಳನ್ನು ಜನರು ತಾವೇ ಮಾಡುವದರಿಂದ ಅವರಿಗೆ ಅತಿಮಹತ್ವವಾದ ಮತ್ತು ಕಠಿಣವಾದ ರಾಜ್ಯವಾಳುವ ವಿದ್ಯೆಯನ್ನು ಸಂಪಾದಿಸುವ ಉತ್ತಮವಾದ ಸಾಧನವು ದೊರಕಿದಂತಾಗುತ್ತದೆ. ಜವಾಬದಾರಿಯ ಪದವಿಯನ್ನು ಸ್ವೀಕರಿಸಿದ ಹೊರತು ರಾಜ್ಯದಾಡಳಿತದಲ್ಲೊದಗುವ ತೊಂದರೆಗಳು ಎಂದೂ ತಿಳಿಯುವದಿಲ್ಲ. ಸಾರ್ವಜನಿಕ ಹಿತಕ್ಕೋಸ್ಕರ ತಮ್ಮ ಸ್ವಾರ್ಥವನ್ನು ಹೇಗೆ ಬಿಟ್ಟುಕೊಡಬೇಕೆಂಬದನ್ನೂ,

ನಾಲ್ಕು ಜನರ ಕಾರಭಾರದ ಸಂಗಡಲಿರುವ ಲಂಚ ತಕ್ಕೊಳ್ಳುವ ಲೋಭವನ್ನು ಯಾವ ರೀತಿಯಲ್ಲಿ ನಿವಾರಿಸಬೇಕೆಂಬದನ್ನೂ ತಿಳುಕೊಳ್ಳಲಿಕ್ಕೆ ಸ್ಥಾನಿಕ ಸ್ವರಾಜ್ಯದಂಥ ಉತ್ತಮವಾದ ಉಪಾಯವು ಮತ್ತೆ ಯಾವದೂ ಇಲ್ಲ.

೩ನೇ ಪ್ರಕರಣ

ಕಥನಪರ ನಿಬಂಧಗಳು. *

(೧೬)—ಮಹಾರಾಜಾಧಿರಾಜ ೫ನೇ ಜಾರ್ಜ ಚಕ್ರವರ್ತಿಗಳು.

೧ **ಹುಟ್ಟಿದ ಸ್ಥಳ ಮತ್ತು ದಿವಸ**:—ಸ್ವರ್ಗಸ್ಥರಾದ ೭ ನೆಯ ಎಡ್ವರ್ಡ ಚಕ್ರವರ್ತಿಗಳ ಮತ್ತು ಅಲೆಗ್ಝಾಂಡ್ರಾ ಮಹಾರಾಜ್ಞಿಯವರ ಪುತ್ರರಾದ ನಮ್ಮ ಮಹಾರಾಜಾಧಿರಾಜ ೫ನೇ ಜಾರ್ಜ ಚಕ್ರವರ್ತಿಗಳು ೧೮೬೫ನೇ ಇಸವಿಯಲ್ಲಿ ಜೂನ ತಿಂಗಳ ೩ನೇ ತಾರೀಖಿನ ದಿವಸ ಇಂಗ್ಲಂಡ ದೇಶದ ರಾಜಧಾನಿಯಾದ ಲಂಡನ ಪಟ್ಟಣದಲ್ಲಿ ಹುಟ್ಟಿದರು.

೨. **ವಿದ್ಯಾಭ್ಯಾಸ ಮತ್ತು ಸ್ವಭಾವ**:—ಇವರು ಹನ್ನೆರಡು ವರ್ಷದವರಾಗುವವರೊಳಗೆ ಚಿಕ್ಕಂದಿನಲ್ಲಿ ಕಲಿಯತಕ್ಕ ಎಲ್ಲ ವಿದ್ಯೆಗಳನ್ನು ಕಲಿತರು. ಮುಂದೆ ಇವರಿಗೆ ವಿಶಿಷ್ಟಶಿಕ್ಷಣಕ್ಕಾಗಿ ಹಡಗುಪಡೆಯ ಸಂಬಂಧದ ಶಿಕ್ಷಣವನ್ನೇ ಕೊಡಬೇಕೆಂದು ಗೊತ್ತಾಗಿ, ಇವರನ್ನು "ಬ್ರಿಟಾನಿಯಾ" ಎಂಬ ಯುದ್ಧದ ಹಡಗದಲ್ಲಿ ಯುದ್ಧಶಾಸ್ತ್ರವನ್ನು ಕಲಿಯುವದಕ್ಕಾಗಿ ಇಟ್ಟರು. ಇವರು ತಾವು ರಾಜಪುತ್ರರಿದ್ದೇವೆಂಬ ಕಲ್ಪನೆಯನ್ನು ಸಹ ಮನಸ್ಸಿನಲ್ಲಿ ತಾರದೆ, ಸಾಮಾನ್ಯರಾದ ಬಡ ಮನೆತನದ ವಿದ್ಯಾರ್ಥಿಗಳಂತೆ ಸಣ್ಣ ಸಣ್ಣ ಕೆಲಸಗಳನ್ನೂ ರಾತ್ರಿಯಲ್ಲಿ ಕಾವಲುಗಾರರು ಮಾಡುವ ಕೆಲಸಗಳನ್ನೂ ಮಾಡುವದಕ್ಕೆ ಸಹ ಮುಂದಾಳುಗಳಾಗಿ ಅಲ್ಲಿಯ ಅನುಭವವನ್ನು ಚನ್ನಾಗಿ ಮಾಡಿಕೊಂಡಿರುವರು. ಅಲ್ಲಿ ಎರಡು ವರ್ಷ ಕೆಲಸಮಾಡಿದ ಬಳಿಕ ಇವರಿಗೆ ಯುದ್ಧಕ್ಕೆ ಸಂಬಂಧಿಸಿದ ಬೇರೆ ಬೇರೆ ತರದ ಜ್ಞಾನವಾಗಬೇಕೆಂದು ಮತ್ತೊಂದು ಯುದ್ಧದ ಹಡಗದಲ್ಲಿ ನೇಮಿಸಿ ಇವರನ್ನು ಸುಮಾರು ಮೂರು ವರ್ಷಗಳ ವರೆಗೆ ಪ್ರವಾಸಕ್ಕಾಗಿ ಕಳುಹಿದರು. ಈ ರೀತಿಯಲ್ಲಿ ಇವರು ಬಹುತರವಾಗಿ ಬ್ರಿಟಿಶರ ಕೈಕೆಳಗಿರುವ ಎಲ್ಲ ದೇಶಗಳನ್ನು

---

* ಟಿಪ್ಪಣಿ—೧೧ ನೇ ಘಟದಲ್ಲಿ ಹೇಳಿದಂತೆ, ಕಥನಪರನಿಬಂಧಗಳನ್ನು ಬರೆಯುವದು ಸುಲಭವಿರುವದರಿಂದ, ಅವುಗಳ ಒಂದೇ ಮಾದರಿಯನ್ನು ನಾವು ಇಲ್ಲಿ ಬರೆದು ತೋರಿಸಿರುವೆವು.

ನೋಡಿ, ಲೋಕಾನುಭವವನ್ನು ಸಂಪಾದಿಸಿ, ತಮ್ಮ ದೇಶಕ್ಕೆ ಮರಳಿ ಹೋಗಿರುವರು. ಇವರು ಪ್ರವಾಸಮಾಡುತ್ತಿದ್ದಾಗ, ಒಮ್ಮೆ ತುರ್ಕಸ್ಥಾನದ ಬಾದಶಹನು ಇವರ ಭೆಟ್ಟಿಗಾಗಿ ಇವರಿದ್ದ ಹಡಗದ ಮೇಲೆ ಬಂದನು. ಆಗ ನಮ್ಮ ಯುವರಾಜರು ಇದ್ದಲಿಯ ಹೊಗೆಯಿಂದಲೂ ಧೂಳಿಯಿಂದಲೂ ಮಾಸಿದ ಅರಿವೆಗಳನ್ನು ಮೈಯಲ್ಲಿ ತೊಟ್ಟುಕೊಂಡು, ಬೇರೆ ಕೂಲಿಯುವರಂತೆಯೇ ಉಲ್ಲಾಸದಿಂದಲೂ ಜಾಗ್ರತೆಯಿಂದಲೂ ಕೆಲಸಮಾಡುತ್ತಿದ್ದದ್ದನ್ನು ಅವನು ಕಂಡನು. ಈ ನಮ್ಮ ಯುವರಾಜರಿಗೆ ತಮ್ಮ ಉಚ್ಚಪದವಿಯ ಅಭಿಮಾನವು ಕಿಂಚಿತ್ತಾದರೂ ಇದ್ದಿದ್ದಿಲ್ಲ; ಇಷ್ಟೇ ಅಲ್ಲ. "ನಾನು ಇಲ್ಲಿಗೆ ರಾಜಪುತ್ರನಂತೆ ಬಂದಿರುವದಿಲ್ಲ; ನಾನೊಬ್ಬನು ನಿಮ್ಮಂತೆಯೇ ವಿದ್ಯೆಗಳಿಸುವದಕ್ಕೆ ಬಂದಂಥ ವಿದ್ಯಾರ್ಥಿಯು; ಆದಕಾರಣ ನೀವು 'ಪ್ರಿನ್ಸ ಜಾರ್ಜ' ಈ ಹೆಸರಿನಿಂದ ಸಹ ನನ್ನನ್ನು ಕರೆಯಬೇಡರಿ; ನೀವು ಬೇರೆಯುವರನ್ನು ಕರೆಯುವಂತೆ ನನ್ನನ್ನಾದರೂ ಏಕವಚನದಿಂದಲೇ ಕರೆಯಿರಿ" ಎಂದು ಅವರು ತಮ್ಮ ಮಿತ್ರರಿಗೆ ಹೇಳಿಕೊಂಡರು.

೩. ಪ್ರವಾಸಶಿಕ್ಷಣವು ತೀರಿದ ಬಳಿಕ ಹಡಗುಪಡೆಯ ಸಂಬಂಧದ ಹೆಚ್ಚಿನ ಶಿಕ್ಷಣವನ್ನು ಪಡೆಯಬೇಕೆಂದು ಕಾಲೇಜದಲ್ಲಿ ಕಲಿಯಹತ್ತಿದರು. ಅಲ್ಲಿ ಬೇರೆ ವಿದ್ಯಾರ್ಥಿಗಳಂತೆ ಐದು ಪರೀಕ್ಷೆಗಳನ್ನು ಕೊಟ್ಟು ಹೆಸರು ಪಡೆದಿರುವರು. ಮುಂದೆ ಇವರು ಬೇರೆಬೇರೆ ಏಳೆಂಟು ಹಡಗಗಳಲ್ಲಿ ದೊಡ್ಡದೊಡ್ಡ ಅಧಿಕಾರದ ಕೆಲಸಗಳನ್ನು ಮಾಡಿ, ಕಪ್ತಾನ, ಅಡ್‌ಮಿರಲ್ ಮುಂತಾದ ಪದವಿಗಳನ್ನು ಪಡೆದಿರುವರು. ಇವರು ಚಿಕ್ಕವರಿರುವಾಗಲೇ ಆಯರ್ಲಂಡದ ವಿಶ್ವವಿದ್ಯಾಲಯದವರು ಇವರಿಗೆ "ಎಲ್. ಎಲ್. ಡಿ." ಎಂಬ ಬಿರುದನ್ನು ಕೊಟ್ಟರು. ಇವರು ಜಮೇಕಾ, ಆಯರ್ಲಂಡ ಮುಂತಾದ ದೇಶಗಳಲ್ಲಿ ಔದ್ಯೋಗಿಕ ಪ್ರದರ್ಶನದ ಸಮಾರಂಭಗಳನ್ನು ನೆರವೇರಿಸಿರುವರು.

೪. ೧೮೯೩ನೇ ಇಸವಿಯಲ್ಲಿ ಇವರಿಗೆ ಅನುರೂಪಳಾದ **ಮೇರಿ ಆಫ್ ಟೇಕ** ಎಂಬ ರಾಜಕುಮಾರಿಯ ಕೂಡ ಇವರ ವಿವಾಹವಾಯಿತು. ಇವರಿಗೆ ಐದು ಗಂಡು ಮಕ್ಕಳೂ ಒಬ್ಬ ಹೆಣ್ಣು ಮಗಳೂ ಹೀಗೆ ಒಟ್ಟಿಗೆ ಆರುಮಂದಿ ಮಕ್ಕಳಾಗಿರುವರು.

೫. ೧೯೦೧ನೇ ಇಸವಿಯಲ್ಲಿ ಇವರು ತಮ್ಮ ತಂದೆಯ ಆಜ್ಞೆಯ ಮೇರೆಗೆ ಆಸ್ಟ್ರೇಲಿಯಾ ಮಹಾದ್ವೀಪಕ್ಕೆ ಹೋಗಿ, ಅಲ್ಲಿದ್ದ ಬೇರೆ ಬೇರೆ ರಾಜ್ಯಗಳನ್ನು

ಒಟ್ಟುಗೂಡಿಸಿ, ಒಂದೇ ರಾಜ್ಯವನ್ನು ಮಾಡಿ, ಅದಕ್ಕೆ ಪಾರ್ಲಮೆಂಟ ಸಭೆಯನ್ನೂ ಬ್ರಿಟಿಶ ಸಾಮ್ರಾಜ್ಯದ ಕೆಳಗೆ ಸ್ವಾತಂತ್ರ್ಯವನ್ನೂ ಕೊಟ್ಟರು.

೬. ೧೯೦೫ರಲ್ಲಿ ಇವರು "ಪ್ರಿನ್ಸ ಆಫ್ ವೇಲ್ಸ" ಪದವಿಯನ್ನು ಧರಿಸಿ ಈ ದೇಶಕ್ಕೆ ಬಂದು, ಇಲ್ಲಿ ನಡೆಯುತ್ತಿದ್ದ ಎಲ್ಲ ಸಂಗತಿಗಳನ್ನು ತಿಳುಕೊಂಡು, ಇಂಗ್ಲಂಡಕ್ಕೆ ಮರಳಿ ಹೋದರು. ಅಲ್ಲಿ ಹೋದ ಬಳಿಕ "ಹಿಂದುಸ್ತಾನದ ಪ್ರಜೆಗಳ ಬಗ್ಗೆ ನನ್ನ ಮತವು ಬಹಳೇ ಉತ್ತಮವಾಗಿದೆ; ಅವರು ಬಹಳೇ ಸರಳ ಮತ್ತು ಶಾಂತ ಸ್ವಭಾವದವರೂ, ಧರ್ಮನಿಷ್ಠರೂ. ರಾಜನಿಷ್ಠರೂ ಆಗಿರುವರು; ನಾವು ಅವರ ಕೂಡ ಪ್ರೀತಿಯಿಂದ ನಡೆದರೆ, ನಮ್ಮ ರಾಜ್ಯಕಾರಭಾರವು ಬಹಳೇ ಸುಲಭವಾಗಿ ಸಾಗುವದು" ಎಂದು ತಮ್ಮ ಜನರಿಗೆ ತಿಳಿಸಿರುವರು.

೭. ೧೯೧೧ನೇ ಇಸವಿಯ ದಿಶಂಬರ ತಿಂಗಳ ೧೨ನೇ ತಾರೀಖಿನ ಶುಭ ದಿವಸ ಇವರು ತಮ್ಮ ಪತ್ನಿಯರೊಡನೆ ಇಲ್ಲಿಗೆ ಬಂದು, ದಿಲ್ಲೀ ಪಟ್ಟಣದಲ್ಲಿ ಸಿಂಹಾಸನವನ್ನೇರಿ, ತಮ್ಮ ದೇಶಕ್ಕೆ ಮರಳಿ ಹೋಗಿರುವರು.

೮. **ಉಪಸಂಹಾರ**:— ಇಂಥ ನಮ್ಮ ಚಕ್ರವರ್ತಿಗಳಾದ ೫ ನೇ ಜಾರ್ಜ ಪ್ರಭುಗಳು ಈ ಭರತಖಂಡಕ್ಕೆ ಬಗೆಬಗೆಯಿಂದ ಕಲ್ಯಾಣಮಾಡುವಂತೆ ಅವರಿಗೂ ಅವರ ಪತ್ನಿಯರಾದ **ಶ್ರೀಮತಿ ಮೇರಿ** ಮಹಾರಾಜ್ಞಿಯರಿಗೂ ದೀರ್ಘಾಯುರಾರೋಗ್ಯೈಶ್ವರ್ಯಸಂತಾನಾಭ್ಯುದಯಗಳನ್ನು ಕೊಟ್ಟು ಅವರನ್ನು ಚಿರಕಾಲ ಪರಿಪಾಲಿಸಲೆಂದು ದೇವರನ್ನು ನಾವೆಲ್ಲರೂ ಪ್ರಾರ್ಥಿಸೋಣ.

---

೪ ನೇ ಪ್ರಕರಣ.

ಚಿಂತನಪರ ನಿಬಂಧಗಳು.

(೧೭) ಅತಿಪರಿಚಯು.

ಅತಿಪರಿಚಯಾದವಜ್ಞಾ ಸಂತತಗಮನಾದನಾದರೋ ಭವತಿ ।
ಮಲಯೇ ಭಿಲ್ಲಪುರಂಧ್ರೀ ಚಂದನತರುಕಾಷ್ಠಮಿಂಧನಂ ಕುರುತೇ ॥

೧. ಅತಿಪರಿಚಯವೆಂದರೆ ಮಿತಿಮೀರಿದ ಸಲಿಗೆ. ಇದರ ಪರಿಣಾಮವು ಯಾವಾಗಲೂ ಕೆಟ್ಟದಾಗುವದು. ಮೇಲೆ ಬರೆದ ಸಂಸ್ಕೃತ ಶ್ಲೋಕದಲ್ಲಿ

ಹೇಳಿದಂತೆ, ಮಲಯಪರ್ವತವಲ್ಲಿ ಚಂದನದ ಕಟ್ಟಿಗೆಯು ಬಹಳೇ ವಿಪುಲವಾಗಿ ಬೆಳೆಯುವದರಿಂದ, ಅಲ್ಲಿ ವಾಸಮಾಡುವ ಭಿಲ್ಲಸ್ತ್ರೀಯು ಅದನ್ನು ಉರವಲಕ್ಕಾಗಿ ಉಪಯೋಗಿಸುವದುಂಟು. ಅದರಂತೆಯೇ ಅತಿಪರಿಚಯದಿಂದ ಅಪಮಾನವೂ ಒಬ್ಬರ ಮನೆಗೆ ಮೇಲಿಂದಮೇಲೆ ಹೋಗುವದರಿಂದ ಅನಾದರವೂ ಉಂಟಾಗುವವು. ಈ ಸಂಸಾರದಲ್ಲಿ ಯಾವದೇ ಮಾತಾಗಲಿ ಅತಿಶಯವಾಯಿತೆಂದರೆ, ಅದು ವಿಪರೀತವಾಗಿ ಪರಿಣಮಿಸುವದು. "ಅತಿಸರ್ವತ್ರ ವರ್ಜಯೇತ್" ಎಂಬ ಸಂಸ್ಕೃತೋಕ್ತಿಯಾದರೂ ಈ ಮಾತನ್ನೇ ಸಾರಿಹೇಳುವದು.

೨. **ಹಾನಿಗಳು:**—ಇಬ್ಬರಲ್ಲಿ ಅತಿಪರಿಚಯವಾಗುವದರಿಂದ ಪರಸ್ಪರರ ಬಗ್ಗೆ ಆದರಬುದ್ಧಿಯು ಕಡಿಮೆಯಾಗುತ್ತ ಹೋಗಿ ತಿರಸ್ಕಾರ ಹುಟ್ಟುವದು. ದುರ್ಲಭವಾದ ವಸ್ತುಗಳಿಗಿಂತ ಸುಲಭವಾದ ವಸ್ತುಗಳನ್ನು ಹೀಯಾಳಿಸುವದು ಮನುಷ್ಯನ ಹುಟ್ಟುಗುಣವೇ ಸರಿ. ಅತಿಪರಿಚಯದಿಂದ ಜೀವದ ಗೆಳೆಯರು ಸಹ ಪರಸ್ಪರರ ಆದರಕ್ಕೆ ಸ್ವಲ್ಪವಾದರೂ ಎರವಾಗುತ್ತಾರೆ. ನೀರಿನ ಕೊರತೆ ಇದ್ದ ಊರಲ್ಲಿ ಜನರು ನೀರನ್ನು ಮಿತಿಯಾಗಿ ಖರ್ಚು ಮಾಡುವರು. ಆದರೆ ನೀರು ವಿಪುಲವಾಗಿದ್ದಲ್ಲಿ ಅದನ್ನು ಕಾರಣವಿಲ್ಲದೆ ಬಳಸುವರು. ಇದು ಎಲ್ಲರಿಗೂ ಗೊತ್ತಿದ್ದ ಮಾತು. ಹಾಗೆಯೇ ಹವೆಯಿಲ್ಲದಿದ್ದರೆ ನಾವು ಅರಗಳಿಗೆ ಸಹ ಬದುಕಲಾರೆವು. ಆದರೂ ಅದರ ಬಗ್ಗೆ ಯಾರಿಗಾದರೂ ಆದರವೆನಿಸುತ್ತದೋ! ಎಂದೂ ಇಲ್ಲ. ಯಾಕಂದರೆ ಅದು ನಮಗೆ ವಿಪುಲವಾಗಿ ದೊರೆಯುತ್ತಲಿದೆ. ಅದರಂತೆಯೇ ವಿಶಿಷ್ಟ ಪ್ರಸಂಗದಲ್ಲಿಯೇ ನಮ್ಮ ಬಳಿಗೆ ಬರುವ ಜನರ ಬಗ್ಗೆ ಆದರವೂ, ನಿಷ್ಕಾರಣವಾಗಿ ಮೇಲಿಂದಮೇಲೆ ಬರುವ ಜನರ ಬಗ್ಗೆ ತಿರಸ್ಕಾರವೂ ಹುಟ್ಟುವವು.

ಇಬ್ಬರಲ್ಲಿ ಅತಿಪರಿಚಯವಾಗುವದರಿಂದ ಶಿಷ್ಟಾಚಾರವು ಮೆಲ್ಲಮೆಲ್ಲನೆ ಲೋಪವಾಗಿ, ಅವರು ಒಬ್ಬರೊಬ್ಬರ ಕೂಡ ಹೆಚ್ಚು ಸಲಿಗೆಯಿಂದ ನಡೆಯಹತ್ತುತ್ತಾರೆ. ಅದರಿಂದ ಅವರಲ್ಲಿದ್ದ ದೋಷಗಳು ಬಹಿರಂಗವಾಗಿ ಒಬ್ಬರಿಗೊಬ್ಬರು ಸೇರದಂತಾಗುತ್ತಾರೆ.

ಇಬ್ಬರಲ್ಲಿದ್ದ ಪರಿಚಯವು ಮಿತವಾಗಿದ್ದಂತೆ, ಅವರು ಒಬ್ಬರೊಬ್ಬರ ಕೂಡ ಮಾಡುವ ವಿನೋದವಾದರೂ ಮಿತಿಯುಳ್ಳದ್ದಿರುವದು. ಆದರೆ ಪರಿಚಯವು ಹೆಚ್ಚಾಗುತ್ತ ಹೋದಂತೆ ಅವರಲ್ಲಿ ಹಾಸ್ಯಮಾಡುವ ಪ್ರವೃತ್ತಿಯುಂಟಾಗುವದು.

ಬರಬರುತ್ತ ಅವರಲ್ಲಿ ನಗೆ ಹೋಗಿ ಹೊಗೆಯಾಗಿ, ಸ್ನೇಹಭಂಗವಾಗುವದು.

ಇಬ್ಬರಲ್ಲಿ ಅತಿಪರಿಚಯವಾಯಿತೆಂದರೆ, ಅವರು ಪರಸ್ಪರರಿಗೆ ತಮ್ಮತಮ್ಮ ಕೆಲಸಗಳನ್ನು ಹೇಳುವರು. ಹಣಕ್ಕೋಸ್ಕರವಾಗಲಿ ಬೇರೆ ಕೆಲಸಕ್ಕಾಗಲಿ ಸಹಾಯ ಬೇಡುವರು. ಒಬ್ಬರೊಬ್ಬರಿಗೆ ಸಹಾಯಮಾಡುವದು ನಮ್ಮ ಧರ್ಮವು. ಹೀಗಿದ್ದರೂ ಯಾವನೊಬ್ಬನು ಎರಡನೆಯವನಿಗೆ ಮೇಲಿಂದಮೇಲೆ ಸಹಾಯ ಬೇಡಹೋದರೆ, ಎರಡನೆಯವನು ಬೇಸರಗೊಳ್ಳುವದು ಸ್ವಾಭಾವಿಕವು. ಇದಲ್ಲದೆ ಕೆಲವರು ಎಷ್ಟೋ ಪ್ರಸಂಗಗಳಲ್ಲಿ ಅನುಚಿತ ಕಾರ್ಯಕ್ಕೆ ಸಹ ಸಹಾಯ ಬೇಡುವದುಂಟು. ಇಂಥವರಿಗೆ ಸಹಾಯ ಮಾಡುವದು ಕೇವಲ ನೀತಿಗೆಟ್ಟ ಮಾತೇ ಸರಿ. ಆದಕಾರಣ ಇಂಥ ಪ್ರಸಂಗಗಳಲ್ಲಿ ಸಹಾಯಮಾಡಿದರೆ, ಸಹಾಯ ಮಾಡುವವನ ಮನಸ್ಸು ಕಲುಷಿತವಾಗುತ್ತದೆ. ಸಹಾಯ ಮಾಡದಿದ್ದರೆ ಸಹಾಯ ಬೇಡಬಂದವನು ಕೋಪಗೊಳ್ಳುವನು. ಸಾರಾಂಶವೇನೆಂದರೆ, ಸಹಾಯಮಾಡಿದರೂ ಮಾಡದಿದ್ದರೂ, ಇಬ್ಬರಲ್ಲೊಬ್ಬನು ಸಿಟ್ಟಿಗೆದ್ದು ಸ್ನೇಹಭಂಗವಾಗುವದು.

ಅತಿಪರಿಚಯದಿಂದ ಹಾನಿಯುಂಟೆಂದು ಮೇಲೆ ಹೇಳಿರುತ್ತದಷ್ಟೇ. ಆದರೆ ಈ ನಿಯಮವು ಕೇವಲ ಸಾಮಾನ್ಯರಾದ ಜನರ ವಿಷಯವಾಗಿಯೇ ಇರುವದು. ಲೋಕೋತ್ತರರಾದ ಇಬ್ಬರಲ್ಲಿ, ಇಲ್ಲವೆ ಒಬ್ಬನು ಲೋಕೋತ್ತರನೂ ಮತ್ತೊಬ್ಬನು ಸಾಮಾನ್ಯನೂ ಆದಂಥವರಲ್ಲಿ ಉಂಟಾದ ಪರಿಚಯದಿಂದ ಹಾನಿಯಾಗದೆ ಲಾಭವೇ ಆಗುವದು. ಉದಾಹರಣಾರ್ಥ, ಶ್ರೀಕೃಷ್ಣಾರ್ಜುನರಲ್ಲಿಯೂ, ಶ್ರೀರಾಮಚಂದ್ರ ಹನುಮಂತರಲ್ಲಿಯೂ ಹುಟ್ಟಿದ ಸ್ನೇಹವು ವಿಪರೀತವಾಗಿ ಪರಿಣಮಿಸಿತೇ ?

೩. **ಉಪಸಂಹಾರ:**— ಯಾರ ಸಂಗಡವಾದರೂ ಸ್ನೇಹಮಾಡುವದಿದ್ದಲ್ಲಿ ಚನ್ನಾಗಿ ವಿಚಾರಿಸಿ ಮಾಡತಕ್ಕದ್ದು.

---

(೧೮) ಆತ್ಮಸಂಯಮನ.

ಇಂದ್ರಿಯಾಣಾಂ ಪ್ರಸಂಗೇನ ದೋಷಮೃಚ್ಛತಿ ಮಾನವಃ ।
ಸನ್ನಿಯಮ್ಯ ತು ತಾನ್ಯೇವ ಸಿದ್ಧಿಂ ಸಮಧಿಗಚ್ಛತಿ ॥

೧. ಆತ್ಮಸಂಯಮನವೆಂದರೆ, ಇಂದ್ರಿಯಗಳನ್ನು ಸ್ವಾಧೀನದಲ್ಲಿಡುವದು; ಅಂದರೆ ಮನಸ್ಸು ಹೇಳಿದಂತೆ ಕುಣಿಯದೆ, ಅವನ್ನು ಅಂಕೆಯೊಳಗಿಟ್ಟು,

ಯೋಗ್ಯಾ ಯೋಗ್ಯ ಸಂಗತಿಗಳನ್ನು ವಿಚಾರಿಸುವದು. ಸಂಸ್ಕೃತದಲ್ಲಿ ಇದಕ್ಕೆ ಇಂದ್ರಿಯ ನಿಗ್ರಹ, ಇಂದ್ರಿಯಸಂಯಮನ ಮುಂತಾದ ಬೇರೆಬೇರೆ ಹೆಸರುಗಳುಂಟು. ಅದು ಒಂದು ಬಗೆಯ ನೈತಿಕ ಧೈರ್ಯವಿದ್ದು, ಸದ್ವರ್ತನದ ಮೂಲಸ್ಥಾನವಾಗಿರುವದು. ಮನುಷ್ಯನಲ್ಲಿ ಈ ಗುಣವಿರುವದರಿಂದಲೇ ಅವನಿಗೂ ಪಶುಪಕ್ಷ್ಯಾದಿಗಳಿಗೂ ಇರುವ ಭೇದವು ವ್ಯಕ್ತವಾಗುತ್ತದೆ. ರಥಕ್ಕೆ ಹೂಡಿದ ಕುದುರೆಗಳ ಕಡಿವಾಣವು ಕೈಯೊಳಗಿದ್ದರೆ, ಸಾರಥಿಯು ವಿವಕ್ಷಿತ ಸ್ಥಳಕ್ಕೆ ತೀವ್ರವಾಗಿಯೂ ಸುರಕ್ಷಿತವಾಗಿಯೂ ಮುಟ್ಟುವನು. ಆದರೆ ಆ ಕಡಿವಾಣವನ್ನು ಬಿಟ್ಟುಗೊಟ್ಟರೆ, ಅವನು ಇಚ್ಛಿತಸ್ಥಳಕ್ಕೆ ಶೀಘ್ರವಾಗಿ ಹೋಗಿ ಮುಟ್ಟುವದಿಲ್ಲೆಂಬದು ಒತ್ತಟ್ಟಿಗಿರಲಿ, ಯಾವಾಗ ತಗ್ಗುದಿನ್ನೆಗಳಲ್ಲಿ ಬಿದ್ದು ರಥದ ಕೂಡ ನಾಶ ಹೊಂದುವನೆಂಬದು ತಿಳಿಯುವದಿಲ್ಲ. ನರದೇಹಕ್ಕೆ ರಥದ ಸಾಮ್ಯವನ್ನು ಕೊಡಬಹುದು. ಮನುಷ್ಯನ ಶರೀರವೆಂಬದೊಂದು ರಥವು, ಮನಸ್ಸು ಸಾರಥಿಯು, ಮತ್ತು ಇಂದ್ರಿಯಗಳೇ ಕುದುರೆಗಳು. ಕುದುರೆಗಳು ಅಂಕೆಯೊಳಗಿದ್ದರೆ, ಚತುರನಾದ ಸಾರಥಿಯು ಅನಾಯಾಸವಾಗಿ ಮಾರ್ಗಕ್ರಮಣ ಮಾಡುವಂತೆ, ಆತ್ಮಸಂಯಮಿಯಾದ ಮನುಷ್ಯನು ಸಂಸಾರವೆಂಬ ಮಾರ್ಗವನ್ನು ಆಯಾಸವಿಲ್ಲದೆ ಕ್ರಮಿಸುವನು. ಆದರೆ ಇಂದ್ರಿಯಗಳು ನಿರ್ಬಂಧರಹಿತವಾದ ಕೂಡಲೆ, ಅವನ ಚಿತ್ತಸ್ವಾತಂತ್ರ್ಯವು ಇಲ್ಲದಂತಾಗಿ, ಅವನು ನಾಶ ಹೊಂದುವನು.

ಮನುಷ್ಯನು ಪಶುಪಕ್ಷ್ಯಾದಿ ಜೀವರಾಶಿಗಳಿಗಿಂತ ಹೆಚ್ಚಿನವನಾಗಬೇಕಾದರೆ, ತನ್ನ ಮನಸ್ಸು ಹೇಳಿದಂತೆ ಕುಣಿಯದೆ, ಅದನ್ನು ತನ್ನ ಅಂಕೆಯೊಳಗಿಡಬೇಕು. ಈ ಇಚ್ಛೆಯು ಆತ್ಮಸಂಯಮನದಿಂದ ಸಾಧ್ಯವಾಗುವದು. ಯೋಗ್ಯಾಯೋಗ್ಯ ಸಂಗತಿಗಳ ಬಗ್ಗೆ ವಿಚಾರ ಮಾಡತಕ್ಕದ್ದು. ಅಯೋಗ್ಯವಿದ್ದದ್ದು ಸೇರುತ್ತಿದ್ದರೂ, ಇಂದ್ರಿಯನಿಗ್ರಹದ ಸಹಾಯದಿಂದ ಅದನ್ನು ಬಿಟ್ಟುಗೊಡತಕ್ಕದ್ದು. ಹಾಗೆಯೇ ಯೋಗ್ಯವಿದ್ದದ್ದು ಸೇರದಿದ್ದರೂ, ಅದನ್ನು ಗ್ರಹಿಸತಕ್ಕದ್ದು. ರಣದಲ್ಲಿ ಪರಾಕ್ರಮದಿಂದ ಶತ್ರುಗಳನ್ನು ಜಯಿಸುವ ವೀರನಿಗಿಂತಲೂ ಮನಸ್ಸನ್ನು ಅಂಕೆಯಲ್ಲಿಟ್ಟುಕೊಂಡ ವೀರನು ಹೆಚ್ಚಿನ ಯೋಗ್ಯತೆಯುಳ್ಳವನು. ಅವನಿಗೆ ಮನೋನಿಗ್ರಹದ ಅಭ್ಯಾಸವಿರುವದರಿಂದ, ಅವನ ವಿಚಾರಗಳೂ, ನಾಲಿಗೆಯೂ, ಕೃತ್ಯಗಳೂ ಪೂರ್ಣವಾಗಿ ಅವನ ಸ್ವಾಧೀನದಲ್ಲಿರುವವು. ಮನುಷ್ಯನಲ್ಲಿ ಸುಶಿ

ಕ್ಷಣ, ಸ್ವಾಭಿಮಾನ, ಆತ್ಮಸಂಯಮನ ಮುಂತಾದ ಗುಣಗಳು ಹೆಚ್ಚೆಚ್ಚು ಜಾಗೃತವಿದ್ದಂತೆ, ಅವನ ದುರ್ವ್ಯಸನ-ದುಷ್ಕರ್ಮಾದಿಗಳು ಅಡಗಹತ್ತುತ್ತವೆ. ಆತ್ಮಸಂಯಮನಾಭಾವವೇ ಎಷ್ಟೋ ದುಷ್ಕೃತ್ಯಗಳಿಗೆ ಕಾರಣವಾಗಿರುವದು.

೨. **ದೊರಕಿಸುವ ಉಪಾಯವು:—** ಸುಶಿಕ್ಷಣದಿಂದಲೇ ಈ ಗುಣವು ಹುಟ್ಟುವದು. ಸುಶಿಕ್ಷಣದಿಂದ ಕಾಡುಮನುಷ್ಯನು ಸಹ ಕೆಲಮಟ್ಟಿಗಾದರೂ ಸುಧಾರಿಸಿ, ಅವನಲ್ಲಿ ಧೈರ್ಯ, ತಾಳ್ಮೆ, ಸ್ವಾರ್ಥತ್ಯಾಗ ಮುಂತಾದ ಸುದ್ಗುಣಗಳು ಹುಟ್ಟುವವು. ಸುಶಿಕ್ಷಣವಿಲ್ಲದಿದ್ದರೆ, ಹುಡುಗರು ಕೆಡುವರು. ಹುಡುಗರು ಚಿಕ್ಕವರಿರುವಾಗಲೇ ಮನಸ್ಸನ್ನು ಬಿಗಿಹಿಡಿಯುವ ಅಭ್ಯಾಸವನ್ನು ಮಾಡತಕ್ಕದ್ದು. ಅವರು ಶಾಲೆಗೆ ಹೋಗಹತ್ತಿದರೆಂದರೆ, ಗುರುಗಳು ಅವರಿಗೆ ಆತ್ಮಸಂಯಮನದ ಮಹತ್ವವನ್ನು ಚನ್ನಾಗಿ ಬೋಧಿಸತಕ್ಕದ್ದು. ಅವರಿಗೆ ನೈತಿಕ ಶಿಕ್ಷಣದ ಮೂಲತತ್ವಗಳನ್ನು ಕಲಿಸಬೇಕಾದರೆ, ಅವರನ್ನು ಹೊಡೆಯಲೇಬೇಕೆಂಬ ನಿಯಮವೇನೂ ಇಲ್ಲ. ಅವರ ಮುಂದೆ ನಾವು ಸದಾಚಾರದಿಂದ ನಡೆದರೆ, ಸದ್ವರ್ತನವು ತಾನಾಗಿಯೇ ಅವರ ಮನಸ್ಸಿನಲ್ಲಿ ಅಂಕುರಿಸುವದು.

ಮನಸ್ಸನ್ನು ಬಿಗಿಹಿಡಿಯುವದು ಇಲ್ಲವೆ ಉಚ್ಛೃಂಖಲವಾಗಿ ಮಾಡುವದು ಕೆಲಮಟ್ಟಿಗೆ ಶರೀರಪ್ರಕೃತಿಯನ್ನೂ, ಮನಸ್ಸಿನ ಸ್ವಾಸ್ಥ್ಯವನ್ನೂ, ಎಷ್ಟೋ ಅಂಶಗಳಲ್ಲಿ ಗೃಹಶಿಕ್ಷಣ, ಬಾಲ್ಯಾಭ್ಯಾಸ, ಅನುಕರಣ ಮುಂತಾದವುಗಳನ್ನೂ ಅವಲಂಬಿಸಿರುತ್ತದೆ. ಹೀಗಿದ್ದರೂ ದೀರ್ಘಪ್ರಯತ್ನದಿಂದ ಮನಸ್ಸನ್ನು ಅಂಕೆಯಲ್ಲಿಟ್ಟುಕೊಳ್ಳುವದು ವಸ್ತುತಃ ಮನುಷ್ಯನ ಕೈಯೊಳಗೇ ಇರುತ್ತದೆ. ಅಭ್ಯಾಸದಿಂದ ತಾಳ್ಮೆಯೂ ತೃಪ್ತಿಯೂ ಸಾಧ್ಯವಾಗುವವು. ಅದರಂತೆಯೇ ಯಾವಾಗಲೂ ಗುಣಗುಟ್ಟೋಣವೂ ಅಸಮಾಧಾನವೂ ಸಹ ಅದರಿಂದಲೇ ಹುಟ್ಟುವವು. ಅಭ್ಯಾಸದಿಂದ ಸಣ್ಣಪುಟ್ಟ ದುಃಖಗಳನ್ನು ಅತಿಶಯೋಕ್ತಿಯಾಗಿ ಹೇಳಬಹುದು. ಹಾಗು ದೊಡ್ಡ ದೊಡ್ಡ ಲಾಭಗಳನ್ನು ತೃಣಕ್ಕೆ ಸರಿಮಾಡಿ ತುಚ್ಛ ಮಾಡಬಹುದು. ಆದ್ದರಿಂದ ಯಾವ ಸ್ಥಿತಿಯಲ್ಲಿದ್ದರೂ, ಕರ್ತವ್ಯವನ್ನು ಮಾಡಿ, ಮನಸ್ಸನ್ನು ಬಿಗಿಹಿಡಿದು, ಸಂತೋಷದಿಂದ ಇರುವದೇ ಶ್ರೇಯಸ್ಕರವು.

೩. **ಪಾರಮಾರ್ಥಿಕ ಲಾಭವು:—** ಜಿತೇಂದ್ರಿಯತ್ವದ ಹೊರತು ಸಾಧುತ್ವವು ಎಂದೂ ಸಾಧ್ಯವಾಗಲಾರದು. ಜಗತ್ತಿನಲ್ಲಿ ಇದುವರೆಗೆ ಆಗಿ ಹೋದ ಸಾಧು ಸಂತ ಮೊದಲಾದವರು ಒಳ್ಳೇ ಇಂದ್ರಿಯನಿಗ್ರಹಿಗಳಾಗಿದ್ದರು.

ಅವರು ಸುಖದುಃಖಗಳನ್ನು ಲೆಕ್ಕಿಸದೆ ನಿಶ್ಚಲಮನಸ್ಸಿನಿಂದ ಎಷ್ಟೋ ವರ್ಷಗಳ ವರೆಗೆ ಜಗನ್ನಿಯಾಮಕನನ್ನು ಸ್ತುತಿಸಿದ್ದರಿಂದಲೇ ಸಾಯುಜ್ಯಪದವಿಯನ್ನು ಪಡೆದರು. ನಮ್ಮ ಭರತಖಂಡದಲ್ಲಿ ತಪೋನಿಧಿಗಳಾದಷ್ಟು ಬೇರೆ ಯಾವ ದೇಶದಲ್ಲಿಯೂ ಆಗಿಲ್ಲ. **ಶುಕ** ಮೊದಲಾದ ಋಷಿವರ್ಯರು ಸಂಸಾರ ಸುಖಗಳನ್ನು ಕಾಲಿಂದೊದ್ದು, ಎಷ್ಟೋ ವರ್ಷಗಳ ವರೆಗೆ ತಪಶ್ಚರ್ಯವನ್ನಾಚರಿಸಿದರು. ಅವರ ತಪಸ್ಸನ್ನು ಭಂಗಮಾಡುವದಕ್ಕಾಗಿ ಇಂದ್ರಾದಿ ದಿಕ್ಪಾಲಕರು ರಂಭಾದಿ ಸುರಾಂಗನೆಯರನ್ನು ಕಳುಹಿದಾಗ್ಯೂ, ಆ ಋಷಿವರ್ಯರು ಅವರ ಶೃಂಗಾರ ಚೇಷ್ಟೆಗಳಿಗೆ ಒಳಗಾಗಲಿಲ್ಲ. ಇದಂತೂ ಕೃತ, ತ್ರೇತ, ದ್ವಾಪರಯುಗಗಳ ಮಾತಾಯಿತು. ಕಲಿಯುಗದಲ್ಲಾದರೂ ಇಂಥ ತಪೋನಿಧಿಗಳು ಕಡಿಮೆಯಾಗಿಲ್ಲ. ಪ್ರಿಯಪತ್ನಿಯು ಗಂಡುಶಿಶುವನ್ನು ಹೆತ್ತಿರಲು, ಪುತ್ರವ್ಯಾಮೋಹಕ್ಕೆ ಸಿಲುಕದೆ, ರಾಜಪುತ್ರನಾದ **ಗೌತಮನು** ತನ್ನ ಅರಮನೆಯನ್ನು ಬಿಟ್ಟು ಹೋಗಲಿಲ್ಲವೇ! ಯೋಗಸಾಧನಕ್ಕೆ ಆತ್ಮಸಂಯಮನವೇ ಮುಖ್ಯ ಕಾರಣವಾಗಿರುತ್ತದೆಂದು **ಭಗವದ್ಗೀತೆಯು** ಹೇಳುತ್ತದೆ-

೪. **ಪ್ರಾಪಂಚಿಕ ಲಾಭಗಳು:** - ಆತ್ಮಸಂಯಮನವು ಕೇವಲ ಪರಲೋಕಸಾಧನಕ್ಕಾಗಿಯೇ ಉಪಯುಕ್ತವಾದದ್ದೆಂದು ತಿಳಿಯಲಾಗದು. ಐಹಿಕ ಸುಖಕ್ಕೂ ಅದರ ಅವಶ್ಯಕತೆಯುಂಟು. ದುಷ್ಕರ್ಮಗಳನ್ನು ಆಚರಿಸಬಾರದೆಂತಲೂ ಕೆಟ್ಟ ಮಾತುಗಳನ್ನು ಆಡಬಾರದೆಂತಲೂ ಅಪೇಕ್ಷೆಯುಳ್ಳವರು ಅವಶ್ಯವಾಗಿ ಇಂದ್ರಿಯನಿಗ್ರಹಿಗಳಾಗಿರಬೇಕು. ಲೋಹಬಾಣಗಳಿಗಿಂತ ವಾಗ್ಬಾಣಗಳೇ ಹೆಚ್ಚು ತೀಕ್ಷ್ಣ ಮತ್ತು ಕಠಿಣವಾದವು. ಶಸ್ತ್ರದಿಂದುಂಟಾಗುವ ವ್ರಣವು ಯಾವದಾದರೊಂದು ಉಪಾಯದಿಂದ ಮಾಯಬಹುದು. ಆದರೆ ಮರ್ಮಭೇದಿಸುವ ನುಡಿಗಳಿಂದುಂಟಾಗುವ ನೋವು ಯಾವ ಉಪಾಯಗಳಿಂದಲೂ ಹೋಗಲಾರದು. ಅಂಥ ನುಡಿಗಳು ಕಡೆತನಕ ಮನಸ್ಸಿನಲ್ಲಿ ಉಳಿಯುವವು. ನಾಲಿಗೆಯು ಸ್ವಾಧೀನದಲ್ಲಿದ್ದರೆ, ಜಗತ್ತಿನ ಎಲ್ಲ ವ್ಯಾಜ್ಯಗಳೂ ದ್ವೇಷಗಳೂ ಕಡಿಮೆಯಾಗಬಹುದು. ಲೋಕಪ್ರೀತಿಗೆ ಸವಿನುಡಿಗಳೇ ಮುಖ್ಯ ಸಾಧನಗಳು. ಈ ಸಾಧನಗಳು ಎಲ್ಲರಿಗೂ ಸಾಧ್ಯವಿರುವದಿಲ್ಲೆಂಬದು ನಿಜವು. ಆದರೂ ಮಿತಭಾಷಣವು ಎಲ್ಲರ ಕೈಯಲ್ಲಿಯೂ ಉಂಟು. ಮನುಷ್ಯನ ಆಚರಣೆಯು ಅವನ ಮಾತಿನಿಂದಲೇ ತಿಳಿಯುತ್ತದೆ. ನಾಲಿಗೆಯನ್ನು ಬಿಗಿಹಿಡಿಯುವದಾಗದಮೂಲಕ ಎಷ್ಟೋ

ವಿಚಾರಸಮೂಢರಾದ ರಾಜ್ಯಕಾರ್ಯಧುರಂಧರರು ದೇಶದೇಶಗಳ ನಡುವೆ ವೈಮನಸ್ಯವನ್ನು ಹುಟ್ಟಿಸಿ, ಯುದ್ಧದ ಪ್ರಸಂಗವನ್ನು ಸಹ ತರುವರು. ಆದ್ದರಿಂದ ಮಾತಾಡುವದರಲ್ಲಿಯೂ ದುಷ್ಕರ್ಮಗಳನ್ನು ಮಾಡದಿರುವದರಲ್ಲಿಯೂ ಮನೋನಿಗ್ರಹವು ಅವಶ್ಯವಾಗಿ ಬೇಕು.

೫. **ಉಪಸಂಹಾರ**:–ಮನಸ್ಸನ್ನು ಸ್ವಾಧೀನವಲ್ಲಿಟ್ಟುಕೊಂಡು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಇರುವ ಜನರ ಸಂಸಾರವು ಬಹಳ ದಿವಸಗಳ ವರೆಗೆ ಬಾಳುವದು. ಆದ್ದರಿಂದ ಪ್ರತಿಯೊಬ್ಬನು ಆತ್ಮಸಂಯಮಿಯಾಗುವದಕ್ಕೆ ಯತ್ನಿಸತಕ್ಕದ್ದು.

---

(೧೯) ಆನಂದವೃತ್ತಿ.

೧. **ಅರ್ಥ**:—ಆನಂದವೆಂದರೆ ಸಂತೋಷವು; ವೃತ್ತಿಯೆಂದರೆ ಇರುವಿಕೆಯು. ಆನಂದವೃತ್ತಿಯೆಂದರೆ, ಸಂತೋಷದಿಂದ ಇರುವದು; ಅಂದರೆ ನಮ್ಮ ದೈವದಿಂದೊದಗಿದ ಸ್ಥಿತಿಯು ಸುಧಾರಿಸುವಂತಿರದಿದ್ದ ಪಕ್ಷದಲ್ಲೂ ಅದರಲ್ಲಿಯೇ ಸಮಾಧಾನದಿಂದಲೂ ಸುಖದಿಂದಲೂ ಇರುವದಕ್ಕೆ ಆನಂದವೃತ್ತಿಯೆಂದೆನ್ನುವರು.

೨. **ಸ್ಥಿರಗೊಳಿಸುವ ಉಪಾಯವು**—ಕೆಲವರು ಯಾವಾಗಲೂ ಮನಸ್ಸಿಗೆ ಸೊಗಸಿಲ್ಲೆಂತಲೂ, ಪ್ರಕೃತಿಯು ಚನ್ನಾಗಿಲ್ಲೆಂತಲೂ, ಗೆಳೆಯರ ಕೂಡ ಹೊತ್ತುಗಳೆಯುವದರಲ್ಲಿಯೂ ತಿರುಗಾಡಲಿಕ್ಕೆ ಹೋಗುವದರಲ್ಲಿಯೂ ತನಗೆ ಒಳಿತೆನಿಸುವದಿಲ್ಲೆಂತಲೂ ದೂರು ಹೇಳಿಕೊಳ್ಳುವದುಂಟು. ಮನಸ್ಸಿನ ದುಗುಡದ ಕಾರಣವನ್ನು ಕೇಳಿದರೆ, ತಾವು ಅರಿಯೆವೆಂದೆನ್ನುವರು; ಮತ್ತು ತಮ್ಮ ಗೆಳೆಯರಿಗೆ ಸಂಬಂಧವಿಲ್ಲದ ತಮ್ಮ ಚಿಂತೆಯನ್ನೂ ವ್ಯಥೆಯನ್ನೂ ಅವರ ಮುಂದೆ ಉಸುರಿ, ಅವರನ್ನು ವ್ಯರ್ಥವಾಗಿ ಅಸಮಾಧಾನ ಪಡಿಸುವರು. ಹೀಗೆ ಮಾಡುವದು ಯೋಗ್ಯವಲ್ಲ. ಆನಂದವಿಲ್ಲದ ಆಯುಷ್ಯವು ಇದ್ದರೇನು ಫಲ? ಆದಕಾರಣ ಆನಂದವೃತ್ತಿಯು ಸ್ಥಿರವಾಗುವಂತೆ ನಾವು ಆಚರಿಸತಕ್ಕದ್ದು. ಇದಕ್ಕಾಗಿ ನಾವು ಯಾವಾಗಲೂ ಕರ್ತವ್ಯಜಾಗೃತರಾಗಿರಬೇಕು. ಅಂದರೆ ನಮಗೆ ತಕ್ಕಂಥ ಉದ್ಯೋಗವನ್ನೂ ವ್ಯಾಯಾಮವನ್ನೂ ಮಾಡಬೇಕು. ಮನಸ್ಸಿಗೆ ವಿಶ್ರಾಂತಿ

ಯನ್ನು ಕೊಡುವದು ಎರಡನೇ ಉಪಾಯವು. ಇವೆರಡೂ ಉದ್ದೇಶಗಳು ಸಾಧ್ಯವಾಗದ ಕಾರ್ಯಗಳನ್ನೆಂದೂ ಮಾಡಬಾರದು.

೩. **ಶರೀರದ ಮೇಲೆ ಆಗುವ ಪರಿಣಾಮ :—** ಆರೋಗ್ಯದಿಂದ ಆನಂದವೃತ್ತಿಯು ಹುಟ್ಟುತ್ತದೆ. ಆದರೂ ಆನಂದವೃತ್ತಿಯು ಕೆಟ್ಟಂಥ ಆರೋಗ್ಯವನ್ನು ಸುಧಾರಿಸಲಿಕ್ಕೆ ತಕ್ಕಮಟ್ಟಿಗೆ ಸಹಾಯವಾಗುತ್ತದೆ. ಈ ಕಾರಣ ಆನಂದವೃತ್ತಿಯೂ ಆರೋಗ್ಯವೂ ಒಂದಕ್ಕೊಂದು ನಿಕಟವಾಗಿ ಸಂಬಂಧಿಸಿರುವವು. ವ್ಯರ್ಥವಾಗಿ ಚಿಂತೆಮಾಡುವದರಿಂದ ಶರೀರದ ಅತಿಸೂಕ್ಷ್ಮವಾಗಿರುವ ಮುಖ್ಯವಾದ ಪ್ರಾಣಸ್ಥಾನಗಳು ಕೆಟ್ಟುಹೋಗಿ, ಶರೀರಸ್ವಾಸ್ಥ್ಯವು ಇಲ್ಲದಂತಾಗಿ, ಶರೀರದಲ್ಲಿ ಅನೇಕ ರೋಗಗಳು ಹುಟ್ಟುವವು. ಆದರೆ ಆನಂದವೃತ್ತಿಯಿಂದ ಶರೀರವು ನಿರೋಗಿಯಾಗಿ, ಆಯುಷ್ಯದ ಮರ್ಯಾದೆಯು ಹೆಚ್ಚಿಗೆ ಬೆಳೆಯುವದು. ಇದಕ್ಕಾಗಿಯೇ '**ಚಿಂತೆಯೇ ಮುಪ್ಪು, ಸಂತೋಷವೇ ಯೌವನ**' ಎಂಬ ಗಾದೆಯು ರೂಢವಾಗಿರುವದು.

೪. **ಮನಸ್ಸಿನ ಮೇಲೆ ಆಗುವ ಪರಿಣಾಮ :—** ಆನಂದವೃತ್ತಿಯು ಮನಸ್ಸಿನ ವ್ಯಥೆಯನ್ನು ದೂರಮಾಡುವದು ; ಮನೋವಿಕಾರಗಳನ್ನು ಶಾಂತಗೊಳಿಸುವದು ; ಆತ್ಮವನ್ನು ಚಿರಸ್ಥಾಯಿಯಾದ ಶಾಂತತೆಯಲ್ಲಿರಿಸುವದು. ಆನಂದವೃತ್ತಿಯುಳ್ಳವನ ಮನಸ್ಸಿನ ಎಳತವು ಯಾವಾಗಲೂ ದುಃಖಕ್ಕಿಂತ ಸುಖದ ಕಡೆಗೇ ವಿಶೇಷವಾಗಿರುವದು. ನೀರನ್ನು ಬಿಟ್ಟುಗೊಟ್ಟು ಹಾಲನ್ನೇ ಸೇವಿಸುವ ಹಂಸಪಕ್ಷಿಯಂತೆ, ಅವನು ತನ್ನ ಸುತ್ತಮುತ್ತಲಿರುವ ವಸ್ತುಗಳಲ್ಲಿರುವ ದೋಷಗಳನ್ನು ಬಿಟ್ಟು ಗುಣಗಳನ್ನಷ್ಟೇ ಆರಿಸಿ, ತನ್ನನ್ನು ಸುಖಿಯಾಗಿ ಮಾಡಿಕೊಳ್ಳುವನು. ಯಾವಾಗಲೂ ಚಿಂತಾಗ್ರಸ್ತನಾದ ಕೋಟ್ಯಾಧೀಶನ ಸುಖವು, ತಿರಿದುಂಡು ನಿಶ್ಚಿಂತನಾಗಿ ಕಾಲ ಕಳೆಯುವ ಬಡ ಭಿಕ್ಷುಕನ ಸುಖವನ್ನು ಸರಿಗಟ್ಟಲಾರದು. ಆನಂದವೃತ್ತಿಯುಳ್ಳವರು ತಮ್ಮ ಸಹವಾಸದಲ್ಲಿರುವವರನ್ನು ಆನಂದಗೊಳಿಸುವರು. ಈ ವೃತ್ತಿಯಿದ್ದರೆ ಕೆಲಸಮಾಡಲಿಕ್ಕೆ ಒಳ್ಳೇ ಹುರುಪು ಬರುವದು. ಒಂದು ಉಳ್ಳೇಗಡ್ಡಿಯ ಕೂಡ ನಾಲ್ಕಾರು ರೊಟ್ಟಿಗಳನ್ನು ತಿಂದು ಸಂತುಷ್ಟನಾಗಿ, ಜ್ಯೋಣಸಾಲಿನ ಉಗ್ರವಾದ ಬಿಸಿಲಿನಲ್ಲಿ ಹೊಲದೊಳಗೆ ದುಡಿಯುವ ಒಕ್ಕಲಿಗನ ಉಲ್ಲಾಸವನ್ನು ನೋಡಿರಿ ! ಆದ್ದರಿಂದ ಈ ಅನುಪಮವಾದ ವೃತ್ತಿಯನ್ನು ಹೊಂದುವದಕ್ಕೆ ಎಲ್ಲರೂ ಆತುರಪಡತಕ್ಕದ್ದು.

ಕಾಲಕ್ಕೆ ಅನುಸರಿಸಿ ಕೆಲಸಮಾಡುವವರಿಂದಲೂ ಆರೋಗ್ಯಕ್ಕೆ ವಿಶೇಷವಾಗಿ ಲಕ್ಷಗೊಡುವವರಿಂದಲೂ ಈ ಗುಣವು ಹುಟ್ಟುತ್ತದೆ.

೫. **ಬೇರೆ ಲಾಭಗಳು**:—ಈ ಗುಣವಿದ್ದ ಮನುಷ್ಯನ ವಿಚಾರಗಳು ಸರಳವಾಗಿರುವವು. ಬುದ್ಧಿಯು ಅಧೀನವಾಗಿರುವದು. ಕಲ್ಪನಾಶಕ್ತಿಯು ನಿರ್ಮಲವಾಗಿರುವದು. ಅವನು ಉದ್ಯೋಗಿಯಾಗಿರಲಿ ಇರದೆ ಇರಲಿ, ಯಾವಾಗಲೂ ಶಾಂತಚಿತ್ತನಾಗಿರುವನು. ಸುತ್ತಮುತ್ತಲಿರುವ ಸೃಷ್ಟಿಯ ಚಮತ್ಕಾರಗಳನ್ನು ಆನಂದದಿಂದಲೂ ಆಶ್ಚರ್ಯದಿಂದಲೂ ನೋಡುವನು. ದೈವದಿಂದೊದಗಿದ ಸಂಕಟಗಳಿಗೆ ವಿಶೇಷವಾಗಿ ಲಕ್ಷಗೊಡದೆ ಸುಖಿಯಾಗಿರುವನು. ಹಾಗು ಎಲ್ಲರ ಪ್ರೀತಿಗೂ ಪಾತ್ರನಾಗುವನು.

ಇದಲ್ಲದೆ ಅವನು ಯಾವಾಗಲೂ ವಿನಯದಿಂದಲೂ ಪರೋಪಕಾರಬುದ್ಧಿಯಿಂದಲೂ ನಡಕೊಳ್ಳುವದರಿಂದ, ಅವನ ಕೂಡ ವರ್ತಿಸುವ ಗೆಳೆಯರು ಅವನ ಆನಂದವೃತ್ತಿಯನ್ನು ಕಂಡು ಸಂತೋಷಪಡುವರು. ಅವನ ಮೇಲೆ ಉಪಕಾರ ಮಾಡಲಿಕ್ಕೂ ಅವನ ಕೂಡ ಗೆಳೆತನ ಬೆಳೆಸಲಿಕ್ಕೂ ಜನರು ಆತುರಪಡುವರು.

ಆನಂದವೃತ್ತಿಗೂ ದೇವರಿಗೂ ಇರುವ ಸಂಬಂಧವನ್ನು ನೋಡಲು, ದೇವರು ಈ ಸೃಷ್ಟಿಯನ್ನು ಕೇವಲ ನಮ್ಮ ಉಪಯೋಗಕ್ಕಾಗಿಯೇ ನಿರ್ಮಿಸಿರುವದರಿಂದ ನಾವು ಆತನ ಉಪಕಾರವನ್ನು ಸ್ಮರಿಸಿ ಆತನಿಗೆ ಕೃತಜ್ಞರಾಗಿರತಕ್ಕದ್ದು. ಇಂಥ ಕೃತಜ್ಞತೆಗೆ ಆನಂದವೃತ್ತಿಯೆಂಬ ಹೆಸರು ಕೊಟ್ಟರೂ ಸಲ್ಲುವದು. ಅಂದರೆ ದೇವರು ನಮ್ಮ ಮೇಲೆ ಮಾಡಿದ ಉಪಕಾರದ ಬಗ್ಗೆ ನಾವು ಯಾವಾಗಲೂ ಆನಂದದಿಂದ ಇರತಕ್ಕದ್ದು. ಅದರಿಂದ ದೇವರು ಮೆಚ್ಚುವನು.

---

(೨೦) ಉಗೆಬಂಡಿ, ಉಗೆಹಡಗ, ತಾರಾಯಂತ್ರಗಳಿಂದಾಗುವ ಲಾಭಗಳು.

---

೧. **ಎರಡು ಸ್ಥಳಗಳ ನಡುವಿನ ಅಂತರವು ಒಂದು ಬಗೆಯಿಂದ ಕಡಿಮೆಯಾಗೋಣ**:—ಉಗೆಬಂಡಿಗಳೂ, ಉಗೆಹಡಗಗಳೂ, ತಾರಾಯಂತ್ರಗಳೂ ಬಳಕೆಯಲ್ಲಿ ಬಂದಂದಿನಿಂದ ದೇಶದೇಶಗಳ ನಡುವಿನ ಅಂತರವು ಒಂದು ಬಗೆಯಿಂದ ಕಡಿಮೆಯಾಗಿ, ಪೃಥ್ವಿಯ ಬೇರೆ ಬೇರೆ ಭಾಗ

ಗಳು ಒಂದಕ್ಕೊಂದು ಹೆಚ್ಚು ನಿಕಟವಾದ ಸಾನ್ನಿಧ್ಯವನ್ನು ಹೊಂದಿರುತ್ತವೆ. ಉಗೆಯ ಬಲವು ಹಿಂದುಸ್ತಾನಕ್ಕೂ ಇಂಗ್ಲಂಡಕ್ಕೂ ನಡುವೆ ಇರುವ ಅಂತರವನ್ನು ಹೇಗೆ ಕಡಿಮೆ ಮಾಡಿರುವದೆಂಬದನ್ನು ಸ್ವಲ್ಪ ವಿಚಾರಮಾಡಲು, ಮೇಲೆ ಹೇಳಿದ್ದು ಸ್ಪಷ್ಟವಾಗಿ ತಿಳಿಯುವದು. ಸುಮಾರು ಎಪ್ಪತ್ತು ವರ್ಷಗಳಾಚೆಗೆ ಲಂಡನ ಪಟ್ಟಣದಿಂದ ಮದ್ರಾಸ ಪಟ್ಟಣಕ್ಕೆ ಬರಬೇಕಾದರೆ ಸುಮಾರು ನಾಲ್ಕು ತಿಂಗಳು ಹತ್ತುತ್ತಿದ್ದವು. ಆದರೆ ಈಗ ಅದೇ ಪ್ರವಾಸವನ್ನು ಉಗೆಬಂಡಿ-ಉಗೆಹಡಗಗಳ ಸಹಾಯದಿಂದ ಹದಿನೇಳು ಇಲ್ಲವೆ ಹದಿನೆಂಟು ದಿವಸಗಳಲ್ಲಿ ಮಾಡಬಹುದು. ತಾರಾಯಂತ್ರಕ್ಕಂತೂ ಈ ಅಂತರವನ್ನು ದಾಟುವದಕ್ಕೆ ಎರಡು ಮೂರು ತಾಸು ಸಾಕು. ೧೮ನೇ ಶತಕದ ಕೊನೆಯ ಭಾಗದಲ್ಲಿ ಅಂದರೆ ೧೭೯೮ನೇ ಇಸವಿಯ ಆಗಷ್ಟ ತಿಂಗಳ ೧ನೇ ತಾರೀಖಿನ ಮೂರೂಸಂಜೆಯ ಸುಮಾರಕ್ಕೆ ಒದಗಿದ ಆಫ್ರಿಕಾಖಂಡದ ನೈಲನದಿಯ ಯುದ್ಧವು ಮುಂದೆ ಅಂದರೆ ಆಕ್ಟೋಬರ ತಿಂಗಳ ೨ನೇ ತಾರೀಖಿನ ವರೆಗೆ ಲಂಡನದವರಿಗೆ ಗೊತ್ತಾಗಲಿಲ್ಲ! ಆದರೆ ಈಗ ಈ ದಿನಸ ಇಜಿಪ್ತದಲ್ಲಿ ಯಾವದೊಂದು ಮಹತ್ವದ ಸಂಗತಿಯು ಒದಗಲು, ಆ ಸುದ್ದಿಯು ನಾಳೆ ಬೆಳಗಾಗುವದರೊಳಗಾಗಿಯೇ ಲಂಡನದಲ್ಲಿ ಹೊರಡುವ ವರ್ತಮಾನಪತ್ರಗಳಲ್ಲಿ ಛಾಪಿಸಲ್ಪಡುವದು ; ಇಷ್ಟೇ ಅಲ್ಲ, ಅದಕ್ಕೂ ದೂರದಲ್ಲಿರುವ ನ್ಯೂಆರ್ಕ, ಮೆಲ್‌ಬೋರ್ನ ಮುಂತಾದ ಪಟ್ಟಣಗಳ ವರ್ತಮಾನಪತ್ರಗಳಲ್ಲಿ ಸಹ ಪ್ರಕಟಿಸಲ್ಪಡುವದು.

೨. ಬೇರೆ ಬೇರೆ ಜನಾಂಗದವರು ಪರಸ್ಪರರ ಗುಣದೋಷಗಳನ್ನು ಅರಿತುಕೊಳ್ಳುವಿಕೆ :—

ಬೇರೆ ಬೇರೆ ಜನಾಂಗದವರು ಮೊದಲಿಗಿಂತ ಈಗ ಒಬ್ಬರನ್ನೊಬ್ಬರು ಹೆಚ್ಚು ಚನ್ನಾಗಿ ಅರಿತುಕೊಂಡಿರುವರು. ಪ್ರವಾಸಮಾಡುವಕ್ಕಾಗಿ ಜನರಲ್ಲಿ ಒಳ್ಳೇ ಪ್ರೋತ್ಸಾಹವು ಹುಟ್ಟಿದೆ. ಎಷ್ಟೋ ಪ್ರವಾಸಿಕರು ಹೋದ ಶತಮಾನದ ಆದಿಭಾಗದಲ್ಲಿ ಗೊತ್ತಾಗದಿದ್ದ ದೇಶಗಳ ಬಗ್ಗೆ ಓದುವವರ ಮನಸ್ಸು ದಣಿಯುವಷ್ಟು ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದಿಟ್ಟಿದ್ದಾರೆ. ಅದರಿಂದ ಬೇರೆ ಬೇರೆ ಜನಾಂಗದವರು ಪರಸ್ಪರವಾಗಿ ಹೆಚ್ಚು ಸಂಬಂಧವುಳ್ಳವರಾಗಿ, ಪರಸ್ಪರರ ಗುಣದೋಷಗಳನ್ನು ಚನ್ನಾಗಿ ಅರಿತು, ಅಜ್ಞಾನದ ಮೂಲಕ ಪರಸ್ಪರರಲ್ಲಿ ಹುಟ್ಟಿದ ದ್ವೇಷವನ್ನು ಬಿಟ್ಟು ಬಿಡುತ್ತಾರೆ.

೩. ಬೇರೆ ಬೇರೆ ದೇಶಗಳು ಪರಸ್ಪರರ ಕೊರತೆಗಳನ್ನು ಪೂರೈಸಿ ಕೊಡಬೋಣ ಮತ್ತು ಆ ದೇಶಗಳ ವ್ಯಾಪಾರ ಬೆಳೆಯೋಣ :—

ಬೇರೆ ಬೇರೆ ದೇಶಗಳ ನಡುವೆ ಆಗುವ ಈ ನಿಕಟಸಂಬಂಧವು ಮತ್ತೊಂದು ರೀತಿಯಲ್ಲಿ ಪರಿಣಮಿಸುವದು. ಅದೇನಂದರೆ, ಯಂತ್ರಗಳ ಸಹಾಯದಿಂದ ಹುಟ್ಟುವ ಪ್ರತಿಯೊಂದು ದೇಶದ ಅತ್ಯುತ್ತಮವಾದ ಹುಟ್ಟುವಳಿಗಳು ಹೆಚ್ಚು ತ್ವರೆಯಿಂದ ದೂರದೂರದ ವ್ಯಾಪಾರದ ಸ್ಥಳಗಳಿಗೆ ಒಯ್ಯಲ್ಪಟ್ಟು ಅಗ್ಗವಾಗಿ ಮಾರಲ್ಪಡುತ್ತವೆ. ಕಲಕತ್ತಾ, ಮುಂಬಯಿ, ಮದ್ರಾಸ ಮುಂತಾದ ಪಟ್ಟಣಗಳಲ್ಲಿ ಮ್ಯಾಂಚೆಸ್ಟರ ಪಟ್ಟಣದ ನೂಲಿನ ವಸ್ತ್ರಗಳೂ, ಶೆಫೀಲ್ಡ ಪಟ್ಟಣದ ಕತ್ತರಿ, ಚೂರಿ ಮುಂತಾದ ಸಾಮಾನುಗಳೂ ಇಂಗ್ಲಂಡದಲ್ಲಿ ಸಿಗುವ ಕ್ರಯಕ್ಕೆ ದೊರೆಯುವವು. ಅದರಂತೆಯೇ ಹಿಂದುಸ್ತಾನ, ರಸಿಯಾ ಮುಂತಾದ ದೇಶಗಳಲ್ಲಿ ಹುಟ್ಟುವ ಕಾಳುಕಡಿಗಳು ಇಂಗ್ಲಂಡ ಮುಂತಾದ ದೇಶಗಳಲ್ಲಿ ಅಗ್ಗವಾಗಿ ದೊರೆಯುವವು. ಈ ಪ್ರಕಾರವಾಗಿ ಪರಸ್ಪರರಿಗೆ ಲಾಭವಾಗುವಂತೆ ಒಂದು ಜನಾಂಗದವರು ಮತ್ತೊಂದು ಜನಾಂಗದವರ ಕೊರತೆಗಳನ್ನು ಪೂರೈಸಿ ಕೊಡುವರು.

ಇವಲ್ಲದೆ ವ್ಯಾಪಾರವು ಕೇವಲ ಬಂಡಿ–ಹರಗೋಲುಗಳ ಸಹಾಯದಿಂದಲೇ ಸಾಗುತ್ತಿದ್ದಾಗ, ಕಾಳು, ಹತ್ತಿ ಮುಂತಾದ ನಾನಾಟದ ಜಿನಸುಗಳು ಎಷ್ಟೋ ಸಾರೆ ಸಂತೆಯನ್ನೇ ಕಾಣುತ್ತಿದ್ದಿಲ್ಲ. ಆದರೆ ಲೋಹಮಾರ್ಗಗಳು ಆದಂದಿನಿಂದ ಈ ಸರಕುಗಳನ್ನು ಬೇಕಾದತ್ತ ಸುಲಭವಾಗಿ ಕಳುಹಬಹುದು.

೪. ದುರ್ಭಿಕ್ಷವು ದೂರಾಗೋಣ:—ಉಗಿಬಂಡಿ, ಉಗಿಹಡಗ ಮುಂತಾದ ಯಂತ್ರಗಳು ಬಳಕೆಯಲ್ಲಿ ಬಂದಂದಿನಿಂದ ದುರ್ಭಿಕ್ಷದ ಅಂಜಿಕೆಯು ಕಡಿಮೆಯಾಗಿದೆ. ಮೊದಲು ಹಿಂದುಸ್ತಾನದಲ್ಲಿ ಒಂದು ಜಿಲ್ಹೆಯ ಜನರು ಬರದಿಂದ ಗೋಳಾಡುವಾಗ, ಬೇರೆ ಸ್ಥಳದವರು ಬೇಕಾದ ಹಾಗೆ ಸುಗ್ಗೀಮಾಡಿ ತಿಂದುಂಡು ಸುಖಬಡುತ್ತಿದ್ದರು. ಆದರೆ ಈಗ ಇಂಥ ಸ್ಥಿತಿಯು ಕ್ವಚಿತ್ತಾಗಿ ಕಂಡುಬರುವದು. ಉಗಿಬಂಡಿಗಳ ಸಹಾಯದಿಂದ ಒಂದೆಡೆಯಲ್ಲಿ ವಿಪುಲವಾಗಿ ಬೆಳೆದ ಕಾಳು, ಭೂಮಿ ಬೆಳೆಯದೆ ಕಂಗೆಟ್ಟಿರುವ ಬೇರೆ ಸ್ಥಳಗಳಿಗೆ ತೀವ್ರವಾಗಿ ಒಯ್ಯಲ್ಪಡುವದು. ಅದರಿಂದ ದುರ್ಭಿಕ್ಷಪೀಡಿತರಾದ ಎಷ್ಟೋ ಜನರ ಪ್ರಾಣರಕ್ಷಣ ಮಾಡಬಹುದು.

೫. ಶತ್ರುಗಳ ಅಂಜಿಕೆಯು ಕಡಿಮೆಯಾಗೋಣ:— ರಣಭಯಗ್ರಸ್ತವಾದ ಸೀಮೆಯಲ್ಲಿ ಲೋಹಮಾರ್ಗಗಳು ಇಲ್ಲದಿದ್ದರೆ, ಶತ್ರುಗಳು ಇಂಥಾದ್ದೇ ದಿಕ್ಕಿನಲ್ಲಿ ಅಭಿಯೋಗಮಾಡುವರೆಂಬದು ಮುಂದಾಗಿಯೇ ಗೊತ್ತಾಗದ ಮೂಲಕ, ಹಾದುಹೋಗಲಿಕ್ಕೆ ಬರುವಂಥ ಯಾವತ್ತೂ ಮಾರ್ಗಗಳನ್ನು ಯಾವಾಗಲೂ ದೊಡ್ಡ ಸೈನ್ಯದಿಂದ ರಕ್ಷಿಸಬೇಕಾಗುತ್ತದೆ. ಆದರೆ ಈ ಕಣಿವೆಗಳಿಗೆ ಮುಟ್ಟುವಂತೆ ಲೋಹಮಾರ್ಗಗಳು ರಕ್ಷಕರಿಗೆ ಅನುಕೂಲವಾಗಿದ್ದರೆ, ಸೀಮೆಯ ಮಧ್ಯಭಾಗದಲ್ಲಿ ಒಂದು ದೊಡ್ಡ ಸೈನ್ಯವನ್ನು ಒಟ್ಟುಗೂಡಿಸುವದರಿಂದಲೇ ಕೆಲಸ ಸಾಗುವದು. ಯಾಕಂದರೆ ಇಂಥ ಮಧ್ಯಭಾಗದಿಂದ ಶತ್ರುಗಳಿದ್ದಲ್ಲಿಗೆ ಬೇಕಾದಾಗ ಸೈನ್ಯವನ್ನು ಕೂಡಲೆ ಒಯ್ಯಬಹುದು. ಈ ರೀತಿಯಲ್ಲಿ ಲಕ್ಷಾವಧಿ ಸೈನ್ಯದಿಂದಾಗದ ಕೆಲಸವನ್ನು ಸ್ವಲ್ಪ ಜನ ಕಾಲಾಳುಗಳೇ ಮಾಡಬಹುದು.

---

(೨೧) ಉದ್ಯೋಗ.

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀ
ರ್ದೈವಂ ಪ್ರಧಾನಮಿತಿ ಕಾಪುರುಷಾ ವದಂತಿ ।
ದೈವಂ ವಿಹಾಯ ಕುರು ಪೌರುಷಮಾತ್ಮಶಕ್ತ್ಯಾ
ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರ ದೋಷಃ ॥

—ಭರ್ತೃಹರಿ.

ಅರ್ಥ:— ಲಕ್ಷ್ಮಿಯು ಉದ್ಯೋಗಿಯಾದ ಪುರುಷಶ್ರೇಷ್ಠನನ್ನಾಶ್ರಯಿಸುವಳು. ಕುತ್ಸಿತ ಜನರು ದೈವವೇ ಮುಖ್ಯವೆಂದೆನ್ನುವರು. ದೈವವನ್ನವಲಂಬಿಸದೆ ಕೈಲಾದ ಮಟ್ಟಿಗೆ ಪ್ರಯತ್ನ ಮಾಡು. ಒಂದು ವೇಳೆ ಯತ್ನಮಾಡಿದಾಗ್ಯೂ ಕಾರ್ಯವು ನೆರವೇರದಿದ್ದರೆ, ಅದರಲ್ಲಿ ದೋಷವೇನೂ ಇಲ್ಲ.

೧. ಅವಶ್ಯಕತೆ:— ಮನುಷ್ಯನು ಯಾವ ಸ್ಥಿತಿಯಲ್ಲಿದ್ದರೂ, ಒಂದಿಲ್ಲೊಂದು ಉದ್ಯೋಗವನ್ನು ಮಾಡಲೇ ಬೇಕಾಗುವದು. ಈ ಜಗತ್ತಿನಲ್ಲಿ ಸುಖವು ದೊರೆಯಬೇಕಾದರೆ ಅನೇಕ ಸಾಧನಗಳುಂಟು. ಆದರೆ ಉದ್ಯೋಗದ ಹೊರತು ಅವುಗಳ ಆಟವೇನೂ ಸಾಗುವದಿಲ್ಲ. ಯಾವದೊಂದು ವ್ಯಕ್ತಿಯು ಇಲ್ಲವೆ ಸಮಾ

ಜದ ಸುಧಾರಣೆಗೆ ಉದ್ಯೋಗವೇ ಕಾರಣವು. ಶ್ರಮ ಮಾಡಿದ ಹೊರತು ಉದರನಿರ್ವಾಹ ಸಾಗಿಸುವ ಜನರು ಈ ಜಗತ್ತಿನಲ್ಲಿ ತೀರ ಕಡಿಮೆ. ಒಂದುವೇಳೆ ಶ್ರಮ ಮಾಡುವ ಅವಶ್ಯಕತೆಯಿಲ್ಲದಿದ್ದರೂ ಆನಂದಿಗಳಾಗಿಯೂ, ನಿರೋಗಿಗಳಾಗಿಯೂ, ಸುಖಿಗಳಾಗಿಯೂ ಇರಬೇಕೆಂಬ ಅಪೇಕ್ಷೆಯುಳ್ಳವರು ಒಂದಿಲ್ಲೊಂದು ಉದ್ಯೋಗವನ್ನು ಮಾಡಲೇ ಬೇಕು. ಇದಲ್ಲದೆ ಉದ್ಯೋಗವು ಬುದ್ಧಿಗಿಂತ ಶ್ರೇಷ್ಠವಾದದ್ದು. ಸಾಧಾರಣ ಬುದ್ಧಿವಂತರಿದ್ದು ಉದ್ಯೋಗದ ಬಲದಿಂದ ಮಹತ್ವವನ್ನು ಪಡೆದ ಎಷ್ಟೋ ಜನರನ್ನು ಕಾಣಬಹುದು. ಕುಶಾಗ್ರಬುದ್ಧಿಯುಳ್ಳವರು ಕೂಡ ಆಲಸ್ಯದ ಮೂಲಕ ಸುಮ್ಮನೆ ಕಾಲಹರಣ ಮಾಡುವದನ್ನಾದರೂ ಕಾಣುವದು ವಿರಲವಲ್ಲ. ಮನುಷ್ಯನು ಬೇಕಾದಷ್ಟು ತೀಕ್ಷ್ಣಬುದ್ಧಿಯುಳ್ಳವನಿದ್ದರೂ, ಶ್ರಮ ಮಾಡದೆ ಎಂದೂ ಪ್ರಖ್ಯಾತನಾಗಲಾರನು. ಇದಲ್ಲದೆ ಸದ್ವರ್ತನವು ಅಂತಃಕರಣದಲ್ಲಿ ಪೂರ್ಣವಾಗಿ ಬಿಂಬಿಸಬೇಕಾದರೆ, ಉದ್ಯೋಗದಂಥ ಉತ್ತಮವಾದ ಸಾಧನವು ಮತ್ತೆ ಯಾವದೂ ಇಲ್ಲ. ಉದ್ಯೋಗವೆಂಬದೊಂದು ದೊಡ್ಡ ಗುರುವು. ಅದರಿಂದ ನಮ್ಮಲ್ಲಿ ವ್ಯವಸ್ಥೆ, ಸಮ್ರತನ, ಇಂದ್ರಿಯನಿಗ್ರಹ, ದೃಢನಿಶ್ಚಯ ಮುಂತಾದ ಗುಣಗಳು ಹುಟ್ಟುತ್ತವೆ.

ಉದ್ಯೋಗ ಮಾಡದವನಿಗೆ ಊಟವು ಸಿಗದು ಎಂಬ ಗಾದೆಯ ಮಾತು ಅಕ್ಷರಶಃ ನಿಜವಿರುತ್ತದೆ. ಶ್ರಮ ಮಾಡದೆ ಯಾವದೊಂದು ಪದಾರ್ಥವನ್ನು ಬಯಸುವದು ಮೂರ್ಖತನವೇ ಸರಿ. ಬೆಲೆ ಕೊಟ್ಟ ಹೊರತು ಯಾವ ವಸ್ತುವೂ ದೊರಕಲಾರದು. ಉದ್ಯೋಗಕ್ಕೆ ವಿಶ್ರಾಂತಿಯೇ ಬೆಲೆಯೆಂದೆನ್ನಬಹುದು. ಅದ್ದರಿಂದ ಉದ್ಯೋಗ ಮಾಡದೆ ನಿಜವಾದ ವಿಶ್ರಾಂತಿಯು ದೊರೆಯಲಾರದು. ಯಾವನಿಗೆ ಏನೂ ಕೆಲಸವಿರುವದಿಲ್ಲವೋ ಅಥವಾ ಇದ್ದಾಗ್ಯೂ ಅವನು ಅದನ್ನು ಮಾಡುವದಿಲ್ಲವೋ, ಅವನಿಗೆ ವಿಶ್ರಾಂತಿಯು ಬೇಸರಗೊಳಿಸದೆ ಬಿಡದು. ಉದ್ಯೋಗವೆಂದರೆ, ಸುಖದಾಶೆಯಿಂದ ಉದ್ಭವಿಸುವ ಅನೇಕ ಚಿಂತಾದುಃಖಗಳ ನಿರಸನ ಮಾಡುವ ಉಪಾಯವು. ಎಷ್ಟೋ ಜನರು ಸುಮ್ಮನೆ ಕೂಡುವದರಿಂದ ತಮಗೆ ಶ್ರಮವೂ ತ್ರಾಸವೂ ಆಗಲಾರವೆಂದು ತಿಳಿಯುತ್ತಾರೆ. ಆದರೆ ಇದು ನಿಜವಲ್ಲ. ಆಲಸ್ಯದಿಂದಾಗುವಂತೆ ಉದ್ಯೋಗದಿಂದಲೂ ಬೇಸರ ಹುಟ್ಟುವದು. ಆದರೆ ಈ ಎರಡು ತರದ ಬೇಸರಗಳಲ್ಲಿ ಮಹದಂತರವುಂಟು. ಉದ್ಯೋಗದಿಂದಾಗುವ ಬೇಸರವು ಮುಂದೆ ಸುಖವನ್ನುಂಟುಮಾಡುವದು.

ಆದರೆ ಆಲ್ಲಸ್ಯದಿಂದಾಗುವ ಬೇಸರವು ದುಃಖಕ್ಕೆ ಕಾರಣವಾಗುವದು.

೨. ಉದ್ಯೋಗವಿಲ್ಲದಿದ್ದರೆ ಆಗುವ ಕೆಟ್ಟ ಪರಿಣಾಮುಗಳು:— ಆಲಸ್ಯವು ಮಹಾಪಾತಕವಾಗಿಯೂ ದುಷ್ಕೃತ್ಯಗಳ ಮೂಲಸ್ಥಾನವಾಗಿಯೂ ಎಲ್ಲ ತರದ ದುಃಖಗಳಿಗೆ ಕಾರಣವಾಗಿಯೂ ಇರುವದು. ನಿಂತ ನೀರಿನಲ್ಲಿ ಕ್ರಿಮಿಕೀಟಗಳು ಹುಟ್ಟುವಂತೆ ನಿರುದ್ಯೋಗಿಯಾದ ಮನುಷ್ಯನ ಮನಸ್ಸಿನಲ್ಲಿ ದುರ್ವಿಚಾರಗಳು ಹುಟ್ಟುವವು. ಉದ್ಯೋಗವಿಮುಖನಾದವನು ಎಂದೂ ಶ್ರೀಮಂತನಾಗಲಾರನು. ಅವನಿಗೆ ಚಲೋ ಗೆಳೆಯರು ದೊರೆಯಲಾರರು. ಬೇಕಾದ ಪದಾರ್ಥವು ಒಂದು ವೇಳೆ ದೊರೆತರೂ, ಅವನು ಸುಖಿಯಾಗಲಾರನು. ಅವನ ಶರೀರವೂ ಮನಸ್ಸೂ ಸ್ವಾಸ್ಥ್ಯವನ್ನೆಂದೂ ಹೊಂದಲಾರವು. ಬೇನೆ ಬೇಸರಿಕೆಗಳಂತೂ ಅವನ ಬೆನ್ನು ಹತ್ತಿರುವವು.

ಸೋಮಾರಿಗಳಾದವರು ಮೂಲತಃ ಕೆಲಸವನ್ನೇ ಮಾಡುವದಿಲ್ಲೆಂತಲ್ಲ. ಆದರೆ ಅವರ ಕೆಲಸದಿಂದ ಅವರಿಗೆ ಯಾವ ಹಿತವೂ ಆಗುವದಿಲ್ಲ. ಅವರ ಕೈಕಾಲುಗಳು ನಿಶ್ಚಲವಾಗಿದ್ದರೂ, ಅವರ ಮನಸ್ಸು ಒತ್ತಟ್ಟಿಗಿರಲಾರದು. ಮನಸ್ಸಿನಲ್ಲಿ ಸದ್ವಿಚಾರಗಳನ್ನು ತರದಿದ್ದರೆ ದುರ್ವಿಚಾರಗಳು ಹುಟ್ಟದೆ ಎಂದೂ ಇರಲಾರವು. ಮನಸ್ಸನ್ನು ನಿರ್ವ್ಯಾಪಾರವಾಗಿ ಮಾಡುವದು ಯಾನ ಕೈಯಿಂದಲೂ ಆಗದ ಮಾತು. ಆದ್ದರಿಂದ ಅದನ್ನು ಸನ್ಮಾರ್ಗಕ್ಕೆ ಹಚ್ಚುವದೇ ಕರ್ಮಮಾರ್ಗದ ಉದ್ದೇಶವು.

೩. ಉದ್ಯೋಗ ಮಾಡುವವರಿಂದಾಗುವ ಲಾಭಗಳು:— ಸಂಸಾರದಲ್ಲಿ ಗಂಡಸರಾಗಲಿ ಹೆಂಗಸರಾಗಲಿ ಉದ್ಯೋಗಿಗಳಾಗಿದ್ದರೆ, ಅವರಿಗೆ ಸುಖಪ್ರಾಪ್ತಿಯಾಗುವದು ನಿಜವು. ಆಲಸ್ಯದಿಂದ ನಮ್ಮ ಜೀವವು ಸಹ ನಮಗೆ ಬೇಸರಾಗುತ್ತದೆ; ಇಷ್ಟೇ ಅಲ್ಲ, ನಮ್ಮ ನೆರೆಹೊರೆಯವರಿಗೂ ಸಹ ನಾವು ಅಸಹ್ಯರಾಗುತ್ತೇವೆ. ಬಹಳ ಶ್ರಮಮಾಡುವದರಿಂದ ಬೇನೆ ಬರುವ ಸಂಭವವುಂಟು. ಆದರೂ ಅದು ಆಲಸ್ಯದಿಂದುಂಟಾಗುವ ವ್ಯಥೆಗಿಂತ ಸಾವಿರ ಪಾಲು ಬೇಕು. ಇತ್ತಿತ್ತಲಾಗಿ ನಮ್ಮ ದೇಶದಲ್ಲಿ ಶ್ರೀಮಂತ ಹೆಂಗಸರು ಬಹಳಮಾಡಿ ಸಂಸಾರದ ಕೆಲಸಗಳನ್ನು ಮಾಡುವದಕ್ಕೆ ತೀರ ನಿರುಪಯೋಗಿಗಳೂ ಅಶಕ್ತರೂ ಆಗಿರುವರು. ಶಾರೀರಿಕಶ್ರಮವು ಅವರ ವೈರಿಯಾಗಿರುವದು.

ಸೇವಕರಿಂದ ಕೆಲಸ ಮಾಡಿಸಿಕೊಳ್ಳಕೂಡದೆಂದು ನಮ್ಮ ಮತವೇನೂ

ಇಲ್ಲ. ಆದರೆ ಸ್ವಲ್ಪವರೂ ಉದ್ಯೋಗ ಮಾಡದೆ ಶರೀರಕ್ಕೆ ಹಾನಿಯಾಗುವಂತೆ ವರ್ತಿಸುವದು ಒಳಿತಲ್ಲ. ಸೇವಕರ ಕೈಯಿಂದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಸಿ, ಆ ವೇಳೆಯಲ್ಲಿ ನಾವೂ ಹೆಚ್ಚು ಮಹತ್ವದ ಕೆಲಸಗಳನ್ನು ಮಾಡತಕ್ಕದ್ದು. ಇದನ್ನು ಲಕ್ಷದಲ್ಲಿಟ್ಟರೆ, ಕಲ್ಯಾಣವಾಗದೆ ಎಂದಿಗೂ ಇರದು. ನಿರುದ್ಯೋಗಿಗಳಾದ ಶ್ರೀಮಂತ ಜನರಿಗೆ ಮಿಷ್ಟಾನ್ನದಿಂದಾಗುವ ಸುಖವು, ಶಾರೀರಿಕ ಶ್ರಮ ಮಾಡುವ ಬಡವರಿಗೆ ಸಾಧಾರಣ ಪ್ರತಿಯ ಊಟದಿಂದಾಗುವ ಸುಖವನ್ನು ಸರಿಗಟ್ಟಲಾರದು. ಬಡವರು ಕೆಲಸ ಮಾಡಿದನಂತರ ಸುಖದಿಂದ ಗಾಢನಿದ್ರೆಗೈಯುವರು. ಆದರೆ ಶ್ರೀಮಂತ ಜನರು ಉದ್ಯೋಗವಿಲ್ಲದ ಮೂಲಕ ಸುಖಾವಹನಿದ್ರೆಯನ್ನೆಂದೂ ಕಾಣರು.

ಈ ಜಗತ್ತಿನಲ್ಲಿ ಇದುವರೆಗೆ ಆಗಿಹೋದ ಗ್ರಂಥಕಾರರು ಸಹ ಉದ್ಯೋಗದ ಹೊರತು ಎಂದೂ ಜಗದ್ವಿಖ್ಯಾತರಾಗುತ್ತಿದ್ದಿಲ್ಲ. ಕಾಲಿದಾಸನಂಥ ಕವಿಗಳ ಶ್ರಮವು ಸ್ವಲ್ಪವಿತ್ತೆಂದೆನ್ನಬಹುದೋ? ಅವರಲ್ಲಿದ್ದ ಕವಿತಾಶಕ್ತಿಯು ಸ್ವಾಭಾವಿಕವಾಗಿತ್ತೆಂದು ತಿಳಿದರೂ ಶ್ರಮ ಮಾಡಿದ ಹೊರತು ಅದು ಎಂದೂ ಪ್ರಕಟವಾಗುತ್ತಿದ್ದಿಲ್ಲ. ಪುರಾಣ, ಶಾಸ್ತ್ರ, ಲೋಕಸ್ಥಿತಿ, ಸೃಷ್ಟಿರಚನೆ ಮುಂತಾದ ವಿಷಯಗಳ ಜ್ಞಾನವು ಅವರಿಗಿತ್ತೆಂದು ಅವರ ಗ್ರಂಥಗಳಿಂದ ಕಂಡುಬರುವದು. ಅದರಂತೆಯೇ ಪ್ರಾಚೀನ ಕಾಲದಲ್ಲಿ ಆಗಿಹೋದ ಉದ್ಯೋಗಿಗಳಾದ ಜನರ ಉದಾಹರಣೆಗಳನ್ನೆಷ್ಟೋ ಕೊಡಬಹುದು. ಇಂಥ ಮಹಾಪುರುಷರಿದ್ದದ್ದರಿಂದಲೇ ನಮ್ಮ ಭರತಖಂಡವು ಪೂರ್ವಕಾಲದಲ್ಲಿ ಸುಧಾರಿಸಿದ ದೇಶಗಳಲ್ಲಿ ಅಗ್ರಸ್ಥಾನವನ್ನು ಹೊಂದಿತ್ತು.

ಸಾರಾಂಶವೇನೆಂದರೆ, ವಿದ್ಯೆ, ದ್ರವ್ಯಲಾಭ, ಕೀರ್ತಿ ಮುಂತಾದವುಗಳು ಉದ್ಯೋಗದ ಹೊರತು ಸಾಧ್ಯವಾಗವು. ಉದ್ಯೋಗಿಯಾದವನು ದುರ್ಜನರ ಸಂಗತಿಯಿಂದಲೂ ದುರ್ವ್ಯಸನಗಳಿಂದಲೂ ದೂರ ಇರುವನು. ನಿಯಮಿತವಾದ ಉದ್ಯೋಗವು ಶರೀರಕ್ಕೂ ಮನಸ್ಸಿಗೂ ಪ್ರತಿಕೂಲವಾಗಿರುವದಿಲ್ಲ; ಇಷ್ಟೇ ಅಲ್ಲ, ಅವೆರಡರ ರಕ್ಷಣೆಗಾಗಿ ಅತ್ಯವಶ್ಯವಾಗಿ ಬೇಕು.

ಉಪಸಂಹಾರ:—ಆದ್ದರಿಂದ ಶರೀರವೂ ಮನಸ್ಸೂ ಶಾಂತತೆಯಲ್ಲಿದ್ದು ಸುಖವಾಗಬೇಕೆಂಬ ಅಪೇಕ್ಷೆಯುಳ್ಳವರು ಆಲಸ್ಯವನ್ನು ಬಿಟ್ಟು ಉದ್ಯೋಗಿಗಳಾಗಿರತಕ್ಕದ್ದು.

(೨೨) ಕರ್ತವ್ಯಕರ್ಮ.

ಅಕೃತ್ಯಂ ನೈವ ಕರ್ತವ್ಯಂ ಪ್ರಾಣತ್ಯಾಗೇಪಿ ಸಂಸ್ಥಿತೇ ।
ನ ಚ ಕೃತ್ಯಂ ಪರಿತ್ಯಾಜ್ಯಂ ಧರ್ಮ ಏಷ ಸನಾತನಃ ॥

—ಮನು.

೧. **ಅರ್ಥ** :—ಕರ್ತವ್ಯಕರ್ಮವೆಂದರೆ ಅವಶ್ಯವಾಗಿ ಮಾಡತಕ್ಕಂಥ ಕೆಲಸವು. ಶಿರೋಲೇಖದಲ್ಲಿ ಹೇಳಿರುವ ಮೇರೆಗೆ, ಜೀವ ಹೋಗುವ ಸಮಯ ಬಂದರೂ ಮಾಡಬಾರದ್ದನ್ನೆಂದೂ ಮಾಡಬಾರದು; ಮಾಡತಕ್ಕದ್ದನ್ನೆಂದೂ ಬಿಡಬಾರದು. ಇದೇ ಸನಾತನಧರ್ಮದ ಮೂಲತತ್ವವು. ಆದ್ದರಿಂದ ಕರ್ತವ್ಯಕರ್ಮವು ಒಂದು ಬಗೆಯ ಧಾರ್ಮಿಕ ಸಾಲವೆಂದು ಹೇಳಬಹುದು. ಈ ಸಾಲ ತೀರಿಸದೆ ದಿವಾಳಿ ತೆಗೆದು ಅಪಕೀರ್ತಿಯನ್ನು ಕಟ್ಟಿಕೊಳ್ಳುವಂಥ ಹೇಡಿಗಳನ್ನುಳಿದು ಮಿಕ್ಕವರೆಲ್ಲರೂ ಇದಕ್ಕೆ ಪಾತ್ರರು. ಈ ಸಾಲ ತೀರಿಸುವದಕ್ಕೆ ವ್ಯಾವಹಾರಿಕ ಹಣವು ಬೇಕಾಗುವದಿಲ್ಲ. ಮನಃಪೂರ್ವಕವಾದ ಪ್ರಯತ್ನವೂ ದೃಢನಿಶ್ಚಯವೂ ಇದ್ದರೆ ಸಾಕು.

೨. **ಮನುಷ್ಯನ ಕರ್ತವ್ಯಗಳು**:—ಈ ಜಗತ್ತಿನಲ್ಲಿ ಜನ್ಮಹೊಂದಿದ ಪ್ರತಿಯೊಬ್ಬ ಮನುಷ್ಯನಿಗೆ ಒಂದಿಲ್ಲೊಂದು ಕರ್ತವ್ಯವು ಇದ್ದೇ ಇರುತ್ತದೆ. ಉಚ್ಚಸ್ಥಿತಿಯಲ್ಲಾಗಲಿ ನೀಚಸ್ಥಿತಿಯಲ್ಲಾಗಲಿ ಅವನು ಅವಶ್ಯವಾಗಿ ಮಾಡತಕ್ಕ ಯಾವದಾದರೊಂದು ಕೆಲಸವು ಇರುವದು. ಅವನು ಇಂತಿಷ್ಟೇ ವಯಸ್ಸಿನವನಾದ ಮೇಲೆ ತನ್ನ ಕರ್ತವ್ಯ ಮಾಡಲು ಸಮರ್ಥನಾಗುವನೆಂಬದನ್ನು ಖಂಡಿತವಾಗಿ ಹೇಳಲಾಗದು. ಆದರೂ ವಾಡಿಕೆಯಾಗಿ ಅವನು ಬಾಲ್ಯಾವಸ್ಥೆಯಲ್ಲಿರುವಾಗಲೇ ತನ್ನ ತಾಯಿತಂದೆಗಳ ಅಪ್ಪಣೆಯನ್ನು ಪರಿಪಾಲಿಸಹತ್ತಿದಂದಿನಿಂದ ಕರ್ತವ್ಯಕರ್ಮವನ್ನಾಚರಿಸಲಾರಂಭಿಸುತ್ತಾನೆಂದು ಹೇಳಬಹುದು. ಮುಂದೆ ಅವನು ದೊಡ್ಡವನಾದಹಾಗೆ, ಅವನಿಗೆ ಗಂಡಹೆಂಡರು, ತಂದೆಮಕ್ಕಳು, ಗುರುಶಿಷ್ಯರು, ಸ್ವಾಮಿಸೇವಕರು ಎಂಬ ಪ್ರಾಪಂಚಿಕ ಸಂಬಂಧಗಳು ಪ್ರಾಪ್ತವಾಗುತ್ತವೆ. ಆದ್ದರಿಂದ ಈ ಬೇರೆ ಬೇರೆ ಸಂಬಂಧಗಳನ್ನು ಕುರಿತು ಅವನಿಗೆ ಬೇರೆ ಬೇರೆ ತರದ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಇವುಗಳ ಹೊರತು ನೆರೆಹೊರೆಯವರು ಪರಸ್ಪರರ ಕೂಡ, ಪ್ರಜೆಗಳು ಅರಸನ ಕೂಡ, ಅರಸನು ಪ್ರಜೆಗಳ ಕೂಡ,

ಸೇವಕರು ಅಧಿಕಾರಿಗಳ ಕೂಡ.ಅಧಿಕಾರಿಗಳು ಸೇವಕರ ಕೂಡ ವರ್ತಿಸಬೇಕಾದ ಅನೇಕ ಸಾರ್ವಜನಿಕ ಸಂಬಂಧಗಳಲ್ಲಿ ಕೈಕೊಳ್ಳತಕ್ಕ ಕರ್ತವ್ಯಗಳು ಎಷ್ಟೋ ಇರುತ್ತವೆ. ಸಾರಾಂಶ, ಮನುಷ್ಯನ ಲೌಕಿಕಸ್ಥಿತಿಯು ಬದಲಾಗುತ್ತ ಹೋದ ಹಾಗೆ ಅವನ ಕರ್ತವ್ಯಗಳಾದರೂ ಬದಲಾಗುತ್ತ ಹೋಗುತ್ತವೆ.

ಇದಲ್ಲದೆ ತನ್ನನ್ನು ಹುಟ್ಟಿಸಿದ ದೇವರಲ್ಲಿ ಭಕ್ತಿಯನ್ನಿಟ್ಟು, ಶ್ಲಾಘ್ಯವಾದ ಆಚರಣೆಯಿಂದ ನಡೆದು ಪರಲೋಕದ ಸಾಧನವನ್ನು ಮಾಡಿಕೊಳ್ಳುವದು ಮನುಷ್ಯನ ಮುಖ್ಯವಾದ ಕರ್ತವ್ಯವು. ದೇವರು ನಮಗೆ ಮನುಷ್ಯಜನ್ಮವನ್ನು ಕೊಟ್ಟದ್ದು ಕೇವಲ ಉಂಡುಟ್ಟು ಸುಖಪಡುವದಕ್ಕಾಗಿಯೇ ಅಲ್ಲ. ಮುಖ್ಯವಾದ ಪುರುಷಾರ್ಥವನ್ನು ಸಂಪಾದಿಸಿ, ನಾವು ನಮ್ಮ ಜನ್ಮದ ಸಾರ್ಥಕ್ಯವನ್ನು ಮಾಡಿಕೊಳ್ಳತಕ್ಕದ್ದು. ಹೀಗೆ ಮಾಡದಿದ್ದರೆ ನಾವು ಅತಿಪಾಪಿಗಳಾಗುವೆವು.

೩. ಕರ್ತವ್ಯವನ್ನು ಮಾಡುವದಕ್ಕೆ ಅನುಕೂಲವಾದ ಮತ್ತು ಪ್ರತಿಕೂಲವಾದ ಸಂಗತಿಗಳು:—ಮನಸ್ಸು ಚಂಚಲವಿದ್ದರೆ, ಕರ್ತವ್ಯಕರ್ಮವನ್ನು ಮಾಡುವದಕ್ಕೆ ಬಹಳೇ ತೊಂದರೆಯಾಗುತ್ತದೆ. ಅದರಂತೆಯೇ ಸೋಮಾರಿತನ, ಸುಖೋಪಭೋಗಗಳಲ್ಲಿ ಆಸಕ್ತಿ, ಕಾಮಕ್ರೋಧಾದಿಷಡ್ರಿಪುಗಳ ವ್ಯಾಮೋಹ ಮುಂತಾದ ದುರ್ಗುಣಗಳು ಕರ್ತವ್ಯವನ್ನು ಮಾಡಗೊಡುವದಿಲ್ಲ. ಸ್ವಲ್ಪಕಾಲವಾದರೂ ಮನಸ್ಸನ್ನು ಸ್ಥಿರಗೊಳಿಸುವದು ಒಳ್ಳೇದು. ಇಲ್ಲದಿದ್ದರೆ ಈ ದುರ್ಗುಣಗಳು ಸರ್ವತೋಮುಖವಾಗಿ ನಮ್ಮನ್ನು ವ್ಯಾಪಿಸುವವು. ಈ ಪರಿಯಾಗಿ ವ್ಯಾಪಿಸಲ್ಪಟ್ಟ ಮನುಷ್ಯನು ಶೂನ್ಯಕ್ಕೆ ಸರಿಯಾಗುವನು. ಅಂಥವನಿಂದ ಸ್ತುತ್ಯರ್ಹವಾದ ಯಾವ ಕೆಲಸವೂ ಆಗುವದಿಲ್ಲ. ಆದ್ದರಿಂದ ಕರ್ತವ್ಯಕರ್ಮವನ್ನು ಸರಿಯಾಗಿ ಮಾಡಬೇಕಾದರೆ, ಮನುಷ್ಯನಲ್ಲಿ ಆತ್ಮಸಂಯಮನವೂ ಸ್ವಾಭಾವಿಕವಾದ ಸ್ವಾರ್ಥತ್ಯಾಗವೂ ಅವಶ್ಯವಾಗಿರಬೇಕು.

ಕರ್ತವ್ಯಕರ್ಮಕ್ಕೂ ಸತ್ಯಕ್ಕೂ ಅತಿನಿಕಟವಾದ ಸಂಬಂಧವಿರುತ್ತದೆ. ಕರ್ತವ್ಯದಕ್ಷನಾದ ಮನುಷ್ಯನಲ್ಲಿ ಸತ್ಯವೂ ಸರಳತನವೂ ತಮ್ಮಿಂದ ತಾವೇ ಹುಟ್ಟುತ್ತವೆ. ಅವನಿಗೆ ಸುಳ್ಳು ಮಾತಾಡುವ ಪ್ರಸಂಗವು ಬರುವದಿಲ್ಲ. ಮನಸ್ಸಿನಲ್ಲಿದ್ದದ್ದನ್ನು ಮಾತಾಡುವನು; ಆಡಿದಂತೆ ಮಾಡುವನು; ಮತ್ತು ಅವನ್ನು ಯೋಗ್ಯರೀತಿಯಲ್ಲಿಯೂ ಯೋಗ್ಯವೇಳೆಯಲ್ಲಿಯೂ ಮಾಡುವನು. ಸತ್ಯದಷ್ಟು ಪುಣ್ಯವೂ ಅಸತ್ಯದಷ್ಟು ಪಾಪವೂ ಮತ್ತೆ ಯಾವದೂ ಇಲ್ಲ. ಸತ್ಯಮಾತಾಡು

ವದು ನಮ್ಮ ಧರ್ಮವು. ಯಾಕಂದರೆ ದೇವರು ನಮಗೆ ನಾಲಿಗೆಯನ್ನು ಕೊಟ್ಟದ್ದು ಸುಳ್ಳಾಡುವದಕ್ಕಾಗಿ ಅಲ್ಲ. ಆದ್ದರಿಂದ ಸತ್ಯಸಂಧರಾಗಲಿಚ್ಛಿಸುವವರು ಕರ್ತವ್ಯದಕ್ಷರಾಗಿರತಕ್ಕದ್ದು.

೪. ಕರ್ತವ್ಯವನ್ನು ಮಾಡುವದರಿಂದಾಗುವ ಲಾಭಗಳು:—

ಕರ್ತವ್ಯದಕ್ಷನಾದವನ ಕೈಯಿಂದ ಅನ್ಯಾಯವೆಂದೂ ಘಟಿಸದು. ಅವನಿಗೆ ಯಾವ ಭಯವೂ ಇರುವದಿಲ್ಲ. ಅವನ ಮನಸ್ಸು ನಿರ್ಮಲವಾಗಿಯೂ ಶಾಂತವಾಗಿಯೂ ಇರುವದು. ಜನರ ಆದರಾತಿಥ್ಯಗಳಿಗೆ ಅವನು ಪಾತ್ರನಾಗುವನು. ಅವನು ಕೈಕೊಂಡ ಕೆಲಸಗಳಲ್ಲಿ ಅಪಜಯವು ಎಂದೂ ತಟ್ಟುವದಿಲ್ಲ. ಒಂದು ವೇಳೆ ಅಪಜಯವಾದರೂ, "ಯತ್ನೇ ಕೃತೇ ಯದಿ ನ ಸಿಧ್ಯತಿ ಕೋತ್ರ ದೋಷಃ" ಎಂಬ ವಾಕ್ಯದ ತಾತ್ಪರ್ಯವನ್ನು ಮನಸ್ಸಿನಲ್ಲಿ ತಂದು ಸಮಾಧಾನಪಡುವನು. ಇದಲ್ಲದೆ ಕರ್ತವ್ಯಕರ್ಮವನ್ನು ಎಡೆಬಿಡದೆ ಜರುಗಿಸುವ ಮಹಾನುಭಾವರು ಐಶ್ವರ್ಯವನ್ನೂ, ಮಾನವನ್ನೂ, ಪದವಿಯನ್ನೂ, ಜಯಾಪಜಯಗಳನ್ನೂ—ಅದೇಕೆ ತಮ್ಮ ಜೀವವನ್ನೂ ಸಹ ಲೆಕ್ಕಿಸುವದಿಲ್ಲ. **ರಾಘೋಬಾ ಪೇಶ್ವೆಯು** ಮಾಡಿದ ಪಾಪಕ್ಕೆ ದೇಹಾಂತ ಪ್ರಾಯಶ್ಚಿತ್ತವೇ ಯೋಗ್ಯವಾದ ಶಿಕ್ಷೆಯೆಂದು ಖಂಡಿತವಾಗಿ ಹೇಳಿದ ನ್ಯಾಯಾಧೀಶನಾದ **ರಾಮಶಾಸ್ತ್ರಿಯ** ಮನಸ್ಸಿನಲ್ಲಿ ತನಗಿದ್ದ ರಾಜಾಶ್ರಯವು ಹೋದೀತು, ತನಗೆ ವಿಪತ್ತು ಬಂದೀತು, ಎಂಬ ವಿಚಾರಗಳು ಕಿಂಚಿತ್ತಾದರೂ ಮೊಳೆದೋರಲಿಲ್ಲ. ಈ ಸಂಸಾರದಲ್ಲಿ ಜಯಾಪಜಯಗಳು ಸರಿಯೆಂದು ಬಗೆದು, ಧೈರ್ಯದಿಂದ ತನ್ನ ಕರ್ತವ್ಯವನ್ನು ಮಾಡುವವನೇ ಶೂರನು. ಅವನೇ ಧೈರ್ಯಶಾಲಿಯು. ಅವನೇ ಕಾರ್ಯದಕ್ಷನು.

ಕರ್ತವ್ಯವನ್ನು ಮಾಡುವದು ವ್ಯಕ್ತಿಸುಖಕ್ಕೆ ಕಾರಣವಾಗಿರುವಂತೆ ದೇಶಹಿತಕ್ಕಾದರೂ ಕಾರಣವಾಗಿರುವದು. ಕರ್ತವ್ಯವನ್ನು ಎಡೆಬಿಡದೆ ನೆರವೇರಿಸುವಂಥ ಜನರುಳ್ಳ ದೇಶವು ಕೂಡಲೆ ಘನತೆಗೇರುವದು. ಅದರ ಶ್ರೇಷ್ಠತ್ವವು ಚಿರಕಾಲ ಉಳಿಯುವದು. ಪ್ರಜೆಗಳು ಸ್ವದೇಶಕ್ಕೆ ಕೊಡುವ ಕರ್ತವ್ಯಕರ್ಮವೆಂಬ ಸಾಲವನ್ನು ತಮ್ಮ ಕೈಯಿಂದಾದಷ್ಟು ತೀರಿಸದೆ, ಕೇವಲ ಸ್ವದೇಶಾಭಿಮಾನವನ್ನು ಕುರಿತು ಲೇಖಗಳನ್ನು ಬರೆಯುವದರಿಂದ ಇಲ್ಲವೆ ಸಂಭಾಷಣೆ ಮಾಡುವದರಿಂದ ಏನೂ ಉಪಯೋಗವಾಗುವದಿಲ್ಲ. ಮನಃಪೂರ್ವಕವಾಗಿ ದೇಶಹಿತಕ್ಕೋಸ್ಕರ ಕಷ್ಟಪಡುವ ಮಹಾತ್ಮರು ದೇಶದಲ್ಲಿ ಇದ್ದದ್ದರಿಂದಲೇ, ಪ್ರಾಚೀನಕಾಲ

ದಲ್ಲಿ ಗ್ರೀಕರು ಇರಾಣದೇಶದ ಅರಸನಾದ **ಝುರ್ಝುರ್ಕಸನ** ಅಸಂಖ್ಯಾತ ಸೈನ್ಯವನ್ನು ಹಿಮ್ಮೆಟ್ಟಿದರು. **ನೆಲಸನ್ನನು** ಪ್ರಾಣಬಿಡುವ ಸಮಯದಲ್ಲಿ “ಪ್ರತಿಯೊಬ್ಬನು ತನ್ನ ಕರ್ತವ್ಯವನ್ನು ಮಾಡತಕ್ಕದ್ದೆಂದು ಇಂಗ್ಲಂಡ ದೇಶವು ಅಪೇಕ್ಷಿಸುತ್ತದೆ” (Eugland expects every man to do his duty), ಎಂದು ಹೇಳಿ, ತನ್ನ ಸೈನಿಕರನ್ನು ಹುರಿದುಂಬಿಸಿ, ವೈರಿಗಳನ್ನು ಸೋಲಿಸಿದನು. ಕರ್ತವ್ಯಪರಾಙ್ಮುಖರಾದ ಜನರಿರುವ ದೇಶವು ಬೇಕಾದಷ್ಟು ಧನಾಢ್ಯವೂ, ಬೆಳೆಯುಳ್ಳದ್ದೂ, ವಿದ್ಯಾಕಲಾಕೌಶಲ್ಯಸಂಪನ್ನವಾದದ್ದೂ ಇದ್ದರೂ, ಮಣ್ಣುಪಾಲಾಗದೆ ಇರಲಾರದೆಂಬ ಮಾತು ಇತಿಹಾಸದಲ್ಲಿ ಪ್ರಸಿದ್ಧವದೆ.

(೨೩) ಕಾಲೋಪಯೋಗ.

“ಮುತ್ತಿಗಿಂತಲೂ ಹೊತ್ತು ಉತ್ತಮ.”

೧. **ವೇಳೆಯ ಮಹತ್ವ** :— ಆಯುಷ್ಯದ ವೇಳೆಯು ಬಹಳೇ ಅಮೌಲ್ಯವಾದದ್ದು. ಅದನ್ನು ಆದಷ್ಟು ಯೋಗ್ಯವಾಗಿ ಉಪಯೋಗಿಸತಕ್ಕದ್ದು. ಆದರೆ “ಕಾಲೋಹ್ಯಯಂ ನಿರವಧಿಃ” ಅಂದರೆ ವೇಳೆಯು ಅನಂತವಾಗಿರುವದು. ಅಂದ ಮೇಲೆ ಇಂಥ ಅನಂತವಾದ ವೇಳೆಯಲ್ಲಿ ಹತ್ತೇಳು ಮಿನಿಟುಗಳು ವ್ಯರ್ಥ ಹೋದರೇನಾಯಿತು? ಹೀಗನ್ನುವ ಜನರೇ ಬಹಳ. ಇದು ತಪ್ಪುತಿಳುವಳಿಕೆಯಲ್ಲವೇ? ಕಾಲವು ಅನಂತವಿದ್ದಾಗ್ಯೂ ಅದರಲ್ಲಿ ಎಷ್ಟು ಭಾಗವು ನಮ್ಮ ಪಾಲಿಗೆ ಬರುತ್ತದೆಂಬದನ್ನು ವಿಚಾರಿಸುವ. ನಮ್ಮ ಜೀವಮಾನವು ಬಹಳೇ ಅಲ್ಪವಾದದ್ದು. ಮನುಷ್ಯನು ಸುಮಾರು ಅರುವತ್ತು ಇಲ್ಲವೆ ಎಪ್ಪತ್ತು ವರ್ಷಗಳಿಗಿಂತ ಹೆಚ್ಚು ಬದುಕಿರುವದು ವಿರಲವು. ಈ ಅವಧಿಯಲ್ಲಿ ಅರ್ಧಕ್ಕಿಂತ ಹೆಚ್ಚು ಪಾಲು ನಿದ್ರೆಯಲ್ಲಿ ಹೋಗುತ್ತದೆ. ಕೆಲವು ಭಾಗವು ಆಹಾರವಿಹಾರಗಳಲ್ಲಿಯೂ, ಕೆಲವು ಊಟ-ಉಪಚಾರಗಳಲ್ಲಿಯೂ, ಮತ್ತೆ ಕೆಲವು ಉಡಿಗೆತೊಡಿಗೆ ಮುಂತಾದವುಗಳಲ್ಲಿಯೂ ಕಳೆದು ಹೋಗುವದು. ಈ ಎಲ್ಲ ಭಾಗಗಳನ್ನು ಕಳೆದು ಬಿಟ್ಟರೆ, ಉಳಿದ ಭಾಗವು ಸುಮಾರು ಹತ್ತಿಪ್ಪತ್ತು ವರ್ಷಗಳಿಗಿಂತ ಹೆಚ್ಚಿಗಿಲ್ಲ. ಅಂದಮೇಲೆ ನಮ್ಮ ಪಾಲಿಗೆ ಬಂದ ಇಂಥ ಅತ್ಯಲ್ಪಕಾಲದ ಘಟಕಾವಯವಗಳು ಬಹಳೇ

ಮಹತ್ವವಾದವುಗಳಿರುವದರಿಂದ ಅವುಗಳನ್ನು ನಾವು ಎಂದೂ ವ್ಯರ್ಥವಾಗಿ ಕಳಕೊಳ್ಳದಂತೆ ಜಾಗರೂಕರಾಗಿರತಕ್ಕದ್ದು.

೨. ವರ್ತಮಾನಕಾಲದ ಸದ್ವ್ಯಯವು:— ವೇಳೆಯ ಸದ್ವ್ಯಯವೇ ಸುಖಪ್ರಾಪ್ತಿಯ ಮುಖ್ಯ ಸಾಧನವಾದ್ದರಿಂದ, ಹೋದಂಥ ಕಾಲ, ನಡೆಯುವ ಕಾಲ, ಹಾಗು ಬರುವಕಾಲ, ಅಂದರೆ ಭೂತ, ವರ್ತಮಾನ, ಭವಿಷ್ಯತ್‌ಕಾಲಗಳಲ್ಲಿ ನಾವು ಮಾಡತಕ್ಕ ಕರ್ತವ್ಯಗಳು ಯಾವವೆಂಬದನ್ನು ವಿಚಾರಿಸುವ. ವರ್ತಮಾನಕಾಲದ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬಹುದು. ಆದರೆ ಭೂತಕಾಲವೆಂದರೆ, ನನ್ನ ಕೈವಿ ರಿ ಹೋದಂಥ ಕಾಲವು. ಭವಿಷ್ಯತ್ ಕಾಲವೆಂದರೆ, ಮುಂದೆ ಏನಾದೀತು ಎಂಬದನ್ನು ಹೇಳಲಿಕ್ಕೆ ಬರದಂಥ ಕಾಲವು. ಅಂದಮೇಲೆ ಭೂತ, ಭವಿಷ್ಯತ್‌ಕಾಲಗಳ ಬಗ್ಗೆ ಏನಾದರೂ ವ್ಯವಸ್ಥೆಮಾಡ ಬೇಕೆಂದು ಹೇಳುವದು ದಡ್ಡತನವಲ್ಲವೇ? ಎಂಬ ಆಕ್ಷೇಪವು ಮನಸ್ಸಿನಲ್ಲಿ ಬರುವದು ಸ್ವಾಭಾವಿಕವೇ ಸರಿ. ಆದರೆ ವಿಚಾರಮಾಡಲಾಗಿ, ಇವುಗಳ ವಿಷಯವಾಗಿಯೂ ಯೋಗ್ಯ ಯೋಜನೆ ಮಾಡಬಹುದೆಂದು ಕಂಡುಬರುವದು.

ವರ್ತಮಾನಕಾಲದ ಬಗ್ಗೆ ವಿಚಾರಿಸತಕ್ಕದ್ದೇನೆಂದರೆ, ಮನುಷ್ಯನ ಬುದ್ಧಿ ಹಾಗು ಶರೀರಸಾಮರ್ಥ್ಯವು ಅಲ್ಪವಾಗಿರುವವು; ಆಯುಷ್ಯದ ಮರ್ಯಾದೆ ತೀರ ಕಡಿಮೆ; ಜ್ಞಾನದ ಮರ್ಯಾದೆಯಂತೂ ಅತಿವಿಸ್ತಾರವಾಗಿರುವದು. ಅಂದಮೇಲೆ ಅವನ ಆಯುಷ್ಯದ ಮರ್ಯಾದೆಗೂ ಜ್ಞಾನದ ಮರ್ಯಾದೆಗೂ ಸರಿಬೀಳುವದೇ? ಇಲ್ಲ. ಆದ್ದರಿಂದ ಅವನು ಸರ್ವಜ್ಞನಾಗಬೇಕೆಂಬ ಹಣಹೆಮ್ಮೆಯನ್ನು ಬಿಟ್ಟು, ತನಗೆ ಉಪಯುಕ್ತವಾದ ಜ್ಞಾನವನ್ನೇ ಸಂಪಾದಿಸುತ್ತಿರಬೇಕು. ಇದಕ್ಕಾಗಿ ಅವನು ತನ್ನ ಕರ್ತವ್ಯಗಳನ್ನು ಬಿಟ್ಟು ಬಿಡದಲೆ ಸಕಾಲದಲ್ಲಿ ಮಾಡಬೇಕು. ಇಂದು ಮಾಡುವದಕ್ಕೆ ನಾಳೆ ಅನ್ನಬಾರದು. ದೇಶಕಾಲಗಳನ್ನರಿತು, ಮಾಡುವದನ್ನು ಕ್ರಮವಾಗಿಯೂ ವ್ಯವಸ್ಥಿತವಾಗಿಯೂ ಮಾಡತಕ್ಕದ್ದು. ಅವ್ಯವಸ್ಥಿತವಾಗಿ ಮಾಡಿದ ಕೆಲಸವು ಎಂದೂ ಕೊನೆಗಾಣದೆಂಬದನ್ನು ನೆನಪಿನಲ್ಲಿಡತಕ್ಕದ್ದು. ಕೈಯಿಂದಾಗುವ ಕೆಲಸವನ್ನೇ ಕೈಕೊಳ್ಳತಕ್ಕದ್ದು. ಕಾಲ್ಪನಿಕಸುಖದುಃಖಗಳ ಬಗ್ಗೆ ಮನಸ್ಸನ್ನು ದಣಿಸಬಾರದು. ಯಾವಾಗಲೂ ಮನಸ್ಸನ್ನು ಸಮಾಧಾನಗೊಳಿಸುತ್ತಿರಬೇಕು.

೩. ಭೂತಕಾಲದ ಸದ್ವ್ಯಯವು:— ಈ ಜಗತ್ತಿನಲ್ಲಿ ಕಳೆದುಹೋದ

ಆಯುಷ್ಯದ ಬಗ್ಗೆ ವಿಚಾರಿಸಿದರೆ, ಅದು ಬಹುತರವಾಗಿ ಕ್ಷುಲ್ಲಕ ಕಾರ್ಯಗಳನ್ನೇ ಮಾಡುವದರಲ್ಲಿ ಹೋಗಿರುವದೆಂತಲೂ, ಅದರಿಂದ ನಮಗೆ ಯಾವ ಲಾಭವೂ ಆಗದೆ ಹಾನಿಯೇ ಆಗಿರುವದೆಂತಲೂ ಕಂಡುಬರುವದು. ಈ ಅನುಭವದ ಕಡೆಗೆ ನಾವು ಚನ್ನಾಗಿ ಲಕ್ಷಗೊಟ್ಟರೆ, ನಮ್ಮಲ್ಲಿ ದುರಭಿಮಾನವು ಇಲ್ಲದಂತಾಗಿ ವಿನಯಾದಿ ಸದ್ಗುಣಗಳು ಹುಟ್ಟುವವು. ಎರಡನೇ ಲಾಭವು ಯಾವದೆಂದರೆ, ನಾವು ಕಳೆದ ಆಯುಷ್ಯದ ಭಾಗದಲ್ಲಿ ಮಾಡಿದ ತಪ್ಪುಗಳನ್ನು ಪುನಃ ಮಾಡದಿದ್ದರೆ, ಕಳೆದ ಕಾಲವನ್ನು (ಭೂತಕಾಲವನ್ನು) ಸರಿಯಾಗಿ ಉಪಯೋಗಿಸಿದಂತಾಗುವದು. ಹಿಂದೆ ಮಾಡಿದ ತಪ್ಪುಗಳ ಪುನರುಕ್ತಿಯಾಗದಂತೆ ನಾವು ವರ್ತಿಸಿದರೆ, ನಮಗೆ ಮುಂದೆ ಸುಖವಾಗಲಿಕ್ಕೇ ಬೇಕು ಅಂದಮೇಲೆ ಮುಂದಾಗುವ ಸುಖಪ್ರಾಪ್ತಿಯು ಹಿಂದೆ ಹೋದ ಕಾಲದ ವಿಚಾರದಿಂದಲೇ ಆದಂತಾಗಲಿಲ್ಲವೇ ?

ಭೂತಕಾಲದ ಪರ್ಯಾಲೋಚನೆ ಮಾಡುವಾಗ ನೆನಪಿನಲ್ಲಿಡತಕ್ಕ ಮಾತು ಯಾವದೆಂದರೆ, ಆ ಕಾಲದಲ್ಲಿ ನಮಗೊದಗಿದ ದುಃಖಕಾರಕ ಪ್ರಸಂಗಗಳನ್ನು ನಾವು ಮೇಲಿಂದಮೇಲೆ ಮನಸ್ಸಿನಲ್ಲಿ ತರಬಾರದು. ಯಾಕಂದರೆ ಅದರಿಂದ ಯಾವ ಸುಧಾರಣೆಯೂ ಆಗದೆ, ದುಃಖದ ರಾಶಿಯನ್ನು ಮಾತ್ರ ಹೆಚ್ಚು ಬೇಸಿ ದಂತಾಗುತ್ತದೆ. ಆದಕಾರಣ ಆದಷ್ಟು ಮಟ್ಟಿಗೆ ನಮ್ಮ ಕಳೆದ ಆಯುಃಷ್ಯದ ಉತ್ತಮ ಭಾಗದ ಕಡೆಗೆ ನಾವು ಲಕ್ಷಗೊಡತಕ್ಕದ್ದು. ಕೆಲಕಾಲದಲ್ಲಿ ನಾವು ಉಪಯು ಕ್ತವಾದ ಜ್ಞಾನವನ್ನು ಸಂಪಾದಿಸಿ, ನಮ್ಮ ಮನಸ್ಸನ್ನು ವಿಕಸಿತವಾಗಿ ಮಾಡಿರ ಬಹುದು. ನಿಯಮಿತತನದಿಂದಲೂ ದೃಢನಿಶ್ಚಯದಿಂದಲೂ ಯಾವದೊಂದು ಉದ್ಯೋಗವನ್ನು ಮಾಡಿ, ಸತ್ಕೀರ್ತಿಯನ್ನು ಪಡೆದಿರಬಹುದು. ನಮ್ಮ ಸ್ಥಿತಿಗನು ಸರಿಸಿ ಪ್ರಾಮಾಣಿಕತನದಿಂದ ನಮ್ಮ ಕರ್ತವ್ಯಗಳನ್ನು ಮಾಡಿದ್ದರ ಬಗ್ಗೆ ಸದಾ ಚಾರಸಂಪನ್ನರಾದವರು ನಮ್ಮನ್ನು ಹೊಗಳಿರಬಹುದು. ಸಂಕಟದೊಳಗೆ ಸಿಲುಕಿ ಪೇಚಾಡುತ್ತಿದ್ದ ಜನರ ದುಃಖಗಳನ್ನು ನಾವು ದೂರಮಾಡಿರಬಹುದು. ಇಂಥ ಪ್ರಸಂಗಗಳೇ ನಮ್ಮ ಭೂತಕಾಲದ ಉತ್ತಮವಾದ ಭಾಗಗಳೆಂದು ಹೇಳಬಹುದು. ಈ ಭಾಗಗಳ ಸ್ಮರಣೆಯಿಂದ ಮನಸ್ಸಿನ ಉದಾಸೀನತೆಯು ಇಲ್ಲದಂತಾಗಿ ನಾವು ಸುಪ್ರಸನ್ನರಾಗುವೆವು.

೪ **ಭವಿಷ್ಯತ್‌ಕಾಲದ ಸದ್ವ್ಯಯವು:—** ಮುಂದೆ ಆಗುವದನ್ನು ತಿಳುಕೊಳ್ಳುವ ಲವಲವಿಕೆಯು ಮನುಷ್ಯ ಪ್ರಾಣಿಯಲ್ಲಿ ಬಹಳೇ ಇರುವದು.

ಆದರೆ ನಮಗೆ ತಿಳಿಯಬಾರದೆಂದು ದೇವರ ಸಂಕಲ್ಪವಿದ್ದ ಸಂಗತಿಯನ್ನು ಕುರಿತು ವಿಶೇಷವಾಗಿ ಚಿಕಿತ್ಸೆ ಮಾಡುವದು ಸರಿಯಲ್ಲ. ಒಂದು ರೀತಿಯಲ್ಲಿ ನಮ್ಮ ಭವಿಷ್ಯವು ನಮಗೆ ತಿಳಿಯದಿರುವದೇ ಒಳ್ಳೇದು. ಯಾಕಂದರೆ ಭೂತ ಮತ್ತು ವರ್ತಮಾನಕಾಲದೊಳಗೆ ಮೊದಲೇ ದುಃಖಪೀಡಿತನಾದ ಮನುಷ್ಯನಿಗೆ ಮುಂದೆಬರುವ ದುಃಖಗಳು ತಿಳಿದುಹೋದರೆ ಕೇಳುವದೇನು ! ಕಾದ ಹಂಚಿನಮೇಲೆ ನೀರು ಬಿದ್ದಂತಾಗುವದು. ಆದ್ದರಿಂದ 'ಯದಭಾವಿ ನ ತದ್ಭಾವಿ ಭಾವಿ ಚೇನ್ನತದನ್ಯಥಾ' ಅಂದರೆ ಯಾವದು ಆಗುವಹಾಗಿಲ್ಲವೋ ಅದು ಎಂದೂ ಆಗದು; ಯಾವದು ಆಗುವಂತಿರುವದೋ ಅದು ಆಗದೆ ಎಂದೂ ಇರದು ಎಂಬ ತತ್ವವನ್ನು ಮನಸ್ಸಿನಲ್ಲಿಟ್ಟುಕೊಂಡು ನಡೆಯತಕ್ಕದ್ದು. ಆದರೂ ಕೇವಲ ದೈವವನ್ನೇ ಅವಲಂಬಿಸಿ ಕರ್ತವ್ಯವನ್ನು ಮಾಡದಿರುವದೂ ಉಚಿತವಲ್ಲ. ಈ ಸಂಸಾರದಲ್ಲಿ ಹಲಕೆಲವು ಸಂಗತಿಗಳನ್ನು ಕುರಿತು ನಾವು ಮುಂದಾಗಿಯೇ ವ್ಯವಸ್ಥೆಮಾಡಿಡುವದು ಉತ್ತಮವು. ಉದಾಹರಣಾರ್ಥ, ಮುಂದೆ ಬರುವ ಸಂಕಟಗಳು ನಮಗೆ ಮುಂಚಿತವಾಗಿಯೇ ಖಂಡಿತವಾಗಿ ತಿಳಿವರೆ, ಅವುಗಳನ್ನು ಪರಿಹರಿಸುವ ಉಪಾಯಗಳನ್ನು ಯೋಚಿಸುವದು ಅತ್ಯವಶ್ಯವು. ಹಾಗು ತಾರುಣ್ಯದಲ್ಲಿದ್ದಂತೆ ವೃದ್ಧಾಪ್ಯದಲ್ಲಿ ದುಡಿದು ಹೊಟ್ಟೆತುಂಬಿಕೊಳ್ಳುವಷ್ಟು ಶಕ್ತಿಯು ನಮ್ಮಲ್ಲಿರುವದಿಲ್ಲ. ಆದಕಾರಣ ನಾವು ಪೂರ್ವವಯಸ್ಸಿನಲ್ಲಿಯೇ ವೃದ್ಧಾಪ್ಯಕಾಲದಲ್ಲಿ ಬೇಕಾಗುವ ಹೊಟ್ಟೆಬಟ್ಟೆಗಳ ಸಾಧನಗಳನ್ನು ಮಾಡಿಡತಕ್ಕದ್ದು. ಈ ಪ್ರಕಾರ ಭೂತ, ವರ್ತಮಾನ, ಭವಿಷ್ಯತ್ ಕಾಲಗಳಲ್ಲಿ ಮಾಡತಕ್ಕ ಕರ್ತವ್ಯಗಳನ್ನು ಮಾಡಿ, ಕಡೆಯಲ್ಲಿ ಸರ್ವಾಂತರ್ಯಾಮಿಯಾದ ಪರಮೇಶ್ವರನ ಮೇಲೆ ಪೂರ್ಣ ವಿಶ್ವಾಸವನ್ನಿಟ್ಟು, ಸ್ವಸ್ಥಚಿತ್ತರಾಗಿ ಧೈರ್ಯದಿಂದಲೂ ಸಂತೋಷದಿಂದಲೂ ಕಾಲಹರಣ ಮಾಡಿದರೆ, ನಮಗೆ ಸುಖವಾಗದೆ ಎಂದೂ ಇರದು.

೫. **ವೇಳೆಯ ದುರುಪಯೋಗ:**—ಇನ್ನು ವೇಳೆಯ ದುರುಪಯೋಗವು ಯಾವದೆಂಬದನ್ನು ವಿಚಾರಿಸುವ. ನಮಗೂ ಇತರರಿಗೂ ಹಿತವಾಗದಂತೆ ಕಾಲಕಳೆಯುವದೇ ವೇಳೆಯ ದುರ್ವ್ಯಯವು. ಅನಾಥರನ್ನೂ ದುಃಖಿತರನ್ನೂ ಕಾರಣವಿಲ್ಲದೆ ಪೀಡಿಸೋಣ, ಜ್ಞಾನಸಂಪಾದನೆ ಮಾಡದಿರೋಣ, ದುಷ್ಟಜನರ ಸಹವಾಸದಲ್ಲಿರೋಣ, ಲೆತ್ತ, ಪಗಡಿ ಮುಂತಾದ ಆಟಗಳನ್ನಾಡೋಣ, ಇವೇ ಮುಂತಾದ ದುಷ್ಕರ್ಮಗಳನ್ನು ಮಾಡುವದರಿಂದ ವ್ಯರ್ಥ

ಕಾಲಹರಣ ಮಾಡಿದಂತಾಗುವದು.

೬. **ಉಪಸಂಹಾರ:**—ದುಷ್ಕೃತ್ಯಗಳಲ್ಲಿ ಕಾಲ ಕಳೆಯದೆ ಮೇಲೆ ಹೇಳಿದಂತೆ ನಡೆದರೆ, ಇಹಪರಲೋಕಗಳಲ್ಲಿ ಸುಖಪ್ರಾಪ್ತಿಯಾಗುವದು ನಿಜವು.

---

(೨೪) ಗೃಹಶಿಕ್ಷಣ

ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ ।
ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥

— ಹಿತೋಪದೇಶ.

ಅರ್ಥ:—ಶಿಕ್ಷಣ ಕೊಡದಿರುವ ತಾಯಿತಂದೆಗಳು ತಮ್ಮ ಮಕ್ಕಳ ವೈರಿಗಳು. ರಾಜಹಂಸ ಪಕ್ಷಿಗಳ ಮಧ್ಯದಲ್ಲಿ ಬಕಪಕ್ಷಿಯು ಶೋಭಿಸದಂತೆ, ವಿದ್ವಜ್ಜನರ ಸಭೆಯಲ್ಲಿ ಅವರ ಮೂರ್ಖರಾದ ಮಕ್ಕಳು ಶೋಭಿಸರು.

೧. **ಆರಂಭಿಸುವ ಕಾಲ:**—ಮಿಕ್ಕ ಶಾಲೆಗಳಲ್ಲಿರುವಂತೆ ಗೃಹಶಿಕ್ಷಣವು ಇಂತಿಷ್ಟು ವರ್ಷಗಳಿಂದ ಆರಂಭವಾಗತಕ್ಕದ್ದೆಂಬ ನಿಯಮವೇನೂ ಇಲ್ಲ. ಮನುಷ್ಯನು ಹುಟ್ಟಿದ ಕೂಡಲೆ ಗೃಹಶಿಕ್ಷಣವು ಆರಂಭವಾಗತಕ್ಕದ್ದು. ಈ ಜಗತ್ತಿನಲ್ಲಿ ಚಿಕ್ಕಹುಡುಗರು ಪರಾನುಕರಣಶೀಲರು; ಅಂದರೆ ಅವರು ತಾವು ಕೇಳುವದನ್ನೂ ನೋಡುವದನ್ನೂ ಅನುಕರಿಸುವವರು. ಎರಡನೆಯವರು ಮಾಡಿದಂತೆ ಮಾಡುವದು ಅವರ ಹುಟ್ಟು ಗುಣವು. ಉದಾಹರಣವೆಂಬದೊಂದು ಅವರ ದೊಡ್ಡಗುರುವು. ಚಿಕ್ಕಂದಿನಲ್ಲಿ ಹುಡುಗರ ಸ್ವಭಾವವು ಬಹಳೇ ಕೋಮಲವಿರುವದರಿಂದ, ಅದು ತಪ್ಪಲೋಹದಂತೆ ಮಣಿಸಿದತ್ತ ಮಣಿಯುವದು; ಮತ್ತು ಒಮ್ಮೆ ಮಣಿಯಿತೆಂದರೆ, ಕಡೆತನಕ ದೃಢವಾಗಿ ನಿಲ್ಲುವದು. ದೊಡ್ಡವರಾದ ಮೇಲೆ ಅವರ ಬುದ್ಧಿಯು ವಿದ್ಯೆಯಿಂದ ಬೇಕಾದಷ್ಟು ಸಂಸ್ಕೃತವಾದರೂ, ಅವರ ಚಿಕ್ಕಂದಿನ ಸ್ವಭಾವವು ಬದಲಾಗಲಾರದು. ಚಿಕ್ಕಂದಿನಲ್ಲಿ ಹುಡುಗರಿಗೆ ಕಲಿಸಿದ ಮಾತುಗಳು ಕಡೆತನಕ ಅವರ ನೆನಪಿನಲ್ಲಿ ಉಳಿಯುವವು; ಇಷ್ಟೇ ಅಲ್ಲ, ಅವುಗಳಂತೆ ಮಾಡಲಿಕ್ಕೆ ಅವರು ಪ್ರವೃತ್ತರಾಗುತ್ತಾರೆ. ಈ ಬಗ್ಗೆ ಪುರಾಣೇತಿಹಾಸಗಳಲ್ಲಿ ಎಷ್ಟೋ ದೃಷ್ಟಾಂತಗಳುಂಟು. ಆದ್ದರಿಂದ ಸದ್ವರ್ತನವನ್ನು ತಳಕು ಹಾಕಲಿಕ್ಕೆ ಬಾಲ್ಯಾವಸ್ಥೆಯೇ ಯೋಗ್ಯವಾದ ಕಾಲವು.

೨. ದೇಶಸುಧಾರಣೆಗೆ ಗೃಹಶಿಕ್ಷಣದ ಅವಶ್ಯಕತೆ:—

ಮನುಷ್ಯನ ಮನಸ್ಸಿನಲ್ಲಿ ಸದ್ವರ್ತನವು ಪೂರ್ಣವಾಗಿ ಬಿಂಬಿಸಬೇಕಾದರೆ, ಮನೆಯು ಎಲ್ಲಕ್ಕೂ ಮೊದಲಿನ ಮತ್ತು ಮಹತ್ವವಾದ ಶಾಲೆಯು. ಈ ಶಾಲೆಯಲ್ಲಿಯೇ ಅವನು ಸದಾಚಾರದ ಇಲ್ಲವೆ ದುರಾಚಾರದ ಮೂಲತತ್ವಗಳನ್ನು ಕಲಿಯುವದುಂಟು. ಈ ಮೂಲತತ್ವಗಳು ಅವನು ಬದುಕಿರುವವರೆಗೂ ಬಾಳುವವು. ಗೃಹಶಿಕ್ಷಣವೇ ಸದ್ವರ್ತನಕ್ಕೆ ಮುಖ್ಯವಾದ ಕಾರಣವು. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎಂಬ ಗಾದೆಯಾದರೂ ಈ ತತ್ವವನ್ನೇ ಸಾರಿ ಹೇಳುವದು.

ದೇಶದೊಳಗೆ ಚಿರಪ್ರವೃತ್ತವಾದ ಚಲೋ ಇಲ್ಲವೆ ಕೆಟ್ಟ ನಡತೆಗಳಿಗೆ ಗೃಹಶಿಕ್ಷಣವೇ ಕಾರಣವೆಂದು ಹೇಳಬಹುದು. ಯಾಕಂದರೆ ಯಾವದೊಂದು ನಡತೆಯು ಪ್ರಚಾರದಲ್ಲಿ ಬರಬೇಕಾದರೆ, ದೇಶದೊಳಗಿನ ಪ್ರಮುಖ ಜನರೇ ಅದಕ್ಕೆ ಕಾರಣವಾಗಿರುವರು. ಅವರು ಮಾಡುವ ಯೋಗ್ಯಾಯೋಗ್ಯ ಕಾರ್ಯಗಳು ಅವರಿಗೆ ದೊರೆಯುವ ಗೃಹಶಿಕ್ಷಣವನ್ನೇ ಅವಲಂಬಿಸಿರುವವು. ಆದ್ದರಿಂದ ರಾಜ್ಯಕಾರ್ಯಧುರಂಧರರಿಗಿಂತಲೂ ನಮಗೆ ವಿದ್ಯೆಕಲಿಸುವ ಗುರುಗಳು ಹೆಚ್ಚು ಒಳ್ಳೆಯವರೂ, ಜಾಣರೂ, ನ್ಯಾಯಪರಾಯಣರೂ ಇರತಕ್ಕದ್ದು. ಮನುಷ್ಯನು ಎರಡನೆಯವರ ಕೂಡ ವ್ಯವಹಾರ ಮಾಡುವದಕ್ಕಿಂತ ಮೊದಲು ಅವನಿಗೆ ತನ್ನ ಮನೆಯವರ ಕೂಡ ನಡಕೊಳ್ಳುವ ಪ್ರಸಂಗವು ಬರುತ್ತದೆ. ಆದ್ದರಿಂದ ಅವನ ನಡತೆಯು ಮನೆಯಲ್ಲಿಯೇ ಸುಧಾರಿಸತಕ್ಕದ್ದು. ಅಂದರೆ ಸಹಜವೇ ಅವನು ಜನರಿಂದ ಸಜ್ಜನನೆನಿಸಿಕೊಳ್ಳುವನು. ಅಂದಮೇಲೆ ದೇಶದಲ್ಲಿ ಸಜ್ಜನರು ಹುಟ್ಟಬೇಕಾದರೆ, ಗೃಹಶಿಕ್ಷಣವೇ ಮುಖ್ಯಕಾರಣವು.

೩. ಗೃಹಶಿಕ್ಷಣಕ್ಕೆ ಸ್ತ್ರೀಶಿಕ್ಷಣದ ಅವಶ್ಯಕತೆ:—

ಹುಡುಗರು ಉತ್ತಮರಾಗಬೇಕಾದರೆ, ಅವರಿಗೆ ಚಲೋ ಮಾದರಿಯನ್ನು ಹಾಕಿಕೊಡಲಿಕ್ಕೆ ಬೇಕು. ಅವರಿಗೆ ಅತ್ಯುತ್ತಮವಾದ ಮೊದಲನೇ ಮಾದರಿಯೆಂದರೆ ತಾಯಿಯು. ಅವರು ತಮ್ಮ ತಾಯಿಯನ್ನು ಅನುಕರಿಸುವಷ್ಟು ಬೇರೆ ಯಾವ ಜನರನ್ನೂ ಅನುಕರಿಸುವದಿಲ್ಲ. ಅವರಿಗೆ ನೀತಿಶಿಕ್ಷಣವು ಪ್ರತ್ಯಕ್ಷಪ್ರಮಾಣಗಳಿಂದ ದೊರೆಯುವಷ್ಟು ಕೇವಲ ಉಪದೇಶಪರವಾಕ್ಯಗಳಿಂದ ದೊರೆಯುವದಿಲ್ಲ. ಸುತ್ತುಮುತ್ತು ದುರುದಾಹರಣೆಗಳಿದ್ದು, ಬೇಕಾದಷ್ಟು ನೀತಿಶಾಸ್ತ್ರಗ

ಳನ್ನೋದಿದರೂ, ಅದರಿಂದ ಎಳ್ಳಷ್ಟಾದರೂ ಉಪಯೋಗವಾಗುವದಿಲ್ಲ. ಹುಡುಗರಿಗೆ ತಂದೆಯ ಶಿಕ್ಷಣಕ್ಕಿಂತಲೂ ತಾಯಿಯ ಶಿಕ್ಷಣವು ಮೊದಲು ದೊರೆಯುವದು. ಇದಲ್ಲದೆ ತಂದೆಯು ತನ್ನ ಮಕ್ಕಳಿಗೆ ಹೊಡೆದು ಬಡೆದು ಕಲಿಸಿದ ಮಾತುಗಳನ್ನೇ ತಾಯಿಯು ಸವಿನುಡಿಗಳಿಂದ ಕಲಿಸುವಳು. ಹುಡುಗರಿಗೆ ತಂದೆಯ ಅಂಜಿಕೆಯು ಬಹಳ. ಆದರೆ ತಾಯಿಯ ಬಗ್ಗೆ ಅವರ ಅಂತಃಕರಣದಲ್ಲಿ ಪ್ರೇಮವಿರುವದು. ಹುಡುಗರು ಬಹುತರವಾಗಿ ತಂದೆಯಿಂದ ಮಾನಸಿಕ ವಿದ್ಯೆಯನ್ನೂ ತಾಯಿಯಿಂದ ನೈತಿಕ ವಿದ್ಯೆಯನ್ನೂ ಕಲಿಯುವರು. ತಂದೆಯು ದುರ್ನಡತೆಯವನಿದ್ದರೂ ತಾಯಿಯು ಸದ್ಗುಣಸಂಪನ್ನಳಿದ್ದರೆ, ಹುಡುಗರು ಒಂದು ವೇಳೆ ಸುಶೀಲರಾಗಬಹುದು. ಆದರೆ ತಂದೆಯು ಸಂಪನ್ನನಿದ್ದರೂ ತಾಯಿಯು ಕೆಟ್ಟ ನಡತೆಯವಳಿದ್ದರೆ, ಹುಡುಗರು ಸುಶೀಲರಾಗುವದು ತೀರ ಕಡಿಮೆ. ಆದ್ದರಿಂದ ಹುಡುಗರು ಸದ್ಗುಣಿಗಳಾಗಬೇಕಾದರೆ, ತಾಯಿಯು ಅವಶ್ಯವಾಗಿ ಸದ್ಗುಣಿಯಾಗಿರಬೇಕು.

ಎಷ್ಟೋ ಜನರಿಗೆ ಸ್ತ್ರೀಶಿಕ್ಷಣದ ಮಹತ್ವವು ತಿಳಿಯುವದೇ ಇಲ್ಲ. ಆದ್ದರಿಂದ ಅವರು ಗಂಡು ಮಕ್ಕಳ ಶಿಕ್ಷಣಕ್ಕೆ ಲಕ್ಷಗೊಡುವಷ್ಟು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಲಕ್ಷಗೊಡುವದಿಲ್ಲ. ಈ ಸಂಸಾರದಲ್ಲಿ ಗಂಡಸರಂತೆ ಹೆಂಗಸರಾದರೂ ವ್ಯವಸ್ಥೆಯಿಂದಲೂ, ನಿಯಮಿತತನದಿಂದಲೂ, ಮಿತವ್ಯಯದಿಂದಲೂ ಅವಶ್ಯವಾಗಿರತಕ್ಕದ್ದು. ಹೆಂಗಸರು ಕೈ ಬಿಗಿಹಿಡಿಯದೆ ಮನಬಲ್ಲಂತೆ ವೆಚ್ಚಮಾಡಹತ್ತಿದರೆ, ಗಂಡಸರು ಬೇಕಾದಷ್ಟು ಹಣಗಳಿಸಿದರೂ ಅದು ಕೂಡಲೇ ಹಾಳಾಗುವದು. ಎಷ್ಟೋ ಹೆಂಗಸರು ಸ್ವಚ್ಛತೆ, ಆರೋಗ್ಯರಕ್ಷಣೆ, ಅಡಿಗೆ ಮಾಡುವದರಲ್ಲಿ ಜಾಣತನ ಮುಂತಾದವುಗಳನ್ನು ಚೆನ್ನಾಗಿ ಅರಿಯದ್ದರಿಂದ, ಅವರ ಮಕ್ಕಳು ಹೇಸಿಗಳೂ ರೋಗಿಗಳೂ ಆಗುತ್ತಾರೆ. ಆದ್ದರಿಂದ ಸ್ತ್ರೀಯರು ಆನಂದವೃತ್ತಿಯುಳ್ಳವರೂ, ಗೃಹಕೃತ್ಯಗಳಲ್ಲಿ ದಕ್ಷರೂ, ವ್ಯವಸ್ಥೆಯನ್ನು ಬಲ್ಲವರೂ, ಮಿತವ್ಯಯವನ್ನು ಅರಿತವರೂ ಆಗಿರತಕ್ಕದ್ದು.

ಉಪಸಂಹಾರ:—ಹುಡುಗರಿಗೆ ಚಲೋ ಇಲ್ಲವೆ ಕೆಟ್ಟ ಗೃಹಶಿಕ್ಷಣವು ದೊರೆಯುವದು ಮನೆಯೊಳಗಿನ ಮುಖ್ಯ ಜನರ ವರ್ತನವನ್ನವಲಂಬಿಸಿರುತ್ತದೆ. ಯಾವ ಮನೆಯಲ್ಲಿ ಜನರು ಪರಸ್ಪರವಾಗಿ ಪ್ರೇಮದಿಂದಲೂ ಸದ್ವರ್ತನದಿಂದಲೂ ನಡೆಯುತ್ತಾರೋ ಆ ಮನೆಯ ಹುಡುಗರು ಸುಸ್ವಭಾವದವರೂ, ಸದಾ

ಚಾರಿಗಳೂ, ಪ್ರಾಮಾಣಿಕರೂ, ಜಾಣರೂ ಆಗುವರು. ಮನೆಯ ಮುಖ್ಯ ಜನರು ತಮ್ಮ ಆಚರಣೆಯನ್ನು ನೆಟ್ಟಗಿಡದೆ, ಹುಡುಗರಿಗೆ ಬೇಕಾದಷ್ಟು ಉಪದೇಶ ಮಾಡಿದರೂ ಇಲ್ಲವೆ ಅವರಿಗೆ ಅಂಜಿಕೆ ಹಾಕಿದರೂ ಅದರಿಂದೇನೂ ಉಪಯೋಗ ವಾಗದೆ, ಹುಡುಗರು ಮೂರ್ಖರೂ, ನೀಚರೂ, ಠಕ್ಕರೂ ಆಗುತ್ತಾರೆ.

(೨೫) ಗೆಳೆತನ.

ಉತ್ಸವೇ ವ್ಯಸನೇ ಚೈವ ದುರ್ಭಿಕ್ಷೇ ಶತ್ರುವಿಗ್ರಹೇ ।
ರಾಜದ್ವಾರೇ ಶ್ಮಶಾನೇ ಚ ಯಸ್ತಿಷ್ಠತಿ ಸ ಬಾಂಧವಃ ॥

—ಹಿತೋಪದೇಶ.

೧. **ಚಲೋ ಮತ್ತು ಕೆಟ್ಟ ಮಿತ್ರರ ಲಕ್ಷಣಗಳು:**—ಚಲೋ ಮಿತ್ರನ ಹಲವು ಲಕ್ಷಣಗಳಲ್ಲಿ ಏಕನಿಷ್ಠೆ, ನಂಬಿಗೆ ಎಂಬ ಈ ಎರಡು ಗುಣಗಳೇ ಮುಖ್ಯವಾದವು. ಇವುಗಳಿಗೆ ಜ್ಞಾನ, ವಿಮರ್ಶೆ, ಸಮವಯಸ್ಸು, ಆನಂದವೃತ್ತಿ ಮುಂತಾದ ಗುಣಗಳನ್ನು ಹಲವರು ಜೋಡಿಸುತ್ತಾರೆ. ಈ ಎಲ್ಲ ಗುಣಗಳಲ್ಲಿ "ಒಂದೇಸಮನಾದ ಸ್ವಭಾವ" ಎಂಬ ಗುಣವು ಎಲ್ಲಕ್ಕೂ ಹೆಚ್ಚಿನದು. ಅಂದರೆ ಶಿರೋಲೇಖದಲ್ಲಿ ಬರೆದ ಸಂಸ್ಕೃತ ಶ್ಲೋಕದಲ್ಲಿ ಹೇಳಿರುವ ಮೇರೆಗೆ, ನಾವು ಉಚ್ಚಸ್ಥಿತಿಯಲ್ಲಿರಲಿ, ನೀಚಸ್ಥಿತಿಯಲ್ಲಿರಲಿ, ಇಲ್ಲವೆ ಬೇರೆ ಯಾವ ಸ್ಥಿತಿಯಲ್ಲಿದ್ದರೂ, ಯಾವನು ನಮ್ಮನ್ನು ಬಿಟ್ಟು ತೊಲಗುವದಿಲ್ಲವೋ ಮತ್ತು ಯಾವನ ಸ್ವಭಾವವು ಒಂದೇಸಮನಾಗಿರುವದೋ ಅವನೇ ನಿಜವಾದ ಮಿತ್ರನು. ಅವನೇ ಸನ್ಮಿತ್ರನು.

ರಹಸ್ಯಭೇದ, ಯಾಚನೆ, ನಿಷ್ಠುರತನ, ಕ್ರೋಧ ಮುಂತಾದ ದುರ್ಗುಣಗಳು ಕುಮಿತ್ರನ ಲಕ್ಷಣಗಳು. ಈ ದುರ್ಗುಣಗಳುಳ್ಳವರು ನಮ್ಮ ಮೋರೆಯ ಮುಂದೆ ಸವಿಮಾತುಗಳನ್ನಾಡಿ, ನಮ್ಮ ಪರೋಕ್ಷ ನಮ್ಮ ಕಾರ್ಯಗಳಿಗೆ ವಿಘ್ನವನ್ನುಂಟುಮಾಡುವರು. ಇಂಥವರು ಗೆಳೆತನಕ್ಕೆ ಅರ್ಹರಲ್ಲ.

೨. **ಚಲೋ ಗೆಳೆತನದಿಂದಾಗುವ ಲಾಭಗಳು:**—ಪ್ರಾಮಾಣಿಕನಾದ ಮಿತ್ರನೆಂದರೆ, ಒಂದು ದೊಡ್ಡ ಆಶ್ರಯವು. ಇಂಥ ಮಿತ್ರನಿದ್ದವನಿಗೆ ಹಣದ್ದೊಂದು ಬೊಕ್ಕಸವು ದೊರೆತ ಹಾಗಾಗುತ್ತದೆ. ಪ್ರಾಮಾಣಿಕ ಗೆಳೆಯ

ನನ್ನು ಯಾರೂ ಸರಿಗಟ್ಟಲಾರರು. ಅವನು ಜೀವವನ್ನುಂಟುಮಾಡುವ ಅಮೃತ ಲತೆಯೆಂದರೂ ಸಲ್ಲುವನು. ಆದ್ದರಿಂದ ಹಳೇ ಮಿತ್ರನನ್ನು ಎಂದೂ ಬಿಡ ಬಾರದು. ಯಾಕಂದರೆ ಹೊಸ ಮಿತ್ರನು ಅವನಿಗೆ ಎಂದೂ ಸರಿಯಾಗಲಾರನು. ಹಳೇ ಮದ್ಯವು ಸ್ವಾದವುಳ್ಳದ್ದಿರುವಂತೆ ಹಳೇ ಮಿತ್ರನಾದರೂ ಹೊಸಬನಿಗಿಂತ ಹೆಚ್ಚು ದಯಾಶೀಲನೂ ನ್ಯಾಯಪರಾಯಣನೂ ಇರುತ್ತಾನೆ. ನಿಜವಾದ ಮಿತ್ರನ ಕೂಡ ನಾವು ಒಂದುವೇಳೆ ವ್ಯಾಜ್ಯ ಮಾಡಿದರೂ ಇಲ್ಲವೆ ಅವನಿಗೆ ಕೆಟ್ಟ ನುಡಿಗಳನ್ನಾಡಿದರೂ, ಅವನು ನಮ್ಮ ಗೆಳೆತನವನ್ನು ಎಂದೂ ಬಿಡುವದಿಲ್ಲ; ಇಷ್ಟೇ ಅಲ್ಲ, ಅವನು ನಮ್ಮ ಸುಖದುಃಖಗಳಿಗೆ ಸಮಭಾಗಿಯಾಗುವನು.

೩ **ನೆನಪಿನಲ್ಲಿಡತಕ್ಕ ಮಾತುಗಳು**:—ಲೋಕವಿಶ್ರುತ ತತ್ವಜ್ಞಾನಿ ಯಾದ **ಸರ ಫ್ರಾನ್ಸಿಸ್ ಬೇಕನ್ನನು** ಗೆಳೆತನವನ್ನು ಕುರಿತು ಅನ್ನುವದೇ ನೆಂದರೆ :—

"ಗೆಳೆತನವು ಆನಂದವನ್ನು ಇಮ್ಮಡಿ ಮಾಡಿ, ಸುಖವನ್ನು ವರ್ಧಿಸುವದು. ಕಷ್ಟವನ್ನು ಕಡಿಮೆ ಮಾಡಿ, ದುಃಖವನ್ನು ಇಬ್ಭಾಗವಾಗಿ ಮಾಡುವದು. ನಿಜ ವಾಗಿ ಯಾವತ್ತೂ ವಿಚಾರಗಳನ್ನು ಪೂರ್ಣವಾಗಿ ಬಳಿಸಬೇಕಾದಲ್ಲಿ ಗೆಳೆತನ ದಂಥ ನೈತಿಕ ವಿಷಯವು ಮತ್ತೆ ಯಾವದೂ ಇಲ್ಲ. ಗೆಳೆತನ ಮಾಡಿಕೊಳ್ಳುವ ವಿದ್ಯೆಯು ನಮ್ರಸ್ವಭಾವದಿಂದಲೂ ಪರೋಪಕಾರಬುದ್ಧಿಯಿಂದಲೂ ಸುಲಭ ವಾಗಿ ಸಾಧ್ಯವಾಗುತ್ತದೆ. ನಮಗೆ ಬಹಳ ಜನರು ಹಿತಚಿಂತಕರಿದ್ದರೂ ಅಡ್ಡಿ ಯಿಲ್ಲ. ಆದರೆ ಜೀವದ ಗೆಳೆಯರೆಂಬವರು ಕಡಿಮೆಯಾಗಿರಬೇಕು. ಸವಿನುಡಿ ಗಳಿಂದ ಜನರು ಗೆಳೆಯರಾಗುವರು. ಹಲವರ ಕೂಡ ಶಾಂತತೆಯಿಂದಿರು. ಆದರೆ ಸಾವಿರಲೊಬ್ಬನನ್ನು ನಿನಗೆ ಸದಸದ್ವಿಚಾರಗಳನ್ನು ಹೇಳುವವನನ್ನಾಗಿ ಮಾಡಿಕೋ. ಯಾವನೊಬ್ಬನ ಕೂಡ ಗೆಳೆತನ ಮಾಡುವದಕ್ಕಿಂತ ಮೊದಲು, ಅವನನ್ನು ಚನ್ನಾಗಿ ಪರೀಕ್ಷಿಸಿ ನೋಡು. ಕೂಡಲೇ ಯಾರನ್ನೂ ನಂಬದಿರು. ಯಾಕಂದರೆ ಕೆಲವರು ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವದಕ್ಕಾಗಿಯೇ ಗೆಳೆಯ ರಾಗಲಿಚ್ಛಿಸುವರು. ನಿನ್ನ ಸಂಕಟಸಮಯದಲ್ಲಿ ಇಂಥವರಲ್ಲೊಬ್ಬನಾದರೂ ನಿನಗೆ ನೆರವಾಗನು. ಹಲವರು ನಿನ್ನ ಗೆಳೆಯರಿದ್ದು, ನಿನ್ನ ಕೂಡ ಬಡಿದಾಡಿ ಗೆಳೆತನ ಕೆಡಿಸಿಕೊಂಡರೆ, ನಿನ್ನಲ್ಲಿರುವ ನ್ಯೂನತೆಗಳನ್ನು ಹೊರಗೆಡವುತ್ತಾರೆ ; ಮತ್ತು ಹಲವರು ನಿನ್ನ ಕೂಡ ಉಂಡುಟ್ಟು ಸುಖಪಡಬೇಕೆಂದು ಗೆಳೆಯರಾಗಿ,

ನಿನಗೆ ವಿಪತ್ತು ಬಂದ ಕೂಡಲೆ ನಿನ್ನನ್ನು ಬಿಟ್ಟು ತೊಲಗುವರು. ಇಂಥವರು, ನೀನು ಊರ್ಜಿತಸ್ಥಿತಿಯಲ್ಲಿರುವಾಗ, ನಿನಗೂ ತಮಗೂ ಶರೀರಭೇದದ ಹೊರತು ಮನಸ್ಸಿನ ಭೇದವೇನೂ ಇಲ್ಲೆಂದು ಹೇಳಿ, ನೀನು ನಡಿಸುವಷ್ಟೇ—ಅದೇಕೆ ಅದಕ್ಕೂ ಹೆಚ್ಚಿನ ಅಧಿಕಾರವನ್ನು ನಿನ್ನ ಸೇವಕರ ಮೇಲೆ ನಡಿಸುವರು. ಆದರೆ ನೀನು ಧನಹೀನನಾಗಿ ಸಂಕಟದಲ್ಲಿ ಸಿಲುಕಲು, ಅವರು ನಿನ್ನ ಮೂರ್ಖತನಕ್ಕೆ ನಗುತ್ತ ಮೋರೆತಪ್ಪಿಸಿ ಹೊರಟುಹೋಗುವರು. ಇಂಥವರನ್ನು ಗೆಳೆಯರನ್ನಾಗಿ ಮಾಡಿಕೊಳ್ಳದಿರು. ನಿನ್ನ ಶತ್ರುಗಳಿಂದ ದೂರದಲ್ಲಿರು; ಮತ್ತು ಗೆಳೆಯರನ್ನು ಕುರಿತು ಎಚ್ಚರಗೊಳ್ಳು."

೪. **ಉಪಸಂಹಾರ**:—ಸಜ್ಜನರು ತಮ್ಮ ಅಮೃತತುಲ್ಯವಾದ ಉಪದೇಶದಿಂದ ನಮ್ಮ ಪಾಪವಾಸನೆಗಳನ್ನು ಹೋಗಲಾಡಿಸಿ, ನಮ್ಮ ಹಿತಸಂಬಂಧಗಳನ್ನೇ ಯೋಚಿಸುವರು; ನಮ್ಮ ಗುಟ್ಟುಗಳನ್ನು ಬಚ್ಚಿಟ್ಟು, ಗುಣಗಳನಷ್ಟೇ ಪ್ರಕಟಮಾಡುವರು; ಮತ್ತು ನಾವು ಸಂಕಟದಲ್ಲಿರಲು, ನಮ್ಮನ್ನು ಬಿಡದೆ ಪಾರು ಮಾಡುವರು. ಆದ್ದರಿಂದ ನಾವು ಯಾವಾಗಲೂ ಸಜ್ಜನರ ಗೆಳೆತನವನ್ನೇ ಮಾಡುತ್ತಿರಬೇಕು.

---

(೨೬) ಜೀವದ ಮೇಲಿನ ಮಮತೆ.

ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಜೀವನಾಶಾ ಧನಾಶಾ ಚ ಜೀರ್ಯತೋಽಪಿ ನ ಜೀರ್ಯತಿ ॥

—ಸುಭಾಷಿತ.

೧. **ಅರ್ಥ**:— ಮನುಷ್ಯನು ಮುಪ್ಪಾದ ಹಾಗೆ ಅವನ ಕೂದಲು ಬೆಳ್ಳಗಾಗುತ್ತ ಹೋಗಿ ಹಲ್ಲುಗಳು ಬೀಳಹತ್ತುತ್ತವೆ. ಆದರೆ ಇನ್ನೂ ನಾಲ್ಕೂ ಪ್ರತ್ತು ಬದುಕಿರಬೇಕೆಂಬ ಆಶೆಯೂ ಮತ್ತಿಷ್ಟು ದುಡ್ಡು ಗಳಿಸಬೇಕೆಂಬ ಹಂಬಲವೂ ಮಾತ್ರ ಬೆಳೆಯುತ್ತ ಹೋಗುತ್ತವೆ.

ಆಯುಷ್ಯದ ಸುಖಗಳನ್ನು ಕಡಿಮೆ ಮಾಡುವ ವಾರ್ಧಕ್ಯವು ಜೀವನಾಶೆಯನ್ನು ಮಾತ್ರ ಬೆಳಿಸುತ್ತದೆ. ತಾರುಣ್ಯದ ಭರದಲ್ಲಿ ನಾವು ವಾಡಿಕೆಯಾಗಿ ಹೀಯಾಳಿಸುವ ಭಯಗಳೇ ನಮ್ಮ ಮುಪ್ಪಿನ ಕಾಲದಲ್ಲಿ ಬಹು ಭಯಾನಕವಾಗಿ

ತೋರುತ್ತವೆ. ನಮ್ಮ ದಿವಸಗಳು ಹೋದ ಹಾಗೆ ನಾವು ಎಚ್ಚರಗೊಳ್ಳುತ್ತೇವೆ. ಮುಂದೆ ನಮ್ಮ ಗತಿಯು ಏನಾಗುವದೆಂಬ ಪ್ರಬಲವಾದ ಅಂಜಿಕೆಯು ನಮ್ಮ ಮನಸ್ಸಿನಲ್ಲಿ ಯಾವಾಗಲೂ ಕಟಿಯುಹತ್ತುತ್ತದೆ. ಮತ್ತು ನಮ್ಮ ಆಯುಷ್ಯದ ಉಳಿದ ಅಲ್ಪಭಾಗದಲ್ಲಿ ನಮ್ಮ ಜೀವನವನ್ನು ತಡೆಯಿಲ್ಲದೆ ಸಾಗಿಸುವ ಹವಣಿಕೆ ಯಲ್ಲಿ ನಾವು ಒಂದೇ ಸವನೆ ತೊಡಗಿರುತ್ತೇವೆ.

೨. **ಹೆಚ್ಚಾಗುವ ಕಾರಣಗಳು :—** ನಮ್ಮ ಸುತ್ತಮುತ್ತಲಿರುವ ಪದಾರ್ಥಗಳನ್ನು ನಾವು ಹೆಚ್ಚೆಚ್ಚು ನೋಡಿದಹಾಗೆ ನಮ್ಮಲ್ಲಿ ಅವುಗಳ ಬಗ್ಗೆ ಪ್ರೀತಿಯು ಹೆಚ್ಚಾಗುತ್ತದೆ. ಅವುಗಳನ್ನು ಮನಸ್ಸಿನೊಳಗಿಂದ ಹೊಡದೂಡುವದು ನಮ್ಮಿಂದಾಗದ ಮಾತು. ಅದರಂತೆಯೇ ಮುದುಕ ಮನುಷ್ಯರ ಮನಸ್ಸಿನಲ್ಲಿ ತಮ್ಮ ಹತ್ತರಿರುವ ಪ್ರತಿಯೊಂದು ವಸ್ತುವಿಗೋಸ್ಕರ ಲೋಭವೂ, ವಿಶೇಷವಾಗಿ ಜೀವದ ಮೇಲಿನ ಮಮತೆಯೂ ಹುಟ್ಟುತ್ತವೆಂಬದರಲ್ಲಿ ಸೋಜಿಗವೇನೂ ಇಲ್ಲ. ಯಾಕಂ ದರೆ ಈ ಜಗತ್ತಿನಲ್ಲಿ ಜೀವದಷ್ಟು ಪ್ರಿಯಕರವಾದ ವಸ್ತುವು ಮತ್ತೆ ಯಾವದೂ ಇಲ್ಲ. ನಾವು ಹುಟ್ಟಿದಂದಿನಿಂದ ಸಾಯುವವರೆಗೂ ಜೀವನೆಂಬ ಪದಾರ್ಥವು ನಮ್ಮ ಹತ್ತರವೇ ನಿರಂತರವಾಗಿರುವದರಿಂದಲೂ ಉಳಿದ ಪದಾರ್ಥಗಳು ಇಷ್ಟು ನಿಕಟವಾಗಿಯೂ ನಿರಂತರವಾಗಿಯೂ ನಮ್ಮ ಬಳಿಯಲ್ಲಿರುವದಿಲ್ಲಾದ್ದರಿಂದಲೂ ನಮ್ಮಲ್ಲಿ ಅದರ ಸಲುವಾಗಿ ಇಷ್ಟು ಮಮತೆಯು ಹುಟ್ಟುವದು ಸ್ವಾಭಾವಿಕ ವಾದದ್ದು. ಇವಲ್ಲದೆ ಕಳೆದುಹೋದ ದಿವಸಗಳಿಗೂ ಮುಂದೆ ಬರುವ ದಿವಸ ಗಳಿಗೂ ಸರಿಮಾಡಿ ನೋಡಲು ವಸ್ತುತಃ ಭವಿಷ್ಯತ್ ಕಾಲವು ಬಹಳೇ ಭಯಾನಕ ವಾಗಿ ತೋರುವದು. ಕಳೆದು ಹೋದ ಆಯುಷ್ಯದಲ್ಲಿ ನಮಗೆ ಸುಖಪ್ರಾಪ್ತಿ ಯಾಗಿರುವದೆಂತಲೂ, ಮುಂದೆ ಆಗುವ ಸುಖಗಳಿಗಿಂತಲೂ ಹಿಂದೆ ಆದ ಸುಖ ಗಳೇ ಹೆಚ್ಚಿನವೆಂತಲೂ ಅನುಭವದಿಂದ ಸಿದ್ಧವಾಗುತ್ತದೆ. ಆದರೂ ಮುಂದೆ ಇನ್ನೂ ಹೆಚ್ಚು ಸುಖವಿದ್ದೀತೆಂಬ ಅಜ್ಞಾನವು ಭಾವಿಸುಖಗಳನ್ನು ಬಹು ಅಂದ ವಾಗಿ ತೋರಿಸಿ ನಮ್ಮನ್ನು ವಂಚಿಸುವದು. ದುಷ್ಟನಾದ ಮಾರೀಚ ರಾಕ್ಷಸನು ಕಪಟದ ಹೊನ್ನೆರಳೆಯ ರೂಪವನ್ನು ತಾಳಿ, ಲೋಕಮಾತೆಯಾದ ಸೀತಾದೇವಿ ಯನ್ನು ವಂಚಿಸಿದಂತೆ, ಭಾವಿಸುಖವೆಂಬ ಮಾಯೆಯು ತನ್ನನ್ನು ಹಿಂಬಾಲಿಸುವ ದಕ್ಕೆ ನಮಗೆ ಒತ್ತಾಯ ಮಾಡುವದು. ಸೋತ ಹಾಗೆ ಜೂಜಾಡುವವರಿಗೆ ಇನ್ನೂ ಆಡಬೇಕೆಂಬ ಅಭಿಲಾಷೆಯು ಹೆಚ್ಚೆಚ್ಚು ಬೆಳೆಯುವಂತೆ, ಬೇಕಾದಷ್ಟು

ನಿರಾಶೆ ಹೊಂದಿದರೂ ಭಾವಿಸುಖಭ್ರಾಂತಿಯು ಕಡಿಮೆಯಾಗದೆ ಮತ್ತಿಷ
ಹೆಚ್ಚಾಗುತ್ತ ಹೋಗುವದು. ಆದಕಾರಣ ಜೀವದ ಮೇಲಿನ ಮಮತೆಯಾದರು
ಹೆಚ್ಚಾಗುತ್ತ ಹೋಗುವದು.

೩. **ಉದಾಹರಣೆ**:—ಚೀನದೇಶದ **ಚಿನವ್ಹಾಂಗ**ನೆಂಬ ಅರಸ
ಪಟ್ಟವೇರಿದ ತರುವಾಯ ತನ್ನ ಪೂರ್ವಜರ ಆಡಳತೆಯಲ್ಲಿ ಅನ್ಯಾಯವಾಗಿ ಸ
ಯಲ್ಲಿಟ್ಟ ಜನರನ್ನು ಬಿಟ್ಟುಗೊಡುವ ಬಗ್ಗೆ ಅಪ್ಪಣೆಯನ್ನಿತ್ತನು. ಆಗ ಸೆರೆಯಿಂ
ಬಿಡುಗಡೆ ಮಾಡಿದ ಅರಸನನ್ನು ಹಾಡಿಹರಸಲಿಕ್ಕೆ ಬಂದ ಸೆರೆಯಾಳುಗಳಲ್ಲೊ
ಮುದುಕ ಮನುಷ್ಯನು ಅರಸನ ಕಾಲಿಗೆರಗಿ, ಗಂಭೀರ ಮುದ್ರೆಯಿಂದ ನುಡಿ
ದ್ದೇನಂದರೆ:— “ಜೀಯಾ, ನನಗೆ ಏನಿಲ್ಲೆಂದರೂ ಎಂಭತ್ತು ವರ್ಷಗಳಾಗಿ
ನಾನು ಯಾವ ತಪ್ಪಿಗೂ ಗುರಿಯಾಗಿದ್ದಿಲ್ಲವಾದರೂ ನನ್ನನ್ನು ಸೆರೆಯಲ್ಲಿಟ್ಟು
ಹೊತ್ತಿಗೆ ಐವತ್ತು ವರ್ಷಗಳಾದವು. ನಾನು ಇಷ್ಟು ವರ್ಷಗಳ ವರೆಗೆ ಏಕಾಂ
ವಾದ ಕತ್ತಲೆಯ ಕೋಣೆಯೊಳಗಿದ್ದದರಿಂದ, ಕತ್ತಲೆಯಲ್ಲಿಯೇ ಇರುವ ಅಭ
ಸವು ನನಗುಂಟಾಗಿದೆ. ನಿಮ್ಮ ದಯದಿಂದ ಈ ಹೊತ್ತು ಬಿಡುಗಡೆ ಹೊಂ
ಕಣ್ಣು ಕುಕ್ಕುವ ಬಿಸಿಲಲ್ಲಿ ಬೀದಿಗಳೊಳಗೆ ತಿರುಗಾಡಿ ನೋಡಲು, ನನ್ನ ಮನೆ
ವರೂ ಆಪ್ತೇಷ್ಟರೂ ಸತ್ತು ಹೋಗಿದ್ದಾರೆ. ಯಾರೂ ನನ್ನ ಗುರ್ತು ಹಿಡಿ
ಲಾರರು. ಇನ್ನು ಮೇಲೆ ಬಹಳ ದಿವಸ ಬದುಕಲಾರೆ. ಆದ್ದರಿಂದ ಈ ವರೆ
ನಾನಿದ್ದ ಕತ್ತಲೆಯ ಕೋಣೆಯೊಳಗೇ ನನ್ನನ್ನು ಮರಳಿ ಒಯಿದಿಡುವದ
ಅಪ್ಪಣೆ ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ. ನನಗೆ ಅರಮನೆ
ಸುಂದರವಾದ ಗೋಡೆಗಳಿಗಿಂತ ಕತ್ತಲೆಯ ಕೋಣೆಯ ಗೋಡೆಗಳೇ ಹೆಚ
ನಿಚ್ಚಳಾಗಿಯೂ ಅಂದವಾಗಿಯೂ ಕಾಣಿಸುತ್ತವೆ.”

ಸೆರೆಮನೆಯು ಸಲುವಾಗಿ ಆ ಮುದುಕ ಮನುಷ್ಯನ ಪ್ರೀತಿಯು ಈ ಬ
ಯಾಗಿದ್ದ ಕಾರಣವೇನು ? ಸೆರೆಮನೆಯ ಏಕಾಂತವಾಸವನ್ನು ಯಾರಾದರ
ಬಯಸುವರೋ ? ಆದರೂ ಆ ಸ್ಥಳದಲ್ಲಿಯೇ ಬಹಳ ದಿವಸ ಇದ್ದದರಿಂದ,
ಮುದುಕ ಮನುಷ್ಯನಲ್ಲಿ ಈ ಬಗೆಯ ಮಮತೆಯು ಹುಟ್ಟಿತು. ಅದರಂತೆಯೆ
ನಮ್ಮ ಮಕ್ಕಳೂ, ನಾವು ಹಚ್ಚಿದ ಗಿಡಗಳೂ, ಕಟ್ಟಿದ ಮನೆಗಳೂ ನಮ್ಮ ಮತ
ಭೂಮಿಯ ನಡುವೆ ಇರುವ ಸಂಬಂಧವನ್ನು ಹೆಚ್ಚು ಸಮೀಪವಾಗಿ ಮಾ
ವದಕ್ಕೂ ಅದರಿಂದಾಗುವ ವಿಯೋಗವನ್ನು ದುಃಸಹವಾಗಿ ಮಾಡುವದಕ

ಕಾರಣವಾಗಿರುತ್ತವೆ. ನಾವು ಮುದುಕರಾದಹಾಗೆ ನಮ್ಮ ಜೀವವು ಹಳೇ ಗೆಳೆಯನಂತೆ ತೋರುವದು. ಅದರಿಂದ ಮತ್ತೇನೂ ಸುಖವಿಲ್ಲದಿದ್ದರೂ ಅದನ್ನೇ ಹೆಚ್ಚೆಚ್ಚು ಪ್ರೀತಿಸುವೆವು. ಮತ್ತು ಸುಖಲೇಶವಿಲ್ಲದಿದರೂ ಈ ಲೋಕವನ್ನು ಬಿಟ್ಟು ಪರಲೋಕಕ್ಕೆ ತೆರಳುವಾಗ ಅತಿ ಘೋರವಾದ ವೇದನೆಯಲ್ಲಿ ಮುಳುಗಿ ಧಡವನ್ನು ಕಾಣದೆ ಬಳಲುವೆವು.

---

(೨೭) ಜ್ಞಾನ.

"ಜ್ಞಾನವುಳ್ಳವರೊಡಲು ಭಾನುಮಂಡಲದಂತೆ
ಜ್ಞಾನಿಲ್ಲದವರ ಬರಿಯೊಡಲು ಅಗಸರ ಬಾನಿಯಂತಕ್ಕು ಸರ್ವಜ್ಞ".

೧. ಜ್ಞಾನ ಈ ಶಬ್ದವು, ಜ್ಞಾ ಅಂದರೆ ತಿಳಿ ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿರುತ್ತದೆ. ಮನುಷ್ಯನಿಗೆ ಬುದ್ಧಿಯು ಇರುವದು ಸಹಜವು. ಬುದ್ಧಿಯ ಬಲದಿಂದ ಜ್ಞಾನವುಂಟಾಗುತ್ತದೆ. ಹುಟ್ಟಿದ ಕೂಡಲೆ ಮನುಷ್ಯನಿಗೆ ಜ್ಞಾನವಿರುವದಿಲ್ಲ. ಆದರೆ ಜ್ಞಾನ ಪಡೆಯುವ ಸಾಮರ್ಥ್ಯವನ್ನು ಮಾತ್ರ ದೇವರು ಅವನಿಗೆ ದಯಪಾಲಿಸಿರುವನು.

ಜ್ಞಾನವು ಮನುಷ್ಯರ ಕಾಡುಸ್ಥಿತಿ, ಕ್ಷುದ್ರತನ, ಕ್ರೂರತನ, ಅಹಂಕಾರಗಳನ್ನೆಲ್ಲ ಹೊಯಿದೋಡಿಸುತ್ತದೆ. ಅದು ಯಾವದೊಂದನ್ನು ವಿಚಾರಿಸದೆ ಗ್ರಹಿಸಬಾರದೆಂತಲೂ, ಪಕ್ಷ-ಪರಪಕ್ಷಗಳನ್ನು ಚನ್ನಾಗಿ ವಿಚಾರಿಸಿ ನೋಡಬೇಕೆಂತಲೂ ಮನಸ್ಸಿಗೆ ಬೋಧಿಸುತ್ತದೆ.

೨. **ಸಂಪಾದಿಸುವ ಸಾಧನಗಳು :— ಗುರೂಪದೇಶ, ವಿಚಾರ, ಅವಲೋಕನ, ವಾದ, ವಾಚನ** ಇವು ಜ್ಞಾನ ಸಂಪಾದಿಸುವ ಮುಖ್ಯ ಸಾಧನಗಳು. ಶಾಲೆಗಳಲ್ಲಿ ಗುರುಗಳು ಜ್ಞಾನವನ್ನುಂಟುಮಾಡುವರು. ಈ ಸಾಧನಕ್ಕೆ **ಗುರೂಪದೇಶ**ವೆಂದೆನ್ನುವರು. ಇಂದ್ರಿಯಗಳ ಸಹಾಯದಿಂದುಂಟಾಗುವ ಅನುಭವಗಳನ್ನು ಕುರಿತು ಕಾರ್ಯಕಾರಣಗಳನ್ನು ನಿರ್ಣಯಿಸುವದಕ್ಕೆ **ವಿಚಾರ**ವೆಂದು ಅನ್ನುವರು. **ಅವಲೋಕನ**ವೆಂದರೆ ನೋಡೋಣ ಅಥವಾ ತಿಳುಕೊಳ್ಳೋಣ. ಉದಾಹರಣಾರ್ಥ, ಭೂಗರ್ಭ, ವನಸ್ಪತಿ, ರಸಾಯನ ಮುಂತಾದ ಬೇರೆ ಬೇರೆ ವಿಷಯಗಳ ಗುಣದೋಷಗಳನ್ನು

ತಿಳುಕೊಳ್ಳೋಣ. ಇದಕ್ಕೆ ಅನುಭವವೆಂದೆನ್ನುವರು. ತಮಗಿಂತಲೂ ಶ್ರೇಷ್ಠ ರಾದವರ ಕೂಡ ವಾದವಿವಾದ ಮಾಡುವದರಿಂದಲೂ ಜ್ಞಾನವುಂಟಾಗುತ್ತದೆ. ಸಮಾನಸ್ಕಂಧರ ಕೂಡ ಸಂಭಾಷಣೆ ಮಾಡುವದರಿಂದ ಸಂಶಯನಿವೃತ್ತಿಯಾಗು ತ್ತದೆ. ಕಡಿಮೆಯುವರ ಕೂಡ ಯಾವದೊಂದು ವಿಷಯವನ್ನು ಚರ್ಚೆಮಾಡು ವದರಿಂದ ಮೊದಲಿದ್ದ ಜ್ಞಾನವು ಸುವ್ಯವಸ್ಥಿತವಾಗುತ್ತದೆ. **ವಾಚನ**ವೆಂದರೆ ಅರ್ಥಬೋಧವಾಗುವಂತೆ ಓದೋಣ. ವಿದ್ವಜ್ಜನರು ಬರೆದಿಟ್ಟ ಗ್ರಂಥಗಳ ನ್ನೋದುವದರಿಂದ ಜ್ಞಾನವುಂಟಾಗುತ್ತದೆ.

೩. **ನೆನಪಿನಲ್ಲಿಡತಕ್ಕ ಮಾತುಗಳು** :—ವಿದ್ಯಾರ್ಥಿಯು ದೊಡ್ಡ ವನಾಗುತ್ತ ಹೋದಹಾಗೆ ಅವನಿಗೆ ಗುರುವಿನ ಸಹಾಯವು ಕಡಿಮೆಯಾಗುತ್ತ ಹೋಗತಕ್ಕದ್ದು. ಆದಷ್ಟು ಮಟ್ಟಿಗೆ ಶಿಕ್ಷಕರನ್ನು ಅವಲಂಬಿಸದಿರುವದು ಉತ್ತಮವು. ಪ್ರತಿಯೊಂದು ಮಾತನ್ನು ಕೇವಲ ಶಿಕ್ಷಕರಿಂದಲೇ ತಿಳಿದುಕೊಳ್ಳುವ ಚಟವು ಒಮ್ಮೆ ಹತ್ತಿತೆಂದರೆ, ಹುಡುಗರಲ್ಲಿ ಸ್ವಾವಲಂಬನವೇ ಉಳಿಯುವದಿಲ್ಲ. ವ್ಯವಹಾರದಲ್ಲಿ ಅಡಿಗಡಿಗೆ ತೊಂದರೆಗಳುಂಟಾಗುವವು. ಆದರೆ ಇಂಥ ಪ್ರತಿ ಯೊಂದು ಪ್ರಸಂಗದಲ್ಲಿ ಪಾರುಮಾಡುವ ಶಿಕ್ಷಕರನ್ನು ದೊರಕಿಸುವದು ಹೇಗೆ! ಆದ್ದರಿಂದ ಸ್ವಲ್ಪ ವಿಚಾರ ಮಾಡಿದರೆ ತಮ್ಮಿಂದಲೇ ಪರಿಹಾರವಾಗುವ ತೊಂದರೆ ಗಳನ್ನು ಕುರಿತು ಅಡಿಗಡಿಗೆ ಶಿಕ್ಷಕರನ್ನು ಕೇಳುವದು ಸರಿಯಲ್ಲ. ಅವುಗಳ ಬಗ್ಗೆ ನಾವೇ ಸೂಕ್ಷ್ಮದೃಷ್ಟಿಯಿಂದ ವಿಚಾರಮಾಡಿ ಅವುಗಳನ್ನು ಪರಿಹರಿಸ ತಕ್ಕದ್ದು. **ಭಾಸ್ಕರಾಚಾರ್ಯ, ಗ್ಯಾಲಿಲಿಯೊ** ಮೊದಲಾದ ಗಣಿತಜ್ಞರು ದುರ್ಬಿನಿಯ ಸಹಾಯವಿಲ್ಲದೆ ಗ್ರಹಗಳನ್ನು ಗೊತ್ತುಹಚ್ಚಲಿಲ್ಲವೇ! ಗಿಡದಿಂದ ಹಣ್ಣು ಬೀಳುವದನ್ನು ಎಲ್ಲರೂ ದಿನಾಲು ನೋಡುತ್ತಾರೆ. ಆದರೆ **ನ್ಯೂಟನ್ನ**ನ ಹೊರತು ಗುರುತ್ವಾಕರ್ಷಣದ ಅನುಮಾನವು ಮತ್ತೆ ಯಾರ ಮನಸ್ಸಿನಲ್ಲಾದರೂ ಹುಟ್ಟಿತೇ! ಹೊಳೆಗಳಲ್ಲಿಯೂ ಸಮುದ್ರಗಳಲ್ಲಿಯೂ ಕಟ್ಟಿಗೆಗಳು ತೇಲಿ ಬರುವ ವನ್ನು ಕಾಣುವುದು ವಿರಲವಲ್ಲ. ಆದರೆ ಪಶ್ಚಿಮ ದಿಕ್ಕಿನಿಂದ ತೇಲಿಬಂದ ಕಟ್ಟಿಗೆ ಯನ್ನು ನೋಡಿ ಆ ದಿಕ್ಕಿಗೆ ನೆಲವಿರಬೇಕೆಂದು ನಿಶ್ಚಯಿಸಿ, ಅಮೇರಿಕಾ ಖಂಡ ವನ್ನು ಗೊತ್ತು ಹಚ್ಚಿದವನು **ಕೋಲಂಬಸ**ನಲ್ಲವೇ! ಇಂಥವರಿಗೆ ಪುಸ್ತಕಗಳ ಸಹಾಯವು ಸ್ವಲ್ಪವಾದರೂ ಇತ್ತೇ? ಆದ್ದರಿಂದ ನಾವು ಕಲಿಯುವ ವಿಷಯ ಗಳನ್ನು ಕುರಿತು ಆದಷ್ಟು ಮಟ್ಟಿಗೆ ನಾವೇ ಸೂಕ್ಷ್ಮರೀತಿಯಿಂದ ವಿಚಾರ ಮಾಡಿ

ಅವುಗಳ ಜ್ಞಾನವನ್ನು ಸಂಪಾದಿಸತಕ್ಕದ್ದು.

೪. ಲಾಭಗಳು:— ಜ್ಞಾನದಿಂದ ಅಸಂಖ್ಯ ಲಾಭಗಳಾಗುತ್ತವೆ. ಮೊದಲು ಸಮುದ್ರವು ತಾವಿರುವ ದೇಶದ ಮೇರೆಯಾಗಿರುವದೆಂತಲೂ ಆದರಾಚೆಗೆ ನೆಲವಿರುವದಿಲ್ಲೆಂತಲೂ ಜನರು ತಿಳಿಯುತ್ತಿದ್ದರು. ಆದರೆ ಜ್ಞಾನದ ಬಲದಿಂದ ಕೋಲಂಬಸನು ಅಮೇರಿಕಾಖಂಡವನ್ನು ಗೊತ್ತುಹಚ್ಚಿದನು. ವಿದ್ಯುಲ್ಲತೆಯ ಸಹಾಯದಿಂದ ಪೃಥ್ವಿಯ ಯಾವ ಭಾಗಕ್ಕೇ ಆಗಲಿ ಕ್ಷಣಾರ್ಧದಲ್ಲಿ ಸುದ್ದಿಯನ್ನು ಕಳುಹಬಹುದು. ಅಚ್ಚುಹಾಕುವ ಯುಕ್ತಿಯು ಗೊತ್ತಾಗಿ ಪುಸ್ತಕಗಳು ಪ್ರಸಿದ್ಧವಾಗಹತ್ತಿದಂದಿನಿಂದ ಉಪಯುಕ್ತವಾದ ಮತ್ತು ಉದಾತ್ತವಾದ ವಿಚಾರಗಳು ಪ್ರಕಟಿಸಲ್ಪಡಹತ್ತಿವೆ. ವರ್ತಮಾನಪತ್ರಗಳ ಸಹಾಯದಿಂದ ಇಡೀ ಪೃಥ್ವಿಯ ಸುದ್ದಿಯು ತಿಳಿಯಬರುತ್ತದೆ. ಉಗಿಬಂಡಿ ಉಗಿಹಡಗಗಳ ಸಹಾಯದಿಂದ ಬೇಕಾದತ್ತ ಹೋಗಿಬರಬಹುದು. ಸುಜ್ಞಾನಿಗಳು ಅಜ್ಞಾನಿಗಳನ್ನು ವಶಮಾಡಿಕೊಳ್ಳಬಹುದು. ಸಾರಾಂಶ, ಪಂಚಮಹಾಭೂತಗಳು ಕೂಡ ಮನುಷ್ಯನನ್ನು ದಾಸಾನುದಾಸರಂತೆ ಸೇವಿಸಹತ್ತಿರುವವು. ಮನುಷ್ಯನಲ್ಲಿ ಜ್ಞಾನವಿದ್ದುದರಿಂದಲೇ ದೇವರು ಅವನಿಗೆ ಇಡೀ ಭೂಮಂಡಲದ ಆಧಿಪತ್ಯವನ್ನು ಕೊಟ್ಟಿರುವನು. ಆದ್ದರಿಂದ "**ಜ್ಞಾನವೇ ಬಲವು**" ಎಂಬ ನಾಣ್ಣುಡಿಯುಂಟಾಗಿದೆ.

---

(೨೮) ತೃಪ್ತಿ.

ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ
ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ ॥
ಸ ತು ಭವತು ದರಿದ್ರೋ ಯಸ್ಯ ತೃಷ್ಣಾ ವಿಶಾಲಾ
ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ ॥ ಭರ್ತೃಹರಿ.

ಅರ್ಥ:— ಎಲೈ ಅರಸನೇ! ಈ ಸಂಸಾರದಲ್ಲಿ ನಮಗೆ ನಾರುಬಟ್ಟೆಯಿದ್ದರೂ ನಮ್ಮ ಕೆಲಸವು ಸಾಗುವದು. ಆದರೆ ನೀನು ಮಾತ್ರ ರೇಶಿಮೆಯ ವಸ್ತ್ರದಿಂದಲೇ ಸಂತುಷ್ಟನಾಗುವಿ. ಹೀಗಿದ್ದರೂ ನಿನಗೂ ನಮಗೂ ಉಂಟಾಗುವ ತೃಪ್ತಿಯು ಸಮವೇ ಸರಿ. ಅದರಲ್ಲಿ ಏನೂ ಭೇದವಿಲ್ಲ. ದೀರ್ಘಾಶೆಯುಳ್ಳವನೇ ದರಿದ್ರನು. ಮನಸ್ಸು ಸಂತುಷ್ಟವಿದ್ದರೆ, ಈ ಜಗತ್ತಿನಲ್ಲಿ ಶ್ರೀಮಂತರಾರು! ಬಡವರಾರು!

೧. **ಅರ್ಥ**:— ಮನುಷ್ಯನ ಸುಖಕ್ಕೆ ಹಲವು ಸಾಧನಗಳಿರುತ್ತವೆ. ಅವುಗಳಲ್ಲಿ ಉದ್ಯೋಗ, ಮಿತವ್ಯಯ, ಪರೋಪಕಾರ ಮುಂತಾದವುಗಳು ಮುಖ್ಯವಾದವು. ಆದರೆ ಇವೆಲ್ಲವುಗಳಿಗಿಂತ ಹೆಚ್ಚಿನ ಸುಖವನ್ನುಂಟು ಮಾಡುವ ಸಾಧನವು ತೃಪ್ತಿಯೇ ಸರಿ. ತೃಪ್ತಿಯೆಂದರೆ, ದೇವರು ನಮಗೆ ಕೊಟ್ಟದ್ದರಲ್ಲಿಯೇ ಸಮಾಧಾನಪಡುವದು; ಮತ್ತು ನಮ್ಮ ಹತ್ತರ ಇಲ್ಲದ ಒಡವೆಗಳ ಸಲುವಾಗಿ ಚಿಂತೆಮಾಡದಿರುವದು. ದೇವರು ಒಬ್ಬರಂತೆ ಮತ್ತೊಬ್ಬರನ್ನು ಹುಟ್ಟಿಸಿರುವದಿಲ್ಲ. ಜಗತ್ತಿನಲ್ಲಿ ಯಾವತ್ತು ಐಶ್ವರ್ಯಾದಿ ಸುಖಸಾಧನಗಳನ್ನು ಯಾವನೂ ಸಂಪೂರ್ಣವಾಗಿ ಹೊಂದಿರುವದಿಲ್ಲ. ಒಬ್ಬನಿಗಿಂತ ಮತ್ತೊಬ್ಬನು ಶ್ರೀಮಂತನಿರುತ್ತಾನೆ. ಆದರೆ ಬಡ ಮನುಷ್ಯನು ತನಗಿಂತ ಶ್ರೀಮಂತನಾದ ಮನುಷ್ಯನ ಸಂಪತ್ತನ್ನು ಕಂಡು ಖೇದಪಡುವದಕ್ಕಿಂತ ತನಗಿಂತ ಬಡವನಾದವನ ಸ್ಥಿತಿಯನ್ನು ಕಂಡು, “ನನಗಿಂತಲೂ ಬಡವರಿರುತ್ತಾರೆ; ಅಂದಮೇಲೆ ಶ್ರೀಮಂತ ಮನುಷ್ಯನ ಸಂಪತ್ತನ್ನು ಕಂಡು ನಾನೇಕೆ ಅಸೂಯಪಟ್ಟು ದುಃಖಿತನಾಗಬೇಕು!” ಎಂಬ ವಿಚಾರವನ್ನು ಮನಸ್ಸಿನಲ್ಲಿ ತಂದು ಸಂತೋಷಪಡತಕ್ಕದ್ದು. ಅದರಿಂದಲೇ ಅವನು ಸುಖಿಯಾಗುವನು.

ನಾವು ನಿರ್ಜನವಾದ ಪ್ರದೇಶದಲ್ಲಿಯೇ ಇರಲಿ, ಕಾಂಚನಪರ್ವತದಲ್ಲಿಯೇ ಇರಲಿ, ಬ್ರಹ್ಮದೇವರು ನಮ್ಮ ಹಣೆಯಲ್ಲಿ ಬರೆದಿಟ್ಟ ಸ್ವಲ್ಪ ಇಲ್ಲವೆ ಬಹಳ ಹಣವು ನಮಗೆ ದೊರೆಯುವದು ನಿಜವು. ಉದಾಹರಣಾರ್ಥ, ಒಂದು ಗಡಿಗೆಯನ್ನು ನೋಡಿರಿ. ಅದನ್ನು ಬಾವಿಯೊಳಗಾಗಲಿ ಸಮುದ್ರದೊಳಗಾಗಲಿ ಎಲ್ಲಿ ಮುಳುಗಿಸಿ ತುಂಬಿದರೂ, ಸ್ವಪ್ರಮಾಣಾನುರೂಪ ಜಲವನ್ನಷ್ಟೇ ಸ್ವೀಕರಿಸುತ್ತದೆ ಹೊರತು ಹೆಚ್ಚು ನೀರನ್ನು ಹಿಡಿಯುವದಿಲ್ಲ. ಆದ್ದರಿಂದ ನಮ್ಮ ದೈವದಿಂದೊದಗಿದ ಸ್ಥಿತಿಯನ್ನು ಯಾವ ಉಪಾಯಗಳಿಂದಾದರೂ ಸುಧಾರಿಸಲಿಕ್ಕೆ ಬಾರದಿದ್ದಲ್ಲಿ, ನಾವು ಅದೇ ಸ್ಥಿತಿಯಲ್ಲಿರುವದು ದೇವರ ಸಂಕಲ್ಪವೆಂದು ತಿಳಿದು ಸುಖಪಡುವದೇ ನಿಜವಾದ ತೃಪ್ತಿಯ ಲಕ್ಷಣವು.

೨. **ಪ್ರಕಾರಗಳು**:— ತೃಪ್ತಿಯು ದ್ವಿವಿಧವಾಗಿರುವದು. ಮೇಲೆ ಹೇಳಿದಂತೆ ಸುಧಾರಿಸಲಿಕ್ಕೆ ಬಾರದ ಸ್ಥಿತಿಯಲ್ಲೂ ಸಹ ಸಂತೋಷದಿಂದಿರುವದು ಯೋಗ್ಯವಾದ ತೃಪ್ತಿಯು. ಯಾಕಂದರೆ ನಮ್ಮ ಸ್ಥಿತಿಯನ್ನು ಬದಲು ಮಾಡಲಿಕ್ಕೆ ನಮ್ಮ ಉಪಾಯಗಳು ಸಾಗುವದಿಲ್ಲ. ಒಂದು ವೇಳೆ ಹೆಡ್ಡತನದಿಂದ

ಅದನ್ನು ಬದಲು ಮಾಡಲಿಕ್ಕೆ ಹೋದರೆ, ಅದಕ್ಕೋಸ್ಕರ ಯೋಚಿಸಿದ ಹಂಚಿಕೆಗಳೆಲ್ಲ ನಿಷ್ಫಲವಾಗಿ ಮನಸ್ಸಿಗೆ ವ್ಯಸನವು ಮಾತ್ರ ಆಗುವದು; ಮತ್ತು ಜನರಲ್ಲಿ ನಗೆಗೇಡಾಗುವದು.

ಆದರೆ ಉದ್ಯೋಗದಿಂದಲೂ ಪ್ರಯತ್ನದಿಂದಲೂ ಸುಧಾರಿಸಲಿಕ್ಕೆ ಬರುವಂಥ ಹಲವು ಸ್ಥಿತಿಗಳಿರುತ್ತವೆ. ಉದಾಹರಣಾರ್ಥ, ನಾವು ದಿನಾಲು ತಕ್ಕೊಳ್ಳುವ ಆಹಾರವೂ, ಉಡಿಗೆ ತೊಡಿಗೆ ಮುಂತಾದ ಪ್ರತಿದಿನದ ಒಡವೆಗಳೂ ನಮ್ಮ ಮನಸ್ಸಿಗೆ ತಕ್ಕವುಗಳಲ್ಲೆಂದು ಕಲ್ಪಿಸುವ. ಆದರೆ ಅವುಗಳನ್ನು ನಮಗೆ ತಕ್ಕವುಗಳನ್ನಾಗಿ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡದೆ ನಾವು ಹಾಗೆಯೇ ತೃಪ್ತರಾದರೆ, ಅದು ನಮ್ಮ ಮೂರ್ಖತನವೇ ಸರಿ. ಈ ಜಗತ್ತು ಹುಟ್ಟಿದಂದಿನಿಂದ ಮನುಷ್ಯರೆಲ್ಲರು ಈ ರೀತಿಯಲ್ಲಿ ಹುಚ್ಚುತನದಿಂದ ತೃಪ್ತರಾಗಿದ್ದರೆ, ಮತ್ತು ಸೋಮಾರಿಗಳಾಗಿ ಉಪಾಯಗಳಿಂದ ದೂರ ಮಾಡಲಿಕ್ಕೆ ಬರುವ ವಿಪತ್ತುಗಳಿಗೆ ಒಳಗಾಗಿದ್ದರೆ, ಅವರಿಗೆ ಈ ವರೆಗೂ ಕಾಡುಸ್ಥಿತಿಯಲ್ಲಿಯೇ ಇರಬೇಕಾಗುತ್ತಿತ್ತು. ಆದಕಾರಣ ಈ ತರದ ತೃಪ್ತಿಯು ಗರ್ಹ್ಯವಾದದ್ದು.

೩. **ತೃಪ್ತಿಯಿಲ್ಲದಿರುವದರಿಂದಾಗುವ ಹಾನಿಗಳು**:— ತೃಪ್ತಿ ಹೊಂದದ ಮನುಷ್ಯರಿಗೆ ಮಹತ್ವಾಕಾಂಕ್ಷಿಗಳೆಂದೆನ್ನುವರು. ಇಂಥ ಅತ್ಯಾಶೆಯುಳ್ಳ ಜನರಿಂದ ಒಂದು ವೇಳೆ ಲಾಭದ ಕೆಲಸಗಳಾಗುತ್ತವೆಂಬದು ನಿಜವು. ಆದರೆ ಇಂಥ ಜನರು ನಿಜವಾಗಿ ಸುಖಿಗಳಾಗುವದಿಲ್ಲ. ಯಾಕಂದರೆ ಅವರ ಆಶೆಗೆ ಮೇರೆಯೇ ಇರುವದಿಲ್ಲ. ಅವರು ಬಯಸಿದ್ದನ್ನು ಕೊಟ್ಟರೂ, ತಮ್ಮ ಹತ್ತರ ಇಲ್ಲದ ಬೇರೆ ಒಡವೆಗಳನ್ನು ಬಯಸುತ್ತಾರೆ. ಅವರು ಬೇಡಿದಂಥ ಅಧಿಕಾರಗಳನ್ನು ಕೊಟ್ಟರೂ, ಕೊಟ್ಟ ಅಧಿಕಾರಗಳಿಗಿಂತ ಹೆಚ್ಚಿನ ಪದವಿಗಳನ್ನು ಆಶಿಸುತ್ತಾರೆ. ಇದು ಅವರ ಸ್ವಭಾವವೇ ಸರಿ. ಗ್ರೀಕರ ಅರಸನಾದ **ಅಲೆಕ್ಝಾಂಡರನು** ಎಷ್ಟು ದೇಶಗಳನ್ನು ಗೆದ್ದರೂ, "ಇನ್ನು ಮುಂದೆ ಗೆಲ್ಲಲಿಕ್ಕೆ ದೇಶಗಳಾವವೂ ಉಳಿಯಲಿಲ್ಲನಲ್ಲ!" ಎಂದು ಅತ್ತನು.

೪. **ಉಪಸಂಹಾರ**:— ಸುಖವು ಯಾವಾಗಲೂ ದುಃಖಮಿಶ್ರಿತವಾಗಿರುವದು. ಮಹತ್ಸುಖವು ಮಹದಾಪತ್ತಿಗಳಿಂದ ಕೂಡಿಕೊಂಡಿರುವದು. ಅಲ್ಪಸುಖವು ಅಲ್ಪದುಃಖದಿಂದ ಮಿಶ್ರಿತವಾಗಿರುವದು. ಹೇಗೆಯೇ ಇರಲಿ. ಸುಖವು ಬಹಳವಾಗಲಿ, ಕಡಮೆಯಾಗಲಿ, ಅದು ಯಾವಾಗಲೂ ದುಃಖಮಿಶ್ರಿತ

ವಾಗಿಯೇ ಇರುತ್ತದೆಂಬದು ನಿಜವು. ಆದರೂ ತನ್ನ ದೈವದಿಂದೊದಗಿದ ಸ್ಥಿತಿ
ಯಲ್ಲಿ ಸಂತೋಷದಿಂದಿರುವವನು ಬಡವನಾದಾಗ್ಯೂ, ಅಸಂತುಷ್ಟನಾದ
ಶ್ರೀಮಂತ ಮನುಷ್ಯನಿಗಿಂತ ಎಷ್ಟೋ ಪಾಲು ಹೆಚ್ಚು ಸುಖಿಯಾಗಿರುವನು.
ಆದ್ದರಿಂದ ಸುಧಾರಿಸಬಹುದಾದ ನಮ್ಮ ಸ್ಥಿತಿಯನ್ನು ನಾವು ಅವಶ್ಯವಾಗಿ
ಸುಧಾರಿಸತಕ್ಕದ್ದು. ಸುಧಾರಿಸಲಿಕ್ಕೆ ಬಾರದಂಥ ಸ್ಥಿತಿಯಲ್ಲಿ ನಾವು ಆನಂದ
ದಿಂದಿದ್ದು ಸುಖಿಗಳಾಗಿರತಕ್ಕದ್ದು.

---

(೨೯) ದಾನ.

ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ ।
ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ॥ ಭರ್ತೃಹರಿ

ಅರ್ಥ:—ಹಣಕ್ಕೆ ದಾನ, ಭೋಗ, ಮತ್ತು ನಾಶ ಎಂಬ ಮೂರು ಸ್ಥಿತಿ
ಗಳುಂಟು. ಯಾವ ಮನುಷ್ಯನು ತನ್ನ ಕೈಯೆತ್ತಿ ಒಂದು ಕಾಸನ್ನಾದರೂ ಬಡ
ಬಗ್ಗರಿಗೆ ಕೊಡುವದಿಲ್ಲವೋ, ಅಥವಾ ಯಾವನು ತನ್ನ ಹಣದಿಂದ ಸುಖವನ್ನಾ
ದರೂ ಉಪಭೋಗಿಸುವದಿಲ್ಲವೋ, ಅಂಥವನು ಕೂಡಿಸಿಟ್ಟ ಹಣಕ್ಕೆ ನಾಶ
ಹೊರತು ಮತ್ತೊಂದು ಗತಿಯಿಲ್ಲ. ಲೋಭಿಯ ಹಣವು ಅಡವಿಯ ಪಾಲಾಗು
ತ್ತದೆಂಬ ಮಾತು ಎಂದೂ ಸುಳ್ಳಾಗಲಾರದು.

೧. **ದಾನಮಾಡಲಿಕ್ಕೆ ಯೋಗ್ಯರಾರು?** :—ದಾನ ಮಾಡು
ಶಕ್ತಿಯು ಶ್ರೀಮಂತ ಜನರಿಗಿರುವದರಿಂದ, ಕೇವಲ ಅವರೇ ದಾನಮಾಡಲಿಕ್ಕೆ
ಯೋಗ್ಯರೆಂದೆನ್ನಕೂಡದು. ಮಹಾಭಾರತವು ಹೇಳುವದೇನಂದರೆ, ಪ್ರತಿಯೊ
ಬ್ಬನು ತನ್ನ ಕೈಯಿಂದಾದಷ್ಟು ದಾನ ಮಾಡಬೇಕು. ದಾನ ಮಾಡುವದರಿಂ
ದೇವರು ಮೆಚ್ಚುತ್ತಾನೆ. ಪ್ರಾಮಾಣಿಕತನದಿಂದ ಗಳಿಸಿದ ಹಣದಲ್ಲಿ ಒಂದ
ನಾಲ್ಕಾಂಶ ಭಾಗವನ್ನು ದಾನಮಾಡುವದರಿಂದ ದೇವರು ಮೆಚ್ಚುವನು. ಆದ
ಡಂಭಾಚಾರದಿಂದ ಮಾಡಿದ ದಾನದಿಂದ ದೇವರು ಸಂತುಷ್ಟನಾಗನು. ಬಡವ
ದಾನವು ಸ್ವರ್ಗದಲ್ಲಿ ಹೊಗಳಲ್ಪಡುವದು.

೨. **ಉತ್ತಮವಾದ ದಾನವು ಯಾವದು?** :—ದಾನವು ಬಹ
ವಿಧವಾಗಿರುವದು. ಆದರೆ ಅವರಲ್ಲಿ ಅನ್ನದಾನವೇ ಮಿಗಿಲಾದದ್ದೆಂದು ಹೇ

ಬಹುದು. ಕೊಟ್ಟಿಂಥ ದಾನದಿಂದ ತೃಪ್ತಿಯಾಗದಿದ್ದರೆ, ದಾನಮಾಡಿ ಫಲವೇನು? ಈ ಜಗತ್ತಿನಲ್ಲಿ ಅನ್ನದಾನದಿಂದ ತೃಪ್ತಿಯಾಗುವಂತೆ ಮತ್ತೆ ಯಾತರಿಂದಲೂ ಆಗುವದಿಲ್ಲ. ಅನ್ನದಾನವ ಸ್ಮರಣೆಯು ಚಿರಕಾಲ ಉಳಿಯುವದು. ಮಧ್ಯಾಹ್ನದಲ್ಲಿ ಹಸಿವುಬಾಯಾರಿಕೆಗಳಿಂದ ಪೀಡಿತನಾದ ಅತಿಥಿಗೆ ಒಂದು ತುತ್ತು ಅನ್ನವನ್ನು ನೀಡುವದರಿಂದ ಅವನು ಸಂತುಷ್ಟನಾಗಿ ದಾನಮಾಡುವವನನ್ನು ಹಾಡಿ ಹರಸುವನು.

ಅನ್ನದಾನವು ಹಿಂದುಸ್ಥಾನ ದೇಶದಲ್ಲಿ ಆಗುವಷ್ಟು ಬೇರೆ ಯಾವ ದೇಶದಲ್ಲಿಯೂ ಆಗುವದಿಲ್ಲೆಂದು ಅಂದರೂ ಸಲ್ಲುವದು. ಬಹುತರವಾಗಿ ಈ ದೇಶದ ಜನರು ಬೇಡಬಂದವರಿಗೆ ಅನ್ನವಿಲ್ಲೆಂದು ಎಂದೂ ಅನ್ನುವದಿಲ್ಲ. **ಅಹಲ್ಯಾಬಾಯಿ ಹೋಳಕರ**ಮೊದಲಾದ ಪುಣ್ಯಾತ್ಮರು ಕಾಶೀ-ರಾಮೇಶ್ವರಗಳ ಮಾರ್ಗದಲ್ಲಿ ಅಲ್ಲಲ್ಲಿಗೆ ಕಟ್ಟಿಸಿಟ್ಟ ಅನ್ನಸತ್ರಗಳು ಇದಕ್ಕೆ ಸಾಕ್ಷಿಯಾಗಿವೆ.

೩. **ನೆನಪಿನಲ್ಲಿಡತಕ್ಕ ಮಾತುಗಳು:**—ಆತ್ಮಸ್ತುತಿಯ ಸಲುವಾಗಿ ಇಲ್ಲವೆ ಎರಡನೆಯವರ ಪ್ರೀತಿಯನ್ನು ಸಂಪಾದಿಸುವ ಉದ್ದೇಶದಿಂದ ದಾನ ಮಾಡುವದು ಒಳಿತಲ್ಲ. "ಪ್ರದಾನಂ ಪ್ರಚ್ಛನ್ನಂ" ಎಂಬ ಭರ್ತೃಹರಿಯ ವಾಕ್ಯವನ್ನನುಸರಿಸಿ, ಬಲಗೈಯು ಕೊಡುವ ದಾನವು ಎಡಗೈಗೆ ಗೊತ್ತಾಗದಂತೆ ಗುಪ್ತವಾಗಿ ದಾನಮಾಡುವದೇ ಶ್ರೇಯಸ್ಕರವು. ದಾನ ಮಾಡುವವರಲ್ಲಿ ಮಿತವ್ಯಯವು ಅವಶ್ಯವಾಗಿರತಕ್ಕದ್ದು. ಯಾಕಂದರೆ ಕುಂಟರೂ, ಕುರುಡರೂ ಮೊದಲಾದ ಅನಾಥರಾದ ಬಡಬಗ್ಗರಿಗೆ ಸಹಾಯ ಮಾಡುವದೇ ದಾನದ ಮುಖ್ಯ ಉದ್ದೇಶವು. ಹೀಗಿದ್ದು ಬೇಡಬಂದಂಥ ಧಷ್ಟಪುಷ್ಟರಾದ ಮತ್ತು ನಿರುದ್ಯೋಗಿಗಳಾದ ಜನರಿಗೆ ತಿಳುವಳಿಕೆಯಿಲ್ಲದೆ ದಾನ ಮಾಡಿದರೆ, ಸಂಸಾರದ ವಿಪತ್ತುಗಳನ್ನು ಮತ್ತಿಷ್ಟು ಹೆಚ್ಚಿಗೆ ಬೆಳಿಸಿದಂತಾಗುತ್ತದೆ.

ತನ್ನ ಹಣದಿಂದ ಜನರಿಗೆ ಕಲ್ಯಾಣ ಮಾಡಬೇಕೆಂಬ ಸದ್ಬುದ್ಧಿಯುಳ್ಳವನು ದಾನಕ್ಕೆ ಯೋಗ್ಯರಾದ ಜನರನ್ನು ತಾನೇ ಹುಡುಕಬೇಕು. ಇಲ್ಲವೆ ಅವನಿಗೆ ವೇಳೆ ಸಿಗದ ಹಾಗಿದ್ದರೆ, ಪಾತ್ರಾಪಾತ್ರರಿಗೆ ವಿಮರ್ಶೆಯಿಂದ ದಾನಮಾಡುವದೇ ಮುಖ್ಯ ಕೆಲಸವನ್ನು ಕೈಕೊಂಡ ಧರ್ಮಕೂಟಗಳ ಮುಖಾಂತರವಾಗಿ ಅವನು ತನ್ನ ಹಣವನ್ನು ದಾನಮಾಡುವದು ಲೇಸು. ಜೀವನಕ್ಕಾಗಿ ಕೇವಲ ತನ್ನನ್ನೇ ಅವಲಂಬಿಸಿರುವ ಕುಟುಂಬಗಳ ರಕ್ಷಣೆಯ ಸಾಧನವನ್ನು ಎರಡನೆಯ

ವರಿಗೆ ಕೊಟ್ಟು ತಾನು ಬರಿಗೈಯವನಾಗಿ ಕೂಡುವದು ಲೇಸಲ್ಲ. ಯಾಕಂದರೆ ಈ ಪ್ರಕಾರ ದಾನಮಾಡುವದರಿಂದ ಸ್ವಂತ ಕುಟುಂಬದವರು ಕೂಳಿಲ್ಲದೆ ಸಾಯು ವರು. ಆದ್ದರಿಂದ ದಾನಮಾಡುವದರಲ್ಲಿ ಮುಖ್ಯವಾಗಿ ಎರಡು ಸಂಗತಿಗಳ ಬಗ್ಗೆ ವಿಚಾರ ಮಾಡತಕ್ಕದ್ದು. "ಮನೆಗೆದ್ದು ಮಾರು ಗೆದೆಯಬೇಕು." ಎಂಬ ಗಾದೆಯನ್ನನುಸರಿಸಿ, ದಾನಮಾಡುವದಕ್ಕಿಂತ ಮೊದಲು ನಮ್ಮ ಕುಟುಂಬಕ್ಕೆ ಅತ್ಯವಶ್ಯವಾಗಿ ಬೇಕಾಗಿರುವ ವಸ್ತುಗಳನ್ನು ನಾವು ಪೂರೈಸಬೇಕೆಂಬದು ಮೊದ ಲನೇ ಮಾತು. ವಿಮರ್ಶೆಯಿಲ್ಲದೆ ಕೈಗೆ ಸಿಕ್ಕ ಹಾಗೆ ದಾನಮಾಡುವದರಿಂದ ಬಡ ತನವನ್ನು ಹೆಚ್ಚಿಸಿ ದುಃಖಕ್ಕೆ ಗುರಿಯಾಗುತ್ತೇವೆ. ಆದ್ದರಿಂದ ಎಚ್ಚರಗೊಂಡು ದಾನಧರ್ಮ ಮಾಡಬೇಂಕೆಂಬದೇ ಎರಡನೇ ಸಂಗತಿಯು.

೪. ದಾನಶೂರರಾದವರ ಕೆಲವು ಉದಾಹರಣೆಗಳು:—

ದಾನಶೂರರಾದವರ ಉದಾಹರಣೆಗಳು ನಮ್ಮ ಭರತಖಂಡದಲ್ಲಿ ಹೇರಳ ವಾಗಿರುವವು. **ಧರ್ಮ, ಕರ್ಣ** ಮೊದಲಾದ ರಾಜರು ದಾನಧರ್ಮ ಮಾಡು ವದರಲ್ಲಿ ಬಹಳೇ ಹೆಸರಾಗಿದ್ದರೆಂದು ಪುರಾಣದಲ್ಲಿ ಬರೆದದೆ. **ಶಿವಾಜಿ** ಮೊದ ಲಾದ ದಾನಶೂರರಾಜರು ತಮ್ಮ ತೂಕದಷ್ಟು ಬಂಗಾರವನ್ನು ಬ್ರಾಹ್ಮಣರಿಗೆ ಹಂಚಿಕೊಟ್ಟ ಬಗ್ಗೆ ಇತಿಹಾಸದಲ್ಲಿ ಉಲ್ಲೇಖವದೆ. ಸ್ವದೇಶಾಭಿಮಾನಿಗಳಾಗಿ ಖ್ಯಾತಿವಂತರಾಗಬೇಕೆಂಬ ಕುತೂಹಲದಿಂದ ಮುಂಬಯಿ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಶ್ರೀಮಂತ ಜನರು ಲೆಕ್ಕವಿಲ್ಲದೆ ಹಣ ಖರ್ಚುಮಾಡಿ ವಿಶ್ವವಿದ್ಯಾ ಲಯ, ದವಾಖಾನೆ ಮುಂತಾದ ಸಂಸ್ಥೆಗಳಿಗಾಗಿ ಉತ್ತಮವಾದ ಮಂದಿರಗಳನ್ನೂ ಕೆರೆ–ಬಾವಿ ಮುಂತಾದ ಜಲಾಶಯಗಳನ್ನೂ ಕಟ್ಟಿಸಿ ದಾನವಾಗಿ ಕೊಟ್ಟಿರು ವರು; ಮತ್ತು ತಮ್ಮ ಹೆಸರು ಕಡೆತನಕ ಉಳಿಯಬೇಕೆಂದು, ಆ ಮಂದಿರಗಳ ಮುಂದೆ ತಮ್ಮ ಪ್ರತಿಮೆಗಳನ್ನು ಮಾಡಿಸಿಟ್ಟಿರುವರು. ಕೆಲವು ವರ್ಷಗಳ ಹಿಂದೆ ಮುಂಬಯಿ ಪಟ್ಟಣದ ಪಾರ್ಸಿಸದ್ಗೃಹಸ್ಥರಾಗಿದ್ದ **ಟಾಟಾ** ಎಂಬವರು ಶಾಸ್ತ್ರೀಯಪರಿಶೋಧಗಳಿಗಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟದ್ದು ಎಲ್ಲರಿಗೂ ಗೊತ್ತಿರಬಹುದು. ಇದೇನು ಸಾಧಾರಣವಾದ ದಾನವೇ? ಅವರಂ ತೆಯೇ ನಮ್ಮ ಕರ್ನಾಟಕ ಪ್ರಾಂತದಲ್ಲಿ ಹೆಸರುವಾಸಿಯಾಗಿ ಹೋದ ಮ॥ ರಾ॥ ರಾ॥ **ರಾವಜೀ ಬಾಳಾಜೀ ಕರಂದೀಕರ, ಬಿ. ಎ. ಆಯ್. ಎಸ್. ಓ,** ರಿಟಾಯರ್ಡ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣಭಾಗ, ಇವರು

ಕೇವಲ ವಿದ್ಯೆಯನ್ನು ಪ್ರಚುರಗೊಳಿಸುವದಕ್ಕಾಗಿಯೇ ತಮ್ಮ ಸ್ವಕಷ್ಟಾರ್ಜಿತ ವಿತ್ತದಲ್ಲಿ ಒಂದು ಲಕ್ಷ ಅರುವತ್ತು ಸಾವಿರ ರೂಪಾಯಿಗಳನ್ನು ಧರ್ಮಾರ್ಥ ವಾಗಿ ಕೊಟ್ಟಬಗ್ಗೆ ತಮ್ಮ ಮೃತ್ಯುಪತ್ರದಲ್ಲಿ ಉಲ್ಲೇಖಿಸಿರುವರು. ಇದೇ ಮೇರೆಗೆ ಇದೇ ಪ್ರಾಂತದಲ್ಲಿ ಸೊಲ್ಲಾಪುರದ ಮ॥ ರಾ॥ ರಾ॥ **ವಾರದ ಮಲ್ಲಪ್ಪನ** ವರೂ, ಮ॥ ರಾ॥ ರಾ॥ **ಶಿರಸಂಗಿ ದೇಸಾಯ**ರೂ ಒಳ್ಳೇ ದಾನಶೂರ ರಾಗಿದ್ದರೆಂಬದು ಎಲ್ಲರಿಗೂ ಗೊತ್ತುಂಟು. ಶಿರಸಂಗಿ ದೇಸಾಯರು ಕೆಲವು ವರ್ಷಗಳ ಹಿಂದೆ ತಮ್ಮ ಅಮ್ಮಣಿಗೀ ಗ್ರಾಮದ ಇಡೀ ಉತ್ಪನ್ನವನ್ನು ಲಿಂಗಾ ಯತ ಎಜ್ಯುಕೇಶನ್ ಫಂಡಿಗೆ ಧರ್ಮಾರ್ಥವಾಗಿ ಕೊಟ್ಟಿದ್ದಲ್ಲದೆ, ಅವರು ಸಾಯುವಾಗ ಇಡೀ ಸಂಸ್ಥಾನದ ಉತ್ಪನ್ನವನ್ನು ಸಹ ಅದೇ ಫಂಡಿಗೆ ಕೊಟ್ಟ ಬಗ್ಗೆ ಮೃತ್ಯುಪತ್ರ ಮಾಡಿದ ಸಂಗತಿಯು ಎಲ್ಲರಿಗೂ ಗೊತ್ತುಂಟು. ಈ ಬಗೆಯ ಔದಾರ್ಯದ ಮಾದರಿಗಳು ಕ್ವಚಿತ್ತಾಗಿ ಕಂಡು ಬರುವವು. ಇಂಥ ಮಹಾತ್ಮರು ಕೈಲಾಸವಾಸಿಗಳಾಗಿದ್ದರೂ, ಅವರ ಕೀರ್ತಿಯು ಚಿರಕಾಲ ಉಳಿಯುವದು.

—— ० ——

(೩೦) ದುರ್ಭಿಕ್ಷ.

೧. **ಅರ್ಥ:**— ದೇಶದಲ್ಲಿ ಕಾಲಕಾಲಕ್ಕೆ ಮಳೆಯಾಗಿ ಧಾನ್ಯವು ವಿಪುಲ ವಾಗಿ ಬೆಳೆದರೆ, ಪ್ರಜೆಗಳು ಧಷ್ಟಪುಷ್ಟರಾಗಿಯೂ ಸಂತುಷ್ಟರಾಗಿಯೂ ಸರಕಾ ರಕ್ಕೆ ಕೊಡಬೇಕಾಗಿರುವ ತೆರಿಗೆಗಳನ್ನು ಅನಾಯಾಸವಾಗಿ ಕೊಟ್ಟು ಸುಖಿ ಗಳಾಗಿಯೂ ನಿಶ್ಚಿಂತರಾಗಿಯೂ ಇರುವರು. ಆ ತೆರಿಗೆಗಳಿಂದ ಸರಕಾರದವರು ದೇಶವನ್ನು ಸಂರಕ್ಷಿಸುತ್ತ, ನ್ಯಾಯಾನ್ಯಾಯಗಳ ವಿಮರ್ಶೆಯನ್ನು ಮಾಡುತ್ತ, ಪ್ರಜೆಗಳ ಹಿತಾಹಿತಗಳನ್ನು ವಿಚಾರಿಸುತ್ತ, ಪರಿಪಾಲನ ಮಾಡುವರು. ಆದರೆ ವೇಳೆಗೆ ಸರಿಯಾಗಿ ಮಳೆಯಾಗದೆ ಭೂಮಿಯು ಕರಿಸಾಲಾಯಿತೆಂದರೆ, ಬರಬಿದ್ದು ಸರಕಾರವೂ ಪ್ರಜೆಗಳೂ ಮಹದಾಪತ್ತಿಗೆ ಒಳಗಾಗುತ್ತಾರೆ. ಬೆಳೆಯುದಿರು ವದೇ ಬರವು. ಆ ಕಾಲದಲ್ಲಿ ಬಿಕ್ಕೆ ಸಹ ದೊರೆಯುವದಿಲ್ಲಾದ್ದರಿಂದ ಅದಕ್ಕೆ ದುರ್ಭಿಕ್ಷವೆಂದು ಅನ್ನುವರು.

೨. **ಕಾರಣಗಳು:— ಅತಿವೃಷ್ಟಿಯು** ದುರ್ಭಿಕ್ಷದ ಒಂದು ಕಾರ ಣವು. ಅತಿವೃಷ್ಟಿಯಿಂದಾಗುವ ಬರಕ್ಕೆ ಹಸಿಬರವೆಂದು ಅನ್ನುವರು. ಅತಿವೃಷ್ಟಿ

ಯೆಂದರೆ, ಬೇಕಾದ್ದಕ್ಕಿಂತ ಹೆಚ್ಚಾಗಿ ಮಳೆ ಬೀಳೋಣ. ಅದರಿಂದ ಹೊಲಗಳಲ್ಲಿ ಕರಿಕೆ ಮುಂತಾದ ಕಸಕಡ್ಡಿಗಳು ಬೆಳೆದು ಬಿತ್ತಿದ ಬೀಜಗಳನ್ನು ಮೇಲಕ್ಕೇಳಗೊಡುವದಿಲ್ಲ. ಆದ್ದರಿಂದ ಬೆಳೆ ಬರದೆ ಕಾಳುಕಡಿಗಳು ತುಟ್ಟಿಯಾಗುವವು. ಆದರೂ ಅತಿವೃಷ್ಟಿಯಿಂದ ಒಕ್ಕಲಿಗನಿಗೆ ಅಷ್ಟೇನು ಅಪಾಯವಾಗುವದಿಲ್ಲ. ಯಾಕಂದರೆ ಅದರಿಂದ ಅಡವಿಗಳಲ್ಲಿ ಬೇಕಾದಷ್ಟು ಹುಲ್ಲು ಬೆಳೆಯುವದರಿಂದ, 'ಬಸವಣ್ಣನೊಬ್ಬನು ಸುಖದಿಂದಿದ್ದರೆ ಸಾಕು; ಮನುಷ್ಯನು ಯಾವ ಪರ್ಯಾಯದಿಂದಾದರೂ ಬದುಕಬಹುದು' ಎಂಬ ವಿಚಾರವು ಮನದೊಳಗೆ ಹುಟ್ಟಿ, ಅರ್ಧಕ್ಕಿಂತ ಹೆಚ್ಚಾದ ಭಾರವು ಇಲ್ಲದಂತಾಗುವದು. ಇದಲ್ಲದೆ ಬೇಸಿಗೆಯಲ್ಲಿ ಬತ್ತಿಹೋದ ಹಳ್ಳ, ಕೆರೆ, ಬಾವಿ ಮುಂತಾದ ಜಲಾಶಯಗಳು ಅತಿವೃಷ್ಟಿಯಿಂದ ತುಂಬಿತುಳುಕಿ ಮುಂದೆ ಒಂದೆರಡು ವರ್ಷ ಮಳೆಯಾಗದಿದ್ದರೂ ಜನರಿಗೆ ಬೇಕಾದಷ್ಟು ನೀರನ್ನು ಪೂರೈಸಿಕೊಡುತ್ತವೆ; ಮತ್ತು ಕಾಲುವೆಗಳ ಸಹಾಯದಿಂದ ದೊಡ್ಡ ದೊಡ್ಡ ಕೆರೆಗಳ ಸುತ್ತಮುತ್ತಲಿರುವ ಹೊಲಗಳಲ್ಲಿ ತಕ್ಕಮಟ್ಟಿಗೆ ನೀರನ್ನು ತರಬಹುದು. ಆದರೆ ಅತಿವೃಷ್ಟಿಯಿಂದ ಜೀವನೋಪಾಯದ ಮುಖ್ಯ ಸಾಧನಗಳಾದ ಕಾಳುಕಡಿಗಳು ಬೆಳೆಯುವದಿಲ್ಲವಾದ್ದರಿಂದ ಮೇಲ್ಕಾಣಿಸಿದ ಲಾಭಗಳನ್ನು ಜನರು ಗಣನೆಗೆ ತರುವದಿಲ್ಲ.

ಜಿಟ್ಟೆ, ಇಲಿ, ಮತ್ತು **ಗಿಳಿ** ಮುಂತಾದ ಪ್ರಾಣಿಗಳು ಸಹ ದುರ್ಭಿಕ್ಷೆಗೆ ಕಾರಣವಾಗಿರುವವು. ಅವು ಬೆಳೆಯನ್ನು ತಿಂದು ಹಾಳು ಮಾಡುವವು. ಒಮ್ಮೊಮ್ಮೆ ಒಕ್ಕಲಿಗನ ಕೋರಿಕೆಯಂತೆ ಮಳೆಯಾದರೂ, ಬೀಜ ಬಿತ್ತಿದ ಬಳಿಕ ಹೊಲಗಳಲ್ಲಿ ಇಲಿಗಳು ಹೆಚ್ಚಾಗಿ ಬೀಜಗಳನ್ನೂ ಸಸಿಗಳನ್ನೂ ಕಡಿದು ನಾಶ ಮಾಡುವವು. ಇದೇ ಮೇರೆಗೆ ಜಿಟ್ಟೆಗಳೂ ಹಕ್ಕಿಗಳೂ ಬೆಳೆ ಕೆಡಿಸುವದರಿಂದ, ಅವಾದರೂ ಹೊಲಮಾಡುವವರಿಗೆ ದೊಡ್ಡ ಶತ್ರುಗಳಾಗಿರುವವು. ಅದರಂತೆಯೇ **ಪರರಾಜರು** ನಮ್ಮ ದೇಶದ ಮೇಲೆ ದೌಡು ಮಾಡಿದರೆ, ಅದೊಂದು ಬಗೆಯ ದುರ್ಭಿಕ್ಷವೇ ಸರಿ. ಯಾಕಂದರೆ ಅಂಥ ಸಮಯದಲ್ಲಿ ರೈತರು ಭೂಮಿಯನ್ನು ಸಾಗುಮಾಡದೆ, " ಯಃ ಪಲಾಯತೇ ಸ ಜೀವತಿ " ಎಂಬ ಮಾತನ್ನನುಸರಿಸಿ, ಜೀವರಕ್ಷಣೆಗೋಸ್ಕರ ಮನೆಮಾರುಗಳನ್ನು ಬಿಟ್ಟು ಓಡಿಹೋಗುವರು. ಆದರೆ ಇವೆಲ್ಲ ಕಾರಣಗಳಿಗಿಂತ ಆರನೆಯದಾದ **ಅನಾವೃಷ್ಟಿಯೇ** ದುರ್ಭಿಕ್ಷೆಗೆ ಹೆಚ್ಚಿನ ಕಾರಣವಾಗಿರುವದು. ಅನಾವೃಷ್ಟಿಯೆಂದರೆ ಮಳೆಯಾಗದಿರುವದು. ಕಿಂಚಿತ್ತಾ

ದರೂ ಮಳೆಯಾಗದಿದ್ದರೆ, ಬಿತ್ತಿದ ಬೀಜಗಳು ನೆಲದೊಳಗೆ ಹಾಗೆಯೇ ಉಳಿಯುವವು. ಬೆಳೆಯಿಲ್ಲದ ಮೂಲಕ ಜೀವನೋಪಾಯಕ್ಕೆ ಬೇಕಾದ ಕಾಳುಕಡಿಗಳು ದೊರೆಯುವಂತಾಗಿ ದೇಶವಲ್ಲೆಲ್ಲ ಬರ ಬೀಳುವದು.

೩. **ಬರಗಾಲದಲ್ಲಿ ಕಾಣುವ ನೋಟವು**:—ಬರ ಬೀಳುವ ಪೂರ್ವದಲ್ಲಿ ಒಂಭತ್ತು ತಿಂಗಳುಗಳ ವರೆಗೆ ಭೂಮಿಯು ಬಿಸಲಿನಿಂದ ಕಾಯುವದರಿಂದಲೂ, ಬರಬಿದ್ದ ವರ್ಷದಲ್ಲಂತೂ ಸ್ವಲ್ಪಾದರೂ ಮಳೆಯಾಗದಿರುವದರಿಂದಲೂ, "ಮೊದಲೇ ಉಲ್ಲಾಸ, ಅದರೊಳಗಂತೂ ಫಾಲ್ಗುಣ ಮಾಸ" ಎಂಬ ಗಾದೆಯಂತೆ, ಆ ಕಾಲದ ಬಿಸಿಲು ಕೇಳುವದೇನು! ಪ್ರಚಂಡಸೂರ್ಯಾತಪದಿಂದ ಹಳ್ಳ. ಕೆರೆ, ಬಾವಿ ಮುಂತಾದ ಚಿಕ್ಕಪುಟ್ಟ ಜಲಾಶಯುಗಳಂತೂ ಹೆಸರುಳಿಯದಂತೆ ಬತ್ತಿ ಹೋಗುವವಲ್ಲದೆ, ದೊಡ್ಡ ದೊಡ್ಡ ನದಿಗಳೂ ಕೂಡ ಸಣ್ಣ ಹಳ್ಳಗಳಂತೆ ಕಾಣುವವು. ಅಡವಿಗಳಲ್ಲಿ ನೋಡಿದತ್ತ ಮಳೆಗಾಲವು ಮೀರಿ ಹೋದರೂ ಬಿತ್ತಿಗೆ ಕಾಣದಿರುವ ಹೊಲಗಳು ಸೌಭಾಗ್ಯಾಲಂಕಾರಹೀನಳಾದ ಸ್ತ್ರೀಯಳ ಮುಖದಂತೆ ರಣ ಎದ್ದು ಬಡಿಯುತ್ತಿರುವವು. ತಿನ್ನಲಿಕ್ಕೆ ಮೇವು ಇಲ್ಲದೆ ಮಿಡುಕುತ್ತಿರುವ ದನಕರುಗಳ ಗೋಳಾಟವನ್ನು ಹೇಳಲಾಸಲ್ಲ! ಸುಕಾಲದಲ್ಲಿ ನೂರಿನ್ನೂರು ರೂಪಾಯಿ ಬೆಲೆಬಾಳುವ ಎತ್ತು, ಆಕಳು ಮುಂತಾದ ದನಗಳನ್ನು ಬರಬಿದ್ದಾಗ ನಾಲ್ಕೆಂಟು ರೂಪಾಯಿಗಳಿಗೆ ಸಹ ಕೊಂಡುಕೊಳ್ಳಬಹುದು. ತಮ್ಮ ಜೀವಕ್ಕಿಂತಲೂ ಹೆಚ್ಚಾಗಿ ಜೋಕೆ ಮಾಡಿದ ದನಗಳನ್ನು ಜೋಪಾನ ಮಾಡುವ ಗತ್ಯಂತರವನ್ನು ಕಾಣದೆ ಕಂಬನಿಗಳನ್ನು ಸುರಿಸುತ್ತ, "ಈ ದನಗಳನ್ನು ಬೇಕಾದವರು ಸಾಕಿಕೊಳ್ಳಬಹುದು" ಎಂಬ ಆಶಯದ ಚೀಟಿಗಳನ್ನು ಕೊರಳಲ್ಲಿ ಕಟ್ಟಿ ಪುಕ್ಕಟೆಯಾಗಿ ಕೊಡಲಿಕ್ಕೆ ಸಿದ್ಧರಾಗಿರುವ ಒಕ್ಕಲಿಗರನ್ನು ಕಂಡು, ಕಠಿಣಹೃದಯದವರಾದ ಕಟಕರ ಹೊರತು ಕಸಿಕರ ಪಡದಿರುವನೊಬ್ಬನೂ ಕಾಣಸು. ದುರ್ದಿನವನ್ನು ಕಂಡು, ಈ ಹೊತ್ತು ಮಳೆಯಾದೀತು! ನಾಳೆ ಆದೀತು! ಎಂದು ವಿಶಾಖಾ ನಕ್ಷತ್ರದ ಕಡೆಯ ಚರಣದ ವರೆಗೆ ಚಾತಕ ಪಕ್ಷಿಯಂತೆ ಮಳೆಯ ದಾರಿಯನ್ನು ನೋಡಿ, ಕಟ್ಟಕಡೆಗೆ ನಿರಾಶೆಹೊಂದಿ, ಜನರು ಹೌಹಾರಿ ಕುಳಿತುಕೊಳ್ಳುವರು. ಕಾಳುಕಡಿಗಳು ಮಿತಿಮೀರಿ ತುಟ್ಟಿಯಾಗುವದರಿಂದ, ದುಡ್ಡು ಗಳಿಸುವ ವೇಳೆಯು ಇದೇ ಎಂದು ಧಾನ್ಯಸಂಗ್ರಹ ಮಾಡಿಟ್ಟ ಒಕ್ಕಲಿಗರೂ ವ್ಯಾಪಾರಸ್ಥರೂ ಮಾತ್ರ ಆನಂದಭರಿತರಾಗುವರು. ಆದರೆ ದೊಡ್ಡ

ಕುಟುಂಬದವರು ಮನೆಯುವರನ್ನು ಹೇಗೆ ಸಂರಕ್ಷಿಸಬೇಕೆಂದು ಉದ್ವಿಗ್ನರಾಗ ವರು. ಕೂಲಿಕಾರರಿಗೆ ಕೂಲಿಯು ದೊರೆಯದೆ ಇನ್ನೇನು ಗತಿಯೆಂದು ದೈನ ಬಡುವರು. ಇಷ್ಟರೊಳಗೆ ಸರಕಾರದವರು ಸಶಕ್ತರಾದ ಜನರ ಸಲುವಾಗಿ ಕೆರೆ ಮಾರ್ಗಗಳನ್ನು ಕಟ್ಟುವ ಕೆಲಸವನ್ನು ಆರಂಭಿಸುವರು. (ಇದಕ್ಕೆ ಇಂಗ್ಲಿ ಭಾಷೆಯಲ್ಲಿ "ರಿಲೀಫ್ ವರ್ಕ್ಸ್" ಎಂದೆನ್ನುತ್ತಾರೆ.) ಆದರಿಂದ ದುರ್ಭಿಕ್ಷ ಪೀಡಿ ರಾದವರು ಕೆಲಮಟ್ಟಿಗೆ ಉಪಜೀವಿಸಬಹುದು: ಆದರೂ ಮಧ್ಯಾಹ್ನದ ಉ ಯುತ್ತಿರುವ ಬಿಸಲಿನಲ್ಲಿ ಒಂದಾಣೆಯು ಸಲುವಾಗಿ ಕಲ್ಲು ಕಟಯುತ್ತಿರುವ ರನ್ನೂ, ಕೂಸುಗಳನ್ನು ಒತ್ತಟ್ಟಿಗೆ ಒಂದು ಗುಡಿಸಲಲ್ಲಿ ಒಟ್ಟುಗೂಡಿಸಿದ್ದರಿಂ ಅವು ಅಳುವದನ್ನು ಕೇಳಿ ಮೊಲೆ ಕುಡಿಸಿ ಸಮಾಧಾನ ಮಾಡಬೇಕೆಂದರೆ ಮೊಕಾದಮ್, ಮೇಸ್ತ್ರಿ ಮೊದಲಾದ ಮೇಲಧಿಕಾರಿಗಳು ಹೋಗಗೊಡದ್ದರಿಂ ಮರ ಮರ ಮರಗುತ್ತಿರುವ ತಾಯಂದಿರನ್ನೂ, ಹೊತ್ತು ಮುಳುಗುವ ತನ ದುಡಿದರೂ ಮೇಲಧಿಕಾರಿಗಳು 'ಈ ಹರಾಮಖೋರರು ಕೆಲಸ ನೆಟ್ಟಗೆ ಮಾಡಿಲ್ಲ ಇವರಿಗೆ ದೊರೆಯುವ ಒಂದಾಣೆಯೊಳಗೆ ಅರ್ಧಾಣೆ ದಂಡವನ್ನು ವಿಧಿಸಿಬಿಡಿ ಎಂದು ಪರುಷವಾಕ್ಯದಿಂದ ಹೇಳಲು, ಮಹಾರಾಯಾ! ಉಪವಾಸದಿಂದ ನಮ ನ್ನು ಕೊಲ್ಲಬೇಡೆಂದು ಪರಿಪರಿಯಿಂದ ಅಂಗಲಾಚಿ ಹೇಳಿದರೂ ಕೇಳುವದಿಲ್ಲಾ ದ್ದರಿಂದ, ಉಳಿದ ಅರ್ಧಾಣೆಯಿಂದ ಹೊಟ್ಟೆ ತುಂಬುವಷ್ಟು ಕಾಳು ಬರುವ ಲ್ಲೆಂದು ತಿಳಿದು ಹುರಗಡ್ಲೆ ಮುಂತಾದ ಅನಿಷ್ಟಪದಾರ್ಥಗಳನ್ನು ತಿಂದು ನೀರ ಕುಡಿದು, ಬಿಸಿಲೊಳಗೆ ಕೆಲಸ ಮಾಡುವದರಿಂದ ಅಜೀರ್ಣವಿಕಾರವಾಗಿ ಅಮ ನವರ ಅನುಗ್ರಹಕ್ಕೆ ಪಾತ್ರರಾಗಿ, ಅಲ್ಲಲ್ಲಿಗೆ ಸತ್ತುಬಿದ್ದಿರುವ ಜನರನ್ನೂ ಕಂಡು ಪ್ರೇಕ್ಷಕನ ಮನಸ್ಸಿನಲ್ಲಿ ಹೇಳಕೂಡದಷ್ಟು ವ್ಯಸನವಾಗುವದು! ಆದರೂ ದಯಾ ಳು ಸರಕಾರದವರು ರಿಲೀಫ್ ಕೆಲಸಗಳನ್ನಾರಂಭಿಸುವದಲ್ಲದೆ, ದುಡಿಯಲಾ ದಂಥ ಅಶಕ್ತರಾದವರಿಗೂ ಕೈಕಾಲುಗಳಿಲ್ಲದಂಥ ಜನರಿಗೂ ಧರ್ಮಾರ್ಥ ವಾಗಿ ಹಣ ಕೊಡುವರು. ಇವಲ್ಲದೆ ಕೆಲವು ಧಾರ್ಮಿಕರಾದ ಸದ್ಗೃಹಸ್ಥರ ವರ್ಗಣಿಯಿಂದ ಹಣ ಕೂಡಿಸಿ ದುರ್ಭಿಕ್ಷಪೀಡಿತರಾದ ಜನರಿಗೆ ಅಂಗಿ, ಟೊಪ್ಪಿಗೆ ಧೋತರ, ಸೀರೆ, ಕುಪ್ಪಸಗಳನ್ನು ಕೊಡುವರು. ಆ ಬಗ್ಗೆ ನಮ್ಮ ದಯಾಳ ಸರಕಾರದವರ ಮತ್ತು ಇಂಥ ಸದ್ಗೃಹಸ್ಥರ ಉಪಕಾರವನ್ನು ಎಷ್ಟು ನೆನಿಸಿ ದರೂ ತೀರದು.

೪. ದುರ್ಭಿಕ್ಷವು ಇತ್ತಿತ್ತಲಾಗಿ ಮೇಲಿಂದಮೇಲೆ ಒದಗುವ ಕಾರಣಗಳು:—ಹಿಂದಕ್ಕೆ ಸುಮಾರು ಅರುವತ್ತು ವರ್ಷಗಳಿಗೊಮ್ಮೆ ಬರಗಾಲವು ಬರುತ್ತಿತ್ತು. ಈಗ ಆ ಅವಧಿಯಲ್ಲಿ ಏಳೆಂಟು ಸಾರೆ ಸಹ ಬರ ಬೀಳುವದು. ಇದರ ಕಾರಣವೇನೆಂದರೆ, ಇತ್ತಿತ್ತಲಾಗಿ ಮಳೆಯು ಕುಂದುತ್ತ ನಡೆದಿರುವದು. ಮಳೆ ಬೀಳಲಿಕ್ಕೆ ಮುಖ್ಯವಾಗಿ ಎರಡು ಕಾರಣಗಳುಂಟು. ಅವು ಯಾವವೆಂದರೆ, ಗುಡ್ಡ ಮತ್ತು ಅರಣ್ಯ. ಬೈಲುಸೀಮೆಗಿಂತ ಮಲ್ನಾಡದಲ್ಲಿ ಮಳೆ ಬಹಳ ಬೀಳುವ ಕಾರಣವಾದರೂ ಇದೇ. ಆದರೆ ನಮ್ಮ ದೇಶದಲ್ಲಿ ಲೋಹಮಾರ್ಗಗಳು ಬಂದಂದಿನಿಂದ ಗಿಡಗಂಟೆಗಳು ಅತಿಶಯವಾಗಿ ಕಡಿಯಲ್ಪಡುವದರಿಂದ ಅಡವಿಗಳು ದಿನದಿನಕ್ಕೆ ನಷ್ಟವಾಗಿ ಮಳೆ ಕಡಿಮೆಯಾಗುತ್ತ ನಡೆದದೆ. ಇದಲ್ಲದೆ ನಮ್ಮ ದೇಶವು ಯಾವತ್ತು ಧಾನ್ಯಗಳನ್ನು ಬೆಳೆಯುವದರಲ್ಲಿ ಮೇಲಾಗಿದ್ದರೂ, ನಮ್ಮ ದೇಶದಲ್ಲಿ ಖರ್ಚಾಗುವ ಧಾನ್ಯಕ್ಕಿಂತ ಇಪ್ಪತ್ತು ಮೂವತ್ತು ಪಟ್ಟು ಧಾನ್ಯವು ಪರದೇಶಗಳಿಗೆ ಒಯ್ಯಲ್ಪಡುತ್ತಿರುವದರಿಂದ, "ಹಂಚಿದವನಿಗೆ ಹಲ್ಲು" ಎಂಬ ಗಾದೆಯಂತೆ, ನಮ್ಮ ಧಾನ್ಯದ ಉಪಯೋಗವು ನಮಗೆ ಆಗತಕ್ಕಷ್ಟು ಆಗುವದಿಲ್ಲ. ಇನ್ನು ಇಷ್ಟು ಪರಿಯಿಂದ ನಮ್ಮ ದೇಶದ ಕಾಳು ಪರದೇಶಕ್ಕೆ ಹೋದಮೇಲೆ ನಾವು ವಸ್ತುತಃ ಶ್ರೀಮಂತರಾಗತಕ್ಕದ್ದು. ಆದರೆ ಈ ರೀತಿಯಲ್ಲಿ ಸಂಪಾದಿಸಲ್ಪಡುವ ದ್ರವ್ಯವು ಅನೇಕ ರೂಪದಿಂದ ವೆಚ್ಚವಾಗುತ್ತದೆ. ನಮ್ಮ ದೇಶಸಂರಕ್ಷಣೆಗಾಗಿ ಇಂಗ್ಲಿಷರಿಂದಿಡಲ್ಪಟ್ಟ ಸೈನ್ಯದ ಸಂಬಳ, ಹೋಮ ಚಾರ್ಜೆಸ್, ಎಕ್ಸ್‌ಚೇಂಜ ಕಾಂಪೆನ್‌ಸೇಶನ್ ಮುಂತಾದ ಖರ್ಚು ಸಾಗಿಸುವದಕ್ಕಾಗಿ ನಮ್ಮಿಂದ ತೆಗೆದುಕೊಳ್ಳಲ್ಪಡುವ ಉಪ್ಪು, ಉತ್ಪನ್ನ ಮುಂತಾದವುಗಳ ಮೇಲಿನ ಕರವನ್ನೂ, ಅರಿವೆ ಅಂಚಡಿ ಮುಂತಾದ ಪದಾರ್ಥಗಳ ಮೇಲಿನ ಸುಂಕ, ಹೆಂಡ ಸಾರಾಯಿಗಳ ಗುತ್ತಿಗೆ ಮುಂತಾದ ರೂಪದಿಂದಲೂ, ಬೇರೆ ಅನೇಕ ಮಾರ್ಗಗಳಿಂದಲೂ ನಮಗೆ ಕೊಡಬೇಕಾಗುವ ಅಸಂಖ್ಯ ಪರೋಕ್ಷಾಪರೋಕ್ಷವಾದ ಕರಗಳನ್ನೂ ಕೊಡುವದಕ್ಕಾಗಿ ನಮಗೆ ನಮ್ಮ ಕಾಳುಕಡಿಗಳನ್ನು ಮಾರಿಕೊಂಡ ಹೊರತು ಗತ್ಯಂತರವೇ ಇಲ್ಲ. ಆದರೂ ಕೇವಲ ದುಡ್ಡುಗಳಿಸುವ ಆಶೆಯಿಂದಲೇ ಎಷ್ಟೋ ಜನರು ತಮ್ಮ ಕಾಳುಕಡಿಗಳನ್ನು ಮಾರುವದುಂಟು. ಆದರೆ ಅಂಥವರು ಮೇಲೆ ಎಣಿಸಿದ ಕಾರಣಗಳನ್ನು ಲಕ್ಷಕ್ಕೆ ತಂದು ಚನ್ನಾಗಿ ವಿಚಾರಿಸಿ, ತಾವು ಬೆಳೆದುಕೊಂಡ ಧಾನ್ಯವನ್ನು ವಿಶೇಷವಾಗಿ ಮಾರಿಕೊಳ್ಳದೆ, ಅದನ್ನು ದುಷ್ಕಾಳದಂಥ ವಿಪತ್ತಿನಲ್ಲಿ ಉಪ

ಯೋಗವಾಗುವಂತೆ ಸಂಗ್ರಹಿಸತಕ್ಕದ್ದು. ಅಂದರೆ ಅದರಿಂದ ಬರಗಾಲದಲ್ಲಿ ಅ
ರಿಗೂ ಅವರ ಕ್ಷುಧಾಪೀಡಿತರಾದ ಬಂಧುಬಾಂಧವರಿಗೂ ಜೀವ ಉಳಿಸಿಕೊಳ್ಳ
ಲಿಕ್ಕೆ ಉಪಯೋಗವಾಗುವದು.

(೩೧) ನಾಗರಿಕನ ಕರ್ತವ್ಯ.

೧. **ಅರ್ಥ**:—ನಾಗರಿಕನೆಂದರೆ, ನಗರದ ಅಥವಾ ಪಟ್ಟಣದ ನಿವಾ
ಯೆಂತಲೂ, ಅವನ ಕರ್ತವ್ಯಗಳೆಂದರೆ, ಅವನು ತನ್ನ ಪಟ್ಟಣದ ಏಳಿಗೆಯ ಸಲ
ವಾಗಿ ಮಾಡತಕ್ಕಂಥ ಕೆಲಸಗಳೆಂತಲೂ ಸಾಮಾನ್ಯವಾಗಿ ಹೇಳಬಹುದು
ಆದರೆ ಇತ್ತಲಾಗಿ ಈ ಶಬ್ದಗಳ ಅರ್ಥವು ಹೆಚ್ಚು ವ್ಯಾಪಕವಾಗಿದೆ. ಒಂದು ದೇ
ದಲ್ಲಿ ಅಥವಾ ಒಂದು ರಾಷ್ಟ್ರದಲ್ಲಿರುವ ಯಾವತ್ತು ಜನರಿಗೆ ನಾಗರಿಕರೆಂದು ಕ
ಯುವದುಂಟು. ಅವರ ಕರ್ತವ್ಯಗಳಾದರೂ ಪಟ್ಟಣದ ಏಳಿಗೆಯ ಸಲುವಾ
ಇರುವವಲ್ಲದೆ, ದೇಶೋನ್ನತಿಗೂ ರಾಷ್ಟ್ರೋನ್ನತಿಗೂ ಸಂಬಂಧಿಸಿರುತ್ತವೆ.

೨. **ಸರಕಾರಕ್ಕೆ ಅಂಕಿತವಾಗಿರುವದು**:—ಲೌಕಿಕವ್ಯವಹಾ
ಗಳಲ್ಲಿ ಸರಕಾರಕ್ಕೆ ಮನಃಪೂರ್ವಕವಾಗಿ ಅಂಕಿತವಾಗಿರುವದೇ ನಾಗರಿಕನ ಆದ್ಯ
ಕರ್ತವ್ಯವು. ಅವನು ರಾಜ್ಯದಲ್ಲಿ ಲೋಕಹಿತಕ್ಕಾಗಿ ಸರಕಾರದಿಂದ ಸ್ಥಾಪಿಸ
ಲ್ಪಟ್ಟ ಕಟ್ಟಳೆಗಳಿಗನುಸರಿಸಿ ನಡೆಯಬೇಕು ಇಂಥ ಕಟ್ಟಳೆಗಳನ್ನು ಜನರಿಗೆ
ವಿಪರೀತವಾಗಿ ತಿಳಿಸಿ ವಿಕಲ್ಪವನ್ನುಂಟುಮಾಡಬಾರದು. ಅವನು ಸರಕಾರಕ್ಕೆ
ಪ್ರತಿಕೂಲವಾಗಿ ನಡೆಯುವಂಥ ಜನರ ನೆರಳಿಗೆ ಸಹ ಹೋಗಕೂಡದು. ರಾಜ್ಯ
ದಾಡಳಿತಕ್ಕೋಸ್ಕರ ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಸ್ಥರಿಗೆ ಅನುಕೂಲ
ರಾಗಿಯೂ ವಿಧೇಯರಾಗಿಯೂ ಇರಬೇಕು.

೩. **ಕರಗಳನ್ನು ಕೊಡುವದು**:—ನಮ್ಮ ಹಿತಕ್ಕಾಗಿ ಸರಕಾರದ
ವರು ಮಾಡುವಂಥ ದೊಡ್ಡ ದೊಡ್ಡ ಕಾರ್ಯಗಳು ಬಹಳ ಹಣ ವೆಚ್ಚಮಾಡಿದ
ಹೊರತು ಆಗಲಾರವೆಂಬದು ಸ್ಪಷ್ಟವದೆ. ನಮ್ಮನ್ನು ಶತ್ರುಗಳಿಂದ ಕಾಪಾಡುವ
ದಕ್ಕೂ ನಮಗೆ ವಿದ್ಯೆ ಕಲಿಸುವದಕ್ಕೂ, ಕಾಲುವೆ, ಮಾರ್ಗ, ದವಾಖಾನೆ, ನ್ಯಾಯ
ಕೋರ್ಟು ಮುಂತಾದವುಗಳನ್ನು ಕಟ್ಟಿಸುವದಕ್ಕೂ ಬಹಳ ಹಣ ಬೇಕಾಗು
ವದು. ಇಂಥ ಆಡಳಿತದ ವೆಚ್ಚಕ್ಕೆ ಹತ್ತುವ ಹಣವನ್ನು ಕೂಡಿಸುವದಕ್ಕಾಗಿ

ಸರಕಾರದಿಂದ ಕೆಲವು ಸ್ಥಾನಿಕಕರಗಳೂ ಸಾರ್ವತ್ರಿಕಕರಗಳೂ ಕಟ್ಟಿಲ್ಪಟ್ಟಿರುವವು. ಅಂಥ ಕರಗಳನ್ನು ನಾಗರಿಕನು ಹಿಂದುಮುಂದು ನೋಡದೆ ಸಂತೋಷದಿಂದ ಕೊಡಬೇಕು. ಇಲ್ಲದಿದ್ದರೆ ರಾಜ್ಯದಲ್ಲೆಲ್ಲ ಅವ್ಯವಸ್ಥೆಯುಂಟಾಗಿ, ಅದರ ಪರಿಣಾಮವನ್ನು ಅವನಿಗೆ ಅನುಭೋಗಿಸಬೇಕಾಗುವದು.

೪. ಯೋಗ್ಯರಾದ ಜನರಿಗೆ ಮತಕೊಡುವದು:–ಲೋಕಶಿಕ್ಷಣಕ್ಕಾಗಿ ಹಳ್ಳಿಯ ಕೂಟ, ಮ್ಯುನಿಸಿಪಾಲಿಟಿ, ಲೋಕಲ್‌ಬೋರ್ಡ ಮುಂತಾದ. ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳು ಅಲ್ಲಲ್ಲಿಗೆ ಸ್ಥಾಪಿಸಲ್ಪಟ್ಟಿರುತ್ತವೆ. ಊರೊಳಗಿನ ಕೆಲವು ಪ್ರತಿಷ್ಠಿತ ಜನರನ್ನೇ ಈ ಸಂಸ್ಥೆಗಳ ಸಭಾಸದರನ್ನಾಗಿ ನೇಮಿಸುವರು. ಇಂಥ ಜನರನ್ನು ಆರಿಸಲು ಮತ ಕೊಡಬೇಕಾದಲ್ಲಿ, ನಾಗರಿಕನು ತನ್ನ ಮತಗಳನ್ನು ಅಯೋಗ್ಯರಾದ ಜನರಿಗೆ ಎಂದೂ ಮಾರಿಕೊಳ್ಳಬಾರದು. ಯೋಗ್ಯರಾದ ಜನರಿಗೆ ಮಾತ್ರ ತನ್ನ ಮತಗಳನ್ನು ಕೊಡಬೇಕು. ಸ್ಥಾನಿಕಸ್ವರಾಜ್ಯದ ಬೆಳವಣಿಗೆಯು ಕೇವಲ ಅಲ್ಲಿಯ ಸಭಾಸದರ ಯೋಗ್ಯತೆಯನ್ನೇ ಅವಲಂಬಿಸಿರುತ್ತದೆಂತಲ್ಲ. ಆದರೆ ಅದಕ್ಕೆ ಲೋಕಮತವಾದರೂ ಕಾರಣವಾಗಿರುವದು. ಅಧಿಕಾರಸ್ಥರು ತಮ್ಮ ಅಧಿಕಾರದ ದುರುಪಯೋಗವನ್ನು ಮಾಡಹತ್ತಿದರೆ, ಹಾಗೆ ಮಾಡಗೊಡದಂತೆ ಯಾವತ್ತು ನಾಗರಿಕರು ಒಕ್ಕಟ್ಟಾಗಿ ಯೋಗ್ಯವಾದ ಸುಧಾರಣೆಗಳನ್ನು ಸೂಚಿಸಿದಲ್ಲಿ, ಆ ಅಧಿಕಾರಸ್ಥರು ಅವರ ಮತಗಳಿಗೆ ಒಳಗಾಗದೆ ಎಂದೂ ಇರರು. ಅಂದಮೇಲೆ ನಾಗರಿಕನ ಮತಗಳಿಗೆ ಎಷ್ಟು ಮಹತ್ವವಿರುವದೆಂಬದು ಸ್ಪಷ್ಟವದೆ. ಆದ್ದರಿಂದ ಅವನಲ್ಲಿ ಸಾಹಸ, ಧೈರ್ಯ, ನ್ಯಾಯಪ್ರೀತಿ, ದೊಡ್ಡ ಮನಸ್ಸು, ಪ್ರಾಮಾಣಿಕತನ, ಸ್ವಾರ್ಥತ್ಯಾಗ ಮುಂತಾದ ಗುಣಗಳು ಅವಶ್ಯವಾಗಿರತಕ್ಕದ್ದು. ಇಂಥ ನಾಗರಿಕರ ದೇಶವು ಸುಖಸಂಪತ್ತುಗಳಿಗೆ ತವರಮನೆಯಾಗುವದು.

೫. ಸ್ವಾರ್ಥಕ್ಕಿಂತ ಸ್ವದೇಶಹಿತವನ್ನು ಹೆಚ್ಚು ಚಿಂತಿಸುವದು:–

ಶರೀರದ ಬೇರೆಬೇರೆ ಅವಯವಗಳು ಒಂದರಿಂದೊಂದು ಭಿನ್ನವಾದಾಗ್ಯೂ, ಅವು ಮಾಡುವ ಕೆಲಸಗಳು ಶರೀರದ ಹಿತಕ್ಕಾಗಿಯೇ ಇರುವವು. ಅದರಂತೆಯೇ ಒಂದು ಜನಾಂಗದಲ್ಲಿ ಸಾವಿರಾರು ಜಾತಿಗಳಿದ್ದರೂ, ಆ ಪ್ರತಿಯೊಂದು ಜಾತಿಯ ಪ್ರತಿಯೊಬ್ಬ ಮನುಷ್ಯನು ತಾನು ಮಾಡುವ ಪ್ರತಿಯೊಂದು ಕೆಲಸವು ಕೇವಲ ತನ್ನ ಹಿತಕ್ಕಾಗಿಯೇ ಅಲ್ಲ, ಆದರೆ ತನ್ನ ದೇಶಹಿತಕ್ಕೂ ರಾಷ್ಟ್ರಹಿತಕ್ಕೂ ಸಂಬಂಧಿ

ಸಿರುತ್ತದೆಂಬದನ್ನು ಮರೆಯುಬಾರದು. ಕುಟುಂಬದ ಪ್ರತಿಷ್ಠೆಯು ಬೆಳೆಯ ಬೇಕಾದರೆ, ಕುಟುಂಬದ ಜನರು ಒಕ್ಕಟ್ಟಿನಿಂದ ಇರಬೇಕಾಗುವದಲ್ಲದೆ ನೆರೆಹೊರೆ ಯುವರ ಕೂಡ ನ್ಯಾಯದಿಂದಲೂ ಪ್ರೀತಿಯಿಂದಲೂ ನಡಕೊಳ್ಳಬೇಕಾಗುವದು. ಕುಟುಂಬಕ್ಕಿಂತ ಹಳ್ಳಿಯೂ, ಹಳ್ಳಿಗಿಂತ ಪ್ರಾಂತವೂ, ಪ್ರಾಂತಕ್ಕಿಂತ ದೇಶವೂ ಬಹಳೇ ಮಹತ್ವದ್ದೆಂದು ತಿಳಿದು, ಪ್ರತಿಯೊಬ್ಬ ನಾಗರಿಕನು ಸ್ವಾರ್ಥವನ್ನು ಬದಿ ಗೊತ್ತಿ, ದೇಶಾಭಿಮಾನವುಳ್ಳವನಾಗಬೇಕು. ತನ್ನ ಕುಟುಂಬದ ಅಥವಾ ಜಾತಿಯ ಸಲುವಾಗಿ ಮಾಡತಕ್ಕ ಕರ್ತವ್ಯಗಳಿದ್ದಂತೆ, ತನ್ನ ದೇಶದ ಸಲುವಾಗಿಯೂ ಮಾಡತಕ್ಕ ಕರ್ತವ್ಯಗಳಿರುತ್ತವೆಂಬದನ್ನು ಅವನು ಎಂದೂ ಮರೆಯಬಾರದು.

೬. ರಾಜ್ಯದ ಆರೋಗ್ಯಸುಖಶಾಂತಿಗಳಿಗೆ ತಾನೇ ಜವಾಬ ದಾರನೆಂದು ತಿಳಿಯುವದು:—ಶರೀರದ ಬೇರೆ ಬೇರೆ ಅವಯವಗಳು ತಮ್ಮ ತಮ್ಮ ಕೆಲಸ ಮಾಡಿದ ಹೊರತು ಶರೀರವು ಆರೋಗ್ಯವುಳ್ಳದ್ದೆಂದೂ ಆಗಲಾರದು. ಅದರಂತೆಯೇ ಒಂದು ದೇಶದ ಜನರು ಆ ದೇಶದ ಆಡಳಿತದಲ್ಲಿ ನೆರವಾದ ಹೊರತು ಅಲ್ಲಿಯ ಆಡಳಿತವು ತಡೆಯಿಲ್ಲದೆ ಎಂದೂ ಸಾಗಲಾರದು. ಸರಕಾರಕ್ಕೆ ನೆರವಾಗುವದಕ್ಕಾಗಿ ಮಾಡತಕ್ಕ ಕರ್ತವ್ಯಗಳು ಕೇವಲ ಸರಕಾರದ ಸೇವೆ ಯಲ್ಲಿರುವದರಿಂದಲೇ ಆಗುತ್ತವೆಂತಲ್ಲ. ಇಂಥ ಪೋಲೀಸ ಅಧಿಕಾರಸ್ಥನು ಲಂಚ ತಕ್ಕೊಂಡನೆಂತಲೂ, ಅಂಥ ನ್ಯಾಯಾಧೀಶನು ಅನ್ಯಾಯದ ತೀರ್ಪು ಕೊಟ್ಟ ನೆಂತಲೂ, ಪ್ರತಿಬಂಧಿಸಲಿಕ್ಕೆ ಬರುವಂಥ ರೋಗವು ಹಬ್ಬಲಿಕ್ಕೆ ಊರಜನರೇ ಕಾರಣರಾದರೆಂತಲೂ, ಇವೇ ಮುಂತಾದ ತಕರಾರುಗಳನ್ನು ನಾವು ಒಮ್ಮೊಮ್ಮೆ ಕೇಳುತ್ತೇವೆ. ಆದರೆ ಲಂಚ ಕೊಟ್ಟ ಹೊರತು ಯಾವನೂ ಲಂಚ ತಕ್ಕೊಳ್ಳ ಲಾರನು. ಸುಳ್ಳು ಸಾಕ್ಷಿ ಹೇಳಿದ ಹೊರತು ನ್ಯಾಯಭ್ರಷ್ಟತೆಯಾಗಲಾರದು. ರೋಗವಾಗದಿರಲಿಕ್ಕೆ ಮಾಡತಕ್ಕ ಉಪಾಯಗಳನ್ನು ಮಾಡಿದರೆ, ರೋಗವು ಹಬ್ಬಲಾರದು. ಅದರಂತೆಯೇ ರಾಜ್ಯದಲ್ಲಿ ಆರೋಗ್ಯಸುಖಶಾಂತಿಗಳಿರಬೇಕಾದರೆ ಪ್ರತಿಯೊಬ್ಬ ನಾಗರಿಕನು ಅವುಗಳ ಬಗ್ಗೆ ಜಾಗರೂಕನಾಗಿ ಯತ್ನಿಸುತ್ತಿರ ಬೇಕು. ಇದೇ ಅವನ ಮುಖ್ಯ ಕರ್ತವ್ಯವು.

---

(೩೨) ನೈತಿಕ ಧೈರ್ಯ.

" ನಿಂದಿಕೆ ಮೇಣ್ ನಯವಿದರಭಿ
ನಂದಿಕೆ ಸಿರಿಯೊರ್ವೆ ಬರ್ಕೆ ಪೋಕೆ ಯಥೇಚ್ಛಂ ॥
ಇಂದೇ ಮೃತಿಯೆಯ್ದುಗೆ ಮೇಣ್
ಮುಂದೈದುಗೆ ನೀತಿಪಥವನುೞಿಯರ್ ಧೀರರ್ ॥

೧. **ಅರ್ಥ**:—ನೈತಿಕ ಅಂದರೆ ನೀತಿಗೆ ಸಂಬಂಧಿಸಿದ್ದು. ನೈತಿಕಧೈರ್ಯವೆಂದರೆ, ಎಂಥ ವಿಪತ್ತುಗಳು ಬಂದೊದಗಿದರೂ ಸನ್ಮಾರ್ಗವನ್ನು ಬಿಡದಿರುವದರಲ್ಲಿ ತೋರಿಸಲ್ಪಡುವ ಧೈರ್ಯವು. ಶಿರೋಲೇಖದಲ್ಲಿ ಹೇಳಿರುವ ಮೇರೆಗೆ, ನೀತಿವಿಶಾರದರು ಸ್ತುತಿಸಲಿ ಇಲ್ಲವೆ ನಿಂದಿಸಲಿ, ಲಕ್ಷ್ಮಿಯು ಬರಲಿ ಇಲ್ಲವೆ ಹೋಗಲಿ, ಮರಣವು ಈ ಹೊತ್ತೇ ಬರಲಿ ಇಲ್ಲವೆ ಕೋಟ್ಯವಧಿ ವರ್ಷಗಳ ನಂತರ ಬರಲಿ, ಧೈರ್ಯಶಾಲಿಗಳು ಸನ್ಮಾರ್ಗವನ್ನು ಬಿಟ್ಟು ಎಂದೂ ಖುಲುಕುವದಿಲ್ಲ.

ಇಲ್ಲಿ ಧೈರ್ಯವೆಂದರೆ ರಣಶೂರರಿಂದ ತೋರಿಸಲ್ಪಡುವ ಧೈರ್ಯವಲ್ಲ. ಆದರೆ ಈ ಜಗತ್ತಿನಲ್ಲಿ ಯಶೋಪಯಶಗಳನ್ನು ಲಕ್ಷಿಸದೆ, ಸತ್ಯವನ್ನೂ, ಕರ್ತವ್ಯವನ್ನೂ ಬಿಡದೆ, ಯಾವ ಪ್ರಸಂಗದಲ್ಲಾದರೂ ಎದೆಗುಂದದೆ, ಎಲ್ಲ ತರದ ವಿಪತ್ತುಗಳನ್ನು ತಾಳಿಕೊಂಡು ಹೋಗುವವರಲ್ಲಿ ವ್ಯಕ್ತವಾಗುವ ಧೈರ್ಯವೇ ನಿಜವಾದ ಧೈರ್ಯವೆಂದು ತಿಳಿಯತಕ್ಕದ್ದು. ಇದಕ್ಕೆ ನೈತಿಕ ಧೈರ್ಯವೆಂದೆನ್ನುವರು. ಸನ್ಮಾನಸಂಪತ್ತುಗಳನ್ನು ದೊರಕಿಸುವ ಅಭಿಲಾಷೆಯಿಂದ ಕಾಳಗದಲ್ಲಿ ಸಾವಿರಾರು ಜನರನ್ನು ಕೊಲ್ಲುವದರಲ್ಲಿ ಕಾಣಬರುವ ಧೈರ್ಯಕ್ಕಿಂತಲೂ ನೈತಿಕ ಧೈರ್ಯವು ಬಹಳೇ ಹೆಚ್ಚಿನದು. ಪಾಂಡವರು, ಸೀತಾರಾಮರು ಮೊದಲಾದ ಮಹಾನುಭಾವರನ್ನು ಪರಿಪರಿಯಿಂದ ಪೀಡಿಸಿದ ಕೌರವ-ರಾವಣಾದಿಗಳು ಅಸಹಾಯಶೂರರಿದ್ದಾಗ್ಯೂ, ಅವರ ದುಷ್ಕೃತ್ಯಗಳು ಯಾವ ರೀತಿಯಲ್ಲಿ ಪರಿಣಮಿಸಿದವೆಂಬದನ್ನು ಎಲ್ಲರೂ ಬಲ್ಲರು. ಆದಕಾರಣ ಮನುಷ್ಯನು ಎಷ್ಟು ಸಂಕಟದೊಳಗಿದ್ದರೂ ಸನ್ಮಾರ್ಗವನ್ನು ಬಿಡಬಾರದೆಂಬದೇ ಪ್ರಸ್ತುತ ವಿಷಯದ ಮುಖ್ಯ ಉದ್ದೇಶವು.

೨. **ಅವಶ್ಯಕತೆ**:—ಸ್ವಧರ್ಮ-ಸ್ವದೇಶಗಳ ರಕ್ಷಣಾರ್ಥವಾಗಿಯೇ

ರುವ ವಿದ್ಯಾರ್ಥಿಗಳಿಗೆ ಅನೇಕ ಲಾಭಗಳುಂಟು. ಆ ಲಾಭಗಳಲ್ಲಿ ವಿದ್ಯಾಲಾಭವೇ ಮುಖ್ಯವಾದದ್ದು. ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಮಾತ್ರ ಇರುತ್ತವೆ. ಇಂಗ್ಲಿಷ ಶಾಲೆಗಳೂ ಕಾಲೇಜಗಳೂ ಇರುವದಿಲ್ಲ. ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪ್ರಾಥಮಿಕ ಶಾಲೆಗಳೂ, ಕಾಲೇಜಗಳೂ, ಇಂಗ್ಲಿಷ ಶಾಲೆಗಳೂ ಇರುತ್ತವೆ. ಹಳ್ಳಿಯ ಶಾಲೆಗಳಲ್ಲಿ ಕಲಿತು, ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೋದಿದ ಬಳಿಕ, ಧಾರವಾಡ ಮುಂತಾದ ಪಟ್ಟಣಗಳಲ್ಲಿರುವ **ಟ್ರೇನಿಂಗ** ಕಾಲೇಜದಲ್ಲಿ ಕಲಿಯಬಹುದು. ಅದರಂತೆಯೇ ಸ್ಕೂಲ ಲೀವ್ಹಿಂಗ ಸರ್ಟಿಫಿಕೇಟ ಪರೀಕ್ಷೆ ಕೊಟ್ಟು, ಇಂಗ್ಲಿಷ ಭಾಷೆಯಲ್ಲಿ ನಿಪುಣರಾಗಬೇಕೆಂಬ ಇಚ್ಛೆಯುಳ್ಳವರು ಮುಂಬಯಿ, ಪುಣೆ, ಸಾಂಗಲಿ, ಕೊಲ್ಹಾಪುರ, ಧಾರವಾಡ ಮುಂತಾದ ಪಟ್ಟಣಗಳಲ್ಲಿ ಕಲಿಯಬಹುದು. ಬೇರೆ ಬೇರೆ ಕಲೆಗಳಲ್ಲಿ ಅಭಿರುಚಿಯಿದ್ದವರಿಗೂ ತಮ್ಮ ತಮ್ಮ ಐಚ್ಛಿಕ ವಿಷಯಗಳನ್ನು ಕಲಿಯುವದಕ್ಕಾಗಿ ಅಲ್ಲಿ ಶಾಲೆಗಳು ಇರುವವು.

ಇದಲ್ಲದೆ ದೊಡ್ಡ ಪಟ್ಟಣಗಳಲ್ಲಿ ಮೇಲಿಂದ ಮೇಲೆ ಸಾರ್ವಜನಿಕ ಸಭೆಗಳು ಕೂಡುವದರಿಂದ ವಾಕ್ಪಟುತ್ವವನ್ನೂ ಆಯಾ ವಿಷಯಗಳ ಜ್ಞಾನವನ್ನೂ ಹೊಂದಬಹುದು. ಮತ್ತು ದೊಡ್ಡ ಪಟ್ಟಣಗಳಲ್ಲಿ ಪುಸ್ತಕಾಲಯಗಳು ಇರುವದರಿಂದ ಸ್ವತಃ ಕೊಂಡುಕೊಳ್ಳಲಿಕ್ಕೆ ಅಸಾಧ್ಯವಾದ ಬೇರೆ ಬೇರೆ ವಿಷಯಗಳ ಪುಸ್ತಕಗಳೂ ವರ್ತಮಾನಪತ್ರಗಳೂ ಓದಲಿಕ್ಕೆ ಸುಲಭವಾಗಿ ದೊರೆಯುವವು. ಹೆಚ್ಚು ಜಾಣರಾದ ಬಡ ವಿದ್ಯಾರ್ಥಿಗಳು ಶ್ರಮಪಟ್ಟು ಕಲಿತರೆ, ಅವರಿಗೆ ಊಟ, ಉಡಿಗೆ, ಫೀ ಮುಂತಾದವುಗಳಿಗೆ ಬೇಕಾಗುವ ಹಣವು ಸಹ "ಸ್ಕಾಲರಶಿಪ್" ಗಳ ಮಾರ್ಗವಾಗಿ ದೊರೆಯಬಹುದು. ಸಾರಾಂಶ, ವಿದ್ಯಾದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂಬ ಅಪೇಕ್ಷೆಯುಳ್ಳವರು ಯಾವ ಶಾಸ್ತ್ರವನ್ನು ಕಲಿಯಲಿಚ್ಛಿಸಿದರೂ ಸಾಧ್ಯವಾಗುವಂತಿರುವದು.

೨. **ನೆನಪಿನಲ್ಲಿಡತಕ್ಕ ಮಾತುಗಳು**:— ವಿದ್ಯೆಯಲ್ಲಿ ವ್ಯವಹಾರಜ್ಞಾನವೂ ಬರುವದು. ಆದ್ದರಿಂದ ಶಾಲೆಗಳೂ, ಕಾಲೇಜಗಳೂ, ಪುಸ್ತಕಾಲಯಗಳೂ ಮುಂತಾದವುಗಳಿಂದುಂಟಾಗುವ ಲಾಭವಷ್ಟೇ ಪಟ್ಟಣವಾಸದಿಂದುಂಟಾಗುವ ಲಾಭವೆಂದು ತಿಳಿಯಬಾರದು. ಕೆಲವು ವಿದ್ಯಾರ್ಥಿಗಳು ಅಜ್ಞಾನದಿಂದ ಯಾವಾಗಲೂ ಓದುವದರಲ್ಲಿಯೇ ತೊಡಗಿರುವದರಿಂದ ಅವರು ಪಟ್ಟಣ

ವಾಸದ ಅನ್ಯಸುಖಗಳಿಗೆ ಎರವಾಗುತ್ತಾರೆ. ಇದು ಅವರ ದೊಡ್ಡ ತಪ್ಪು. ಆಯಾ ಪಟ್ಟಣಗಳಲ್ಲಿರುವ ಸುಂದರವಾದ ಭವ್ಯ ಮಂದಿರಗಳೂ, ಬಂದರಗಳೂ, ಹಡಗಗಳೂ ಮುಂತಾದ ಸುಧಾರಣೆಯ ಕುರುಹುಗಳನ್ನು ಚನ್ನಾಗಿ ಅರಿತುಕೊಳ್ಳುವದರಲ್ಲಿ ತಮ್ಮ ವಿಶ್ರಾಂತಿಯ ವೇಳೆಯನ್ನು ಕಳೆಯತಕ್ಕದ್ದು. ಈ ರೀತಿಯಲ್ಲಿ ಕಳೆದ ವೇಳೆಯು ವ್ಯರ್ಥವಾಗಿ ಹೋದಂತಾಗುವದಿಲ್ಲ. ಇಂಥ ಚಮತ್ಕೃತಿಗಳನ್ನು ನೋಡದೆ ಕೇವಲ ಅಭ್ಯಾಸದಲ್ಲಿಯೇ ಹೊತ್ತುಗಳೆಯುವ ವಿದ್ಯಾರ್ಥಿಗಳಿಗೂ ಹಳ್ಳಿಯಲ್ಲಿರುವ ಒಕ್ಕಲಿಗರಿಗೂ ಏನೂ ಭೇದವಿಲ್ಲ. ಆದರೆ ಹಳ್ಳಿಗಳಿಂದ ಬಂದ ವಿದ್ಯಾರ್ಥಿಗಳು, ಪಟ್ಟಣಗಳಲ್ಲಿ ಆಗಾಗ್ಗೆ ಕಣ್ಣಿಗೆ ಬೀಳುವಂಥ, ಮತ್ತು ತಮ್ಮ ಕಟಾಕ್ಷಬಾಣಗಳಿಂದ ತರುಣರ ಎದೆಗಳನ್ನು ವಿದಾರಿಸುತ್ತಿರುವಂಥ ವಾರನಾರಿಯರೇ ಮೊದಲಾದ ಅನೀತಿಪ್ರವರ್ತಕರ ಬಗ್ಗೆ ವಿಶೇಷವಾಗಿ ಎಚ್ಚರ ಪಡತಕ್ಕದ್ದು. ಅವರು ಇಂಥ ಕುಚೇಷ್ಟೆಗಳಿಗೆ ಒಮ್ಮೆ ಒಳಗಾಗಿ ಮೋಹಪಾಶದಲ್ಲಿ ಸಿಲುಕಿದರೆ, ತಮ್ಮ ಪ್ರಕೃತಿಯನ್ನೂ ಹಣವನ್ನೂ ಹಾಳುಮಾಡಿಕೊಂಡು, 'ಎಂಥ ಮುಹೂರ್ತದಲ್ಲಿ ನಮ್ಮ ಹಳ್ಳಿಯನ್ನು ಬಿಟ್ಟು ಹೊರಟೆವು!' ಎಂದು ತಾವು ಹೊರಟ ದಿವಸವನ್ನು ಹಳಿದು ಪಶ್ಚಾತ್ತಾಪ ಪಡಬೇಕಾಗುವದು. ಆದ್ದರಿಂದ ಇಂಥ ವಿಲಾಸಕ್ಕೆ ಮರುಳಾಗದೆ, ತಮ್ಮ ಅಭ್ಯಾಸದಲ್ಲಿ ಮನಸ್ಸಿಟ್ಟು, ನೇಮದಿಂದ ಊರಹೊರಗೆ ಬೈಲುಗಳಲ್ಲಿ ಅಡ್ಡಾಡಿ, ರಾಜಹಂಸವು ಹಾಲು ತೆಗೆದುಕೊಂಡು ನೀರು ಬಿಟ್ಟುಕೊಡುವಂತೆ, ಪಟ್ಟಣವಾಸದಿಂದುಂಟಾಗುವ ಲಾಭಗಳಿಗೆ ಮಾತ್ರ ಲಕ್ಷ್ಯಗೊಟ್ಟರೆ, ಅವರು ತಮ್ಮ ಮಾನಸಿಕ, ಶಾರೀರಿಕ, ಮತ್ತು ನೈತಿಕ ಶಕ್ತಿಯನ್ನು ಬೆಳೆಸಬಹುದು.

(೩೪) ಪ್ರವಾಸ.

ಯಸ್ತು ಸಂಚರತೇ ದೇಶಾನ್ಯಸ್ತು ಸೇವೇತ ಪಂಡಿತಾನ್ ।
ತಸ್ಯ ವಿಸ್ತಾರಿತಾ ಬುದ್ಧಿಸ್ತೈಲಬಿಂದುರಿವಾಂಭಸಿ ॥ ಸುಭಾಷಿತ.

ಅರ್ಥ:—ದೇಶಸಂಚಾರ ಮಾಡುವವನ ಮತ್ತು ವಿದ್ವಜ್ಜನರ ಸೇವೆ ಮಾಡುವವನ ಬುದ್ಧಿಯು ನೀರೊಳಗೆ ಬಿದ್ದ ಎಣ್ಣೆಯ ಹನಿಯಂತೆ ವಿಸ್ತಾರಗೊಳ್ಳುವದು.

೧. **ಪೂರ್ವಕಾಲದ ಪ್ರವಾಸಮಾಡುವ ಕ್ರಮವೂ ಈಗಿನ ಕ್ರಮವೂ**:-ಉಗೆಬಂಡಿಗಳೂ ಉಗೆಹಡಗಗಳೂ ಈ ದೇಶವಲ್ಲಿ ಬರುವದಕ್ಕಿಂತ ಮೊದಲು, ಜನರು ಕುದುರೆಗಳನ್ನು ಹತ್ತಿಕೊಂಡು ಇಲ್ಲವೆ ಎತ್ತು ಹೂಡಿದ ಚಕ್ಕಡಿಗಳಲ್ಲಿ ಕುಳಿತು ಪ್ರವಾಸಮಾಡುತ್ತಿದ್ದರು. ಕೆಲವರು ಕಾಲಿನಿಂದ ನಡೆದು ಹೋಗುತ್ತಿದ್ದರು. ಆದರೆ ಈ ಪ್ರವಾಸಕ್ಕೆ ಬಹಳ ಹಣವೂ,ವೇಳೆಯೂ, ಶ್ರಮವೂ ಹತ್ತುತ್ತಿದ್ದದರಿಂದ ಬಹಳೇ ಸ್ವಲ್ಪ ಜನರು ಪ್ರವಾಸ ಮಾಡುತ್ತಿದ್ದರು. ಆದರೆ ಈ ದೇಶದಲ್ಲಿ ಇಂಗ್ಲಿಷರ ಸ್ವಾಮಿತ್ವವು ಪೂರ್ಣವಾಗಿ ನೆಲೆಗೊಂಡಂದಿನಿಂದ ಉಗೆಬಂಡಿ-ಉಗೆಹಡಗಗಳ ಸಂಖ್ಯೆಯು ಹೆಚ್ಚಾಗುತ್ತ ಹೋದಹಾಗೆ ಪ್ರತಿ ವರ್ಷ ಪ್ರವಾಸಿಕರ ಸಂಖ್ಯೆಯೂ ಹೆಚ್ಚಾಗುತ್ತ ನಡೆದದೆ. ಮೊದಲು ಒಂದು ಊರಿಂದ ಎರಡನೇ ಊರಿಗೆ ಹೋಗಬೇಕಾಗಿದ್ದರೆ, ಜನರು ತಮ್ಮ ಜೀವದ ಸುತ್ತೇ ಬಂತೆಂದು ತಿಳಿಯುತ್ತಿದ್ದರು. ಆದರೆ ಈಗ ಆ ಜನರೇ ಉಗೆಬಂಡಿ, ಉಗೆಹಡಗ ಮುಂತಾದ ಯಂತ್ರಗಳ ಸಹಾಯದಿಂದ ಪ್ರವಾಸದ ಶ್ರಮವನ್ನು ಕಡ್ಡಿಗಿಂತಲೂ ಹಗುರವಾಗಿ ಎಣಿಸಹತ್ತಿದ್ದಾರೆ. ಮುಂಬಯಿ ಪಟ್ಟಣದಲ್ಲಿ ಪ್ರತಿ ವರ್ಷ ಆಶ್ವಿನ, ಕಾರ್ತಿಕ ಮಾಸಗಳಲ್ಲಿ ಪೃಥ್ವೀಪ್ರದಕ್ಷಿಣೆ ಮಾಡಬೇಕೆಂಬ ಕುತೂಹಲದಿಂದ ಎಲ್ಲ ಸಿದ್ಧತೆಯನ್ನು ಮಾಡಿಕೊಂಡು, ಬಂದರದಲ್ಲಿ ಉಗೆಹಡಗ ಗಳನ್ನು ನಿರೀಕ್ಷಿಸುತ್ತ ನಿಂತ ಎಷ್ಟೋ ಜನರನ್ನು ಕಾಣಬಹುದು. ಅದರಂತೆಯೇ ಯಾವದೊಂದು ನಿಮಿತ್ತದಿಂದ ಪುಣೆ, ಮುಂಬಯಿ, ಬೆಂಗಳೂರು, ಮದ್ರಾಸ ಮುಂತಾದ ದೂರದೂರದ ಪಟ್ಟಣಗಳಿಗೆ ಹೋಗುವ ಪ್ರವಾಸಿಕರಿಂದ ತುಂಬಿ ಅತಿರಭಸದಿಂದ ಓಡುವ ಉಗೆಬಂಡಿಗಳನ್ನು ಈಗ ನಾವು ದಿನಾಲು ನೋಡುತ್ತೇವೆ. ಆದರೆ ಬೇರೆ ಬೇರೆ ದೇಶಗಳಲ್ಲಿ ತರತರದ ಸೋಜಿಗಗಳೂ ಚಿತ್ರವಿಚಿತ್ರ ವಾದ ಪರ್ವತ, ನದಿ ಮುಂತಾದವುಗಳೂ ಇರುತ್ತವೆ. ನೋಡಿದತ್ತ ಸ್ವಾಭಾವಿಕವಾದ ಸೃಷ್ಟಿಸೌಂದರ್ಯದಿಂದಲೂ ಕೃತ್ರಿಮವಾದ ಸೌಂದರ್ಯದಿಂದಲೂ ಇಡೀ ಪೃಥ್ವಿಯು ತುಂಬಿ ಹೋಗಿರುತ್ತದೆಂದರೂ ಸಲ್ಲುವದು. ಈ ಮನೋರಂಜಕವಾದ ಸೌಂದರ್ಯವನ್ನು ಕಣ್ಣು ತುಂಬ ನೋಡಬೇಕೆಂಬ ಲವಲವಿಕೆ ಹುಟ್ಟುವದು ಸ್ವಾಭಾವಿಕವು. ಆದರೆ ಉಗೆಬಂಡಿಗಳೂ ಉಗೆಹಡಗಗಳೂ ಪ್ರವಾಸಿಕರಸಂಖ್ಯೆಯನ್ನು ಈ ಮೇರೆಗೆ ಹೆಚ್ಚುಗೊಳಿಸಿದರೂ, ಅವು ಅತಿತ್ವರೆಯಿಂದೋಡುವದರಿಂದ, ಸೃಷ್ಟಿಸೌಂದರ್ಯವನ್ನು ಮನದಣಿಯುವಂತೆ ನೋಡಿ ಆನಂದ

ಗೊಳ್ಳಲಿಕ್ಕೆ ಆಸ್ಪದವು ದೊರೆಯುವದಿಲ್ಲ. ಆದ್ದರಿಂದ ಸೃಷ್ಟಿಚಮತ್ಕಾರವನ್ನು ನೋಡುವ ಕಾಂಕ್ಷೆಯಿಂದ ಪ್ರವಾಸ ಮಾಡುವವರು ಮೊದಲಿನಂತೆ ಕುದುರೆಗಳ ಮೇಲೆ ಇಲ್ಲವೆ ಚಕ್ಕಡಿಯಲ್ಲಿ ಕುಳಿತು ಇಲ್ಲವೆ ಕಾಲುನಡಿಗೆಯಿಂದ ಪ್ರವಾಸ ಮಾಡುವದೇ ಲೇಸು.

೨. **ಉದ್ದೇಶಗಳು**:–ಪರದೇಶದವರ ನಡತೆನಡಾವಳಿಗಳನ್ನೂ ರಾಜನೀತಿಯನ್ನೂ ಚನ್ನಾಗಿ ಪರೀಕ್ಷಿಸಿ ನೋಡೋಣ, ಅವರು ಯಾವ ಯಾವ ವಿಷಯುಗಳಲ್ಲಿ ನಮಗಿಂತ ಶ್ರೇಷ್ಠ ಇಲ್ಲವೆ ಕಡಿಮೆ ಇರುತ್ತಾರೆಂಬು ಅರಿತುಕೊಳ್ಳೋಣ, ಬೇರೆ ಬೇರೆ ದೇಶಗಳ ಕೂಡ ವ್ಯವಹಾರ ಮಾಡದೆ ಇರುವದರಿಂದ ನಮ್ಮಲ್ಲಿ ಹುಟ್ಟುವ ದುರಭಿಮಾನ, ಸಿಡಕುತನ, ಜಂಭ ಮುಂತಾದ ವಿಲಕ್ಷಣವಾದ ಕೊಂಕುಗಳನ್ನು ಬಿಡೋಣ ಇವೇ ಮುಂತಾದವುಗಳು ಪರದೇಶಗಳಿಗೆ ಪ್ರವಾಸಮಾಡುವ ಮುಖ್ಯವಾದ ಉದ್ದೇಶಗಳು. ಆದರೆ ಸ್ವದೇಶದ ನಡತೆನಡಾವಳಿಗಳನ್ನು ಎಷ್ಟು ಮಾತ್ರಕ್ಕೂ ಅರಿಯದವನಿಗೆ ಪರದೇಶಿಗರ ನಡತೆಗಳು ತಿಳಿಯುವ ಬಗೆ ಹೇಗೆ! ಸ್ವದೇಶದ ನಡತೆಗಳ ಮೂಲತತ್ವಗಳನ್ನರಿಯದೆ, ಅನ್ಯದೇಶಸ್ಥರ ನಡಾವಳಿಗಳನ್ನು ಅರಿತುಕೊಳ್ಳುವದರಲ್ಲಿ ವ್ಯರ್ಥವಾಗಿ ಕಷ್ಟಪಡುವವರಿಗೂ ತಳಸೋಸದೆ ಭವ್ಯವಾದ ಮಂದಿರಗಳನ್ನು ಕಟ್ಟುವವರಿಗೂ ಏನೂ ಭೇದವಿಲ್ಲ.

ಪುರಾತನ ಕಾಲದ ಕವಿಗಳು ತಮ್ಮ ಗದ್ಯ–ಪದ್ಯಗಳಲ್ಲಿ ಬಹು ಸರಸವಾಗಿ ವರ್ಣಿಸಿದ ಹಳುವು ಮುಂತಾದವುಗಳನ್ನೂ ಅವರ ವಸತಿ ಸ್ಥಾನವನ್ನೂ ಪ್ರತ್ಯಕ್ಷವಾಗಿ ನೋಡಿ ಮನಗಾಣುವದು ಪ್ರವಾಸದ ಎರಡನೇ ಉದ್ದೇಶವು.' ಅವರು ತಮ್ಮ ಗ್ರಂಥಗಳಲ್ಲಿ ಹೇಳಿದ ಸಂಗತಿಗಳು ನಮ್ಮ ನೆನಪಿನಲ್ಲಿ ಚಿರಕಾಲ ಉಳಿದು ವಾಚನಾಭಿರುಚಿಯು ಹೆಚ್ಚಾಗಬೇಕಾದರೆ, ಪ್ರವಾಸವೇಮುಖ್ಯವಾದ ಕಾರಣವು. ಸ್ವಾಭಾವಿಕವಾದ ಸೃಷ್ಟಿಸೌಂದರ್ಯಕ್ಕೂ ಕವಿಗಳು ಗ್ರಂಥಗಳಲ್ಲಿ ವರ್ಣಿಸಿರುವ ಸೌಂದರ್ಯಕ್ಕೂ ಏನಾದರೂ ಹೆಚ್ಚು ಕಡಿಮೆ ಅದೆಯೋ ಹೇಗೋ ಎಂಬದನ್ನು ಪ್ರವಾಸಿಕರು ಪರೀಕ್ಷಿಸಿ ನೋಡಬೇಕು. ಅದರಿಂದ ಅವರ ವಾಚನಾಭಿರುಚಿಯು ಹೆಚ್ಚಾಗುವದು. ಇದಲ್ಲದೆ ಪುರಾತನದ ಗಿರಿದುರ್ಗ—ದೇಗುಲಗಳು ನಾಶವಾದದ್ದನ್ನು ಕಂಡು, ಮನುಷ್ಯಜನ್ಮವು ಸಹ ಅಸ್ಥಿರವಾದದ್ದೂ ಅಶಾಶ್ವತವಾದದ್ದೂ ಎಂಬ ಅನುಮಾನವನ್ನು ಮಾಡುವದಕ್ಕೆ ಪ್ರವಾಸಿಕನು ಯೋಗ್ಯನಿದ್ದರೆ, ಈ ನೋಟಗಳಿಂದ ಅವನ ಸದಾಚಾರಕ್ಕೆ ಮತ್ತಿಷ್ಟು ಅನುಕೂಲವಾಗು

ತ್ತದೆ. ಮಹಾತ್ಮರಿದ್ದ ಸ್ಥಳಗಳನ್ನು ಪ್ರತ್ಯಕ್ಷವಾಗಿ ನೋಡುವದರಿಂದ ಅವರಂತೆ ಸದಾಚಾರಸಂಪನ್ನರಾಗಬೇಕೆಂಬ ಕಾಂಕ್ಷೆಯು ಪ್ರವಾಸಿಕರ ಮನಸ್ಸಿನಲ್ಲಿ ಹುಟ್ಟಿದರೂ ಹುಟ್ಟಬಹುದು. ಆದರೆ ಈ ಲಾಭಗಳು ಪ್ರತಿಯೊಬ್ಬ ಪ್ರವಾಸಿಕ ನಿಗೂ ಆಗುತ್ತವೆಂದು ಹೇಳಲಾಗದು. ಕೆಲವರು ತಾವು ನೋಡುವದನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಾರೆ. ಹಲವರು ಸುಮ್ಮನೆ ನೋಡುತ್ತ ಹೋಗು ತ್ತಾರೆ. ಅವರ ಮನಸ್ಸಿನಲ್ಲಿ ಪ್ರವಾಸದ ಪರಿಣಾಮಗಳು ಎಷ್ಟುಮಾತ್ರಕ್ಕೂ ಬಿಂಬಿಸುವದಿಲ್ಲ. ಇಂಥವರು ಪ್ರವಾಸಮಾಡಿದರೂ ಅಷ್ಟೇ, ಮನೆಯಲ್ಲಿ ಕುಳಿ ತರೂ ಅಷ್ಟೇ. ಒಂದುವೇಳೆ ಪ್ರವಾಸಮಾಡಿದರೂ, ಎತ್ತಿನ ಕೂಡ ತೊನಸಿಯು ಗುಡ್ಡವನ್ನೇರಿ ಬರುವಂತೆ ಅವರು ಪ್ರವಾಸಮಾಡಿ ಹಿಂತಿರುಗಿ ಬರುವರು.

೩. **ಲಾಭಗಳು**:—ಪ್ರವಾಸ ಮಾಡುವದರಿಂದ ಪರದೇಶಿಗರ ನಡತೆ ನಡಾವಳಿಗಳೂ, ವಿದ್ಯೆ, ಕಲಾಕೌಶಲ್ಯಗಳೂ, ರಾಜ್ಯವಾಳುವ ಪದ್ಧತಿಯೂ ಗೊತ್ತಾಗುವದರಿಂದ ಬುದ್ಧಿಯು ವಿಕಸಿತವಾಗುವದು. ಅದರಿಂದ ಮನುಷ್ಯನು ಒಮ್ಮೆಲೆ ಮೋಸ ಹೋಗುವದಿಲ್ಲ. ಅವನು ಸ್ವಾಭಾವಿಕವಾಗಿ ದಡ್ಡನಿದ್ದರೂ ತಕ್ಕಮಟ್ಟಿಗೆ ಜಾಣನಾಗುತ್ತಾನೆ. ಅವನ ವ್ಯವಹಾರಜ್ಞಾನವು ಹೆಚ್ಚಾಗುತ್ತದೆ. ಅವನು ಬಹುತರವಾಗಿ ಮೂರ್ಖತನದಿಂದ ವರ್ತಿಸಿ ಹಾಸ್ಯಾಸ್ಪದವಾಗುವದಿಲ್ಲ. ಇವಲ್ಲದೆ ಪ್ರವಾಸದಿಂದ ಆರೋಗ್ಯವು ಬೆಳೆಯುತ್ತವೆಂದು ಬಲ್ಲವರು ಹೇಳುತ್ತಾರೆ.

ಇದಲ್ಲದೆ ಶಾಲೆಗಳಲ್ಲಿಯೂ ಕಾಲೇಜಗಳಲ್ಲಿಯೂ ಪುಸ್ತಕಗಳನ್ನೋದಿ ಸಂಪಾದಿಸಿದ ಜ್ಞಾನವು ಕೇವಲ ತಾತ್ವಿಕವಾದದ್ದಿರುವದರಿಂದ, ಅದರಿಂದ ವ್ಯವಹಾ ರದಲ್ಲಿ ಆಗತಕ್ಕಷ್ಟು ಉಪಯೋಗವಾಗುವದಿಲ್ಲ. ತಾತ್ವಿಕಜ್ಞಾನವು ವ್ಯಾವಹಾರಿಕ ಜ್ಞಾನದಿಂದ ತೀರ ಭಿನ್ನವಾಗಿರುವದು. ವ್ಯಾವಹಾರಿಕ ಜ್ಞಾನವು ಪುಸ್ತಕಗಳ ನ್ನೋದುವದರಿಂದ ಬರುವದಿಲ್ಲ. ಅದನ್ನು ಸಂಪಾದಿಸಬೇಕಾದರೆ, ಈ ಜಗತ್ತಿನಲ್ಲಿ ನಡೆಯುವ ಬೇರೆ ಬೇರೆ ವ್ಯವಹಾರಗಳನ್ನೂ, ಬೇರೆ ಬೇರೆ ಜನರ ಬೇರೆ ಬೇರೆ ನೀತಿನಡಾವಳಿಗಳನ್ನೂ, ವಿಚಾರಾವಿಚಾರಗಳನ್ನೂ ಪ್ರತ್ಯಕ್ಷವಾಗಿಯೂ ಸೂಕ್ಷ್ಮ ವಾಗಿಯೂ ಪರೀಕ್ಷಿಸಬೇಕಾಗುತ್ತದೆ. ಅಂದರೆ ಜಗತ್ತಿನ ಅನುಭವವು ಅವಶ್ಯ ವಾಗಿರುವದು. ಈ ಅನುಭವವು ಬೇರೆ ಬೇರೆ ದೇಶಗಳಲ್ಲಿ ಪ್ರವಾಸ ಮಾಡು ವದರಿಂದಲೇ ದೊರೆಯುವದು. ಅದರಿಂದಲೇ ನಾವು ಶಾಲೆಯಲ್ಲಿ ಕಲಿಯುವ ವಿದ್ಯೆಯು ಸಂಪೂರ್ಣವಾಗುವದು.

೪. **ಉಪಸಂಹಾರ:**—ಆದ್ದರಿಂದ ದ್ರವ್ಯಾನುಕೂಲವಿದ್ದ ಪ್ರತಿಯೊಬ್ಬ ಮನುಷ್ಯನು ಬೇರೆ ಬೇರೆ ದೇಶಗಳಲ್ಲಿ ಅವಶ್ಯವಾಗಿ ಪ್ರವಾಸ ಮಾಡತಕ್ಕದ್ದು ಹೀಗಾಗದಿದ್ದಲ್ಲಿ, ತಾನಿರುವ ದೇಶವಲ್ಲಿಯಾದರೂ ಆದಷ್ಟು ಮಟ್ಟಿಗೆ ಪ್ರವಾಸ ಮಾಡುವದು ಉತ್ತಮವು.

(೩೫) ಬ್ರಿಟಿಶ್ ಸಾಮ್ರಾಜ್ಯದಿಂದ ಭರತಖಂಡಕ್ಕೆ ಒದಗಿದ ಲಾಭಗಳು.

ಬ್ರಿಟಿಶ ರಾಜ್ಯದಿಂದ ನಮ್ಮ ಭರತಖಂಡಕ್ಕೊದಗಿದ ಲಾಭಗಳು ಲೆಕ್ಕವಿಲ್ಲ ದಷ್ಟಿರುವವು. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಮಾತ್ರ ನಾವು ಇಲ್ಲಿ ಹೇಳಿರುವೆವು.

೧. **ಏಕಚ್ಛತ್ರಾಧಿಪತ್ಯಕ್ಕೆ ಒಳಗಾಗೋಣ** :— ಬ್ರಿಟಿಶ್ ರಾಜ್ಯ ದಷ್ಟು ವಿಸ್ತಾರವಾದ ರಾಜ್ಯವು ಬೇರೆ ಯಾವದೂ ಇಲ್ಲ. ಬ್ರಿಟಿಶರಿಗೆ ಅಧೀನವಾದ ದೇಶವಿಲ್ಲದ ಖಂಡನೇ ಇಲ್ಲ. ಬ್ರಿಟಿಶ್ ಸಡುಗಡ್ಡೆಗಳಿಲ್ಲದ ಸಮುದ್ರವೇ ಇಲ್ಲ. ಬಹಳ ಹೇಳುವದೇಕೆ ? ಇವರ ರಾಜ್ಯದಲ್ಲಿ ಸೂರ್ಯನು ಎಂದೂ ಮುಳುಗುವ ದಿಲ್ಲ. ಈಗ ನಮ್ಮ ಭರತಖಂಡದ ೩೦ ಕೋಟಿ ಜನರು ಇಂಥ ಏಕಚ್ಛತ್ರಾಧಿ ಪತ್ಯದ ತಂಪಾದ ನೆರಳಿನಲ್ಲಿ ನಿರಾತಂಕವಾಗಿ ಸುಖಶಾಂತಿಗಳನ್ನನುಭವಿಸುತ್ತಿರು ವರು. ಒಬ್ಬನ ಸುಖದುಃಖಗಳೇ ೩೦ ಕೋಟಿ ಜನರ ಸುಖದುಃಖಗಳಾಗಿವೆ. ಅಂದಮೇಲೆ ಇಂಥ ಸಹಾನುಭೂತಿಯನ್ನು ಸಂಪಾದಿಸಿಕೊಡುವಂಥ ಈ ಏಕ ಚ್ಛತ್ರಾಧಿಪತ್ಯದ ಲಾಭವು ಅಲ್ಪವೆಂದನ್ನಬಹುದೇ ?

ಶಾಂತತೆ:—ಎರಡನೇ ಲಾಭವು ಯಾವದೆಂದರೆ, **ಶಾಂತತೆ**. ಸುಮಾರು ನಾಲ್ಕೈದು ನೂರು ವರ್ಷಗಳಾಚೆಗಿದ್ದ ನಮ್ಮ ದೇಶದ ಸ್ಥಿತಿಗೂ ಅವರ ಈಗಿನ ಸ್ಥಿತಿಗೂ ಸರಿಮಾಡಿನೋಡಲು, ಎಷ್ಟು ಮಹದಂತರವುಂಟೆಂಬದು ಸಹಜವಾಗಿ ಕಂಡು ಬರುವದು. ನಾದಿರಶಹಾ, ತೈಮೂರಲಂಗ, ಅಹಮ್ಮದಶಹಾ ಅಬ್ದಾಲಿ ಮೊದಲಾದ ಕೇವಲ ವಿಜಯಾಕಾಂಕ್ಷಿಗಳಾದ ಮತ್ತು ಧನಲೋಭಿಗಳಾದ ಉಪ ದ್ರವಿಗಳು ನಮ್ಮ ದೇಶವನ್ನೆಲ್ಲ ಹಾಳುಮಾಡಿ ಬಿಟ್ಟಿದ್ದರು. ದೇಶವಲ್ಲೆಲ್ಲ ‘ ಹಿಡಿ, ಬಡಿ, ಕಡಿ, ’ ಎಂಬ ಕೂಗಾಟವೇ ಕೇಳಬರುತ್ತಿತ್ತು. ಇವರ ಕಾಲಕ್ಕೆ ಭೂಮಿಯು ಸಾಗುವಳಿಯಾಗದೆ, ವ್ಯಾಪಾರ ಮುಂತಾದ ಉದ್ಯೋಗಗಳೂ ಕಲಾಕೌಶಲ್ಯ

ಗಳೂ ಮೂಲಿಗುಂಪಾಗಿ ಬಿದ್ದಿದ್ದಿಲ್ಲವೇ ? ಆದರೆ ಈಗ ಶಾಂತಿಪ್ರಿಯರಾದ ನಮ್ಮ ಬ್ರಿಟಿಶ್ ಸರಕಾರದವರು ನಮಗೆ ಅಭಯದಾನವನ್ನಿತ್ತು ಎಲ್ಲ ಕಡೆಯ ಲ್ಲಿಯೂ ಶಾಂತತೆಯನ್ನುಂಟುಮಾಡಿರುವರು; ಇಷ್ಟೇ ಅಲ್ಲ, ತಮ್ಮ ಸಹಾಯದಿಂದ ಸಂಪಾದಿಸಿದ ಎಷ್ಟೋ ರಾಜ್ಯಗಳನ್ನು ಅಲ್ಲಲ್ಲಿಯ ಅರಸುಮನೆತನದವರಿಗೇ ಕೊಟ್ಟಿರುವರು. ಇದು ಅವರ ಔದಾರ್ಯದ ಕುರುಹೇ ಸರಿ.

೩. **ಧರ್ಮಸ್ವಾತಂತ್ರ್ಯ:**—ಈ ವಿಷಯದಲ್ಲಂತೂ ನಾವು ಅತ್ಯುನ್ನತ ಪದವಿಯನ್ನು ಹೊಂದಿರುತ್ತೇವೆ. ಪೂರ್ವಕಾಲದಲ್ಲಿ ಅಂದರೆ ಅಕಬರ ಬಾದಶಹನ ಹೊರತಾಗಿ ಬೇರೆ ಮೊಗಲಬಾದಶಹರ ಆಡಳಿತದಲ್ಲಿ ಈ ಸ್ವಾತಂತ್ರ್ಯವು ಕನಸಿನಲ್ಲಿ ಸಹ ಕಂಡುಬರುತ್ತಿದ್ದಿಲ್ಲ. ಔರಂಗಜೇಬ ಬಾದಶಹನು ಮುಸಲ್ಮಾನರಲ್ಲದಂಥ ಪ್ರಜೆಗಳ ಮೇಲೆ ಹೇರಿದ "ಜಿಜಿಯಾ" ಎಂಬ ಕರವೇ ಉದಾಹರಣವಾಗಿದೆ. ಆದರೆ ಈಗಿನ ಬ್ರಿಟಿಶ್ ಪ್ರಭುಗಳ ನಿಷ್ಪಕ್ಷಪಾತಪೂರ್ವಕವಾದ ವಿಮರ್ಶೆಯನ್ನು ನೋಡಿರಿ! ಅವರು ನಮ್ಮ ಆರ್ಯಧರ್ಮದ ಗೋಜಿಗೆ ಬರುವದೇ ಇಲ್ಲ; ಇಷ್ಟೇ ಅಲ್ಲ, ಅವರ ಅನುಗ್ರಹದಿಂದ ಆಯಾ ಮತದವರು ತಮ್ಮ ತಮ್ಮ ಮತಧರ್ಮ ಗಳನ್ನು ನಿಷ್ಕಂಟಕವಾಗಿ ಏರ್ಪಡಿಸುತ್ತಿರುವರು.

೪. **ಜೀವಿತದ ಮತ್ತು ಆಸ್ತಿಯ ಸುರಕ್ಷಿತತೆ:**—ಮುಂಚೆ ನಮ್ಮ ಜೀವದ ಮತ್ತು ದ್ರವ್ಯದ ಭರವಸವೇ ನಮಗಿದ್ದಿದ್ದಿಲ್ಲ. ಜೀವಕ್ಕೆ ಯಾವಾಗ ಅಪಾಯವಾದೀತು? ಕಳ್ಳರು ನಮ್ಮನ್ನು ಯಾವಾಗ ಸುಲಕೊಳ್ಳುವರು? ಎಂಬ ಅಂಜಿಕೆಯು ಅಡಿಗಡಿಗೆ ನಮ್ಮ ಮನಸಿನಲ್ಲಿ ಬರುತ್ತಿತ್ತು. ಈಗ ನಮ್ಮ ಸಂಚಿತಧನವನ್ನು ನಾವು ನಮ್ಮ ಮನೆಯಲ್ಲಿ ಸುರಕ್ಷಿತವಾಗಿಟ್ಟುಕೊಳ್ಳಬಹುದು; ಇಲ್ಲವೆ ಅದನ್ನು ಸರಕಾರದಲ್ಲಿಟ್ಟು ಬೆಳಿಸಬಹುದು; ಮತ್ತು ಅಮೌಲ್ಯವಾದ ವಸ್ತ್ರಾಭರಣಗಳನ್ನಿಟ್ಟು ಕೊಂಡು ಕಳ್ಳರ ಭಯವಿಲ್ಲದೆ ಬೇಕಾದತ್ತ ದೇಶಪರ್ಯಟನ ಮಾಡಬಹುದು.

೫. **ಯಾತ್ರಾನುಕೂಲತೆ:**—ಪೂರ್ವಕಾಲದಲ್ಲಿ ಕಾಶೀರಾಮೇಶ್ವರಗಳ ಯಾತ್ರೆ ಮಾಡಬೇಕಾದರೆ ಆರೇಳು ತಿಂಗಳು ಸಾಕಾಗುತ್ತಿದ್ದಿಲ್ಲ. ಹತ್ತಿಪ್ಪತ್ತು ಜನರನ್ನು ಸಂಗಡ ಕರಕೊಂಡ ಹೊರತು ದೇಶಾಂತರಕ್ಕೆ ಹೊರಡುವ ಧೈರ್ಯವೇ ಇದ್ದಿಲ್ಲ. ಆದರೆ ಈಗ ವಾಯುವೇಗದಿಂದ ಹೋಗುವಂಥ ಉಗಿಬಂಡಿ, ಉಗಿ ಹಡಗಗಳಲ್ಲಿ ಕುಳಿತು, ಇಂಥ ಯಾತ್ರೆಗಳನ್ನು—ಅದೇಕೆ ಪೃಥ್ವೀಪ್ರದಕ್ಷಿಣೆಯನ್ನು ಅತ್ಯಲ್ಪ ಕಾಲದಲ್ಲಿ ಹಾಗು ಅತ್ಯಲ್ಪ ವೆಚ್ಚದಿಂದ ಮಾಡಬಹುದು.

(೩೬) ಮಹತ್ವಕಾಂಕ್ಷೆ.

ನಿಸ್ವೋ ವಷ್ಟಿ ಶತಂ ಶತೀ ದಶಶತಂ ಲಕ್ಷಂ ಸಹಸ್ರಾಧಿಪೋ
ಲಕ್ಷೇಶಃ ಕ್ಷಿತಿರಾಜತಾಂ ಕ್ಷಿತಿಪತಿಶ್ಚಕ್ರೇಶತಾಂ ವಾಂಛತಿ ।
ಚಕ್ರೇಶಃ ಸುರರಾಜತಾಂ ಸುರಪತಿರ್ಬ್ರಹ್ಮಾಸ್ಪದಂ ವಾಂಛತಿ
ಬ್ರಹ್ಮಾ ವಿಷ್ಣುಪದಂ ಹರಿಃ ಶಿವಪದಂ ತೃಷ್ಣಾವಧಿಂ ಕೋ ಗತಃ ॥

ಸುಭಾಷಿತ.

೧. **ಅರ್ಥ** :—ತಾವು ವಾಸವಾದಿರುವ ದೇಶದಲ್ಲಿ ಇಲ್ಲವೆ ಜನಾಂಗದಲ್ಲಿ ಅಥವಾ ವ್ಯವಹಾರ ಮಾಡುವ ಜನರ ಸಮೂಹದಲ್ಲಿ ಸುಪ್ರಸಿದ್ಧರಾಗಬೇಕೆಂಬ ಉತ್ಕಟೇಚ್ಛೆಯು ಎಲ್ಲರಿಗೂ ಇದ್ದೇ ಇರುವದು. ಜಗತ್ತಿನಲ್ಲಿ ವೈಭವವೂ ಮಾನವೂ ದೊರೆಯಬೇಕೆಂದು ಪ್ರತಿಯೊಬ್ಬ ಮನುಷ್ಯನು (ಅತಿಕೀಳನು ಸಹ) ಆತುರಪಡುವದು ಸ್ವಾಭಾವಿಕವು. ವಿದ್ಯಾರ್ಥಿಯು ತನ್ನ ವರ್ಗದಲ್ಲಿ ಎಲ್ಲರಿಗಿಂತ ಮೇಲಾಗುವದಕ್ಕೆ ಹವಣಿಸುವನು. ಶಿಲ್ಪಿಗನು ಮಿಕ್ಕ ಶಿಲ್ಪಿಗರಲ್ಲಿ ಬಲ್ಲಿದನಾಗಲಿಚ್ಛಿಸುವನು. ಶಿಕ್ಷಕನು ತನ್ನ ಸರಿಕರನ್ನು ಹಿಮ್ಮೆಟ್ಟಿ ನೋಡುವನು. ವರ್ತಕನು ಜೊತೆಯ ವರ್ತಕರಲ್ಲಿ ಮಿಗಿಲಾಗಲು ಬಯಸುವನು. ಭಟ್ಟನು ಉಳಿದ ಭಟ್ಟರಲ್ಲಿ ಹೆಸರಾಗಬೇಕೆಂದು ಆಶಿಸುವನು. ಸಾರಾಂಶ, ಬೇರೆ ಬೇರೆ ಜನರು ತಮ್ಮ ತಮ್ಮ ಉದ್ಯೋಗ–ವ್ಯವಸಾಯಗಳಲ್ಲಿ ಉಳಿದವರಿಗಿಂತ ಶ್ರೇಷ್ಠರೆಂದೆನಿಸಿಕೊಳ್ಳಬೇಕೆಂದು ಆತುರಪಡುವರು. ಆದ್ದರಿಂದ ಈ ಮಹತ್ವದ ಅಪೇಕ್ಷೆಯು ಮನುಷ್ಯನ ಹುಟ್ಟುಗುಣವೆಂದು ಹೇಳಬಹುದು. ಇಂಥ ಉತ್ಕಟೇಚ್ಛೆಗೆ ಮಹತ್ವಾಕಾಂಕ್ಷೆಯೆಂದೆನ್ನುವರು.

೨. ಅದು ಎಲ್ಲರಲ್ಲಿಯೂ ಇದ್ದು, ಬೇರೆ ಬೇರೆ ಜನರಲ್ಲಿ ಬೇರೆ ಬೇರೆಯಾಗಿ ಪರಿಣಮಿಸುವದು :—

ಕೆಲವರು ದೊಡ್ಡ ದೊಡ್ಡ ಅಧಿಕಾರಗಳ ಸಲುವಾಗಿ ವಿಶೇಷವಾಗಿ ಆಶೆಯಿಲ್ಲದವರಂತೆ ತೋರುತ್ತಾರೆ. 'ರಾಯರು, ದೇವರು' ಎಂದು ಯಾವಾಗಲೂ ತಮ್ಮನ್ನು ಹಿಂಬಾಲಿಸುವ ಜನರನ್ನು ತಿರಸ್ಕರಿಸುವರು. ಡೌಲಿನ ವಸ್ತ್ರಾಭರಣಗಳು ಅವರ ಮನಸ್ಸಿಗೆ ಬರುವದಿಲ್ಲ. ಎರಡನೆಯವರಿಗಿಂತ ಶ್ರೇಷ್ಠರಾಗಬೇಕೆಂದು ವ್ಯರ್ಥ ಶ್ರಮ ಪಡುವದಿಲ್ಲ. ಈ ತರದ ಜನರ ಮನಸ್ಸು ಉಪ್ಪರಿಗೆ ಗ್ರಂಥಗಳನ್ನೋದುವ

ವದರಿಂದ ಸುಸಂಸ್ಕೃತವಾಗಿರುತ್ತದೆಂತಲ್ಲ. ಸ್ವಾಭಾವಿಕವಾಗಿ ಅವರ ಮನಸ್ಸಿನ ಪ್ರವೃತ್ತಿಯೇ ಆ ತರದ್ದಿರುತ್ತದೆ. ಈ ಬಗೆಯ ಜನರು ಮಹತ್ವಾಕಾಂಕ್ಷಿಗಳಿರ ವದಿಲ್ಲೆಂದು ಮಾತ್ರ ಊಹಿಸಲಾಗದು. ಆದರೆ ಇಂಥವರ ತೃಷ್ಣಾಪ್ರವಾಹ ನಮಗೆ ತಿಳಿಯದಂತೆ ಬೇರೆ ದಿಕ್ಕಿನಲ್ಲಿ ಹರಿದು ಹೋಗಿರುತ್ತದೆಂದು ತರ್ಕಿಸುವದೆ ಸರಿಯಾದದ್ದು.

ಮಹತ್ವಾಕಾಂಕ್ಷೆಯು ಮನುಷ್ಯನನ್ನು ಸುಮ್ಮನೆ ಕೂಡ್ರಗೊಡುವದಿಲ್ಲ ಅದು ಯಾವಾಗಲೂ ಅವನನ್ನು ಒಂದಿಲ್ಲೊಂದು ಕೆಲಸಕ್ಕೆ ಹಚ್ಚುತ್ತದೆ. ಆದ ಯಾವದೊಂದು ವಸ್ತುವು ಸಜ್ಜನರ ಇಲ್ಲವೆ ದುರ್ಜನರ ಸಂಗತಿಯಿಂದ ರೂಪಾ ತರಗಳನ್ನು ಹೊಂದುವಂತೆ, ಮಹತ್ವಾಕಾಂಕ್ಷೆಯಾದರೂ ಆಯಾ ಜನರ ಸಂಸರ್ಗ ದಿಂದ ಚಲೋ ಇಲ್ಲವೆ ಕೆಟ್ಟ ಪರಿಣಾಮಗಳನ್ನುಂಟುಮಾಡುತ್ತದೆ. ಉದಾಹ ಣಾರ್ಥ, ಕುಂಬಳಕಾಯಿಯನ್ನು ನೋಡಿರಿ. ಯತಿಯು ಅದರಿಂದ ಕಮಂಡ ವನ್ನು ಮಾಡಿಕೊಳ್ಳುತ್ತಾನೆ. ಗಾಯಕನು ತಂಬೂರಿ ಮಾಡಿ, ಅದರಿಂದ ತನ ಗಾನಕ್ಕೆ ಮಾಧುರ್ಯವನ್ನುಂಟುಮಾಡಿಕೊಳ್ಳುತ್ತಾನೆ. ಕೆಲವರು ಅದನ್ನು ಈಸ ಗುಂಬಳಕಾಯಿ ಮಾಡಿ, ಅದರ ಸಹಾಯದಿಂದ ಸುರಕ್ಷಿತವಾಗಿ ಈಸಿ ಪಾರಾ ಗುತ್ತಾರೆ.

೩. **ಯೋಗ್ಯವಾದ ಮಹತ್ವಾಕಾಂಕ್ಷೆ**:—ಮಹತ್ವಾಕಾಂಕ್ಷೆಯು ಉದ್ಯೋಗದ ಮೂಸ್ಥಾನವೆಂತಲೂ, ಅದರ ಪರಿಣಾಮವು ಮನುಷ್ಯನ ಮ ಸ್ಸಿನ ಮೇಲೆ ಆದಹಾಗೆ ಅವನು ಹೆಚ್ಚು ಇಲ್ಲವೆ ಕಡಿಮೆ ಉದ್ಯೋಗಿಯಾಗು ನೆಂತಲೂ ಕಂಡುಬರುವದು. ಮನುಷ್ಯನಿಗೆ ಸ್ವಾಭಾವಿಕವಾಗಿರುವ ಈ ಮಹತ್ವಾ ಕಾಂಕ್ಷೆಯನ್ನು ಒಳ್ಳೇ ಕೆಲಸಗಳಿಗೆ ಹಚ್ಚಿದರೆ, ಅದರಿಂದ ದೊಡ್ಡ ದೊಡ ಲಾಭಗಳುಂಟಾಗುವವು. ಕೇವಲ ಶ್ಲಾಘ್ಯವಾದ ಸತ್ಕರ್ಮಗಳನ್ನಾಚರಿಸುವ ರಿಂದ ಹುಟ್ಟುವ ಆನಂದವೇ ಆ ಸತ್ಕರ್ಮಗಳ ಪ್ರತಿಫಲವಾಗಿರುವದು. ಹೀ ದ್ದರೂ ಅಂಥ ಅನೇಕ ಸತ್ಕರ್ಮಗಳನ್ನು ಮಾಡಿ ಕೀರ್ತಿ ಪಡೆಯಬೇಕೆಂ ಆಶೆಯು ಸಜ್ಜನರಲ್ಲೂ ಇರುವದು. ಈ ಬಗೆಯ ಮಹತ್ವಾಕಾಂಕ್ಷೆಯು ಯೋಗ ವಾದದ್ದೇ ಸರಿ. ಅದರಿಂದ ಸದ್ಗುಣಕ್ಕೆ ಬಹಳೇ ಸಹಾಯವಾಗುತ್ತದೆ.

೪. **ಅಯೋಗ್ಯವಾದ ಮಹತ್ವಾಕಾಂಕ್ಷೆ**:— ದೊಡ್ಡಿಸ್ತನವ ಎಲ್ಲರಿಗೂ ಬೇಕು. ಜ್ಞಾನ ಸಂಪಾದಿಸಿ, ನ್ಯಾಯದಿಂದ ನಡೆದು, ಕೀರ್ತಿ ಪಡ

ಯುವದು ಮನುಷ್ಯನ ಕರ್ತವ್ಯವೇ ಸರಿ. ಆದರೆ ಶರೀರಸಾಮರ್ಥ್ಯದಿಂದ ಎರಡನೆಯವರನ್ನು ಪೀಡಿಸಿ ಮಹತ್ವ ಪಡೆಯಬೇಕೆಂಬ ಆಶೆಯು ಗರ್ಹ್ಯವಾದದ್ದು. ದೇವರು ಮನುಷ್ಯನಿಗೆ ಶಕ್ತಿಯನ್ನು ಕೊಟ್ಟಿದ್ದು ಪರಪೀಡೆಯ ಸಲುವಾಗಿ ಅಲ್ಲ, ಆದರೆ ಪರೋಪಕಾರಕ್ಕಾಗಿರುವದೆಂದು ತಿಳಿಯತಕ್ಕದ್ದು.

ಮಹತ್ವಾಕಾಂಕ್ಷೆಯಿಂದ ಮನುಷ್ಯನು ಉದ್ಯೋಗಿಯಾಗಿರುತ್ತಾನೆಂಬದು ನಿಜವು. ಆದರೆ ಎರಡನೆಯವರ ಮನಸ್ಸನ್ನು ನೋಯಿಸಿದ ಹೊರತು ಪ್ರಾಪ್ತವಾಗದ ವಸ್ತುವನ್ನು ದೊರಕಿಸುವದಕ್ಕೆ ಪ್ರಯತ್ನಮಾಡುವದು ಸರಿಯಲ್ಲ. ದೈವದಿಂದೊದಗಿದ ಸ್ಥಿತಿಯಲ್ಲಿ ಸುಖಿಯಾಗಿರದೆ, ಎರಡನೆಯವರ ಉತ್ಕರ್ಷವನ್ನು ನೋಡಿ ಮನದೊಳಗೆ ಯಾವಾಗಲೂ ಮತ್ಸರ ಪಡುವವನು ಎಂದೂ ಸುಖಿಯಾಗಲಾರನು. ಯಾಕಂದರೆ ಈ ಜಗತ್ತಿನಲ್ಲಿ ಅಭ್ಯುದಯವನ್ನು ದೊರಕಿಸುವದಕ್ಕಾಗಿ ಪ್ರತಿಯೊಬ್ಬನು ಪ್ರಯತ್ನ ಮಾಡುವದುಂಟು. ಅಂದಮೇಲೆ ಎಲ್ಲರಿಗಿಂತ ಅವನೇ ಹೇಗೆ ಶ್ರೇಷ್ಠನಾಗುವನು? ಒಂದು ವೇಳೆ ಎಲ್ಲರಿಗಿಂತ ಮಿಗಿಲಾದರೂ, ಅವನ ಮನಸ್ಸು ಶಾಂತವಾಗಲಾರದು. ಉದಾಹರಣಾರ್ಥ, ಗ್ರೀಕರ ಅರಸನಾದ **ಸಿಕಂದರನು** ಎಲ್ಲ ದೇಶಗಳನ್ನು ಗೆದ್ದರೂ, 'ಇನ್ನುಮುಂದೆ ಜಯಿಸಲಿಕ್ಕೆ ಬೇರೆ ಯಾವ ದೇಶಗಳು ಉಳಿಯಲಿಲ್ಲವಲ್ಲ!' ಎಂದು ಉದ್ವಿಗ್ನನಾಗಿ, ಆಕಾಶದ ಕಡೆಗೆ ನೋಡಿ, ಕಂಬನಿಗಳನ್ನು ಸುರಿಸಿದನು. ಸಾಧಾರಣ ಪ್ರತಿಯು ಮನುಷ್ಯನು ಎರಡನೆಯವರನ್ನು ಪೀಡಿಸಿ ಧನವಂತನಾಗಬೇಕೆಂದು ಬಯಸಿದರೂ, ಪೀಡಿಸುವದಕ್ಕೆ ಬೇಕಾದ ಅನೇಕ ಸಾಧನಗಳು ಅವನಲ್ಲಿರುವದಿಲ್ಲಾದ್ದರಿಂದ ಅವನಿಂದ ಜನರಿಗೆ ಹೇಳತಕ್ಕಂಥ ಹಾನಿಗಳು ತಟ್ಟುವದಿಲ್ಲ. ಆದರೆ ರಾಜ್ಯಕಾರ್ಯಧುರಂಧರರು ಈ ಬಗೆಯಾಗಿ ಇಚ್ಛಿಸಿದರೆ, ದೇಶಕ್ಕೆ ಬಹಳ ಹಾನಿಯುಂಟಾಗುವದು. ರೋಮನ್ ಜನರು ದೇಶದಲ್ಲಿ ಎಲ್ಲಕ್ಕೂ ಶ್ರೇಷ್ಠವಾದ ಪ್ರಭುತ್ವವನ್ನು ಕೊಟ್ಟರೂ, **ಸೀಝರನು** ಅದರಿಂದ ತೃಪ್ತನಾಗದೆ, ಅರಸನಾಗಿ ಮನಬಂದಂತೆ ಮಾಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ, ಅವನ ಕೇವಲ ಮಿತ್ರನಾದವನೇ ಅವನನ್ನು ಕೊಂದನು. ಇಡೀ ಯುರೋಪ ಖಂಡವನ್ನು ತನ್ನ ಪರಾಕ್ರಮದಿಂದ ಗಡಗಡ ನಡುಗಿಸಿಬಿಟ್ಟ ಲೋಕೈಕವೀರನಾದ **ನೆಪೋಲಿಯನ್ ಬೋನಾಪಾರ್ಟನ** ಗತಿಯಾದರೂ ಇದೇ ತರದ್ದಾಯಿತು. ಕಳೆದು ಹೋದ ಮಹಾಯುದ್ಧದಲ್ಲಿ ಜರ್ಮನ್ನರ ಗತಿಯೇನಾಯಿತೆಂಬದು ಎಲ್ಲರಿಗೂ ಗೊತ್ತುಂಟು.

೫. **ಉಪಸಂಹಾರ:**—ಪರರ ಹಿತವನ್ನು ಬಗೆಯದೆ ಸ್ವಾರ್ಥಪರ
ಯಣರಾಗಿಯೂ, ಎಲ್ಲರಿಗಿಂತ ಘನವಂತರಾಗಿಯೂ ಇರಬೇಕೆಂಬ ಅಪೇಕ್ಷ
ಯುಳ್ಳವರು ಭಗ್ನಮನೋರಥರಾಗಿ ಮನಸ್ಸಿನ ಸ್ವಾಸ್ಥ್ಯವನ್ನು ಕಾಣದೆ ಎಲ್ಲ
ರಿಂದ ತಿರಸ್ಕರಿಸಲ್ಪಡುವರು. ಆದರೆ ಶ್ಲಾಘ್ಯವಾದ ಕಾರ್ಯಗಳಲ್ಲಿ ದೃಷ್ಟಿಯ
ನ್ನಿಡುವಂಥ, ಸ್ವದೇಶಾಭಿಮಾನಿಗಳಾದಂಥ, ಸ್ವಾರ್ಥವನ್ನೂ ಪರಪ್ರಶಂಸನ
ಗಳನ್ನೂ ಲಕ್ಷಿಸದೆ ಸತ್ಕೀರ್ತಿಯನ್ನು ಪಡೆಯಬೇಕೆಂಬುವಂಥ, ಮತ್ತು ದೇವರು
ತಮ್ಮನ್ನು ಇಟ್ಟ ಸ್ಥಿತಿಯಲ್ಲಿಯೇ ಸಂತುಷ್ಟರಾಗಿ ಉದ್ಯೋಗ, ದೀರ್ಘಪ್ರಯತ್ನ
ಮುಂತಾದ ಪ್ರಶಂಸನೀಯ ಗುಣಸಂಚಯದ ಸಹಾಯದಿಂದ ತಮ್ಮ ಸ್ಥಿತಿಯನ್ನು
ಸುಧಾರಿಸಿಕೊಳ್ಳುವಂಥ ಜನರೇ ಸುಖಿಗಳಾಗುವರು.

(೩೭) ರಾಜನಿಷ್ಠೆ.

ಬಾಲೋಽಪಿ ನಾವಮಂತವ್ಯೋ ಮನುಷ್ಯ ಇತಿ ಭೂಮಿಪಃ ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥ ಸುಭಾಷಿತ.

ಅರ್ಥ:—ಅರಸನು ಸಣ್ಣವನಿದ್ದರೂ, ಸಾಮಾನ್ಯ ಮನುಷ್ಯನೆಂದು ತಿಳಿಯ
ಕೂಡದು. ಯಾಕಂದರೆ ಅವನು ಮನುಷ್ಯರೂಪವನ್ನು ತಾಳಿದಂಥ ದೊಡ್ಡ
ದೇವರೇ ಸರಿ.

೧. **ಅರ್ಥ:**—ರಾಜನಿಷ್ಠೆಯೆಂದರೆ, ರಾಜರ ಬಗ್ಗೆ ತೋರಿಸಲ್ಪಡುವ
ಭಕ್ತಿಯು. ಅಂದರೆ ಅರಸರ ಆಜ್ಞೆಯ ಮೇರೆಗೆ ನಡೆದು, ಅವರಿಗೆ ಅನುಕೂಲ
ವಾಗುವಂತೆ ವರ್ತಿಸೋಣ.

೨. **ಭಕ್ತಿಯ ಪ್ರಕಾರಗಳು:**—ಭಕ್ತಿಗಳಲ್ಲಿ **ಮಾತಾಪಿತೃಭಕ್ತಿ,
ಗುರುಭಕ್ತಿ, ಸದ್ಗುರುಭಕ್ತಿ, ರಾಜಭಕ್ತಿ,** ಮತ್ತು **ಭಗವದ್ಭಕ್ತಿ** ಇವು
ಮುಖ್ಯವಾದವು. ಯಾವನೊಬ್ಬನ ಮನಸ್ಸಿನಲ್ಲಿ ಇವುಗಳಲ್ಲಾವದೊಂದು ಭಕ್ತಿ
ಯುಂಟಾಗಬೇಕಾದರೆ, ಅದಕ್ಕೆ ಏನಾದರೊಂದು ಕಾರಣವು ಅವಶ್ಯವಾಗಿ ಬೇಕಾ
ಗುತ್ತದೆ. ಉಪ್ಪು ಇಕ್ಕಿದವರನ್ನು ಮುಪ್ಪಿನ ವರೆಗೆ ನೆನಿಸತಕ್ಕದ್ದೆಂಬ ಗಾದೆ
ಯುಂಟು. ಯಾರಾದರೂ ನಮಗೆ ಯಾವದೊಂದು ಉಪಕಾರ ಮಾಡಿದರೆ
ನಾವು ಸಾಯುವ ವರೆಗೂ ಅವರಿಗೆ ಕೃತಜ್ಞರಾಗಿರಬೇಕು. ವಿವೇಕಹೀನಗಳಾದ

ಪಶುಪಕ್ಷ್ಯಾದಿಪ್ರಾಣಿಗಳಲ್ಲಿ ಸಹ ಈ ಉಪಕಾರ ಸ್ಮರಣಧರ್ಮವು ಕಂಡುಬರುತ್ತದೆ. ಅಂದಮೇಲೆ ಬುದ್ಧಿ-ವಿವೇಕಗಳಿಂದ ಕೂಡಿದ ಮನುಷ್ಯನು ಉಪಕಾರ ಸ್ಮರಣಹೀನನಾದರೆ, ಅವನು ಪಶುಪಕ್ಷ್ಯಾದಿ ಪ್ರಾಣಿಗಳಿಗಿಂತ ಹೀನನೆಂದು ಹೇಳಬೇಕಾಗುವದು.

೩. **ನಮ್ಮ ಭಕ್ತಿಗೆ ಅರ್ಹರಾದವರು:**—ಎಲ್ಲ ಭಕ್ತಿಗಳಲ್ಲಿ ಭಗವದ್ಭಕ್ತಿಯೇ ಹೆಚ್ಚಿನದು. ಸರ್ವಾಂತರ್ಯಾಮಿಯಾದ ಮತ್ತು ಸರ್ವಕಾರ್ಯಗಳಿಗೂ ಸಾಮಾನ್ಯಕಾರಣನಾದ **ಪರಮಾತ್ಮನು** ತಾಯಿ, ತಂದೆ, ಗುರು, ಸದ್ಗುರು, ರಾಜರು ಮೊದಲಾದವರ ರೂಪದಿಂದ ಪ್ರಕಟನಾಗಿ, ನಮ್ಮನ್ನು ಸರ್ವಪ್ರಕಾರದಿಂದ ಕಾಪಾಡುವನು. ಇಂಥ ಪರಮಾತ್ಮನಿಗೋಸ್ಕರ ಉಪಕಾರ ಸ್ಮರಣೆಯನ್ನು ವ್ಯಕ್ತಪಡಿಸುವ ಭಕ್ತಿಗೆ **ಭಗವದ್ಭಕ್ತಿ** ಎಂದೆನ್ನುವರು. ನಮ್ಮ **ತಾಯಿತಂದೆಗಳು** ನಮ್ಮನ್ನು ಹಗಲಿರುಳು ಹೊತ್ತು, ಹೆತ್ತು, ಸಾಕಿ, ಸಲುಹಿ, ತಮ್ಮ ಜೀವಕ್ಕಿಂತಲೂ ಹೆಚ್ಚು ನಮ್ಮನ್ನು ಪ್ರೀತಿಸುವರು. ಇದಕ್ಕೋಸ್ಕರ ಅವರಲ್ಲಿ ಭಕ್ತಿಯನ್ನಿಟ್ಟು ಅವರಿಗೆ ಕೃತಜ್ಞರಾಗಿರತಕ್ಕದ್ದು. ಇದಕ್ಕೆ **ಮಾತಾಪಿತೃಭಕ್ತಿ** ಎಂದೆನ್ನುವರು.

ಬಾಲ್ಯಾವಸ್ಥೆಯಲ್ಲಿ ಪಶುಸಮಾನರಾದ ನಮಲ್ಲಿ ಅಕ್ಷರಜ್ಞಾನವನ್ನುಂಟು ಮಾಡಿ ನಮಗೆ ಮನುಷ್ಯತ್ವವನ್ನು ತಂದುಕೊಡುವ ಗುರುಗಳ ಸಲುವಾಗಿ ನಮ್ಮಿಂದ ತೋರಿಸಲ್ಪಡುವ ಉಪಕಾರಸ್ಮರಣಧರ್ಮವೇ **ಗುರುಭಕ್ತಿ** ಎಂದೆನಿಸುವದು.

ಸದ್ಗುರುಗಳು ತಮ್ಮ ಅನುಗ್ರಹಮಾತ್ರದಿಂದಲೇ ತಮ್ಮ ಶಿಷ್ಯರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿ, ಅವರಿಗೆ ಭಗವತ್ ತತ್ವವನ್ನು ಚೆನ್ನಾಗಿ ತಿಳಿಸಿ, ಅವರ ಜನ್ಮಸಾರ್ಥಕ್ಯವನ್ನು ಮಾಡುವರು. ಇಂಥ ಸದ್ಗುರುಗಳ ಬಗ್ಗೆ ತೋರಿಸಲ್ಪಡುವ ಉಪಕಾರಸ್ಮರಣವೇ **ಸದ್ಗುರುಭಕ್ತಿ**ಯಾಗಿರುವದು.

ಮೇಲೆ ಬರೆದ ಸಂಸ್ಕೃತಶ್ಲೋಕದಲ್ಲಿ ಹೇಳಿದಂತೆ, ಅರಸನೆಂದರೆ ಸಾಮಾನ್ಯ ಮರ್ತ್ಯನಲ್ಲ. ಅವನು ಸಾಕ್ಷಾತ್ ದೇವನೇ ಸರಿ. ಪರಮಾತ್ಮನ ಅಂಶವೇ ಈ ಲೋಕದಲ್ಲಿ ರಾಜ್ಯವ್ಯವಸ್ಥೆಗಾಗಿ ರಾಜರ ರೂಪದಲ್ಲಿ ಅವತರಿಸಿರುವದು. ತಾಯಿ ತಂದೆ, ಗುರು, ಸದ್ಗುರು ಮೊದಲಾದವರು ಆಯಾ ಕೆಲಸಗಳ ಸಲುವಾಗಿ ನಮಗೆ ಬೇಕಾಗಿರುವಂತೆ, ಈ ಲೋಕದಲ್ಲಿ ರಾಜ್ಯವ್ಯವಸ್ಥೆಗಾಗಿ ರಾಜರು ನಮಗೆ ಅತ್ಯವಶ್ಯವಾಗಿ ಬೇಕು.

೪. **ರಾಜನಿಷ್ಠೆಯ ಅವಶ್ಯಕತೆ:**—ಈ ಜಗತ್ತಿನಲ್ಲಿ ಪರಮಾತ್ಮನ ಸಾನ್ನಿಧ್ಯವಿಲ್ಲದ ವಸ್ತುವೇ ಇಲ್ಲ. ಈ ಸಾನ್ನಿಧ್ಯವು ಅಚೇತನ ಪದಾರ್ಥಗಳಿಗಿಂತ ಸಚೇತನ ಪದಾರ್ಥಗಳಲ್ಲಿ ಹೆಚ್ಚು; ಮತ್ತು ಸಚೇತನ ಪದಾರ್ಥಗಳಲ್ಲೂ ಮನುಷ್ಯನಲ್ಲಿ ಹೆಚ್ಚು ಕಂಡುಬರುವದು. ಮನುಷ್ಯವರ್ಗದಲ್ಲೂ ಅರಸನು ಸಾಧಾರಣ ಮನುಷ್ಯನಲ್ಲ. ಆದರೆ ಅವನು ಕೇವಲ ಪರಮಾತ್ಮನ ಅವತಾರವಾದಕಾರಣ ಅವನಲ್ಲಿ ಈ ಸಾನ್ನಿಧ್ಯವು ಎಲ್ಲರಿಗಿಂತ ಹೆಚ್ಚು ಕಂಡುಬರುವದು. ಅಂದಮೇಲೆ ನಾವು ನಮ್ಮ ರಾಜರ ವಿಷಯವಾಗಿ ಹೆಚ್ಚೆಚ್ಚು ಪೂಜ್ಯಬುದ್ಧಿಯನ್ನು ತೋರಿಸುತ್ತ ಹೋದ ಹಾಗೆ ನಮಗೆ ಉತ್ತರೋತ್ತರ ಕಲ್ಯಾಣವಾಗದೆ ಎಂದೂ ಇರದು. '**ಹಿರಿಯರಿಲ್ಲದ ಮನೆ ಗುರುವಿಲ್ಲದ ಮಠ**' ನಾಶಹೊಂದುವಂತೆ, ರಾಜನಿಲ್ಲದ ರಾಜ್ಯವು ದಿಕ್ಕುಪಾಲಾಗಿ ಹೋಗುವದು. ಅಲ್ಲಿಯ ಪ್ರಜೆಗಳೆಲ್ಲರೂ ಅಂತಃಕಲಹಗಳಿಂದ ಪೀಡಿತರಾಗಿ, ಯಾವಾಗಲೂ ದುಃಖಗಳನ್ನನುಭವಿಸಬೇಕಾಗುವದಲ್ಲದೆ, ಪರರಾಜರು ದಂಡೆತ್ತಿಕೊಂಡು ಬಂದು, ಅವರ ಸರ್ವಸ್ವವನ್ನೆಲ್ಲ ಅಪಹರಿಸಿ, ಅವರನ್ನು ದಿಗಂಬರರನ್ನಾಗಿ ಮಾಡುವರು. ಅವರ ಹೆಂಡರು ಮಕ್ಕಳು ಅವರಿಂದ ದೂರಾಗುವರು. ಹಾಗು ಜೀವಿತದ ಭರವಸವೇ ಇಲ್ಲದಂತಾಗುವದು.

ಇನ್ನು ರಾಜಾಶ್ರಯವು ಕೇವಲ ವ್ಯವಹಾರದಲ್ಲಿರುವವರಿಗೇ ಮಾತ್ರ ಅವಶ್ಯವಾದದ್ದೆಂದು ತಿಳಿಯಬಾರದು. ಪ್ರಪಂಚವನ್ನು ಕಾಲಿಂದೊದ್ದು ಅರಣ್ಯವಾಸವನ್ನು ಸ್ವೀಕರಿಸುವ ಸಾಧು, ಸನ್ಯಾಸಿ, ತಪಸ್ವಿ ಮೊದಲಾದವರಿಗೂ ಸಹ ದುಷ್ಟರ ಬಾಧೆಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಅದು ಅವಶ್ಯವಾಗಿರುವದು. ಇದರಿಂದ ರಾಜಾಶ್ರಯವು ಎಷ್ಟು ಮಹತ್ವವುಳ್ಳದ್ದೆಂಬದು ಸಹಜವಾಗಿ ಕಂಡುಬರುವದು.

೫. **ರಾಜಭಕ್ತಿಯ ಸಾಧನಗಳು:**—ನಾವು ನಮ್ಮ ತಾಯಿತಂದೆಗಳನ್ನು ಪ್ರೀತಿಸುವಂತೆ ನಮ್ಮ ರಾಜರನ್ನುಪ್ರೀತಿಸಬೇಕು. ಇಂಥ ಪ್ರೇಮವನ್ನು ವ್ಯಕ್ತಪಡಿಸುವದಕ್ಕಾಗಿ ನಾವು ಅವರಿಗೆ ಸೇರುವದನ್ನೇ ಮಾಡಿ ಅವರ ಆಜ್ಞೆಯ ಮೇರೆಗೆ ನಡೆಯತಕ್ಕದ್ದು. ಅವರ ಕೆಲಸಗಳಲ್ಲಿ ನಾವು ನಮ್ಮ ಕೈಲಾದಷ್ಟು ಅವರಿಗೆ ಸಹಾಯ ಮಾಡಬೇಕು. ಅವರಿಗೆ ಅಥವಾ ಅವರ ಪ್ರತಿನಿಧಿಗಳಿಗೆ ಯಾರಾದರೂ ಕೆಡಕು ಬಗೆದರೆ ಅಥವಾ ಕೇಡು ಮಾತಾಡಿದರೆ, ನಾವೆಲ್ಲರೂ ಅಂಥವ

ರನ್ನು ತಿರಸ್ಕರಿಸಿ, ಹಾಗೆ ಮಾಡಬಾರದೆಂದು ಅವರಿಗೆ ಉಪದೇಶ ಮಾಡಬೇಕು. ನಮ್ಮ ರಾಜರು ಮತ್ತು ಅವರ ಪ್ರತಿನಿಧಿಗಳು ನಮ್ಮ ಕಲ್ಯಾಣವನ್ನೇ ಚಿಂತಿಸುತ್ತಿರುವರು. ಆದಮೇಲೆ ಯಾರಾದರೂ ಅವರ ಕೆಲಸಗಳಲ್ಲಿ ವಿಘ್ನ ತರುವಂತೆಯೂ ಜನರೊಳಗೆ ರಾಜದ್ರೋಹವನ್ನುಂಟುಮಾಡುವಂತೆಯೂ ಯತ್ನಿಸಿದರೆ, ನಾವೆಲ್ಲರು ಅಂಥವರನ್ನು ಬಹಿಷ್ಕರಿಸಿ, ಅವರ ದುಷ್ಕೃತ್ಯಗಳನ್ನೆಲ್ಲ ಬಹಿರಂಗಮಾಡಿ, ಅವರಿಗೆ ಯೋಗ್ಯ ಶಿಕ್ಷೆಯಾಗುವಂತೆ ಪ್ರಯತ್ನ ಮಾಡತಕ್ಕದ್ದು. ಹೀಗೆ ಮಾಡುವದರಿಂದ ನಾವು ರಾಜರ ಪ್ರೀತ್ಯನುಗ್ರಹಗಳಿಗೆ ಪಾತ್ರರಾಗುವೆವು. ಈಗಿನ ನಮ್ಮ ಸಾರ್ವಭೌಮರಾದ **೫ನೇ ಜಾರ್ಜ ಮಹಾರಾಜರು** ನಮ್ಮ ದೇಶದಿಂದ ಸಾವಿರಾರು ಗಾವುದಗಳ ಮೇಲಿರುವರು. ಆದರೆ ಅವರ ಪ್ರತಿನಿಧಿಗಳಾದ ಗವ್ಹರ್ನರ ಜನರಲ್, ಗವ್ಹರ್ನರ, ಕಮಿಶನರ, ಕಲೆಕ್ಟರ, ಪೋಲೀಸ ಸುಪರಿಂಟೆಂಡೆಂಟ ಮೊದಲಾದ ಎಷ್ಟೋ ಅಧಿಕಾರಿಗಳು ಅವರ ಆಜ್ಞೆಯ ಮೇರೆಗೆ ನಮ್ಮ ಹಿತಕ್ಕೋಸ್ಕರ ಈ ದೇಶದಲ್ಲಿ ಕೆಲಸ ಮಾಡುತ್ತಿರುವರು. ಈ ಅಧಿಕಾರಿಗಳ ಆಜ್ಞೆಗಳಿಗನುಸರಿಸಿ, ಅವರ ಮೇಲೆ ಪ್ರೇಮವನ್ನಿಟ್ಟು, ನಾವು ಅವರ ಸಂಗಡ ಆದರದೊಡನೆ ನಡೆದರೆ, ನಮ್ಮ ನಿಜವಾದ ರಾಜನಿಷ್ಠೆಯು ನಮ್ಮ ರಾಜರಿಗೆ ಕಂಡುಬರುವದು. ನಾವು ಅವರಿಗೆ ಅನಾದರಮಾಡಿ ಅವರ ಆಜ್ಞೆಗಳಿಗನುಸರಿಸಿ ನಡೆಯದಿದ್ದರೆ, ಅವರು ನಮ್ಮನ್ನು ಶಿಕ್ಷಿಸುವರೆಂಬ ಅಂಜಿಕೆಯಿಂದಲೇ ತೋರಿಸಲ್ಪಡುವ ರಾಜನಿಷ್ಠೆಯು ನಿಷ್ಕಪಟವಾದ ಮತ್ತು ಯಥಾರ್ಥವಾದ ರಾಜನಿಷ್ಠೆಯೆಂದೆನಿಸಲಾರದು. ಪರಮೇಶ್ವರನೂ, ತಾಯಿತಂದೆಗಳೂ, ಗುರುಗಳೂ ನಮಗೆ ಕಲ್ಯಾಣ ಮಾಡುವಂತೆ, ನಮ್ಮ ರಾಜರೂ ಅವರ ಪ್ರತಿನಿಧಿಗಳೂ ನಮಗೆ ಒಳಿತು ಮಾಡುವರು. ಆದ್ದರಿಂದ ನಾವು ನಿರ್ಮಲಾಂತಃಕರಣದಿಂದಲೂ ನಿಷ್ಕಪಟದಿಂದಲೂ ಅವರಿಗೆ ಕೃತಜ್ಞರಾಗಿ, ಅವರನ್ನು ಪ್ರೀತಿಸತಕ್ಕದ್ದು. ಹೀಗೆ ಮಾಡುವದರಿಂದಲೇ ನಾವು ನಿಜವಾಗಿ ರಾಜನಿಷ್ಠರೆಂದೆನಿಸಿಕೊಳ್ಳುವೆವು.

---

(೩೮) ವಿದ್ಯಾಭ್ಯಾಸ.

ಹರ್ತುರ್ಯಾತಿ ನ ಗೋಚರಃ ಕಿಮಪಿ ಶಂ ಪುಷ್ಣಾತಿ ಯತ್ಸರ್ವದಾ
ಹ್ಯರ್ಥಿಭ್ಯಃ ಪ್ರತಿಪಾದ್ಯಮಾನಮನಿಶಂ ಪ್ರಾಪ್ನೋತಿ ವೃದ್ಧಿಂ ಪರಾಂ ।

ಕಲ್ಪಾಂತೇಷ್ವಪಿ ನ ಪ್ರಯಾತಿ ನಿಧನಂ ವಿದ್ಯಾಖ್ಯಮಂತರ್ಧನಂ
ಯೇಷಾಂ ತಾನ್ ಪ್ರತಿ ಮಾನಮುಜ್ಝತ ನೃಪಾಃ ಕಸ್ತೈಃ ಸಹ ಸ್ಪರ್ಧತೇ ॥
ಭರ್ತೃಹರಿ.

೧. **ಅರ್ಥ**:—ಆಯಾ ವಿಷಯುಗಳ ಬಗ್ಗೆ ವಿದ್ವಜ್ಜನರು ಬರೆದಿಟ್ಟ ಗ್ರಂಥಗಳನ್ನೋದುವದು ಅಭ್ಯಾಸವೆನಿಸುತ್ತದೆ. ವಿದ್ಯೆಯಲ್ಲಿ ಅರುವತ್ತುನಾಲ್ಕು ಶಾಖೆಗಳಿರುವವು. ಅವುಗಳಲ್ಲಿ ರಾಜನೀತಿ, ಇತಿಹಾಸ, ವ್ಯಾಕರಣಶಾಸ್ತ್ರ, ಗಣಿತಶಾಸ್ತ್ರ, ಜ್ಯೋತಿಷಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ ಮುಂತಾದವುಗಳು ಮುಖ್ಯವಾದವು. ಆಯಾ ಶಾಖೆಗಳಲ್ಲಿ ಅಭಿರುಚಿಯಿದ್ದವರು ಆಯಾ ಗ್ರಂಥಗಳ ಅವಲೋಕನ ಮಾಡಿದರೆ, ಅವರ ಅಭಿರುಚಿಯು ಹೆಚ್ಚಾಗುತ್ತದೆ.

ಹುಟ್ಟಿದ ಐದು ವರ್ಷಗಳಿಂದ ವಿದ್ಯೆ ಕಲಿಯಲಾರಂಭಿಸಬೇಕು. ಅದು ಇಂತಿಷ್ಟು ವರ್ಷಗಳಲ್ಲಿ ಮುಗಿಯುತ್ತದೆಂದು ತಿಳಿಯಲಾಗದು. ಯಾಕಂದರೆ ವಿದ್ಯೆಯ ಅರುವತ್ತುನಾಲ್ಕು ಶಾಖೆಗಳು ಒಂದೇ ವ್ಯಕ್ತಿಯಲ್ಲಿ ಪರಿಪೂರ್ಣವಾಗಬೇಕಾದರೆ, ಈ ನರದೇಹದ ಆಯುಷ್ಯವು ಸಾಲದೆ ಹೋಗುತ್ತದೆ. ಮನುಷ್ಯನಿಗೆ ಸಾಯುವ ವರೆಗೂ ಹೊಸ ಹೊಸ ಜ್ಞಾನವುಂಟಾಗುತ್ತಲಿರುವದು.

೨. **ಸಾಧನಗಳು**:-ಯಾವನ ಅಭಿರುಚಿಯು ಯಾವ ಕಲೆಗಳಲ್ಲಿ ವಿಶೇಷವಾಗಿರುವದೋ ಅವುಗಳನ್ನೇ ಚನ್ನಾಗಿ ಮನನಮಾಡಿಕೊಂಡರೆ, ಆ ಅಭಿರುಚಿಯು ಹೆಚ್ಚಾಗುವದು. ಉತ್ತಮ ಪುಸ್ತಕಗಳನ್ನು ಮನಮುಟ್ಟಿ ಓದಬೇಕು. ಕೆಲವು ಪುಸ್ತಕಗಳು ಕೇವಲ ಓದುವದಕ್ಕಾಗಿಯೇ ಇರುವವು. ಕೆಲವು ಮನನ ಮಾಡಿಕೊಳ್ಳತಕ್ಕಂಥವಿರುತ್ತವೆ. ಮತ್ತೆ ಕೆಲವು ಮನನಮಾಡಿಕೊಂಡು ಬಾಯಿಪಾಠ ಮಾಡಲಿಕ್ಕೆ ಯೋಗ್ಯವಿರುತ್ತವೆ. ಆದ್ದರಿಂದ ಆಯಾ ಪುಸ್ತಕಗಳನ್ನು ವಿಮರ್ಶೆಯಿಂದ ಓದತಕ್ಕದ್ದು.

ಓದುವದರಿಂದ ಮನುಷ್ಯನ ಜ್ಞಾನವು ಪೂರ್ಣವಾಗುವದು. ಸಂಭಾಷಣೆಯಿಂದ ಅವನು ಸಮಯೋಚಿತಜ್ಞನಾಗುತ್ತಾನೆ. ಬರೆಯುವದರಿಂದ ಯಥಾರ್ಥಜ್ಞಾನವುಳ್ಳವನಾಗುತ್ತಾನೆ. ಬರೆಯದೆ ಯಥಾರ್ಥಜ್ಞಾನವುಳ್ಳವನಿದ್ದರೆ, ಅವನ ಸ್ಮರಣಶಕ್ತಿಯು ಬಲವತ್ತರವಿರಬೇಕು. ಸಂಭಾಷಣೆ ಮಾಡದೆ ಸಮಯೋಚಿತಜ್ಞನಿದ್ದರೆ, ಅದು ಅವನ ಹುಟ್ಟುಗುಣವಿರಬೇಕು. ಓದದೆ ಅವನು ಪರಿಪೂರ್ಣನಿದರೆ, ಅವನಲ್ಲಿ ಬಹಳ ಚಾತುರ್ಯವಿರಬೇಕು. ಈ ಮೂರು ಗುಣಗಳು

ಸ್ವಾಭಾವಿಕವಾಗಿರದಿದ್ದರೆ, ಮೇಲೆ ಹೇಳಿದ ಸಾಧನಗಳಿಂದ ಅವು ಬಹುತರವಾಗಿ ಸಾಧ್ಯವಾಗುವವು. ಇತಿಹಾಸವು ಜಾಣರನ್ನಾಗಿಯೂ, ಕವಿತೆಯು ರಸಿಕರನ್ನಾಗಿಯೂ, ಗಣಿತವು ತೀಕ್ಷ್ಣರನ್ನಾಗಿಯೂ, ತರ್ಕಶಾಸ್ತ್ರವು ವಾದವಿವಾದಮಾಡುವದರಲ್ಲಿ ನಿಷ್ಣಾತರನ್ನಾಗಿಯೂ ಮಾಡುವವು.

೩. **ಲಾಭಗಳು**:—ಏಕಾಂತದಲ್ಲಿ ಕುಳಿತು ಓದುವವರಿಗೆ ಆನಂದವುಂಟಾಗುತ್ತದೆ; ದೊಡ್ಡ ದೊಡ್ಡ ಸಭೆಗಳಲ್ಲಿ ಮಾತಾಡುವವರಿಗೆ ಭೂಷಣವು ಬರುತ್ತದೆ; ಮತ್ತು ತೀರ್ಪುಕೊಡುವದರಲ್ಲಿಯೂ ಕಾರ್ಯವ್ಯವಸಾಯಗಳಲ್ಲಿಯೂ ಕರ್ತೃತ್ವಶಕ್ತಿಯು ಹುಟ್ಟುತ್ತದೆ. ಯಾಕಂದರೆ ವಿದ್ಯೆ ಕಲಿತವರು ಕೈಕೊಂಡ ಕೆಲಸವನ್ನು ನಿರ್ದೋಷವಾಗಿ ಕೊನೆಗಾಣಿಸುವರು. ಇಂಥವರೇ ಕಾರ್ಯಾಕಾರ್ಯಗಳನ್ನು ವಿಮರ್ಶಿಸುವರು. ವಿದ್ಯಾವಿಶಾರದರಿಂದಲೇ ಸರ್ವಸಾಮಾನ್ಯವಾದ ನಿಯಮ, ನೀತಿ, ಕಲ್ಪನೆ ಮುಂತಾದವುಗಳು ಹುಟ್ಟುತ್ತವೆ. ಆದ್ದರಿಂದ ಆನಂದವೂ, ಭೂಷಣವೂ, ಕರ್ತೃತ್ವಶಕ್ತಿಯೂ ವಿದ್ಯಾಭ್ಯಾಸದ ಫಲಗಳೆಂದು ಹೇಳಬಹುದು. ಕಸಿಮಾಡಿದ ಮರವು ಹೆಚ್ಚು ಪ್ರಫುಲ್ಲಿತವಾಗುವಂತೆ, ಮನುಷ್ಯನ ಕಲ್ಪನಾಶಕ್ತಿಯಾದರೂ ವಿದ್ಯಾಭ್ಯಾಸದಿಂದ ಫಲಿಸುತ್ತದೆ. ಕೆಲವು ವಿದ್ಯಾರ್ಥಿಗಳು ಉಳಿದವರಿಗಿಂತ ಹೆಚ್ಚು ಕುಶಾಗ್ರಬುದ್ಧಿಯುಳ್ಳವರಿರುತ್ತಾರೆಂಬುದು ದಿಟವು. ಆದರೆ ಅಭ್ಯಾಸವಿಲ್ಲದಿದ್ದರೆ, ಬುದ್ಧಿಯು ಸಹ ಕೆಟ್ಟುಹೋಗಿ, ಅವರು ಮಂದಬುದ್ಧಿಯವರಾಗುತ್ತಾರೆ. ಆದಕಾರಣ ಚಿಕ್ಕಂದಿನಲ್ಲಿಯೇ ಬುದ್ಧಿರೂಪವಾದ ಅಗಿಗಳನ್ನು ಅಭ್ಯಾಸವೆಂಬ ನೀರನ್ನು ಹಾಕಿ ಬೆಳಿಸಿದರೆ ಖ್ಯಾತಿಯೆಂಬ ಫಲವು ದೊರೆಯುತ್ತದೆ.

೪. **ಮಹತ್ವವು**:—ದಿನಕ್ಕಿಂತಲೂ ಒಂದು ತುತ್ತು ಹೆಚ್ಚು ಆಹಾರ ತಕ್ಕೊಂಡರೆ, ಹೊಟ್ಟೆಯು ಭಾರವಾಗುತ್ತದೆ. ತಲೆಯ ಮೇಲಾಗಲಿ ಹೆಗಲ ಮೇಲಾಗಲಿ ಯಾವದೊಂದು ಒಡವೆಯನ್ನು ಹೊತ್ತುಕೊಂಡರೆ, ಅದು ಕೂಡಲೇ ಭಾರವೆನಿಸುತ್ತದೆ. ಆದರೆ "ಒಡಲೊಳಗಿರುವದು ವಿದ್ಯೆಯು ನಡೆದರೆ ತಾ ಭಾರವಲ್ಲ ಕಳ್ಳರ್ ಕದಿಯರ್" ಎಂಬಂತೆ, ಬೇಕಾದಷ್ಟು ವಿದ್ಯೆ ಕಲಿತರೂ ಅದು ಸ್ವಲ್ಪಾದರೂ ಭಾರವೆನಿಸುವದಿಲ್ಲ. ಅದಕ್ಕೆ ಕಳ್ಳರ ಅಂಜಿಕೆಯಿಲ್ಲ. ಒಡಹುಟ್ಟಿದ ಅಣ್ಣತಮ್ಮಂದಿರು ಪ್ರಾಪಂಚಿಕ ಒಡವೆಗಳಲ್ಲಿ ಪಾಲು ಬೇಡುವಂತೆ, ವಿದ್ಯೆಯಲ್ಲಿ ಪಾಲು ಬೇಡಿಯಾರೆಂಬ ಅಂಜಿಕೆಯಿಲ್ಲ.

ಶಿರೋಲೇಖದಲ್ಲಿ ಬರೆದ ಶ್ಲೋಕದಲ್ಲಿ ಹೇಳಿರುವ ಮೇರೆಗೆ, ವಿದ್ಯೆ ಕಲಿಯುವದರಿಂದ ಉತ್ತರೋತ್ತರ ಕಲ್ಯಾಣವಾಗುತ್ತದೆ. ಬಡಬಗ್ಗರಿಗೆ ದಾನಮಾಡುವದರಿಂದ ಹಣವು ವೆಚ್ಚವಾಗುತ್ತದೆ. ಆದರೆ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ನೀಡುವದರಿಂದ ಅದು ಕಡಿಮೆಯಾಗದೆ ದಿನದಿನಕ್ಕೆ ಹೆಚ್ಚಾಗುತ್ತದೆ. ವ್ಯವಹಾರದಲ್ಲಿ ಉಪಯೋಗಿಸಲ್ಪಡುವ ದ್ರವ್ಯವು ಯಾವದೊಂದು ಬಗೆಯಿಂದ ನಾಶಹೊಂದಬಹುದು. ಆದರೆ ವಿದ್ಯಾಧನಕ್ಕೆ ಮಹಾಪ್ರಳಯದಲ್ಲಾದರೂ ನಾಶವಿಲ್ಲ. ಇದಲ್ಲದೆ ರಾಜಲಕ್ಷ್ಮಿಯು ವಿದ್ಯೆಯನ್ನು ಸರಿಗಟ್ಟಲಾರಳು. ಯಾಕಂದರೆ ಅರಸನು ತನ್ನ ದೇಶದಲ್ಲಿ ಮಾತ್ರ ಮಾನಾರ್ಹನು. ಆದರೆ ವಿದ್ವಾಂಸನು ಎಲ್ಲ ಕಡೆಯಲ್ಲಿಯೂ ಪೂಜ್ಯನಾಗುವನು.

೫. ಆದ್ದರಿಂದ ಪ್ರತಿಒಬ್ಬನು ವಿದ್ಯಾವಂತನಾಗಲಿಕ್ಕೆ ಯತ್ನಿಸಬೇಕು.

---

(೩೯) ವ್ಯಾಪಾರ.

ನ ಮನ್ಯೇ ವಾಣಿಜ್ಯಾತ್ಕಿಮಪಿ ಪರಮಂ ವರ್ತನಮಿಹ ॥ ಹಿತೋಪದೇಶ.

೧. ದೇಶಸುಧಾರಣೆಗೆ ವ್ಯಾಪಾರವೇ ಕಾರಣವಾಗಿರುವದು:-

ಜಗತ್ತಿನ ಇತಿಹಾಸವನ್ನು ಓದಿನೋಡಲು, ಜ್ಞಾನೋತ್ಕರ್ಷಗೂ ಭೌತಿಕಶಾಸ್ತ್ರಗಳ ಏಳಿಗೆಗೂ ವ್ಯಾಪಾರವೇ ಕಾರಣವೆಂದು ಕಂಡುಬರುವದು. ಪ್ರಾಚೀನ ಗ್ರೀಕ ಮತ್ತು ಫಿನಿಸಿಯನ್ ಜನರ ತಿದ್ದುಪಾಟಿಗಾದರೂ ಬಹುತರವಾಗಿ ವ್ಯಾಪಾರವೇ ಕಾರಣವಾಯಿತು. ಅವರು ಮಾಡಿದ ವ್ಯಾಪಾರವಿಷಯಕವಾದ ಸಾಹಸಕೃತ್ಯಗಳಿಂದಲೇ ಸುಧಾರಣೆಯು ಮೊದಲು ಭೂಮಧ್ಯ ಸಮುದ್ರದ ದಂಡೆಗುಂಟಿರುವ ದೇಶಗಳಲ್ಲಿ ನೆಲೆಗೊಂಡಿತು. ಆ ಮೇಲೆ ಆ ಸಮುದ್ರಕ್ಕೆ ನಿಕಟವಾಗಿರುವ ಮಧ್ಯ ಪ್ರದೇಶಗಳಲ್ಲಿ ಸಹ ಅದು ಬೇಗನೆ ಹಬ್ಬುಗೊಂಡಿತು. ಮಧ್ಯಕಾಲದಲ್ಲಿ ಕೆಲವು ಅನುಕೂಲವಾದ ಕಾರಣಗಳಿಂದ ಹಿಂದುಸ್ತಾನ ಮುಂತಾದ ಮೂಡಣ ನಾಡುಗಳ ಕೂಡ ವ್ಯಾಪಾರದ ಗುತ್ತಿಗೆಯನ್ನೇ ತಮ್ಮಕಡೆಗೆ ಇಟ್ಟುಕೊಂಡಂಥ ಇಟಲೀ ದೇಶದ ಕೆಲವು ಪ್ರಜಾಸತ್ತಾಕ ರಾಜ್ಯಗಳಲ್ಲಿ ಕೈಗಾರಿಕೆಯ ಕೆಲಸಗಳೂ, ಕಲಾಕೌಶಲ್ಯಗಳೂ, ಶಾಸ್ತ್ರೀಯವಿಷಯಗಳೂ ಮೊದಲು ಘನತೆಗೇರಿದವು. ಇಷ್ಟಾದಮೇಲೆ ಆಫ್ರಿಕಾಖಂಡದ ದಕ್ಷಿಣ ಕೊನೆಯಾದ ಕೇಪ

ಆಫ್ ಗುಡ್ ಹೋಪದ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬರುವ ಜಲಮಾರ್ಗವು ಶೋಧಿಸಲ್ಪಟ್ಟು, ಇಂಗ್ಲಂಡ, ಹಾಲಂಡ, ಪೋರ್ತುಗಾಲ, ಹಿಂದುಸ್ತಾನ ಮುಂತಾದ ದೇಶಗಳ ನಡುವೆ ಪರಸ್ಪರವಾಗಿ ವ್ಯಾಪಾರವು ಸಾಗಹತ್ತಿತು. ಅಂದಿನಿಂದಂತೂ ಈ ದೇಶಗಳ ಸುಧಾರಣೆಯು ಒಳ್ಳೇ ಏಳಿಗೆಯನ್ನೈದಿತು. ಆ ಕಾಲಕ್ಕೆ ಸ್ಕಾಟಲಂಡ ದೇಶವು ಅತಿದರಿದ್ರಾವಸ್ಥೆಯಲ್ಲಿದ್ದು, ಮಿಕ್ಕ ದೇಶಗಳಿಗಿಂತ ಸುಧಾರಣೆಯಲ್ಲಿ ಬಹಳೇ ಹಿಂದುಳಿದಿತ್ತು. ಜನರಲ್ಲಿ ಪರಸ್ಪರವಾಗಿ ವಿರೋಧವು ಹುಟ್ಟಿ ಬಣಗಳುಂಟಾಗಿ ಆಗಾಗ್ಗೆ ಕಲಹಗಳಾಗುತ್ತಿದ್ದವು. ಆದ್ದರಿಂದ ಸುಧಾರಣೆಗೆ ಲಕ್ಷಕೊಡಲು ಅವರಿಗೆ ಆಸ್ಪದವೇ ಇದ್ದಿಲ್ಲ. ಆದರೆ ೧೭೧೭ನೇ ಇಸವಿಯಲ್ಲಿ ಇಂಗ್ಲಂಡ ಮತ್ತು ಸ್ಕಾಟಲಂಡ ದೇಶಗಳ ಪಾರ್ಲಮೆಂಟುಗಳು ಸಂಯುಕ್ತವಾದದ್ದರಿಂದ, ಏಶಿಯಾ, ಯುರೋಪ, ಅಮೇರಿಕಾ ಖಂಡಗಳ ಕೂಡ ವ್ಯಾಪಾರ ಮಾಡಲಿಕ್ಕೆ ಮೊದಲು ಇಂಗ್ಲಿಷ ಜನರಿಗೆ ಇರುವ ಹಕ್ಕುಗಳಿಗೆ ಸ್ಕಾಟಲಂಡದ ಜನರು ಸಮಭಾಗಿಗಳಾದರು. ಅನ್ಯೋನ್ಯಕಲಹಗಳಿಂದ ಬೇಸತ್ತು ಹೋದ ಆ ದೇಶವು ಅಂದಿನಿಂದ ವ್ಯಾಪಾರವನ್ನೂ ಕಲಾಕೌಶಲ್ಯಗಳನ್ನೂ ಕೈಕೊಂಡು, ಸ್ವಲ್ಪ ಕಾಲದಲ್ಲಿಯೇ ಭೂಮಿಯೊಳಗೆ ಸುಧಾರಣೆಯ ಬಗ್ಗೆ ಹೆಸರುಪಡೆಯಿತು. ಬೇರೆ ಖಂಡಗಳಲ್ಲಾದ ಸುಧಾರಣೆಗೆ ವ್ಯಾಪಾರವೇ ಕಾರಣವಾಗಿರುವದು. ವ್ಯಾಪಾರ ವಿಷಯಕವಾದ ಸಾಹಸಕೃತ್ಯಗಳಿಂದಲೇ ಅಮೇರಿಕಾ ಖಂಡವು ಗೊತ್ತುಹಚ್ಚಲ್ಪಟ್ಟಿತು; ಮತ್ತು ಗೊತ್ತುಹಚ್ಚಲ್ಪಟ್ಟ ಸ್ವಲ್ಪ ದಿವಸಗಳಲ್ಲಿಯೇ ಅದು ವ್ಯಾಪಾರದ ಬಲದಿಂದ ಸುಧಾರಣೆಯ ಶಿಖರಕ್ಕೆ ಮುಟ್ಟಿರುತ್ತದೆ. ವ್ಯಾಪಾರ ನಿಮಿತ್ತವಾಗಿಯೇ ಹಿಂದುಸ್ತಾನದಲ್ಲಿಯೂ ಜಪಾನದಲ್ಲಿಯೂ ಪಾಶ್ಚಾತ್ಯ ವಿಚಾರಗಳೂ ಹೊಸ ಯುಕ್ತಿಗಳೂ ಉಂಟಾಗಹತ್ತಿವೆ. ಕಾಡುಸ್ಥಿತಿಯಲ್ಲಿದ್ದ ಚೀನ ದೇಶವೂ ಸುಧಾರಿಸಹತ್ತಿದೆ.

೨. **ಬೇರೆ ಲಾಭಗಳು**:—ವ್ಯಾಪಾರದಿಂದ ಒಕ್ಕಲತನವು ಸುಧಾರಿಸಿ, ಔದ್ಯೋಗಿಕ ಕೂಟಗಳು ಸ್ಥಾಪಿಸಲ್ಪಡುವವು. ಬೇರೆ ಬೇರೆ ದೇಶಗಳ ಸಂಪರ್ಕದಿಂದ ವಿದ್ಯಾಭಿವೃದ್ಧಿಯಾಗಿ, ಕಲಾಕೌಶಲ್ಯಗಳು ಬೆಳೆಯುವವು. ದ್ರವ್ಯಸಂಚಯವಾಗಿ ಸುಖಸಾಧನಕ್ಕೆ ಅವಶ್ಯವಾದ ಸೊಬಗಿನ ವಸ್ತುಗಳು ಹುಟ್ಟುವವು. ಹಿಂದುಸ್ತಾನ, ಅಮೇರಿಕಾ ಮುಂತಾದ ಪ್ರದೇಶಗಳಿಂದ ಹತ್ತಿ, ರೇಶಿಮೆ

ಮುಂತಾದ ಸರಕುಗಳು ಆಂಗ್ಲಭೂಮಿಗೆ ಕಳುಹಿಸಲ್ಪಡದಿದ್ದರೆ. ಇಂಗ್ಲಂಡ ದೇಶವು ಕೈಗಾರಿಕೆಯು ಕೆಲಸಗಳಲ್ಲಿ ಎಂದೂ ಹೆಸರಾಗುತ್ತಿದ್ದಿಲ್ಲ.

ಪರಸ್ಪರವಾದ ವ್ಯಾಪಾರದಿಂದಲೇ ಸಾಂಪ್ರತಕಾಲದ ಹೊಸ ಯುಕ್ತಿಗಳು ಶೋಧಿಸಲ್ಪಟ್ಟಿರುವವು. ಫಿರಂಗಿಮದ್ದೂ, ಛಾಪಿಸುವ ಯಕ್ತಿಯೂ, ಹೋಕಾಯಂತ್ರವೂ ಯುರೋಪಖಂಡದವರಿಗೆ ಗೊತ್ತಾಗುವದಕ್ಕಿಂತ ಎಷ್ಟೋ ವರ್ಷ ಮುಂಚೆಯೇ ಅವು ಚೀನ ದೇಶದಲ್ಲಿ ಹುಟ್ಟಿದವೆಂದು ಹೇಳುತ್ತಾರೆ. ಆದರೆ ಪರದೇಶಗಳ ಕೂಡ ಚೀನ ದೇಶದ ವ್ಯವಹಾರವು ಈಗಿನಷ್ಟು ಮೊದಲು ಇದ್ದಿಲ್ಲವಾದ್ದರಿಂದ, ಈ ಶೋಧಗಳು ಚೀನ ದೇಶವನ್ನು ಬಿಟ್ಟು ಹೊರಗೆ ಬರುವ ಮಾರ್ಗವಿದ್ದಿಲ್ಲ. ಅವುಗಳ ಮಹತ್ವವಾದರೂ ಚೀನ ದೇಶದ ಜನರಿಗೆ ತಿಳಿದಿದ್ದಿಲ್ಲ. ವರ್ತಕರ ಮುಖಾಂತರವಾಗಿ ಇದಕ್ಕೂ ಮೊದಲೇ ಈ ಶೋಧಗಳು ಬೈಲಿಗೆ ಬಿದ್ದಿದ್ದರೆ, ಇದಕ್ಕೂ ಹೆಚ್ಚಿನ ಸುಧಾರಣೆಯಾಗುತ್ತಿತ್ತು. ಸಾಂಪ್ರತಕಾಲದಲ್ಲಿ ದೇಶದೇಶಗಳ ನಡುವೆ ಅದ್ಭುತವಾದ ವ್ಯಾಪಾರವು ಸಾಗುತ್ತಿರುವದರಿಂದ, ಯಾವ ದೇಶದಲ್ಲಿಯೇ ಆಗಲಿ ಒಂದು ಹೊಸಯುಕ್ತಿಯು ಶೋಧಿಸಲ್ಪಟ್ಟಿತೆಂದರೆ, ಆ ದೇಶಕ್ಕೆ ಲಾಭವಾಗುವದಲ್ಲದೆ, ಇಡೀ ಜಗತ್ತಿಗೂ ಲಾಭವಾಗುವದು. ಇದಲ್ಲದೆ ಹೊಸದಾಗಿ ಶೋಧಿಸಲ್ಪಟ್ಟ ಯುಕ್ತಿಯು ಆಯಾ ದೇಶಗಳ ಪರಸ್ಪರ ಸಂಸರ್ಗದಿಂದ ಹೆಚ್ಚು ವಿಕಸಿತವಾಗಬಹುದು.

೩. **ಉಪಸಂಹಾರ:**—ಸಾರಾಂಶ, ವ್ಯಾಪಾರವು ಜಗತ್ತಿನ ನಾಗರಿಕತನಕ್ಕೆ ಕಾರಣವಾಗಿರುವದರಿಂದ, ಅದನ್ನು ಬೆಳಿಸಲಿಕ್ಕೆ ಯತ್ನಿಸತಕ್ಕದ್ದು.

---

(೪೦) ವ್ಯಾಯಾಮ.

೧. **ಅರ್ಥ:**—ಶಾರೀರಿಕ ಶ್ರಮವು ದ್ವಿವಿಧವಾಗಿರುವದು. ಹೊಟ್ಟೆಯ ಸಲುವಾಗಿ ಮಾಡುವ ಶ್ರಮವು ಮೊದಲನೆಯದು. ಶರೀರಸಂಪತ್ತನ್ನು ಗಳಿಸುವದಕ್ಕಾಗಿ ಮಾಡುವ ಶ್ರಮವು ಎರಡನೆಯದು. ಇದಕ್ಕೆ ವಾಡಿಕೆಯಾಗಿ ವ್ಯಾಯಾಮವೆಂದು ಅನ್ನುವರು.

೨. **ಶಾರೀರಿಕ ಸುಖಕ್ಕೆ ಅದರ ಅವಶ್ಯಕತೆ:**—ಶರೀರವೆಂದರೆ,

ಮಜ್ಜಾ, ಮಾಂಸ, ಮೇದ, ಸ್ನಾಯು ಮುಂತಾದ ಮೃದುಪದಾರ್ಥಗಳಿಂದಲೂ, ಅಸ್ಥಿ ಮುಂತಾದ ಕಠಿಣ ಪದಾರ್ಥಗಳಿಂದಲೂ ಕೆಲಸ ಮಾಡಲಿಕ್ಕೆ ಯೋಗ್ಯವಾಗುವಂತೆ ರಚಿಸಲ್ಪಟ್ಟ ಒಂದು ಅತ್ಯಗಾಧವಾದ ಯಂತ್ರವು. ಉಗೆ ಬಂಡಿ, ಉಗೆಹಡಗ ಮುಂತಾದ ಕೃತ್ರಿಮಯಂತ್ರಗಳಿಗೆ ಕಲ್ಲಿದ್ದಲಿ, ಕಟ್ಟಿಗೆ, ನೀರು ಮುಂತಾದ ಪದಾರ್ಥಗಳು ಬೇಕಾಗುವಂತೆ, ಈ ದೇಹರೂಪವಾದ ಯಂತ್ರ ಕ್ಕಾದರೂ ಅನ್ನವೆಂಬ ಕಲ್ಲಿದ್ದಲಿಯು ಅವಶ್ಯವಿರುವದು. ಮಿಕ್ಕ ಯಂತ್ರಗಳು ಉಪಯೋಗಿಸಲ್ಪಡದಿದ್ದರೆ ಜಂಗು ಹತ್ತಿ ಕೆಟ್ಟುಹೋಗುವಂತೆ, ಈ ಯಂತ್ರ ವಾದರೂ ಕೆಲಸವಿಲ್ಲದಿದ್ದರೆ ಪಾಲುಮಾರಿಕೆಯೆಂಬ ಜಂಗು ಹತ್ತಿ ಮೂಲೆ ಗುಂಪಾಗುವದು. ಶಾರೀರಿಕಸುಖಕ್ಕೆ ವ್ಯಾಯಾಮವು ಅತ್ಯವಶ್ಯವಾಗಿರುವದು. ಶರೀರದಲ್ಲಿರುವ ರಸಗಳನ್ನು ಪಚನ ಮಾಡುವದಕ್ಕೂ, ಒಟ್ಟುಗೂಡಿಸುವ ದಕ್ಕೂ, ಬೇರೆ ಬೇರೆಯಾಗಿ ಮಾಡುವದಕ್ಕೂ ಚಲನವಲನಗಳು ಆಗಾಗ್ಗೆ ಆಗ ಲಿಕ್ಕೇ ಬೇಕು. ವ್ಯಾಯಾಮದಿಂದ ಶರೀರದಲ್ಲಿರುವ ಅನ್ನರಸವು ಚಲನೆ ಹೊಂದಿ, ರುಧಿರಾಭಿಸರಣವು ಸರಿಯಾಗಿ ಸಾಗುವದು. ಆನಂತರದೊಡನೆ ಕೆಲಸ ಮಾಡ ಲಿಕ್ಕೆ ಒಳ್ಳೇ ಪ್ರೋತ್ಸಾಹವು ಹುಟ್ಟುವದು. ಕೆಲಸವಿಲ್ಲದಿದ್ದರೆ ಶರೀರವು ಕೆಟ್ಟು ಹೋಗುವದಲ್ಲದೆ, ಮಿದುಳೂ ಕೆಟ್ಟುಹೋಗಿ, ಹುಚ್ಚು ಹತ್ತುವ ಪ್ರಸಂಗವು ಸಹ ಒಮ್ಮೊಮ್ಮೆ ಒದಗುವದು.

ಕಾಡು ಜನರಿಗೂ, ಹೊಟ್ಟೆಯ ಸಲುವಾಗಿ ಹಗಲೆಲ್ಲ ದುಡಿಯುವಂಥ ಜನರಿಗೂ ವ್ಯಾಯಾಮದ ಅವಶ್ಯಕತೆಯಿಲ್ಲ. ಯಾಕಂದರೆ ಅವರು ಮಾಡುವ ಕೆಲಸದಿಂದಲೇ ಅವರಿಗೆ ಸಾಕಷ್ಟು ವ್ಯಾಯಾಮವು ದೊರೆಯುತ್ತದೆ. ಅಮೇರಿಕಾ ಖಂಡದಲ್ಲಿ ಆಯಾ ಯಂತ್ರಗಳ ಯೋಜನೆಯಾಗಿರುವದರಿಂದ, ಅಲ್ಲಿಯ ಕೂಲಿ ಕಾರರು ಸಹ ತಮ್ಮ ಶರೀರಸುಖಕ್ಕಾಗಿ ವ್ಯಾಯಾಮ ಮಾಡಬೇಕಾಗುತ್ತದೆ.

೩. **ಮಾನಸಿಕ ಸುಖಕ್ಕೆ ಅದರ ಅವಶ್ಯಕತೆ:**— ವ್ಯಾಯಾಮ ದಿಂದ ಮನಸ್ಸು ನಿರ್ಮಲವಾಗುವದು; ಚಿತ್ತವೃತ್ತಿಯು ಸ್ವಸ್ಥವಾಗುವದು; ವಿಚಾರಶಕ್ತಿಗೆ ಹುರುಪು ಬರುವದು; ಮತ್ತು ಸ್ಮರಣಶಕ್ತಿಯು ಬೆಳೆಯುವದು. ವ್ಯಾಯಾಮ ಮಾಡದವರಲ್ಲಿ ಚಿಂತೆ, ಜೇನೆ, ಬೇಸರ ಮುಂತಾದ ವಿಕಾರಗಳು ಹುಟ್ಟುವವು. ಬಹಳ ಅಭ್ಯಾಸ ಮಾಡುವವರಲ್ಲಿಯೂ, ಕೈಕಾಲು ಹೋದವ

ರಂತೆ ಯಾವಾಗಲೂ ಸುಮ್ಮನೆ ಕುಳಿತುಕೊಂಡು, ಸೋಮಾರಿತನದಿಂದ ಹೊತ್ತು ಗಳೆಯುವವರಲ್ಲಿಯೂ ಈ ವಿಕಾರಗಳು ಮೇಲಿಂದಮೇಲೆ ಹುಟ್ಟುವವು.

೪. ವ್ಯಾಯಾಮವಿಲ್ಲದಿದ್ದರೆ ಆಗುವ ಪರಿಣಾಮಗಳು:—

ನಮ್ಮ ಆರೋಗ್ಯಕ್ಕೂ ಸುಖಕ್ಕೂ ವ್ಯಾಯಾಮದ ಅವಶ್ಯಕತೆ ಇರದಿದ್ದರೆ, ದೇವರು ವ್ಯಾಯಾಮಕ್ಕೆ ತಕ್ಕದ್ದಾದ ಶರೀರವನ್ನುಂಟುಮಾಡುತ್ತಿದ್ದಿಲ್ಲ. ಹಾಗು ಮೇಲೆ ಹೇಳಿದಂತೆ ಅಸ್ಥಿಮಾಂಸಗಳಿಂದ ರಚಿಸಲ್ಪಟ್ಟ ಈ ದೇಹದ ರಕ್ಷಣೆಗಾಗಿ ಅವಶ್ಯವಾಗಿರುವ ವಿಸ್ತಾರಾಕುಂಚನಾದಿ ವ್ಯವಹಾರಗಳನ್ನುಂಟು ಮಾಡುವಂತೆ, ಅವಯವಗಳಲ್ಲಿ ಚಲನವಲನ ಶಕ್ತಿಯನ್ನು ಇಡುತ್ತಿದ್ದಿಲ್ಲ. ಮುಂಗೈಯಾಡಿದ ಹೊರತು ಹೇಗೆ ಮೊಣಕೈಯಾಡುವದಿಲ್ಲವೋ, ಹಾಗೆಯೇ ಶಾರೀರಿಕ ಶ್ರಮ ಮಾಡದೆ ಅನ್ನ, ವಸ್ತ್ರ, ಮಾನ, ಧನ, ವಿದ್ಯೆ ಮುಂತಾದವುಗಳು ದೊರಕುವದಿಲ್ಲ. ದೇವರು ನಮಗೆ ಬೇಕಾದಷ್ಟು ಮೂಲದ್ರವ್ಯಗಳನ್ನು ಕೊಟ್ಟಿ ರುವನು. ಆದರೆ ಶ್ರಮ ಮಾಡಿ ಅವುಗಳನ್ನು ನಮ್ಮ ಕೆಲಸಕ್ಕೆ ಬರುವಂತೆ ಮಾಡಿ ಕೊಳ್ಳುವದು ನಮ್ಮ ಕರ್ತವ್ಯವು. ಬಿತ್ತುವದಕ್ಕೆ ಮುಂಚೆ ನಟ್ಟು ಮುಂತಾದವು ಗಳನ್ನು ಕಡಿದು ಹಾಕಿ, ಭೂಮಿಯನ್ನು ಹಸನಮಾಡಿ ಬಿತ್ತಲಿಕ್ಕೆಬೇಕು. ಪೈರು ಬಂದಬಳಿಕ ಅದು ನಮಗೆ ಉಪಯುಕ್ತವಾಗಬೇಕಾದರೆ, ನಾವು ದುಡಿಯಲಿಕ್ಕೇ ಬೇಕು. ಉದರನಿರ್ವಾಹಕ್ಕಾಗಿ ದುಡಿಯುವ ಅಗತ್ಯವಿರದ ಶ್ರೀಮಂತರು ಸಹ ಶರೀರಕ್ಕೆ ವ್ಯಾಯಾಮವಾಗುವಂತೆ ಏನಾದರೊಂದು ಕೆಲಸವನ್ನು ಕೈಕೊಳ್ಳ ಲಿಕ್ಕೇ ಬೇಕು. ಇಲ್ಲದಿದ್ದರೆ ಅವರು ಅಶಕ್ತರೂ, ದುಃಖಿಗಳೂ, ಅಸ್ವಸ್ಥರೂ ಆಗುವರು.

೫. ಉಪಸಂಹಾರ:— ಆದಕಾರಣ ಶರೀರಸುಖಕ್ಕೂ ಮಾನಸಿಕ ಸುಖಕ್ಕೂ ವ್ಯಾಯಾಮವು ಅವಶ್ಯವಾಗಿ ಬೇಕು.

---

(೪೧) ಶರೀರ ಸಂಪತ್ತು.

೧. ಅವಶ್ಯಕತೆ:– ಧನಸಂಪತ್ತು ನಮಗೆ ಇಷ್ಟವಾದದ್ದೋ ಇಲ್ಲವೋ ಎಂಬ ಬಗ್ಗೆ ಮತಭೇದವುಂಟು. ಆದರೆ ಶರೀರಸಂಪತ್ತು ಪ್ರತಿಯೊಬ್ಬನಿಗೆ ಅತ್ಯ ವಶ್ಯವಾದದ್ದೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈ ಸಂಪತ್ತಿಗೆ ಆರೋಗ್ಯ

ವೆಂದೆನ್ನುವರು. ಇದು ಎಲ್ಲಕ್ಕೂ ಹೆಚ್ಚಿನ ಮತ್ತು ಮುಖ್ಯವಾದ ಸಂಪತ್ತು. ಪ್ರಾಮಾಣಿಕತನದಿಂದಲೂ ಉದ್ಯೋಗದಿಂದಲೂ ದೊರಕಿಸಿದ ಹಣ, ಮಿತ್ರ ಲಾಭ, ಸುಖೋಪಭೋಗ ಮುಂತಾದವುಗಳು ಮುಖ್ಯವಾದ ಸಂಪತ್ತುಗಳಲ್ಲ. ಆರೋಗ್ಯವಿಲ್ಲದಿದ್ದರೆ, ನಮ್ಮ ಜೀವವು ಸಹ ನಮಗೆ ಬೇಸರಾಗುತ್ತದೆ. ಆದರೆ ನಮ್ಮಲ್ಲಿ ಆರೋಗ್ಯವಿದ್ದರೆ. ನಾವು ನಮ್ಮ ಆಯುಷ್ಯವನ್ನು ಆನಂದದಿಂದಲೂ ಸುಖದಿಂದಲೂ ಕಳೆಯಬಹುದು.

೨. ಸಾಧನಗಳು:— ಆರೋಗ್ಯದ ಸಾಧನಗಳು ಬಹುವಿಧವಾಗಿರುವವು. ಅವುಗಳಲ್ಲಿ ನಿಯಮಿತವಾದ ವರ್ತನವೂ, ಸ್ವಚ್ಛತೆಯೂ, ಪ್ರತಿದಿನದ ವ್ಯಾಯಾಮವೂ, ಆಹಾರದಲ್ಲಿ ಮಿತಿಯೂ, ಸಕಾಲದಲ್ಲಿ ತಕ್ಕಷ್ಟು ನಿದ್ರೆಯೂ ಮುಖ್ಯವಾದವುಗಳು. ಆರೋಗ್ಯಕ್ಕೆ ಆತ್ಮಸಂಯಮನವು ಅವಶ್ಯವಾಗಿ ಬೇಕು. ಮದ್ಯಪ್ರಾಶನದಿಂದಲೂ, ನಿಯಮಿತವೇಳೆಯ ಹೊರತಾಗಿ ನಡುನಡುವೆ ತಿನ್ನುವದರಿಂದಲೂ ಪ್ರಕೃತಿಯು ಕೆಡುವದು. ಆಹಾರ–ವ್ಯಾಯಾಮಗಳನ್ನು ಮಿತಿ ಮೀರಿ ತಕ್ಕೊಂಡರೆ ಬೇನೆ ಬರುವದು. ಅಲ್ಪಾಹಾರದಿಂದ ಬೇನೆಯು ದೂರದಲ್ಲಿರುವದು. ಕೆಲವರು ಬಹಳ ಅವಸರದಿಂದ ಉಣ್ಣುವದುಂಟು. ಅದರಿಂದ ಅನ್ನ ಪಚನವು ಸರಿಯಾಗಿ ಆಗದೆ ಅಜೀರ್ಣವಿಕಾರವಾಗುವದು. ಆದ್ದರಿಂದ ರೊಟ್ಟಿ ಮುಂತಾದ ಜಡಪದಾರ್ಥಗಳನ್ನು ಬಾಯೊಳಗೆ ಚನ್ನಾಗಿ ಸುರಿಸಿ ಹೊಟ್ಟೆಯೊಳಗೆ ತಕ್ಕೊಳ್ಳಬೇಕು. ಎಷ್ಟೋ ಜನರು ಹಸಿವೆಯಿರುವದಕ್ಕಿಂತಲೂ ಹೆಚ್ಚಾಗಿ ಉಣ್ಣುವದರಿಂದ ವ್ಯಾಧಿಗ್ರಸ್ತರಾಗುವರು. ಕೂಳಬಕ್ಕನು ಮಿತಾಹಾರದಿಂದುಂಟಾಗುವ ಸುಖವನ್ನೆಂದೂ ಕಾಣನು. ಒಳ್ಳೇ ಹಸಿವೆಯಾಗುವದಕ್ಕೆ ಶಾರೀರಿಕ ಶ್ರಮ ಮಾಡಲಿಕ್ಕೇಬೇಕು. ಮುಂಜಾವಿನಿಂದ ಮಧ್ಯಾಹ್ನದ ವರೆಗೆ ಹೊಲದಲ್ಲಿ ನಟ್ಟು ಕಡಿದು, ಜೋರನೆ ಬೆವತು, ತಂಗುಳ ರೊಟ್ಟೀ ತಿನ್ನುವ ಒಕ್ಕಲಿಗನ ಮುಂದೆ ಯಾವ ಶ್ರಮವನ್ನೂ ಮಾಡದೆ ಮಿಷ್ಟಾನ್ನ ಸೇವಿಸುವ ಮನುಷ್ಯನು ತುಚ್ಛನು. ಆದ್ದರಿಂದ ಮನುಷ್ಯನು ನಿರೋಗಿಯಾಗಬೇಕಾದರೆ ಶ್ರಮ ಮಾಡಲಿಕ್ಕೆ ಬೇಕು.

ಕೆಲವರು ಊಟಕ್ಕೆ ಕೂತಾಗ ಚಕಾರಶಬ್ದವನ್ನಾದರೂ ಉಚ್ಚರಿಸದೆ ಸುಮ್ಮನೆ ಗಪಗಪ ಉಣ್ಣುವದುಂಟು. ಇದೂ ಸರಿಯಲ್ಲ. ಉಲ್ಲಾಸದಿಂದ ವಿನೋದದ ಮಾತುಗಳನ್ನಾಡುತ್ತ ಭೋಜನ ಮಾಡುವದು ಹಿತಕರವು. ಹಸಿವೆಯಾದರೆ

ಅನ್ನವು ಹೆಚ್ಚು ರುಚಿಕರವಾಗಿ ಹತ್ತುವದೆಂಬದು ನಿಜವು. ಆದರೆ ಹಸಿವೆಯಿದ್ದು ವಿನೋದದ ಮಾತುಗಳನ್ನಾಡುತ್ತ ಊಟ ಮಾಡುವದು ಇದಕ್ಕೂ ಮೇಲಾದದ್ದು. ಊಟಕ್ಕೆ ಉಪ್ಪುಹೇಗೋ ಹಾಗೆಯೇ ವಿನೋದದ ಮಾತುಗಳಾದರೂ ಅವಶ್ಯವಾಗಿ ಬೇಕು.

ಮಿತಾಹಾರವ್ಯಾಯಾಮಗಳಂತೆ ಆರೋಗ್ಯಕ್ಕೆ ಸ್ವಚ್ಛವಾದ ಹವೆಯೂ ಅತ್ಯವಶ್ಯವಾದದ್ದು. ಪಟ್ಟಣಗಳಲ್ಲಿ ಮನೆಗಳು ಒಂದಕ್ಕೊಂದು ನಿಕಟವಾಗಿರುವದರಿಂದಲೂ, ಜನಸಂಖ್ಯೆಯು ಹೆಚ್ಚಿರುವದರಿಂದಲೂ, ಉಗೆಬಂಡಿ, ಗಿರಣಿ ಮುಂತಾದ ಅಸಂಖ್ಯಾತ ಕಾರಖಾನೆಗಳಿರುವದರಿಂದಲೂ ಸ್ವಚ್ಛವಾದ ಹವೆಯು ಬರುವದಕ್ಕೆ ಮಾರ್ಗವಿರುವದಿಲ್ಲ. ಆದರೆ ಹಳ್ಳಿಗಳಲ್ಲಿ ಈ ಪ್ರಕಾರಗಳಿರುವದಿಲ್ಲಾದ್ದರಿಂದ ಅಲ್ಲಿಯ ಹವೆಯು ಬಹುತರವಾಗಿ ಆರೋಗ್ಯಕರವಾಗಿರುತ್ತದೆ. ಆದ್ದರಿಂದ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವವರು ಸ್ವಚ್ಛವಾದ ಹವೆಯಲ್ಲಿರುವದಕ್ಕೆ ಆದಷ್ಟು ಪ್ರಯತ್ನ ಮಾಡುವದು ಒಳ್ಳೇದು. ಶರೀರವು ನಿರೋಗಿಯಾಗಬೇಕಾದರೆ ಸ್ವಚ್ಛ ಹವೆಯೊಂದೇ ರಾಮಬಾಣ ಔಷಧವು. ಇದಕ್ಕೋಸ್ಕರ ನಮ್ಮ ದೇಶದಲ್ಲಿರುವ ಪಾಶ್ಚಾತ್ಯರು ಊರಹೊರಗೆ ಸ್ವಚ್ಛವಾದ ಹವೆಯಲ್ಲಿರುವರು. ಹವೆಯಲ್ಲಿ ಉತ್ಸಾಹವನ್ನುಂಟುಮಾಡುವ ಶಕ್ತಿಯಿರುವದರಿಂದ, ಮಾನಸಿಕಶ್ರಮ ಮಾಡುವವರಿಗಂತೂ ಸ್ವಚ್ಛ ಹವೆಯು ಅತ್ಯವಶ್ಯವಾದದ್ದು. ಅವರ ಮನಸ್ಸು ಯಾವಾಗಲೂ ಗಹನವಿಚಾರಗಳಲ್ಲಿ ತೊಡಗಿರುವದರಿಂದ,ಅವರು ಪ್ರದೋಷಕಾಲದಲ್ಲಿ ಸ್ವಚ್ಛವಾದ ಬೈಲುಗಳಲ್ಲಿ ತಿರುಗಾಡಲಿಕ್ಕೆ ಹೋಗಬೇಕು. ಅಂದರೆ ಅವರಿಗಾದ ಶ್ರಮವು ಪರಿಹಾರವಾಗಿ, ವಿಚಾರಮಾಡಲಿಕ್ಕೆ ಹೆಚ್ಚು ಪ್ರೋತ್ಸಾಹವುಂಟಾಗುವದು. ಆದ್ದರಿಂದ ವಿದ್ಯಾರ್ಥಿಗಳು ಯಾವಾಗಲೂ ಓದುವದರಲ್ಲಿಯೇ ಹೊತ್ತುಗಳೆಯದೆ, ಆಗಾಗ್ಗೆ ಸ್ವಚ್ಛವಾದ ಹವೆಯಲ್ಲಿ ವಿಹಾರ ಮಾಡುತ್ತಿರಬೇಕು.

ಹುಡುಗರು ಆಟಗಳನ್ನಾಡುವದು ಹಲವರ ಮನಸ್ಸಿಗೆ ಬರುವದಿಲ್ಲ. ಮಕ್ಕಳು ಕೆಟ್ಟ ಹುಡುಗರೊಂದಿಗೆ ಆಡಬಾರದೆಂಬ ಬಗ್ಗೆ ತಾಯಿ ತಂದೆಗಳು ಎಚ್ಚರಪಡತಕ್ಕದ್ದು ಒಳ್ಳೇದು. ಆದರೆ ಖಂಡಿತವಾಗಿ ಆಡಕೂಡದೆಂದು ಅನ್ನುವದು ಕೇವಲ ದಡ್ಡತನವು. ಯಾಕಂದರೆ ಸಣ್ಣ ಹುಡುಗರ ಮನಸ್ಸೂ ಶರೀರವೂ ಓಡಾಟಗಳಿಂದಲೇ ವಿಕಾಸಗೊಳ್ಳುವವು. ಹೀಗಿದ್ದು ಅವರನ್ನು ಕ್ರೀಡಾ

ವಿಮುಖರನ್ನಾಗಿ ಮಾಡುವದರಿಂದ ಅವರ ಶರೀರವೂ ಮನಸ್ಸೂ ಪೂರ್ಣಾವಸ್ಥೆಯನ್ನೆಂದೂ ಹೊಂದಲಾರವು. ಇದಕ್ಕಾಗಿಯೇ ನಮ್ಮ ದಯಾಳು ಸರಕಾರದವರು ಪ್ರಾಥಮಿಕ ಮತ್ತು ಇಂಗ್ಲಿಷ ಶಾಲೆಗಳಲ್ಲಿ ಕ್ರಿಕೆಟ್, ಕವಾಯಿತು, ತಿಳ್ಳಿ ಮುಂತಾದ ಪಾಶ್ಚಾತ್ಯ ಮತ್ತು ದೇಶೀಯ ಆಟಗಳನ್ನು ಕಲಿಸುವದಕ್ಕಾಗಿ ಶಿಕ್ಷಕರನ್ನು ನೇಮಿಸಿರುವರು. ಆದರೆ ಇಂಥ ಶಾಲೆಗಳಲ್ಲಿ ಹುಡುಗರು ವಾರಕ್ಕೊಂದೆರಡು ಸಾರೆಯೇ ಆಟಗಳನ್ನಾಡುತ್ತಿರುವದರಿಂದಲೂ, ಹಳ್ಳಿಯ ಶಾಲೆಗಳಲ್ಲಿ ಮೂಲತಃ ಅಂಥ ಶಿಕ್ಷಕರೇ ಇರುವದಿಲ್ಲವಾದ್ದರಿಂದಲೂ ಈ ಕೊರತೆಯು ಇನ್ನೂ ಸಂಪೂರ್ಣವಾಗಿ ಅಳಿದು ಹೋಗಿರುವದಿಲ್ಲ.

ಶರೀರಸುಖಕ್ಕೆ ವ್ಯಾಯಾಮವು ಹೇಗೋ ಹಾಗೆಯೇ ನಿದ್ದೆಯು, ಕಿಂಬಹುನಾ ಅದು ವ್ಯಾಯಾಮಕ್ಕಿಂತಲೂ ಹೆಚ್ಚು ಅವಶ್ಯವು. ಎಳೆಂಟು ದಿವಸಗಳ ವರೆಗೆ ವ್ಯಾಯಾಮ ಮಾಡುವದನ್ನು ಬಿಟ್ಟರೂ ಬಿಡಬಹುದು. ಆದರೆ ಅಷ್ಟು ದಿವಸಗಳ ವರೆಗೆ ನಿದ್ದೆ ಮಾಡುವದನ್ನು ಬಿಟ್ಟರೆ ಬೇನೆ ಬರುವದು. ನಿದ್ದೆಯಿಂದ ಶ್ರಮಪರಿಹಾರವಾಗಿ ಮನಸ್ಸು ಸ್ವಸ್ಥವಾಗುವದು. ವಾಡಿಕೆಯಾಗಿ ಚಿಕ್ಕ ಹುಡುಗರಿಗೆ ಎಂಟು ತಾಸು, ಮತ್ತು ಹಿರಿಯರಿಗೆ ಆರೇಳು ತಾಸು ನಿದ್ದೆಯಾದರೆ ಸಾಕೆಂದು ವೈದ್ಯರು ಹೇಳುತ್ತಾರೆ. ಗಾಢನಿದ್ರೆಯು ಬರಬೇಕಾದರೆ, ಮನುಷ್ಯನು ಮುಖ್ಯವಾಗಿ ನಿಶ್ಚಿಂತನಾಗಿರಬೇಕು. ನಿಶ್ಚಿಂತನಿದ್ದು ವ್ಯಾಯಾಮ ಮಾಡುತ್ತಿದ್ದರಂತೂ ಬಹಳೇ ಒಳ್ಳೇದು.

೩. **ಉಪಸಂಹಾರ:**—ಸಾರಾಂಶ, ಮೇಲೆ ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟು, ವರ್ತಿಸಿದರೆ, ಮನುಷ್ಯನು ಸುಖಿಯಾಗಿ ಸ್ವಕಾರ್ಯಗಳಲ್ಲಿಯೂ ಪರೋಪಕಾರದಲ್ಲಿಯೂ, ಸ್ವದೇಶಸೇವೆಯಲ್ಲಿಯೂ ತನ್ನ ಶರೀರಸಂಪತ್ತನ್ನು ವೆಚ್ಚಮಾಡುತ್ತ, ದೇವರು ತನ್ನ ಮೇಲೆ ಮಾಡಿದ ಅನಂತೋಪಕಾರವನ್ನು ಸ್ಮರಿಸುತ್ತ, ಬಹುದಿವಸ ಬಾಳಬಹುದು.

———:o:———

(೪೨) ಸತ್ಯ.

೧. ಸತ್ಯದಿಂದಾಗುವ ಲಾಭಗಳು ಮತ್ತು ಅಸತ್ಯದಿಂದಾಗುವ ಹಾನಿಗಳು:—ಅಸತ್ಯದಷ್ಟು ಸೃಷ್ಟಿಗೆ ವಿಪರೀತವಾದದ್ದು ಅಸತ್ಯ

ವಾದವಷ್ಟೇ ಬೇರೆ ಯಾವದೂ ಇಲ್ಲ. ನಮ್ಮ ಹತ್ತರ ಇಲ್ಲದ ವಸ್ತುವು ನಮ್ಮಲ್ಲಿ ಉಂಟೆಂದು ಸುಳ್ಳಾಡುವದರಿಂದ ಏನೂ ಲಾಭವಿಲ್ಲ. ನರಹತ್ಯವು ಮುಚ್ಚಲ್ಪಡ ಲಾರದಂತೆ ಸುಳ್ಳು ಬೈಲಿಗೆ ಬಾರದೆ ಎಂದೂ ಇರಲಾರದು. ಸಟಿಯಾಡುವದ ರಿಂದ ದೇವರು ನಮ್ಮ ಮೇಲೆ ಸಿಟ್ಟಾಗುತ್ತಾನೆ; ಆದರೆ ದಿಟವಾಡುವದರಿಂದ ದೇವರು ಮೆಚ್ಚುವನು; ಮತ್ತು ನಮಗೆ ಸಂಸಾರಾರ್ಣವಲಂಘನೋಪಾಯವು ದೊರೆತು, ನಾವು ನಿರ್ವಾಣಕ್ಕೆ ಪಾತ್ರರಾಗುತ್ತೇವೆ.

ಯಾವದೊಂದು ಮಾತಿನ ಬಗ್ಗೆ ಸುಳ್ಳಾಡಿ ಅದು ಬೈಲಿಗೆ ಬಾರದಂತೆ ಬಹಳ ದಿವಸಗಳ ವರೆಗೆ ಬಚ್ಚಿಡುವದು ಅಸಾಧ್ಯವು. ಯಾಕಂದರೆ ದಿಟವಲ್ಲದ ಮಾತನ್ನು ಒಂದಿಲ್ಲೊಂದು ದಿವಸ ದೇವರೇ ಬೈಲಿಗಿಡುವನು. ಆದ್ದರಿಂದ ಜನ ರಿಗೆ ಒಳ್ಳೆಯವನಾಗಿ ಕಾಣಬೇಕೆಂಬ ಮನಸ್ಸಿದ್ದವನು, ತನ್ನ ಯೋಗ್ಯತೆಯು ಜನರಿಗೆ ಯಥಾರ್ಥವಾಗಿ ತಿಳಿಯುವಂತೆ ನಡೆಯತಕ್ಕದ್ದು. ಸುಳ್ಳು ಬೇಕಾ ದಷ್ಟು ಸೋಜಿಗವಾದ ಕೃತ್ರಿಮೋಪಾಯಗಳಿಂದ ಬಚ್ಚಲ್ಪಟ್ಟರೂ ಸತ್ಯದಿಂದಾ ಗುವ ಲಾಭಗಳನ್ನು ಹೊಂದಲಾರದು. ಈ ಜಗತ್ತಿನಲ್ಲಿ ಸತ್ಯವು ಅಸತ್ಯಕ್ಕಿಂತ ಹೆಚ್ಚು ಸುಲಭವಾದದ್ದು. ಅದಕ್ಕೆ ಯಾರ ಭಯವೂ ಇಲ್ಲ. ಅಸತ್ಯದಲ್ಲಿದ್ದಂತೆ ಅದರಲ್ಲಿ ಗಂಡಾಂತರಗಳೂ, ಅಪಾಯಗಳೂ, ಪೇಚಾಟಗಳೂ ಇರುವದಿಲ್ಲ. ಸತ್ಯವು ನಮ್ಮ ಉದ್ದೇಶವನ್ನು ಸಾಧಿಸುವದಕ್ಕೆ ಅತಿ ಸಮೀಪವಾದ ಮಾರ್ಗ ವಿದ್ದು, ಅದು ನಮ್ಮನ್ನು ನೆಟ್ಟಗೆ ವಿವಕ್ಷಿತಸ್ಥಳಕ್ಕೆ ಮುಟ್ಟಿಸುವದು. ಅದು ಅಪ್ರಾಮಾಣಿಕತನದಂತೆ ಕ್ಷಣಿಕವಿರದೆ ಶಾಶ್ವತವಾಗಿರುವದು. ಠಕ್ಕನ ಕುಯುಕ್ತಿ ಗಳು ಮೆಲ್ಲಮೆಲ್ಲನೆ ಬಲಗುಂದುತ್ತ ಸಾಗಿ ಬಯಲಾಗಿ, ಕಟ್ಟಕಡೆಗೆ ಅವನು ಪತ್ತುಗೇಡಿಯಾಗುವನು. ಆದರೆ ಸತ್ಯವಂತರನ್ನು ಎಲ್ಲರೂ ನಂಬುವರು.

ಸತ್ಯವು ಯಾವಾಗಲೂ ಅಸಹಾಯಶೂರವಾಗಿರುವದು. ಅದಕ್ಕೆ ಯಾರ ಒತ್ತಾಸೆಯೂ ಬೇಡ. ಅದು ಕೈಗೆ ನಿಲುಕುವಂತಿದ್ದು, ಯಾವಾಗಲೂ ನಮ್ಮ ನಾಲಿಗೆಯ ತುದಿಯ ಮೇಲೆಯೇ ಕೂತಿರುತ್ತದೆ; ಮತ್ತು ನಮಗೆ ತಿಳಿಯದಂತೆ ಹೊರಬಿದ್ದು ಹೋಗುವದಕ್ಕೆ ಸಿದ್ಧವಾಗಿರುತ್ತದೆ. ಆದರೆ ಸುಳ್ಳು ಯಾವಾಗಲೂ ನಮ್ಮನ್ನು ತೊಂದರೆಯಲ್ಲಿ ಹಾಕುತ್ತದೆ. ಒಂದು ಸುಳ್ಳು ಮುಚ್ಚುವದಕ್ಕಾಗಿ ಬೇರೆ ಹಲವು ಸುಳ್ಳುಗಳನ್ನು ಹುಟ್ಟಿಸಬೇಕಾಗುತ್ತದೆ. ಹೀಗೆ ಮಾಡಿದಗೂ ಆಡಿದ ಸುಳ್ಳು ಬೈಲಿಗೆ ಬಾರದೆ ಎಂದೂ ಇರಲಾರದು. ಆದ್ದರಿಂದ

ವಸ್ತುತಃ ಸುಳ್ಳನ್ನೇ ಆಡದೆ, ಅಥವಾ ಆಡಿದರೂ ಮತ್ತೆ ಹಲವು ಸಟೆಗಳಿಂದ ಅವನ್ನು ಮುಚ್ಚುವ ಭರಕ್ಕೆ ಬೀಳದೆ, ಮೊದಲೇ ಸತ್ಯವನ್ನು ನುಡಿದರೆ ಒಳಿತಾಗುವದು ನಿಜವು. ಯಾಕಂದರೆ ಸತ್ಯವು ಸ್ಥಿರವಾದದ್ದೂ ನಿಷ್ಕಪಟವಾದದ್ದೂ ಇರುವದರಿಂದ, ಅದಕ್ಕೆ ತನ್ನ ಗುಟ್ಟು ಹೊರಬಿದ್ದೀತೆಂಬ ಅಂಜಿಕೆಯು ಸ್ವಲ್ಪಾದರೂ ಇರುವದಿಲ್ಲ. ಈ ಅಂಜಿಕೆಯು ಸುಳ್ಳುಗಾರನ ಮನಸ್ಸಿನಲ್ಲಿ ಯಾವಾಗಲೂ ಕಟಿಯುತ್ತಿರುತ್ತದೆ. ಬೆಕ್ಕು ತನ್ನನ್ನು ಯಾರೂ ನೋಡಬಾರದೆಂದು ತಾನೇ ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವದು. ಅದರಂತೆಯೇ ಸುಳ್ಳುಗಾರನು, ತಾನು ಆಡಿದ ಸುಳ್ಳು ಯಾರಿಗೂ ತಿಳಿಯಬಾರದೆಂದು ಪ್ರಾಮಾಣಿಕನಂತೆ ನಟಿಸುವನು. ಆದರೂ ಅವನ ಮುಖಚಿಹ್ನವೇ ಜನರ ಮನಸ್ಸಿನಲ್ಲಿ ಸಂಶಯವನ್ನುಂಟುಮಾಡುತ್ತದೆ.

ಸತ್ಯದಿಂದ ನಮ್ಮ ಕಾರ್ಯಗಳು ತೀವ್ರವಾಗಿ ಕೈಗೂಡುವವು. ಸತ್ಯವು ಬಹಳ ಪ್ರಶ್ನೆಗಳನ್ನು ಕೇಳುವ ಶ್ರಮವನ್ನು ಹೋಗಲಾಡಿಸುತ್ತದೆ, ಮತ್ತು ಮುಖ್ಯತತ್ವದ ಮಾತನ್ನು ಒಮ್ಮೆಲೆ ಹೊರಗೆಡವುತ್ತದೆ. ಅದು ರಾಜಮಾರ್ಗಗಳ ಗುಂಟ ಮಾಡಲ್ಪಡುವ ಪ್ರವಾಸದಂತಿರುವದು. ರಾಜಮಾರ್ಗದಿಂದ ಪ್ರವಾಸಿಕರು ಸುರಕ್ಷಿತವಾಗಿಯೂ ತೀವ್ರವಾಗಿಯೂ ಇಚ್ಛಿತಸ್ಥಳಕ್ಕೆ ಮುಟ್ಟುತ್ತಾರೆ. ಆದರೆ ರಾಜಮಾರ್ಗದಿಂದ ಹೋಗದೆ ಅಡ್ಡದಾರಿಯಿಂದ ಹೋದರೆ, ನಡುವೆ ದಾರಿತಪ್ಪಿ ಗಂಡಾಂತರದೊಳಗೆ ಬೀಳುವ ಪ್ರಸಂಗವು ಬರಬಹುದು. ಸಾರಾಂಶವೇನೆಂದರೆ, ಸುಳ್ಳಿನಲ್ಲಿಯೂ ಕಪಟದಲ್ಲಿಯೂ ತಾತ್ಕಾಲಿಕವಾದ ಎಂಥ ಸುಖಾನುಕೂಲತೆಗಳು ಕಂಡು ಬಂದರೂ, ಅವು ಕೂಡಲೆ ಬಯಲಾಗುವವಲ್ಲದೆ ಅವುಗಳಿಂದಾಗುವ ಅನನುಕೂಲತೆಗಳು ಮಾತ್ರ ಶಾಶ್ವತವಾಗಿರುವವು. ಯಾಕಂದರೆ ಸುಳ್ಳುಗಾರನು ಯಾವಾಗಲೂ ಜನರ ಸಂಶಯಕ್ಕೂ ದ್ವೇಷಕ್ಕೂ ಪಾತ್ರನಾಗುವನಲ್ಲದೆ, ಒಂದುವೇಳೆ ಸತ್ಯವನ್ನು ನುಡಿದರೂ ಜನರು ಅವನನ್ನು ನಂಬರು. ಸತ್ಯಸಂಧನಾದವನು ಸುಳ್ಳಾಡಿ ತನ್ನ ಕೀರ್ತಿಯನ್ನು ಹೋಗಲಾಡಿಸಿಕೊಂಡರೆ, ಕಳಕೊಂಡ ಕೀರ್ತಿಯನ್ನೆಂದೂ ಹೊಂದಲಾರನು.

೨. **ಉಪಸಂಹಾರಃ—** ಈ ಜಗತ್ತಿನಲ್ಲಿ ಮನುಷ್ಯನ ವ್ಯವಹಾರವು ವಸ್ತಿಗಾರನಂತೆ ಒಂದೇ ದಿವಸದ ಪೂರ್ತಿಯೇ ಇದ್ದರೆ ಮತ್ತು ತನ್ನ ನೆರೆಹೊರೆಯವರ ಕೂಡ ಮಾತಾಡುವ ಪ್ರಸಂಗವು ಅವನಿಗೆ ಎಂದೂ ಬಾರದ ಹಾಗಿ

ದ್ದರೆ ಮಾತ್ರ ಅವನು ಸುಳ್ಳಾಡಿ ಮಾನ, ಕೀರ್ತಿ, ಸುಖ ಮುಂತಾದವುಗಳಿ ಎರವಾದರೂ ಅಷ್ಟೇನು ದೊಡ್ಡ ಮಾತಲ್ಲ. ಆದರೆ ಅವನು ಬಹು ದಿವಸ ಬಾಳ ವವನಿರುವದರಿಂದಲೂ, ಅವನಿಗೆ ಜನರ ಕೂಡ ಸಂಭಾಷಣೆ ಮಾಡುವ ಪ್ರಸ ಗವು ಅಡಿಗಡಿಗೆ ಬರುತ್ತಿರುವದರಿಂದಲೂ ಅವನು ತನ್ನ ಮಾತಿನಲ್ಲಿಯೂ ಕೃತ ಗಳಲ್ಲಿಯೂ ಪ್ರಾಮಾಣಿಕನಾಗಿ ಸತ್ಯವನ್ನೇ ಆಚರಿಸುತ್ತಿರಬೇಕು.

---

(೪೩) ಸಮಯನಿಷ್ಠತೆ.

೧. **ಅರ್ಥ**:—ಸಕಾಲದಲ್ಲಿ ಕೆಲಸ ಮಾಡುವ ಗುಣಕ್ಕೆ ಸಮಯನಿಷ್ಠ ಯೆಂದೆನ್ನುವರು. ನಾವು ಮಾಡಬೇಕಾದದ್ದನ್ನು ವೇಳೆಗೆ ಸರಿಯಾಗಿ ಮಾ ದರೆ, ಇಲ್ಲವೆ ಸ್ನೇಹಿತರನ್ನು ನಮಗೋಸ್ಕರ ಹಾದಿನೋಡುತ್ತ ನಿಲ್ಲಿಸದೆ ಹೋ ಬೇಕಾದಲ್ಲಿ ಸಕಾಲದಲ್ಲಿ ಹೋದರೆ, ನಮಗೆ ಸಮಯನಿಷ್ಠರೆಂದೆನ್ನುವರು ಸಮಾಜದಲ್ಲಿರುವವರಿಗೆಲ್ಲ ಈ ಗುಣವು ಅವಶ್ಯವಾಗಿ ಬೇಕಾಗುತ್ತದೆ. ಈ ಗು ವಿದ್ದರೆ ಮಾತ್ರ ಎಲ್ಲ ಕಾರ್ಯಗಳು ತಡೆಯಿಲ್ಲದೆ ಒಳ್ಳೇ ರೀತಿಯಲ್ಲಿ ಸಾಗುವವು ಇಲ್ಲದಿದ್ದರೆ ಪ್ರತಿಯೊಂದು ಕೆಲಸವು ಕೆಟ್ಟು ಹೋಗುವದು.

೨. **ಅದಕ್ಕೆ ಅನುಕೂಲವಾದ ಗುಣಗಳು**:—ಸಮಯನಿಷ್ಠತೆಯ ಸಾಮಾನ್ಯವಾದ ಗುಣವಲ್ಲ. ಈ ಗುಣವನ್ನಪೇಕ್ಷಿಸುವವನಲ್ಲಿ ನೈತಿಕ ಉನ್ನತಿ ಆಧಾರಸ್ತಂಭಗಳಾದ ಒಳ್ಳೇ ಪದ್ಧತಿಯೂ ಆತ್ಮಸಂಯಮನವೂ ಮುಖ್ಯವಾ ಬೇಕು. ಇದಲ್ಲದೆ ಎಂಥ ವಿಪತ್ತು ಬಂದರೂ ಸತ್ಯ ಮಾತಾಡುವ ಸ್ವಭಾವ ಕರ್ತವ್ಯವನ್ನು ಮಾಡಬೇಕೆಂಬ ಮನೋದಾರ್ಢ್ಯವೂ ಅವನಲ್ಲಿರಬೇಕು. ಸ್ವಾರ್ಥ ತ್ಯಾಗವಂತೂ ಪ್ರಬಲವಾಗಿರಬೇಕು. ದುಃಖಪೀಡಿತನಾಗಿರಲಿ, ದೇಹವೂ ಚಿತ್ತವೂ ಅಸ್ವಸ್ಥವಾಗಿರಲಿ, ಅವನು ತನ್ನ ಕಷ್ಟಗಳನ್ನೆಲ್ಲ ಒತ್ತಟ್ಟಿಗಿಟ್ಟು, ಕೊಟ್ಟ ವಚ ದಂತೆ ನಡಕೊಳ್ಳಲಿಕ್ಕೆ ಬೇಕು. ತನ್ನ ಆಯುಷ್ಯವು ಸಫಲವಾಗಬೇಕೆಂದಿದ್ದ ಅವನು ಯಾವಾಗಲೂ ಜಾಗರೂಕನೂ ಚಟುವಟಿಕೆಯುಳ್ಳವನೂ ಆಗಿರಬೇಕ

೩. **ಲಾಭಗಳು**:— ಎಷ್ಟೋ ಜನರು ತಮಗೆ ಕೆಲಸ ಮಾಡಲಿ ವೇಳೆಯೇ ದೊರೆಯುವದಿಲ್ಲೆಂದು ಆಗಾಗ್ಗೆ ಗುಣಗುಟ್ಟುವದುಂಟು. ಆದ ಅದು ಅವರ ಸೋಮಾರಿತನದ ಲಕ್ಷಣವೇ ಸರಿ. ಆಯಾ ವೇಳೆಯಲ್ಲಿ ಆಯ

ಕೆಲಸಗಳನ್ನು ಮಾಡುತ್ತ ಹೋದರೆ, ಎಲ್ಲ ಕೆಲಸಗಳಿಗೂ ಬೇಕಾದಷ್ಟು ಹೊತ್ತು ದೊರೆಯುತ್ತದೆ. ಅಂದರೆ ನಾವು ಮಾಡತಕ್ಕ ಕೆಲಸಗಳ ಟಿಪ್ಪಣಿಯನ್ನು ಬರೆದಿಟ್ಟುಕೊಂಡು, ಅವುಗಳನ್ನು ಆಯಾ ವೇಳೆಯಲ್ಲಿ ಮಾಡುತ್ತ ಹೋದರೆ, ಅವು ಸರಿಯಾಗಿ ಆಗುವವಲ್ಲದೆ, ಜ್ಞಾನಸಂಪಾದನೆಗೂ ಬೇಕಾದಷ್ಟು ಹೊತ್ತು ದೊರೆಯುವದು. ಈಗ ನಮ್ಮ ಮೇಲೆ ಆಳುತ್ತಿರುವ ಇಂಗ್ಲಿಷ ಜನರಲ್ಲಿ ಈ ಗುಣವು ವಿಶೇಷವಾಗಿರುವದು. ಮುಖ್ಯವಾಗಿ ಈ ಗುಣದಿಂದಲೇ ಅವರು ಇಷ್ಟು ಘನತೆಗೇರಿರುವರು. ವಿಶೇಷವಾಗಿ ಹಿಂದೀ ಜನರು ಈ ಬಗ್ಗೆ ಲಕ್ಷ್ಯಗೊಡತಕ್ಕದ್ದು.

ಸಮಯನಿಷ್ಠತೆಯಿಂದ ಮಾನ ಮರ್ಯಾದೆಗಳುಂಟಾಗುವವು. ಒಂದು ಕೆಲಸದ ನಿಮಿತ್ತ ಸಭೆಯು ನೆರೆಯಬೇಕಾಗಿ ಗೊತ್ತಾಗಿದೆಯೆಂದು ತಿಳಿಯಿರಿ. ಸಮಯಕ್ಕನುಸರಿಸಿ ಬಂದಂಥವರಿಗೆ ಅವರವರ ಯೋಗ್ಯತಾನುಸಾರವಾಗಿ ಕೂಡ್ರಲಿಕ್ಕೆ ಸ್ಥಳ ಕೊಡುವರು. ಈ ಮೇರೆಗೆ ಮುಂಭಾಗದಲ್ಲಿದ್ದ ಎಲ್ಲ ಪೀಠಗಳು ತುಂಬಿರುತ್ತವೆಂದು ತಿಳಿಯಿರಿ. ಸಭೆ ನೆರೆದು ಎಷ್ಟೋ ಹೊತ್ತಿನ ಮೇಲೆ ಯಾವನೊಬ್ಬ ಪ್ರತಿಷ್ಠಿತ ಗೃಹಸ್ಥನು ಬಂದು, ಮುಂಭಾಗದಲ್ಲಿ ಬರಿದಾದ ಪೀಠವು ಒಂದೂ ಇಲ್ಲದ ಮೂಲಕ ಎಲ್ಲಿಯಾದರೂ ಒಂದು ಮೂಲೆಯೊಳಗೆ ಕುಳಿತುಕೊಂಡು, ಜನರ ಅಪಹಾಸ್ಯಕ್ಕೆ ಕಾರಣನಾಗುವದನ್ನು ನಾವು ಎಷ್ಟು ಸಾರೆ ನೋಡುವದಿಲ್ಲ! ಆದಕಾರಣ ಮಾನಮರ್ಯಾದೆಗಳನ್ನು ಪಡೆಯಲಪೇಕ್ಷಿಸುವವರು ಸಮಯಕ್ಕನುಸರಿಸಿ ನಡೆಯಬೇಕು.

೪. ಅದು ಇಲ್ಲದಿದ್ದರೆ ಆಗುವ ಹಾನಿಗಳು:—ಒಬ್ಬನಿಗೆ ಐದಾರು ಕೆಲಸಗಳು ಮಾಡತಕ್ಕವಿವೆಯೆಂದು ತಿಳಿಯಿರಿ. ಸೋಮಾರಿತನದಿಂದ ಅವನು ಮೊದಲನೇ ಕೆಲಸವನ್ನು ಕೈಕೊಳ್ಳಲಿಕ್ಕೆ ತಡ ಮಾಡಿದರೆ, ಆ ಕೆಲಸವು ತಡವಾಗಿ ಮುಗಿಯುವದು. ಇದರಿಂದ ಎರಡನೇ ಕೆಲಸವಾದರೂ ತಡವಾಗಿ ಪ್ರಾರಂಭವಾಗಿ ತಡವಾಗಿ ಮುಗಿಯುವದು. ಹೀಗಾಗುತ್ತ ಹೋಗಿ ಕಡೆಯ ಕೆಲಸವು ಮುಗಿಯದೆ ಹಾಗೆಯೇ ಉಳಿಯುವದು; ಇಲ್ಲವೆ ನಿಯಮಿತ ವೇಳೆಯಲ್ಲಿಯೇ ಅದನ್ನು ಮುಗಿಸಹೋದರೆ, ಅದು ಕೆಟ್ಟು ಹೋಗುವದು. ವಿದ್ಯಾರ್ಥಿಗಳು ವೇಳೆವೇಳೆಗೆ ತಮ್ಮ ಅಭ್ಯಾಸಗಳನ್ನು ಮಾಡದಿದ್ದರೆ, ಅವರ ಪ್ರಗತಿಯೇ ಆಗುವದಿಲ್ಲ. ಕಾರಕೂನನು ಸಮಯಕ್ಕನುಸರಿಸಿ ಕೆಲಸ ಮಾಡದಿದ್ದರೆ, ಅವನ ಕೆಲಸಗಳು ಒಂದರ ಹಿಂದೊಂದು ಉಳಿಯುವದರಿಂದ, ಅವನ ಮಾಸ್ತರು ಸಿಟ್ಟು

ಗೆದ್ದು ಅವನಿಗೆ ಹೆಚ್ಚು ಸಂಬಳ ಕೊಡುವದಿಲ್ಲ. ಹೊಲ ಮಾಡುವವ ಸಕಾಲಕ್ಕೆ ಹೊಲ ಹರಗಿ ಬೀಜ ಬಿತ್ತದಿದ್ದರೆ, ಅವನಿಗೆ ಸರಿಯಾಗಿ ಪೈರು ಬ ವದಿಲ್ಲ. ರೋಗಿಯು ಯೋಗ್ಯ ವೇಳೆಯಲ್ಲಿ ಔಷಧ ತಕ್ಕೊಳ್ಳದಿದ್ದರೆ, ಪ್ರಾ ಹಾನಿಯಾಗುವದು. ಕೆಲಸ ಮಾಡುವದರಲ್ಲಿ ಕೆಲವು ನಿಮಿಷಗಳ ವ್ಯತ ವಾದರೆ, ರಾಜ್ಯವೇ ಬುಡಮೇಲಾಗಿ ಬೀಳುವದು; ಯುದ್ಧಗಳು ವಿಪರೀತವ ಪರಿಣಮಿಸುವವು. ಸಾರಾಂಶ, ತಕ್ಕ ಕಾಲದಲ್ಲಿ ಕೆಲಸ ಮಾಡದಿದ್ದರೆ, ಕೆ ಮಾಡುವವನಿಗೂ ಅವನನ್ನವಲಂಬಿಸಿದ್ದ ಜನರಿಗೂ ಬಹಳೇ ಹಾನಿಯಾಗುವ

೫. **ಉಪಸಂಹಾರ**:—ಆದ್ದರಿಂದ ಹೊತ್ತುಹೊತ್ತಿಗೆ ಎಲ್ಲರೂ ತ ತಮ್ಮ ಕೆಲಸಗಳನ್ನು ಮಾಡುತ್ತ ಹೋದರೆ, ಕಾರ್ಯಸಾಧನೆಯೂ, ಪರಸ ರಿಗೆ ಮರ್ಯಾದೆಯೂ, ಅನುಕೂಲತೆಯೂ ಉಂಟಾಗುವವು.

---

(೪೪) ಸಂಗತಿ.

ವಂಶಭವೋ ಗುಣವಾನಪಿ ಸಂಗವಿಶೇಷೇಣ ಪೂಜ್ಯತೇ ಪುರುಷಃ ।
ನ ಹಿ ತುಂಬೀಫಲವಿಕಲೋ ವೀಣಾದಂಡಃ ಪ್ರಯಾತಿ ಮಹಿಮಾನಮ್ ॥

ಭಾವಿ.ನೀವಿಲಾ

ಅರ್ಥ:—ಬಿದರಿನಿಂದ ಮಾಡಲ್ಪಟ್ಟ ತಂಬೂರಿಯ ದಂಡವು ತಂತಿಗಳ ಯುಕ್ತವಾದಾಗ್ಯೂ, ಕುಂಬಳಕಾಯಿಯ ಹೊರತು ಶ್ರೇಷ್ಠವಾಗಲಾರದ ಮನುಷ್ಯನು ಉತ್ತಮ ಕುಲದಲ್ಲಿ ಹುಟ್ಟಿದವನಾದಾಗ್ಯೂ, ಗುಣವ ನಾದಾಗ್ಯೂ, ಸತ್ಸಂಗತಿಯ ಹೊರತು ಮಾನವನ್ನು ಹೊಂದಲಾರನು.

೧. **ಅರ್ಥ**:—'ಸಂಗತಿ' ಶಬ್ದವು, 'ಸಮ್-ಗಮ್' ಎಂಬ ಸಂಸ್ಕೃ ಧಾತುವಿನಿಂದ ಹುಟ್ಟಿರುತ್ತದೆ. ಅದರ ಅರ್ಥವು 'ಕೂಡಿ ಹೋಗೋಣ, ಇ ಕೂಡಿ ವರ್ತಿಸೋಣ' ಎಂಬದಾಗಿದೆ. ಅದಕ್ಕೆ ಸಹವಾಸವೆಂಬೆನ್ನ ಬಹು ಅದು ಗುಣಾವಗುಣಗಳನ್ನು ಕಲಿಯುವ ಮುಖ್ಯವಾದ ಶಾಲೆಯು. ಹುಡುಗ ಸದಾಚಾರವು ಇಲ್ಲವೆ ದುರಾಚಾರವು ಅಂಕುರಿಸಬೇಕಾದರೆ, ಸಂಗತಿಯೇ ಕಾ ವಾಗಿರುವದು. ಚಿಕ್ಕ ಹುಡುಗರು ಬಹುತರವಾಗಿ ತಮ್ಮ ತಾಯಿತಂದೆ ಸಹವಾಸದಲ್ಲಿಯೇ ಇರುವದರಿಂದ, ಅವರ ನೈತಿಕ ಸುಧಾರಣೆಯು ಅವ ದೊರೆಯುವ ಗೃಹಶಿಕ್ಷಣವನ್ನೇ ಅವಲಂಬಿಸಿರುವದು. ಆದರೆ ಅವರು ದೊ

ಾಗಿ ಶಾಲೆಗೆ ಹೋಗಹತ್ತಿದರೆಂದರೆ, ಅವರಿಗೆ ಜನರ ಕೂಡ ವರ್ತಿಸುವ ಪ್ರಸಂಗವು ಬರುವದು. ಇದೇ ಅವರ ಎರಡನೇ ಶಾಲೆಯು. ಚಿಕ್ಕಂದಿನಲ್ಲಿ ಬೇಕಾದಷ್ಟು ಉತ್ತಮವಾದ ಗೃಹಶಿಕ್ಷಣವು ದೊರೆತಾಗ್ಯೂ, ಅವರು ದೊಡ್ಡವರಾದ ಮೇಲೆ ಅವರ ಕೂಡ ವ್ಯವಹಾರ ಮಾಡುವ ಜನರ ಗುಣದೋಷಗಳ ಪರಿಣಾಮವು ಅವರ ಮನಸ್ಸಿನ ಮೇಲೆ ಆಗದೆ ಎಂದೂ ಇರಲಾರದು. ಪೌಷ್ಟಿಕ ಆಹಾರದಿಂದ ಶರೀರಕ್ಕೆ ಪುಷ್ಟಿಬರುವಂತೆ, ಸತ್ಸಂಗತಿಯಿಂದ ಅಂತಃಕರಣದಲ್ಲಿ ಸದಾಚಾರದ ಅಭಿರುಚಿಯು ಹುಟ್ಟುವದು.

೨. **ಕೆಟ್ಟ ಸಂಗತಿಯ ಪರಿಣಾಮಗಳು**:—ಈ ಜಗತ್ತಿನಲ್ಲಿ ಅಧಮ, ಮಧ್ಯಮ, ಮತ್ತು ಉತ್ತಮ ಗುಣಗಳು ಸಂಗತಿಯಿಂದಲೇ ಹುಟ್ಟುವವು. ಉದಾಹರಣಾರ್ಥ, ಒಂದು ನೀರಿನ ಹನಿಯನ್ನು ನೋಡಿರಿ. ಅದು ಕಾಸಿದ ಕಬ್ಬಿಣದ ಮೇಲೆ ಬಿದ್ದರೆ, ಅದರ ಹೆಸರು ಸಹ ಉಳಿಯದಂತಾಗುವದು. ಕಮಲಪತ್ರದ ಮೇಲಿದ್ದರೆ, ಮುತ್ತಿನಂತೆ ಲಕಲಕ ಹೊಳೆಯುವದು. ಸ್ವಾತೀನಕ್ಷತ್ರದ ಮಳೆಯ ಹನಿಯು ಸಮುದ್ರದೊಳಗಿರುವ ಸಿಂಪೆಯಲ್ಲಿ ಬಿದ್ದರೆ, ಅದು ಮುತ್ತಾಗುವದು. ಅದರಂತೆಯೇ ಮನುಷ್ಯನ ಸಂಗತಿಯು ಅವನ ಉತ್ತಮ, ಮಧ್ಯಮ, ಇಲ್ಲವೆ ನೀಚ ಸ್ಥಿತಿಗೆ ಕಾರಣವಾಗುವದು. ನೀಚ ಜನರ ಸಂಸರ್ಗದಿಂದ ಮನುಷ್ಯನ ಬುದ್ಧಿಯು ಹೀನವಾಗುತ್ತದೆ; ಸಮಾನಸ್ಕಂಧರ ಸಹವಾಸದಿಂದ ಅದು ಇದ್ದಂತೆಯೇ ಇರುವದು; ಮತ್ತು ಶಿಷ್ಟರ ಸಂಗತಿಯಿಂದ ಅದು ವಿಶಿಷ್ಟತರದ್ದಾಗುವದು. ಕಬ್ಬಿಣದ ಸಂಸರ್ಗದಲ್ಲಿದ್ದ ಅಗ್ನಿಯು ಕಮ್ಮಾರನಿಂದ ಹೊಡೆಯಲ್ಪಡುವಂತೆ, ಅವನು ಗುಣವಂತನಿದ್ದರೂ, ದುರ್ಜನರ ಸಂಗತಿಯಿಂದ ಅವನ ಮಾನಹಾನಿಯಾಗುವದು ನಿಜವು. ದುರ್ಜನರ ಸಂಪರ್ಕವು ಆನಂದರೂಪವಾದ ಮೃಗಕ್ಕೆ ದಾವಾಗ್ನಿಯಾಗಿಯೂ,ಸದ್ಗುಣರೂಪವಾದದೀಪಕ್ಕೆ ಸುಂಟರಗಾಳಿಯಾಗಿಯೂ, ಇಂದ್ರಿಯರೂಪವಾದ ಎರಳೆಗೆ ಬೇಟೆಗಾರನ ಗೀತೆಯಾಗಿಯೂ, ಎಲ್ಲ ಅವಿನಯಗಳಿಗೆ ಪುರಃಪತಾಕೆಯಾಗಿಯೂ ಇರುವದು. ಅದು ಶಾಸ್ತ್ರರೂಪವಾದ ಜಲಪ್ರಕ್ಷಾಲನದಿಂದ ನಿರ್ಮಲವಾದ ಬುದ್ಧಿಯನ್ನು ಸಹ ಕಲುಷಿತ ಮಾಡುವದು. ದೀಪಜ್ವಾಲೆಯು ಪಣತೆಯನ್ನು ಅಪಾತ್ರವಾಗಿ ಮಾಡಿ, ಬತ್ತಿಯನ್ನು ಸುಟ್ಟು, ಎಣ್ಣೆಯನ್ನು ಕೂಡಲೆ ನಾಶ ಮಾಡಿ, ನಿರ್ಮಲವಾದ ಸ್ಥಳವನ್ನು ಕಾಡಿಗೆಯಿಂದ ಮಲಿನ ಮಾಡುವಂತೆ, ದುರ್ಜನರ ಗೆಳೆತನವು ಸತ್ಪಾತ್ರರನ್ನು ಅಪಾತ್ರರನ್ನಾ

ಗಿಯೂ, ವಿನಯಾದಿಗುಣಗಳನ್ನು ಇಲ್ಲದಂತಾಗಿಯೂ, ಪ್ರೀತಿಯನ್ನು ನ
ವಾಗಿಯೂ, ನಿರ್ಮಲರಾದವರನ್ನು ದೋಷಯುಕ್ತರನ್ನಾಗಿಯೂ ಮಾಡುವದ
ಆದ್ದರಿಂದ ಇಂಥ ಅನೇಕ ದೋಷಗಳಿಂದ ಪರಿಪೂರಿತರಾದ ದುರ್ಜನರಿಂ
ಆದಷ್ಟು ದೂರಿರುವದು ಲೇಸು.

೩. **ಸತ್ಸಂಗತಿಯ ಫಲಗಳು**—ಸಜ್ಜನರ ಸಂಗತಿಯಿಂದ ಬಹು
ಲಾಭವಾಗುತ್ತದೆ ಸದ್ವರ್ತನ ಪಾಲಿಸುವದರಲ್ಲಿ ಅವರ ದೃಢನಿಶ್ಚಯವನ
ಕಂಡು, ನಮ್ಮ ಮನಸ್ಸಾದರೂ ಅವರ ವಿಷಯಕ್ಕೆ ದೃಢವಾಗುತ್ತ ಹೋಗುತ್ತ
ಅವರ ವಿದ್ವತ್ತೆಯಿಂದ ನಮಗೆ ಗೊತ್ತಿಲ್ಲದ ವಿಷಯಗಳು ತಿಳಿಯಬರುತ್ತ
ಅವರ ಪರೋಪಕಾರಿಯಾದ ಸುಸ್ವಭಾವವನ್ನು ಕಂಡು, ನಮ್ಮ ಮನ
ನಲ್ಲಾದರೂ ಪರೋಪಕಾರದ ಬುದ್ಧಿಯು ಹುಟ್ಟುತ್ತದೆ. ಅವರ ಪ್ರೋತ್ಸಾ
ದಿಂದ ಸತ್ಕೃತ್ಯಗಳನ್ನು ಮಾಡುವದಕ್ಕೆ ನಮಗೆ ಧೈರ್ಯವು ಬರುತ್ತದೆ. ಬಿ
ಗಾಳಿ ಬಿಟ್ಟ ಕೂಡಲೆ ಮೋಡಗಳು ಕ್ಷಣಾರ್ಧದಲ್ಲಿ ಪಲಾಯನ ಮಾಡುವಂ
ಸತ್ಸಮಾಗಮವಾದ ಕೂಡಲೆ ಮನಸ್ಸಿನ ದುರ್ವಿಚಾರಗಳು ಅದೃಶ್ಯವಾ
ನಮ್ಮ ಅಂತಃಕರಣದಲ್ಲಿ ಸತ್ಯ, ದಯೆ, ಭಕ್ತಿ ಮುಂತಾದ ಗುಣಗಳು ತಲೆದೋ
ಹತ್ತುತ್ತವೆ. **ತುಕಾರಾಮ, ರಾಮದಾಸ** ಮೊದಲಾದ ಸಾಧುಗ
ಇದ್ದದ್ದರಿಂದಲೇ ಈ ದೇಶದಲ್ಲಿ ಎಷ್ಟೋ ಮಹಾನುಭಾವರು ಆಗಿ ಹೋದ

೪. **ಸತ್ಸಂಗತಿಯನ್ನು ದೊರಕಿಸುವ ಬಗ್ಗೆ ಮಾಡತಕ್ಕ ಕರ್ತ
ಗಳು**:— ಮನುಷ್ಯನು ಕೇವಲ ಚಿಕ್ಕಂದಿನಲ್ಲಿಯೇ ಎರಡನೆಯವರನ್ನು ಅ
ಕರಿಸುತ್ತಾನೆಂತಲ್ಲ. ಅನುಕರಣವು ಅವನ ಹುಟ್ಟು ಗುಣವು ಆ ಗುಣ
ಅವನು ಸಾಯುವ ವರೆಗೂ ಬಾಳುವದು. ಅವನು ನಡತೆನಡಾವಳಿಗಳನ
ವಿಚಾರಾವಿಚಾರಗಳನ್ನೂ, ಗುಣಾವಗುಣಗಳನ್ನೂ ಎರಡನೆಯವರಿಂದಲೇ
ಯುವದುಂಟು. ಆದರೆ ಇದನ್ನೆಲ್ಲ ಅವನು ತನಗೆ ಗೊತ್ತಾಗದಂತೆ ಕಲಿಯುವ
ಇಬ್ಬರು ಮನುಷ್ಯರು ಒತ್ತಟ್ಟಿಗಿರುವದರಿಂದ ಒಬ್ಬರೊಬ್ಬರ ವಿಚಾರಗಳು
ಸ್ಪರರಲ್ಲಿ ಹುಟ್ಟದೆ ಎಂದೂ ಇರವು. ತಾರುಣ್ಯದಲ್ಲಿ ಸಂಗತಿಯ ಗುಣ
ಗುಣಗಳು ಬೇಗನೆ ಹತ್ತುತ್ತವೆ. ಆಗ ಮನುಷ್ಯನು ಒಮ್ಮೆ ದುರ್ಗುಣಗ
ಅಧೀನನಾದರೆ, ಅವು ಅವನನ್ನು ಬಿಟ್ಟು ತೊಲಗುವದಿಲ್ಲ. ಆದ್ದರಿಂದ ಅವ
ಚಿಕ್ಕಂದಿನಿಂದಲೇ ಸದ್ಗುಣಗಳ ಅಭಿರುಚಿಯೂ ದುರ್ಗುಣಗಳ ಬೇಸರ

ಮನಸ್ಸಿನಲ್ಲಿ ಹುಟ್ಟುವಂತೆ ಆಚರಿಸಿ, ಸಜ್ಜನರ ಸಹವಾಸದಲ್ಲಿದ್ದು, ಅವರು ಮಾತಾಡುವದನ್ನೂ ಮಾಡುವದನ್ನೂ ಲಕ್ಷ್ಯದಲ್ಲಿಟ್ಟು, ಅವರಂತೆ ಮಾಡುವದಕ್ಕೆ ಪ್ರಯತ್ನ ಮಾಡಬೇಕು; ಮತ್ತು ಕೆಟ್ಟ ಸಂಗತಿಯನ್ನು ಬಿಟ್ಟುಗೊಡುವದಕ್ಕೆ ಅವನಲ್ಲಿ ದೃಢಸಿಶ್ಚಯವಿರಬೇಕು.

೫. **ಉಪಸಂಹಾರ:**—ಐಹಿಕ ಮತ್ತು ಪಾರಲೌಕಿಕ ಸುಖದ ಸಾಧನವಾದ ಸದ್ವರ್ತನವು ಮನಸ್ಸಿನಲ್ಲಿ ಪೂರ್ಣವಾಗಿ ಬಿಂಬಿಸಬೇಕಾದರೆ, ಸತ್ಸಂಗತಿಯೇ ಮುಖ್ಯ ಕಾರಣವು. ಆದ್ದರಿಂದ ಅದು ಸಾಧ್ಯವಾಗುವಂತೆ ಎಲ್ಲರೂ ಪ್ರಯತ್ನ ಮಾಡುತ್ತಿರಬೇಕು.

---

(೪೫) ಹಳ್ಳಿಯ ಸುಖಗಳು.

೧. ಹಳ್ಳಿಯ ಸುಖಗಳನ್ನು ಕುರಿತು ಕೆಲವು ಆಂಗ್ಲ ಕವಿಗಳ ವಿಚಾರಗಳು:—

ಮಿಲ್ಟನ್ನನೆಂಬ ಪ್ರಸಿದ್ಧನಾದ ಆಂಗ್ಲಕವಿಯು ಹಳ್ಳಿಯ ಸುಖಗಳನ್ನು ಈ ಬಗೆಯಾಗಿ ವರ್ಣಿಸಿರುವನು:— ಬಹುತರವಾಗಿ ದಿನಾಲು ಪಟ್ಟಣಗಳಲ್ಲಿಯ ಹವೆಯು ದಟ್ಟವಸತಿಯುಳ್ಳಂಥ ಮತ್ತು ಒಂದಕ್ಕೊಂದು ಹತ್ತಿಕೊಂಡಿರುವಂಥ ಮನೆಗಳಿಂದಲೂ ದೊಡ್ಡ ದೊಡ್ಡ ಕಾರಖಾನೆಗಳೊಳಗಿಂದ ಹೊರಬೀಳುವ ಹೊಗೆಯಿಂದಲೂ ಕೆಟ್ಟು ಹೋಗಿರುತ್ತದೆ. ಇಂಥ ಸ್ಥಳಗಳಲ್ಲಿರುವವರು ಅದರ ದುರ್ಗಂಧವನ್ನು ಸಹಿಸಲಾರದೆ, ಸಮೀಪದಲ್ಲಿರುವ ರಮ್ಯವಾದ ಹಳ್ಳಿಗಳಲ್ಲಿಯೂ ಗದ್ದೆಗಳಲ್ಲಿಯೂ ಸುಖಕರವಾದ ವಸಂತಋತುವಿನ ಪ್ರಾತಃಕಾಲದ ಶೀತಲವಾದ ಹವೆಯನ್ನು ಉಪಭೋಗಿಸಬೇಕೆಂಬ ಲವಲವಿಕೆಯಿಂದ ಆ ಹಳ್ಳಿಗೆ ಬರುವರು; ಮತ್ತು ಅಲ್ಲಿ ತೆನೆಗಳ ಸುವಾಸನೆಯಿಂದಲೂ, ಪಕ್ಷಿಗಳ ಮಧುರ ಶಬ್ದಗಳಿಂದಲೂ, ರಮ್ಯವಾದ ಸೃಷ್ಟಿಯ ಸೌಂದರ್ಯದಿಂದಲೂ ತಮ್ಮ ಮನಸ್ಸನ್ನು ಆನಂದಗೊಳಿಸುವರು.

ಹೆಸರುವಾಸಿಯಾದ ಕೌಪರನೆಂಬ ಆಂಗ್ಲಕವಿಯು ಅನ್ನುವದೇನೆಂದರೆ, "ದೇವರು ಹಳ್ಳಿಯನ್ನು ಹುಟ್ಟಿಸಿದನು; ಮನುಷ್ಯನು ಪಟ್ಟಣವನ್ನು ಮಾಡಿದನು" ಮತ್ತು "ವಿಸ್ತಾರವಾದ ಅರಣ್ಯದಲ್ಲಿ ಅತಿಶಯವಾಗಿ ದಟ್ಟಾದ ನೆರಳಿನಲ್ಲಿ ನನ

ಗೊಂದು ಮನೆಯಿಲ್ಲವಲ್ಲ!". ಅವನು ತನ್ನ 'ಟಾಸ್ಕ' ಎಂಬ ಕಾವ್ಯದಲ್ಲಿ ಹಳ್ಳಿಯ ಸುಖಕರವಾದ ಆಯುಷ್ಯವನ್ನು ವಿಶೇಷವಾಗಿ ಬಣ್ಣಿಸಿರುವನು; ಮತ್ತು ಪ್ರೇಕ್ಷಕರ ದಟ್ಟಣೆಯಿಂದ ಉಷ್ಣವಾದ ಹವೆಯಿಂದ ತುಂಬಿರುವ ನಾಟಕಗೃಹಗಳಲ್ಲಿಯೂ ಚಂಡಾಡುವ ಕೋಣೆಗಳಲ್ಲಿಯೂ ದೊರೆಯುವ ಅಲ್ಪಸುಖಕ್ಕಾಗಿ ಜನರು ತಮ್ಮ ಶರೀರಸಂಪತ್ತನ್ನೂ ಹಣವನ್ನೂ ಕಳಕೊಳ್ಳುವದು ಮೂರ್ಖತನವೆಂದು ಬರೆದಿರುವನು.

ಸಾಧಾರಣವಾಗಿ ಪಟ್ಟಣಗಳಲ್ಲಿರುವದಕ್ಕಿಂತ ಹಳ್ಳಿಗಳಲ್ಲಿರುವದೇ ಒಳ್ಳೇದೆಂದು ವಿದ್ವಾಂಸರು ಪ್ರತಿಪಾದಿಸುವದರಲ್ಲಿ ಆಶ್ಚರ್ಯವೇನೂ ಇಲ್ಲ. ಯಾಕಂದರೆ ಪಟ್ಟಣಗಳಲ್ಲಿ ಒದರಾಟ, ಚೀರಾಟ ಮುಂತಾದವುಗಳ ಕರ್ಕಶವಾದ ಸಪ್ಪಳವು ನಿರಂತರವಾಗಿರುವದರಿಂದ, ಅವರಿಗೆ ಏಕಚಿತ್ತದಿಂದ ಓದುವದಕ್ಕೂ ಬರೆಯುವದಕ್ಕೂ ಅನುಕೂಲವಾಗುವದಿಲ್ಲ. ಆದರೆ ಹಳ್ಳಿಗಳಲ್ಲಿ ನೋಡಿದತ್ತ ಸಮಾಧಾನವೂ ಶಾಂತತೆಯೂ ಇರುವದರಿಂದ, ಅವರ ವಿಚಾರಪರಂಪರೆಗಳು ತಡೆಯಿಲ್ಲದೆ ಸಾಗಿ, ಗ್ರಂಥಾವಲೋಕನವೂ ಗ್ರಂಥಲೇಖನವೂ ಬಹಳೇ ಸುಲಭವೆನಿಸುವವು.

೨. ಹಳ್ಳಿಗರು ಹಳ್ಳಿಯ ಸುಖಗಳನ್ನು ಎಷ್ಟರ ಮಟ್ಟಿಗೆ ಉಪಭೋಗಿಸುವರು? :—

ಬಹುತರವಾಗಿ ಎಲ್ಲ ಉದ್ಯೋಗಸ್ಥರು ಉದ್ಯೋಗದ ಸಲುವಾಗಿ ನಿರುಪಾಯರಾಗಿ ತಮ್ಮ ಆಯುಷ್ಯವನ್ನು ಪಟ್ಟಣಗಳಲ್ಲಿಯೇ ಕಳೆಯುವದುಂಟು. ನಡುನಡುವೆ ಹಬ್ಬದ ದಿವಸಗಳಲ್ಲಿ ಮಾತ್ರ ಅವರು ಹಳ್ಳಿಗಳಿಗೆ ಬಂದು, ತಮ್ಮ ವ್ಯಾಪಾರದ ಅಥವಾ ಅನ್ಯವ್ಯವಸಾಯಗಳ ಸಂಬಂಧವಾದ ಪೇಚಾಟಗಳನ್ನು ಕ್ಷಣಹೊತ್ತು ಮರೆಯುವದರಿಂದ, ಎಂದೂ ನೋಡದಂಥ ಈ ಗ್ರಾಮಸೌಂದರ್ಯಾವಲೋಕನಾರಣ್ಯದಲ್ಲಿ ಅವರ ಕಣ್ಣೆರಳೆಗಳು ಯಥೇಚ್ಛವಾಗಿ ವಿಹರಿಸುವವು. ಅವರು ತಾವು ನೋಡಿದ್ದನ್ನು ವರ್ಣಿಸಲಿಕ್ಕೆ ಅಸಮರ್ಥರಿದ್ದಾಗ್ಯೂ ಸೃಷ್ಟಿಸೌಂದರ್ಯಾವಲೋಕನದಿಂದ ಕವಿಗಳಿಗಾಗುವಷ್ಟೇ ಆನಂದವು ಅವರಿಗಾಗುವದು. ಪಟ್ಟಣಗಳಲ್ಲಿ ನಿರಂತರವಾಗಿರುವ ಕಿಟಿಪಿಟಿ, ದುಷ್ಟತನ, ಚಿಂತೆ ಮುಂತಾದವುಗಳಿಂದ ದೂರವಲ್ಲಿದ್ದ ಮನೋಹರವಾದ ಹಳ್ಳಿಗಳಲ್ಲಿ ಜನರು ಉಲ್ಲಾಸದಿಂದಲೂ ಸುಖದಿಂದಲೂ ಆಯುಷ್ಯ ಕಳೆಯುವದನ್ನು ನೋಡಿ, ಪಟ್ಟಣ

ಗರು ಅಸೂಯೆ ಪಡುವದು ಸ್ವಾಭಾವಿಕವೇ ಸರಿ. ಆದರೆ ವಸ್ತುತಃ ಪಟ್ಟಣಿಗರೂ ಕವಿಗಳೂ ಹಳ್ಳಿಯ ಸುಖಗಳನ್ನು ಅತಿಶಯೋಕ್ತಿಯಾಗಿ ವರ್ಣಿಸುವದುಂಟು. ಸೃಷ್ಟಿಸೌಂದರ್ಯವನ್ನು ಚನ್ನಾಗಿ ಅರಿತುಕೊಳ್ಳಲಿಕ್ಕೆ ವಿದ್ಯೆಯು ಕೆಲಮಟ್ಟಿಗೆ ಅವಶ್ಯವಾಗಿ ಬೇಕು. ಇಂಥ ವಿದ್ಯೆಯು ಹಳ್ಳಿಗರಲ್ಲಿ ಎಳ್ಳಷ್ಟಾದರೂ ಇರುವದಿಲ್ಲ. ಇದನ್ನು ವಿಚಾರಿಸದೆ, ಕವಿಗಳು ಮತ್ತು ಪಟ್ಟಣಿಗರು ತಮ್ಮ ಹಾಗೆ ಹಳ್ಳಿಗಾಡು ಜನರಿಗಾದರೂ ವನಪ್ರದೇಶಗಳಲ್ಲಿರುವ ಸುಂದರವಾದ ನೋಟಗಳಿಂದ ಆನಂದವಾಗುತ್ತದೆಂದು ತಿಳಿಯುತ್ತಾರೆ. ಇದಲ್ಲದೆ ಪಟ್ಟಣದಲ್ಲಿದ್ದು, ಯಾವಾಗಲೂ ಕರ್ಕಶವಾದ ಸಪ್ಪಳದಿಂದಲೂ ಅಸಹ್ಯವಾದ ದುರ್ಗಂಧದಿಂದಲೂ ಅವರ ಕರ್ಣೇಂದ್ರಿಯವೂ ಘ್ರಾಣೇಂದ್ರಿಯವೂ ಬೇಸತ್ತು ಹೋಗಿ, ಅವರು ಬಹಳ ದಿವಸಕ್ಕೊಮ್ಮೆ ಹಳ್ಳಿಗಳಿಗೆ ಬರುವದರಿಂದ ಅಲ್ಲಿಯ ವನ ಪ್ರದೇಶಗಳು ಅವರಿಗೆ ಅಂದವಾಗಿ ಕಾಣುವದು ಸ್ವಾಭಾವಿಕವು.

೩. **ಉಪಸಂಹಾರ:**— ಸಾರಾಂಶವೇನೆಂದರೆ, ಹಳ್ಳಿಗಾಡು ಪ್ರದೇಶಗಳಲ್ಲಿ ಕೆಲವು ರಮಣೀಯವಾದ ಸೌಂದರ್ಯಗಳಿರುವದು ದಿಟವೆಂದು ಸಿದ್ಧವಾದಾಗ್ಯೂ, ಸತತವಾಸಿಗಳಾದ ಅಥವಾ ಸತತಾನುಭವಿಗಳಾದ ಹಳ್ಳಿಯವರಿಗೆ ಅವುಗಳಿಂದ ಆನಂದವಾಗದೆ, ಪ್ರಸಂಗಾನುಸಾರವಾಗಿ ಅವುಗಳ ಸುಖಾನುಭವಕ್ಕೆ ಹೋಗುವ ಪಟ್ಟಣಿಗರು ಮಾತ್ರ ಬಹಳ ಆಶ್ಚರ್ಯಗೊಳ್ಳುವರೆಂದು ಹೇಳಬಹುದು.

---

(೪೬) ಹಿಡಿ ಜೋಳಕ್ಕಾಗಿ ಪಡಿಜೋಳ ಕಳಕೊಳ್ಳಬೇಡ.

ನ ಸ್ವಲ್ಪಸ್ಯ ಕೃತೇ ಭೂರಿ ನಾಶಯೇನ್ಮತಿಮಾನ್ನರಃ ।
ಏತದೇವ ಹಿ ಪಾಂಡಿತ್ಯಂ ಯತ್ಸ್ವಲ್ಪಾದ್ಭೂರಿ ರಕ್ಷಣಮ್ ॥

ಪಂಚತಂತ್ರ.

ಅರ್ಥ:— ಮತಿಯುಳ್ಳ ಮನುಷ್ಯನು ಸ್ವಲ್ಪದ ಸಲುವಾಗಿ ಬಹಳ ಕಳಕೊಳ್ಳಬಾರದು. ಯಾಕಂದರೆ ಸ್ವಲ್ಪ (ತ್ಯಾಗ) ದಿಂದ ಬಹಳ ರಕ್ಷಣ ಮಾಡಿಕೊಳ್ಳುವದೇ ಜಾಣತನವು.

ಎಷ್ಟೋ ಪ್ರಸಂಗಗಳಲ್ಲಿ ಒಂದೇ ಹಿಡಿ ಜೋಳ ವೆಚ್ಚ ಮಾಡಿದರೆ, ನಮ್ಮ

ಕೆಲಸವಾಗುತ್ತದೆ. ಅಷ್ಟು ಸಹ ವೆಚ್ಚ ಮಾಡದೆ, ಆ ಕೆಲಸವು ಪುಕ್ಕಟೆಯಾಗ ಬೇಕೆಂದು ನಾವು ಕೃಪಣರಾಗಹೋದರೆ, ಒಮ್ಮೊಮ್ಮೆ ಆ ಕೆಲಸವು ಪಡಿಜೋಳ ವೆಚ್ಚಮಾಡಿದ ಹೊರತು ಕೈಗೂಡುವದೇ ಇಲ್ಲ. ಅದರಂತೆಯೇ ಈ ಸಂಸಾರ ದಲ್ಲಿ ಸಣ್ಣ ಪುಟ್ಟ ಕೆಲಸಕ್ಕೆ ಹತ್ತುವ ಖರ್ಚನ್ನು ಕೃಪಣತನದಿಂದ ಉಳಿಸಿ ಕೊಳ್ಳಹೋದರೆ, ಮುಂದೆ ಅದಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಖರ್ಚು ಮಾಡಬೇಕಾಗುವದು.

೨. ದೃಷ್ಟಾಂತಗಳು:—ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಇಲ್ಲವೆ ಕಾರ ಖಾನೆಗಳಲ್ಲಿ ವ್ಯಾಪಾರಕ್ಕಾಗಿ ಬಹಳ ಬೆಲೆಬಾಳುವ ಸರಕುಗಳನ್ನು ಇಡುವ ದುಂಟು. ದುರ್ದೈವದಿಂದ ಅವುಗಳಿಗೆ ಬೆಂಕಿ ಹತ್ತಿದರೆ, ಸರಕುಗಳೆಲ್ಲ ಸುಟ್ಟು ಬಹಳೇ ಹಾನಿಯಾಗುವದು. ಇಂಥ ಅಪಘಾತಗಳಾಗಬಾರದೆಂದು ಇಂಥ ಕಟ್ಟ ಡಗಳ ವಿಮೆ ಇಳಿಸುವದು ಅವಶ್ಯವು. ಆದರೆ ವಿಮೆ ಇಳಿಸುವ ಬಗ್ಗೆ ವಿಮೆಯ ಕೂಟಗಳಿಗೆ ಕೊಡಬೇಕಾಗುವ ಹಣ ಸಹ ಉಳಿಸಿಕೊಳ್ಳಹೋದರೆ, ಮತ್ತು ದುರ್ದೈವದಿಂದ ಆ ಕಟ್ಟಡಗಳಿಗೆ ಬೆಂಕಿ ಹತ್ತಿದರೆ, ಉಳಿಸಿಕೊಂಡ ಹಣಕ್ಕಿಂತ ಸಾವಿರಾರು ಪಾಲು ಹೆಚ್ಚು ಹಾನಿಯಾಗುವದು

ಮನೆಯಲ್ಲಿ ಯಾರಾದರೂ ಬೇನೆಬಿದ್ದರೆ, ಅವರ ಔಷಧೋಪಚಾರಕ್ಕಾಗಿ ಹತ್ತುವ ವೆಚ್ಚವನ್ನು ಅವಶ್ಯವಾಗಿ ಮಾಡಲಿಕ್ಕೆ ಬೇಕು. ಇಲ್ಲದಿದ್ದರೆ ಆ ಬೇನೆಯು ಹೆಚ್ಚಾಗಿ, ಅವರು ಮೃತ್ಯುಮುಖಕ್ಕೊಳಗಾಗುವರು.

ತಾಯಿ ತಂದೆಗಳು ಕೈಲಾದ ಮಟ್ಟಿಗೆ ಹುಡುಗರ ಅಭ್ಯಾಸಕ್ಕಾಗಿ ಹತ್ತುವ ವೆಚ್ಚವನ್ನು ಮಾಡಲಿಕ್ಕೆ ಬೇಕು. ಹುಡುಗರು ವಿದ್ಯಾವಂತರಾದರೆ, ಅವರು ವಿಪುಲವಾಗಿ ದ್ರವ್ಯವನ್ನು ಸಂಪಾದಿಸಿ ತಮ್ಮನ್ನು ಅವಲಂಬಿಸಿದವರನ್ನು ಸಂರ ಕ್ಷಿಸುವರು. ಆದರೆ ತಾಯಿತಂದೆಗಳು ತಮ್ಮ ಹುಡುಗರ ವಿದ್ಯೆಗೋಸ್ಕರ ಹತ್ತುವ ಹಣವನ್ನು ವೆಚ್ಚಮಾಡದಿದ್ದರೆ. ಆ ಹುಡುಗರು ದಡ್ಡರೂ ಪರಾವಲಂಬಿಗಳೂ ಆಗಿ ಎಲ್ಲರಿಗೂ ಬೇಡಾಗುತ್ತಾರೆ.

ವ್ಯಾಪಾರವು ಚನ್ನಾಗಿ ಸಾಗಬೇಕಾದರೆ, ವ್ಯಾಪಾರಸ್ಥರು ಜಾಹೀರಾತು ಗಳ ಸಲುವಾಗಿ ಅಲ್ಪಸಲ್ಪ ಹಣ ವೆಚ್ಚಮಾಡಲಿಕ್ಕೆ ಬೇಕು. ಇಲ್ಲದಿದ್ದರೆ ಸರಕು ಗಳು ಮಾರಾಟವಾಗದೆ ಅವರಲ್ಲಿಯೇ ಉಳಿದು, ಕೆಟ್ಟು ಹೋಗಿ, ಬಹಳೇ ಹಾನಿಯಾಗುವದು.

೩. ಉಪಸಂಹಾರ:—ಮೇಲೆ ಹೇಳಿದ ದೃಷ್ಟಾಂತಗಳಿಂದ ಕಂಡು ಬರುವದೇನಂದರೆ, ಈ ಸಂಸಾರದಲ್ಲಿ ಅವಶ್ಯವಾಗಿ ಮಾಡತಕ್ಕ ವೆಚ್ಚವನ್ನು ಪ್ರತಿಯೊಬ್ಬನು ಮಾಡಲಿಕ್ಕೇ ಬೇಕು. ಇಲ್ಲದಿದ್ದರೆ ಬಹಳೇ ಹಾನಿಯಾಗುವದು.

---

೫ ನೇ ಪ್ರಕರಣ.

(೧) ವರ್ಣನಪರ ವಿಷಯಗಳೂ ಅವುಗಳ ಬಗ್ಗೆ ಮುದ್ದೆಗಳೂ.

೧. ಅರಣ್ಯ:— ೧ ಅರ್ಥ. ೨. ತೇಗು, ಸಿಸುವು, ಆಲದಗಿಡ ಮುಂತಾದ ಗಿಡಗಳ ವರ್ಣನೆ. ೩ ಪಶುಪಕ್ಷಿಗಳೂ ಬೇಟೆಗಾರರೂ. ೪. ಭವ್ಯವಾದ ಮತ್ತು ಭಯಾನಕವಾದ ನೋಟ. ೫. ಲಾಭಗಳು:-ಉರವಲು ಕಟ್ಟಿಗೆಯೂ ಮನೆ ಕಟ್ಟಲಿಕ್ಕೆ ಬೇಕಾಗುವ ಕಟ್ಟಿಗೆಗಳು ಸುಲಭವಾಗಿಯೂ ಅಗ್ಗವಾಗಿಯೂ ಸಿಗುತ್ತವೆ, ಅರಣ್ಯವಿದ್ದಲ್ಲಿ ಮಳೆಯು ಹೆಚ್ಚಾಗುತ್ತದೆ.

೨. ಋತುಗಳು:— ೧. ಅರ್ಥ. ೨. ಅವು ಉಂಟಾಗುವ ರೀತಿ. ೩. ಆಯಾ ಋತುಗಳ ಹೆಸರು. ೪. ಪ್ರತಿಯೊಂದು ಋತುವಿನ ಹವೆಯು. ೫. ಋತುಗಳು ಬದಲಾದಂತೆ, ಉಡಿಗೆ-ತೊಡಿಗೆಗಳನ್ನು ಬದಲು ಮಾಡುವ ಅವಶ್ಯಕತೆ. ೬. ಪ್ರತಿಯೊಂದು ಋತುವಿನಲ್ಲಿ ಒಕ್ಕಲಿಗರು ಮಾಡತಕ್ಕ ಕೆಲಸಗಳು. ೭. ಆಯಾ ಋತುಗಳಿಂದಾಗುವ ಲಾಭಗಳು.

೩. ಕಾಗದ:— ೧. ಕಾಗದ ಮಾಡುವ ಯುಕ್ತಿಯು ಗೊತ್ತಾದ ಸ್ಥಳ—ಚೀನದೇಶ. ೨. ಅದನ್ನು ಮಾಡಲಿಕ್ಕೆ ಬೇಕಾಗುವ ಜಿನಸುಗಳು—ಚಿಂದಿ, ತೊಗಲು, ಹುಲ್ಲು, ಗೋಣೀತಟ್ಟು. ೩. ಅದನ್ನು ಮಾಡುವ ರೀತಿಯು:—ಚಿಂದಿಗಳನ್ನು ಆರಿಸಿ, ಅವುಗಳಲ್ಲಿದ್ದ ಮಣ್ಣು, ಕಸ, ಕಡ್ಡಿಗಳನ್ನು ತೆಗೆದುಹಾಕಿ, ಹಿಟ್ಟುಮಾಡಿ, ನೀರಲ್ಲಿ ಕಲಿಸಿ, ಅದನ್ನು ಹರಿಸಿ, ಅದರ ಮೇಲೆ ಲಟ್ಟಣಿಗೆಯನ್ನು ತಿರುಹಿ, ಒಣಗಿಸಿ ಕಾಗದಗಳನ್ನು ಮಾಡುತ್ತಾರೆ. ೪. ಪ್ರಕಾರಗಳು—ಪತ್ರಗಳನ್ನು ಬರೆಯುವ ಕಾಗದ, ಛಾಪಿಸುವ ಕಾಗದ, ಜಿನಸುಗಳನ್ನು ಕಟ್ಟುವ ಕಾಗದ, ಚಿತ್ರ ತೆಗೆಯುವ ಕಾಗದ, ಬತ್ತೀ ಸೇದುವ ಕಾಗದ ಮುಂತಾದವುಗಳು. ೫. ಪ್ರಾಚೀನಕಾಲದಲ್ಲಿ ಕಾಗದದ ಬದಲಾಗಿ ಉಪಯೋಗಿಸಲ್ಪಡುತ್ತಿದ್ದ ಜಿನಸುಗಳು—ಪೇಪಿರಸ್ (ಆಪು) ಗಿಡದ ಎಲೆ. ಇಜಿಪ್ತದೇಶದವರು

ಈ ಎಲೆಯ ಮೇಲೆ ಬರೆಯುತ್ತಿದ್ದರು. ಪಾರ್ಚಮೆಂಟ (ಚರ್ಮದ ಕಾಗದ). ಅದನ್ನು ಆಡಿನ ಚರ್ಮದಿಂದ ಮಾಡುತ್ತಾರೆ. ಅದು ಪೂರ್ವದಲ್ಲಿ ಬಹಳೇ ಉಪಯೋಗಿಸಲ್ಪಡುತ್ತಿತ್ತು. ೬. ಉಪಯೋಗ— ಜಗತ್ತು ಸುಧಾರಿಸಲಿಕ್ಕೆ ಕೆಲಮಟ್ಟಿಗೆ ಕಾಗದವೇ ಕಾರಣವಾಗಿದೆ.

೪. **ನಾಣ್ಯ**:—೧. ಚಿನ್ನ, ಬೆಳ್ಳಿ, ತಾಮ್ರಗಳಿಂದ ನಾಣ್ಯಗಳನ್ನು ಮಾಡುತ್ತಾರೆ. ೨. ತಯಾರ ಮಾಡುವ ಸಂಸ್ಥೆ:—ಟಂಕಸಾಲೆ. ೩. ಪ್ರಕಾರಗಳು—ಪೌಂಡ, ಶಿಲಿಂಗ, ಪೆನ್ಸ, ರೂಪಾಯಿ, ಆಣೆ, ಪೈ ಮುಂತಾದವು. ೪. ಉಪಯೋಗ—ನಾಣ್ಯಗಳಿರದಿದ್ದರೆ, ಈಗಿನಷ್ಟು ವ್ಯಾಪಾರವು ನಡೆಯುತ್ತಿದ್ದಿಲ್ಲ; ದೇಶಗಳಲ್ಲಿ ಸುಧಾರಣೆಯಾಗುತ್ತಿದ್ದಿಲ್ಲ. ೫. ಸುಧಾರಿಸಿದ ರಾಷ್ಟ್ರಗಳಲ್ಲಿ "ನೋಟು", "ಹುಂಡಿ" ಇವುಗಳ ಉಪಯೋಗ.

೫. **ಮಳೆ**:—೧. ಮಳೆ ಬೀಳುವ ಕಾರಣ—ಬೇಸಿಗೆಯಲ್ಲಿ ಸಮುದ್ರ, ಸರೋವರ, ನದಿ ಮುಂತಾದ ಜಲಾಶಯಗಳ ನೀರು ಉಗಿಯಾಗಿ ಮೇಲಕ್ಕೆ ಹೋಗಿ, ಅದು ತಂಪಾದ ನೆಲದ ಇಲ್ಲವೆ ತಂಪಾದ ಗಾಳಿಯ ಸ್ಪರ್ಶವಾದ ಕೂಡಲೆ ಪುನಃ ನೀರು ಆಗಿ, ಮಳೆಯ ರೂಪದಿಂದ ಕೆಳಗೆ ಬೀಳುತ್ತದೆ. ೨. ಆ ಬಗ್ಗೆ ನಮ್ಮ ಪುರಾಣದಲ್ಲಿ ಏನು ಹೇಳಿದೆ? ೩. ಬೇರೆ ಬೇರೆ ದೇಶಗಳಲ್ಲಿ ಮಳೆಯು ಹೆಚ್ಚು ಕಡಿಮೆ ಬೀಳುವ ಕಾರಣ—ಅಲ್ಲಿಯ ಗುಡ್ಡಗಳೂ, ಅರಣ್ಯಗಳೂ, ಭೂಪೃಷ್ಠದ ಎತ್ತರವೂ, ಸಮುದ್ರದ ದಿಕ್ಕಿನಿಂದ ಬೀಸುವ ಗಾಳಿಯೂ ಹೆಚ್ಚು ಕಡಿಮೆಯಾಗಿದ್ದಂತೆ, ಮಳೆಯು ಹೆಚ್ಚು ಕಡಿಮೆಯಾಗುವದು. ೪. ಉಪಯೋಗ—ಕುಡಿಯಲಿಕ್ಕೂ ಬೇರೆ ಕೆಲಸಕ್ಕೂ ಅತ್ಯವಶ್ಯವಾಗಿರುವ ನೀರು ಸಿಗುವದು; ಪೈರು ಬೆಳೆದು, ಧಾನ್ಯಗಳು ಸಿಗುವವು; ದನಕರುಗಳಿಗೆ ಹುಲ್ಲು, ಮೇವು ದೊರೆಯುವವು; ಅರಣ್ಯಗಳು ಬೆಳೆದು, ಕಟ್ಟಿಗೆಗಳು ದೊರೆಯುವವು. ೫. ಅತಿವೃಷ್ಟಿ, ಅನಾವೃಷ್ಟಿಗಳಿಂದಾಗುವ ಹಾನಿಗಳು.

೬. **ಸಮುದ್ರ**:—೧. ಸಮುದ್ರವೆಂದರೆ, ಒಂದು ವಿಸ್ತಾರವಾದ ನೀರಿನ ಸಮುದಾಯವು. ೨. ಅದರ ವಿಸ್ತಾರವು—ಪೃಥ್ವಿಯ ಸುಮಾರು ಮೂರು ನಾಲ್ಕಾಂಶ ಭಾಗವು ನೀರಿನಿಂದಲೇ ವ್ಯಾಪಿಸಲ್ಪಟ್ಟದೆ. ೩. ಅದಕ್ಕೆ ಮಳೆ, ಕಾಲುವೆ, ಹಳ್ಳ, ನದಿಗಳಿಂದ ನೀರು ಬರುವದು. ೪. ಅದರ ಬುಡದಲ್ಲಿರುವ ಪದಾರ್ಥಗಳು—ಸಣ್ಣ ದೊಡ್ಡ ಬಂಡೆಗಲ್ಲುಗಳೂ, ಸಿಂಪು, ಹವಳ, ಮುತ್ತು, ರತ್ನ, ಮಾಣಿಕ

ಗಳೂ. ೫. ಅದರಲ್ಲಿರುವ ಜೀವಜಂತುಗಳು—ಮನುಷ್ಯರನ್ನು ಹೋಲುವ ಪ್ರಾಣಿಗಳೂ, ಮೀನ, ಮೊಸಳೆ, ತಿಮಿಂಗಿಲ, ನಾಯಿ, ಕುದುರೆ, ಹಂದಿ ಮುಂತಾದ ಪ್ರಾಣಿಗಳು. ೬. ಉಪಯೋಗ—ಅದರಿಂದ ಉಪ್ಪು ಹುಟ್ಟುತ್ತದೆ, ಮಳೆಯನ್ನು ತಂದು ಕೊಡುತ್ತವೆ; ಚಳಿಗಾಲವಲ್ಲಿ ಉಷ್ಣತೆಯನ್ನೂ, ಬಿಸಿಲುಗಾಲವಲ್ಲಿ ತಂಪನ್ನೂ ಉಂಟುಮಾಡುತ್ತದೆ; ದೇಶಗಳನ್ನು ಜೋಡಿಸುವ ಅತಿ ಸುಲಭವಾದ ಸಾಧನವಾಗಿದೆ.

೭. **ಸೂರ್ಯಗ್ರಹಣ**:—೧ ಅರ್ಥ .೨. ಅದು ಹೇಗೆ ಆಗುತ್ತದೆ! ಪೃಥ್ವಿ ಮತ್ತು ಸೂರ್ಯ ಇವುಗಳ ನಡುವೆ ಚಂದ್ರನು ಬಂದಾಗ, ಸೂರ್ಯನ ಕಿರಣಗಳು ಪೃಥ್ವಿಯ ಮೇಲೆ ಬೀಳುವದಿಲ್ಲಾದ್ದರಿಂದ ಸೂರ್ಯಗ್ರಹಣವಾಗುತ್ತದೆ. ೩. ಪ್ರಕಾರಗಳು— ಸಂಪೂರ್ಣವಾದದ್ದೂ (ಖಗ್ರಾಸ), ಸಂಪೂರ್ಣವಿಲ್ಲದ್ದೂ. ೪. ಆಗ ಕಾಣುವ ನೋಟ—ನಕ್ಷತ್ರದರ್ಶನ; ದನಕರುಗಳು ಅಡವಿಯಿಂದ ಹಿಂತಿರುಗಿ ಮನೆಗೆ ಬರೋಣ; ದುರ್ಬೀನಿ ಇಲ್ಲವೆ ಬೇರೆ ಉಪಾಯದಿಂದ ಸೂರ್ಯ ಮಂಡಲವನ್ನು ನೋಡುವ ಜನರ ದಟ್ಟಣೆ; ಭಿಕ್ಷುಕರ ದಟ್ಟಣೆ; ಮಂತ್ರಜಪಗಳನ್ನು ಸಾಧಿಸಿಕೊಳ್ಳುವ ಜನರ ಉತ್ಸುಕತೆ; ಇತ್ಯಾದಿ. ೫. ಗ್ರಹಣಗಳ ಬಗ್ಗೆ ಪ್ರಾಚೀನಕಾಲದ ಮತಗಳು.

---

(೨) ಕಥನಪರ ವಿಷಯುಗಳೂ ಅವುಗಳ ಬಗ್ಗೆ ಮುದ್ದೆಗಳೂ.

೧. **ಅರ್ಕಾಟದ ಮುತ್ತಿಗೆ**:— ೧. ಅರ್ಕಾಟವು ಎಲ್ಲಿ ಅದೆ ? ೨. ಮುತ್ತಿಗೆಯ ಕಾರಣಗಳು. ೩. ಚಂದಾಸಾಹೇಬ ಮತ್ತು ಮಹಮ್ಮದ ಅಲ್ಲಿ ಇವರ ಸ್ವಲ್ಪ ಇತಿಹಾಸ. ೪. ಇಂಗ್ಲಿಷರೂ ಫ್ರೆಂಚರೂ ಅದರಲ್ಲಿ ಕೈಹಾಕುವ ಕಾರಣ. ೫. ಎರಡೂ ಪಕ್ಷದವರ ಸೈನ್ಯಗಳ ವರ್ಣನೆ. ಯುದ್ಧದ ವರ್ಣನೆ. ೬. ಮುತ್ತಿಗೆಯ ಪರಿಣಾಮ.

೨. **ನೂರಜಿಹಾನ ರಾಣಿಯು**:— ೧. ತಾಯಿತಂದೆಗಳ ಹೆಸರು. ತಂದೆಯು ಮಾಡಿದ ದೇಶತ್ಯಾಗ. ದಾರಿಯಲ್ಲಿ ಅವಳ ಜನ್ಮವೂ ವಿಪತ್ತುಗಳೂ. ೨. ತಾಯಿತಂದೆಗಳ ಕೂಡ ಲಾಹೋರ ಪಟ್ಟಣದಲ್ಲಿದ್ದಾಗ ಒದಗಿದ ಸಂಗತಿಗಳು. ೩. ಅವಳ ಮದುವೆ; ಗಂಡನ ವೃತ್ತಾಂತವು; ಅವನ ಕೊಲೆ. ೪. ದಿಲ್ಲೀ ಪಟ್ಟಣಕ್ಕೆ ಹೋದಾಗ, ಅಲ್ಲಿ ನಡೆದ ಸಂಗತಿಗಳು. ೫. ಆಕೆಯ ಗುಣದೋಷಗಳು.

---

(೩) ಚಿಂತನಪರ ವಿಷಯಗಳೂ ಅವುಗಳ ಬಗ್ಗೆ ಮುದ್ದೆಗಳೂ.

೧. **ಅತಿಸರ್ವತ್ರ ವರ್ಜಯೇತ್:**—೧. ಅರ್ಥ— ಯಾವದನ್ನೂ ಅತಿಶಯವಾಗಿ ಮಾಡಬಾರದು. ೨. ಹಾನಿಗಳು—ಮಾನಸಿಕ, ಶಾರೀರಿಕ, ಮತ್ತು ನೈತಿಕ ಬಲವು ಕಡಿಮೆಯಾಗುತ್ತದೆ. ಉದಾಹರಣೆ—ಬಹಳ ಅಭ್ಯಾಸ ಮಾಡುವದರಿಂದ ಮಿದುಳು ಕೆಡುವದು; ಮಿತಿಯಿಲ್ಲದೆ ಅನ್ನಪಾನಗಳನ್ನು ಸೇವಿಸುವದರಿಂದ ಆಲಸ್ಯವೂ ರೋಗಗಳೂ ಹುಟ್ಟುವವು; ಇತ್ಯಾದಿ. ೩. ನಿಯಮಿತತನವು ಸದ್ಗುಣಗಳ ಬೀಜವು. ಉದಾಹರಣೆ— ನಿರಾಹಾರಕ್ಕಿಂತಲೂ ಹೊಟ್ಟೆಬಾಕತನಕ್ಕಿಂತಲೂ ಮಿತಾಹಾರವು ಲೇಸು; ಕೃಪಣತನಕ್ಕಿಂತಲೂ ದುಂದುಗಾರಿಕೆಗಿಂತಲೂ ಮಿತವ್ಯಯವು ಒಳ್ಳೇದು; ಇತ್ಯಾದಿ. ೪. ಉಪಸಂಹಾರ— ಮಿತಿಯಿಂದ ಇರುವದು ಲೇಸು.

೨. **ಅಸತ್ಯ:**— ೧. ಎಷ್ಟೋ ಜನರು ಸುಳ್ಳಾಡಿ, ಅಲ್ಪಸ್ವಲ್ಪ ಲಾಭಗಳನ್ನು ಪಡೆಯಬೇಕೆಂದು ಹವಣಿಸುತ್ತಾರೆ. ಆದರೆ ಆ ಲಾಭಗಳು ಶಾಶ್ವತವಲ್ಲ. ೨. ಅದರಿಂದಾಗುವ ದೇವರ ಕೋಪವು. ೩. ನೆರೆಹೊರೆಯವರ ನಂಬಿಗೆಯನ್ನು ಹೋಗಲಾಡಿಸುತ್ತದೆ. ೪. ಸುಳ್ಳು ಎಂದೂ ಕ್ಷಮಿಸಲ್ಪಡದು ೫. ಸುಳ್ಳುಗಾರನಿಗಾಗುವ ಮನಸ್ಸಿನ ಅಸಮಾಧಾನವೂ ವಿಪತ್ತುಗಳೂ. ೬. ಉಪಸಂಹಾರ.

೩. **ಆಲಸ್ಯ:**— ೧. ಅರ್ಥ— ಕರ್ತವ್ಯವನ್ನು ಮಾಡದೆ ಸುಮ್ಮನೆ ಕೂಡೋಣ. ೨. ಅದರಿಂದಾಗುವ ಕೆಟ್ಟ ಪರಿಣಾಮಗಳು:— ಶಾರೀರಿಕ ಶಕ್ತಿಯು ಕಡಿಮೆಯಾಗುತ್ತದೆ; ಮನಸ್ಸು ಅನೀತಿಗಳ ಕಡೆಗೆ ಎಳೆಯುತ್ತದೆ; ಮನಸ್ಸಿನ ಚಟಪಟಿಕೆಯು ಇಲ್ಲದಂತಾಗಿ ಮನುಷ್ಯನು ವಿಷಯಾಸಕ್ತನಾಗುತ್ತಾನೆ; ಹೊಸ ಜ್ಞಾನಾನುಭವಗಳು ಪ್ರಾಪ್ತವಾಗದೆ, ಮೊದಲಿದ್ದ ಜ್ಞಾನಾನುಭವಗಳು ಸಹ ಲೋಪವಾಗುತ್ತವೆ; ಸೋಮಾರಿಯಾದವನನ್ನು ಎಲ್ಲರೂ ತಿರಸ್ಕರಿಸುವರು. ೩. ಸೋಮಾರಿಗಳಾದ ಜನರಿಂದ ಸಮಾಜಕ್ಕೆ ಆಗುವ ಕೆಟ್ಟ ಪರಿಣಾಮಗಳು. ೪. ಉಪಸಂಹಾರ:— ಪ್ರತಿಯೊಬ್ಬನು ಆಲಸ್ಯವನ್ನು ಬಿಟ್ಟುಗೊಟ್ಟು, ಕರ್ತವ್ಯ ಜಾಗರೂಕನಾಗತಕ್ಕದ್ದು.

೪. **ಕೀರ್ತಿ:**—೧. ಅರ್ಥ ೨. ಕೀರ್ತಿ ಪಡೆಯಬೇಕೆಂದು ಎಲ್ಲರೂ ಬಯಸುವರು. ೩. ನಿಜವಾದ ಯೋಗ್ಯತೆಯಿಲ್ಲದೆ, ಕೀರ್ತಿಯು ಶಾಶ್ವತವಾಗದು. ೪. ಯೋಗ್ಯತೆಯಿಲ್ಲದೆ ಬರಿದೆ ಕೀರ್ತಿಯನ್ನು ಪಡೆಯಬೇಕೆಂಬ ಆಶೆ

ಯಿಂದಾಗುವ ಮಾನಹಾನಿಯು. ೫. ಕೀರ್ತಿಯನ್ನಪೇಕ್ಷಿಸದೆ, ಕರ್ತವ್ಯದಲ್ಲಿ ಲಕ್ಷ್ಯವನ್ನಿಟ್ಟು ಕೆಲಸ ಮಾಡುವವನೇ ನಿಜವಾದ ಕೀರ್ತಿಯನ್ನು ಪಡೆಯುವನು. ೬. ಉಪಸಂಹಾರ.

೫. ಗಾಳಿಬಂದಾಗ ತೂರಿಕೋ:— ೧. ವಾಕ್ಯಾರ್ಥ. ೨. ಅದರ ವ್ಯುತ್ಪತ್ತಿ. ೩. ಆಯುಷ್ಯವು ಕ್ಷಣಿಕವಿರುವದರಿಂದ, ನಾಳೆ ಬದುಕುವೆನೆಂದು ಯಾವನೂ ನಿಶ್ಚಯವಾಗಿ ಹೇಳಲಾರನು. ೪. ಅನುಕೂಲವಾದ ಪ್ರಸಂಗವು ಮೇಲಿಂದಮೇಲೆ ಬರುವದಿಲ್ಲವಾದ್ದರಿಂದ, ಅನುಕೂಲವಿದ್ದಾಗಲೇ ಕಾರ್ಯವನ್ನು ಸಾಧಿಸಿಕೊಳ್ಳತಕ್ಕದ್ದು. ೫. ಈ ಜಗತ್ತಿನಲ್ಲಿ ಒಬ್ಬನು ಮತ್ತೊಬ್ಬನನ್ನು ಹಿಮ್ಮೆಟ್ಟಿ ನೋಡುವದರಿಂದ, ಸಮಯಾನುಸಾರಿಗಳಾದವರು ಹೊತ್ತುಸಾಧಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳತಕ್ಕದು. ೬. ಸಂತೆಯ ಧಾರಣೆಯು ಸ್ಥಿರವಲ್ಲವಾದ್ದರಿಂದ, ಜಿನಸುಗಳು ಅಗ್ಗವಿದ್ದಾಗಲೇ ಕೊಳ್ಳತಕ್ಕದ್ದು. ೭. ಉಪಸಂಹಾರ.

೬. ತಾಮ್ರದ ದುಡ್ಡು ತಾಯಿಮಕ್ಕಳನ್ನು ಕೆಡಿಸುವದು:—

೧. ಅರ್ಥ. ೨. ದ್ರವ್ಯಾಶೆಯಿಂದ ಮಾಡಲ್ಪಡುವ ಕಳವು, ಕೊಲೆ, ವಂಚನೆ ಮುಂತಾದ ಪಾಪಕೃತ್ಯಗಳೂ ಅವುಗಳ ಪರಿಣಾಮವೂ. ೩. ದ್ರವ್ಯಾಶೆಯಿಂದ ಮಾಡಿದ ವಿವಾಹಗಳ ಕೆಟ್ಟ ಪರಿಣಾಮಗಳು. ೪. ಅದರಿಂದ ತಂದೆಮಕ್ಕಳ ನಡುವೆಯೂ ಅಣ್ಣತಮ್ಮಂದಿರ ನಡುವೆಯೂ ಹುಟ್ಟುವ ಕಲಹಗಳ ಪರಿಣಾಮಗಳು. ೫. ದ್ರವ್ಯಾಶೆಯುಳ್ಳವನಲ್ಲಿ ದಾನ ಮಾಡುವ ಇಚ್ಛೆಯೂ ನೆರೆಹೊರೆಯವರ ಬಗ್ಗೆ ಪ್ರೇಮವೂ ಇರುವದಿಲ್ಲ. ೬. ಉಪಸಂಹಾರ.

೭. ವ್ಯವಸ್ಥೆ:— ೧. ಅರ್ಥ (ಪ್ರತಿಯೊಂದು ವಿಷಯದಲ್ಲಿ ಯಥಾಯೋಗ್ಯವಾಗಿರೋಣ). ೨. ಲಾಭಗಳು:—ಮಾನಸಿಕ, ಶಾರೀರಿಕ, ಮತ್ತು ನೈತಿಕ ಸುಧಾರಣೆಯಾಗುತ್ತದೆ; ಯಾವದೊಂದು ಕೆಲಸವನ್ನು ಮಾಡಲಿಕ್ಕೆ ಮನಸ್ಸು ಉತ್ಸಾಹಗೊಳ್ಳುತ್ತದೆ; ವ್ಯವಸ್ಥಿತವಾದ ವಿಚಾರಗಳು ಸುಲಭವಾಗಿ ನೆನಪಿನಲ್ಲಿ ಉಳಿಯುತ್ತವೆ; ಶರೀರವು ನಿರೋಗಿಯಾಗುವದು; ನಿಯಮಿತತನ, ಸಮಯನಿಷ್ಠತೆ, ಕರ್ತವ್ಯದಕ್ಷತೆ, ಪ್ರಾಮಾಣಿಕತನ, ಚಟಿವಟಿಕೆ ಮುಂತಾದ ಸದ್ಗುಣಗಳು ಸುಲಭಸಾಧ್ಯವಾಗುವವು. ೩. ಅವ್ಯವಸ್ಥೆಯಿಂದಾಗುವ ಹಾನಿಗಳು:— ಮನಸ್ಸು ಚಂಚಲವಾಗುತ್ತದೆ; ಯಾವ ಕೆಲಸವೂ ಸಕಾಲದಲ್ಲಿ ಆಗುವದಿಲ್ಲ; ಶರೀರಪ್ರಕೃತಿಯು ಕೆಡುತ್ತದೆ; ಆಲಸ್ಯ, ಅಪ್ರಾಮಾಣಿಕತನ,

ಮುಂತಾದ ದುರ್ಗುಣಗಳುಂಟಾಗುತ್ತವೆ. ೪. ರಾಜ್ಯಕಾರಭಾರದಲ್ಲಿಯೂ ಸೈನ್ಯದಲ್ಲಿಯೂ, ಹಡಗಪಡೆಯಲ್ಲಿಯೂ ಅದರ ಅತ್ಯಾವಶ್ಯಕತೆ. ಉದಾಹರಣೆ:- ವ್ಯವಸ್ಥಿತವಾಗಿ ಕವಾಯಿತು ಕಲಿತಂಥ ಕೇವಲ ಇನ್ನೂರು ಇಂಗ್ಲಿಷ ಶಿಪಾಯಿಗಳು ಅವ್ಯವಸ್ಥಿತವಾದ ಹಿಂದೀ ಜನರ ಐವತ್ತುಸಾವಿರ ದಂಡನ್ನು ಕ್ಷಣಾರ್ಧದಲ್ಲಿ ಸೋಲಿಸಿದರು. ೫. ಉಪಸಂಹಾರ:—ಪ್ರತಿಯೊಬ್ಬನು ವ್ಯವಸ್ಥಿತನಾಗಿರತಕ್ಕದ್ದು.

೮. **ಶೌರ್ಯ**:— ೧. ಅರ್ಥ :—ಯುದ್ಧದಂಥ ಪ್ರಸಂಗಗಳಲ್ಲಿ ಹಿಂಜರಿಯದೆ, ಶತ್ರುಗಳ ಕೂಡ ಹೋರಾಡುವಾಗ ತೋರಿಸಲ್ಪಡುವ ಧೈರ್ಯ. ೨. ಅದಕ್ಕೆ ಅವಶ್ಯವಾಗಿ ಬೇಕಾದ ಗುಣಗಳು:— ಸ್ವಾರ್ಥತ್ಯಾಗ, ಮನೋನಿಗ್ರಹ, ಕರ್ತವ್ಯನಿಷ್ಠೆ, ರಾಜನಿಷ್ಠೆ ಮುಂತಾದ ಗುಣಗಳು. ೩. ಶೂರರಾದವರು ಕರುಣಾಳುಗಳಿರುತ್ತಾರೆಂಬ ಬಗ್ಗೆ ಉದಾಹರಣೆಗಳು. ೪. ಶೌರ್ಯದಿಂದಾಗುವ ಲಾಭಗಳು:—ಸ್ವರಕ್ಷಣೆ, ಕುಟುಂಬರಕ್ಷಣೆ, ದೇಶರಕ್ಷಣೆ ಮುಂತಾದವುಗಳು. ೫. ಉಪಸಂಹಾರ:—ಪ್ರತಿಯೊಬ್ಬನು ಈ ಗುಣವನ್ನು ದೊರಕಿಸತಕ್ಕದ್ದು.

೯. **ಸ್ವಚ್ಛತೆ**:—೧. ಅರ್ಥ:—ನಾವಿರುವ ಮನೆ, ಅದರ ಸುತ್ತುಮುತ್ತಲಿನ ಭಾಗ, ನಮ್ಮ ಅನ್ನಪಾನಗಳು, ಉಡಿಗೆತೊಡಿಗೆಗಳು ಮುಂತಾದವುಗಳು ಅವಶ್ಯವಾಗಿ ನಿರ್ಮಲವಾಗಿರೋಣ. ೨. ಅವರಿಂದಾಗುವ ಲಾಭಗಳು:—ಮನಸ್ಸು ಶಾಂತತೆಯುಳ್ಳಿರುವದು; ಶರೀರವು ನಿರೋಗಿಯಾಗುವದು; ವ್ಯವಸ್ಥೆ, ಸಭ್ಯತನ ಮುಂತಾದ ಸದ್ಗುಣಗಳು ಹುಟ್ಟುವವು; ಮಾನವು ದೊರೆಯುವದು; ನಿರ್ಮಲರಾದವರನ್ನು ಎಲ್ಲರೂ ಪ್ರೀತಿಸುವರು. ೩. ಸ್ವಚ್ಛತೆಯು ನಿರ್ಮಲಾಂತಃಕರಣದ ಪುರಃಪತಾಕೆಯು; ಸ್ವಚ್ಛತೆಯೂ ಸಭ್ಯತನವೂ ಬಹುತರವಾಗಿ ಕೂಡಿರುತ್ತವೆ; ಅಂದರೆ ಸ್ವಚ್ಛನಾದವನು ಬಹುತರವಾಗಿ ಸಭ್ಯನಿರುವನು. ೪. ಉಪಸಂಹಾರ:—ಪ್ರತಿಯೊಬ್ಬನು ಈ ಗುಣವನ್ನು ಸಂಪಾದಿಸತಕ್ಕದ್ದು.

೧೦. **ಸ್ವದೇಶಾಭಿಮಾನ**:— ೧ ಅರ್ಥ:— ಸ್ವದೇಶದ ಸಲುವಾಗಿ ಅಭಿಮಾನವು; ಅಂದರೆ ಯಾವಾಗಲೂ ಸ್ವಂತ ದೇಶದ ಕಲ್ಯಾಣವನ್ನು, ಅಭಿವೃದ್ಧಿಯನ್ನೂ ಚಿಂತಿಸೋಣ. ೨. ಅದಕ್ಕೆ ಅವಶ್ಯವಾದ ಗುಣಗಳು:—ಆತ್ಮಸಂಯಮನ, ಸ್ವಾರ್ಥತ್ಯಾಗ, ಕರ್ತವ್ಯದಕ್ಷತೆ, ನೈತಿಕಧೈರ್ಯ, ರಾಜನಿಷ್ಠೆ

ಮುಂತಾದವುಗಳು. ೩. ಆ ಗುಣವಿಲ್ಲದಿದ್ದರೆ ಆಗುವ ಹಾನಿಗಳು—ಸ್ವಂತದ ಮೇಲೂ, ಸ್ವಂತದ ಕುಟುಂಬ, ಊರು, ದೇಶ, ರಾಷ್ಟ್ರ ಇವುಗಳ ಮೇಲೂ ವಿಪತ್ತುಗಳು ಬಂದು, ಅತಿನೀಚಾವಸ್ಥೆಯುಂಟಾಗುವದು. ೪. ಅದನ್ನು ಹೆಚ್ಚು ವ್ಯಕ್ತಪಡಿಸುವ ಪ್ರಸಂಗಗಳು—ದುರ್ಭಿಕ್ಷ, ಯುದ್ಧ ಮುಂತಾದವುಗಳು. ೫. ಉಪಸಂಹಾರ--ಪ್ರತಿಯೊಬ್ಬನಲ್ಲಿ ಈ ಗುಣವಿರತಕ್ಕದ್ದು.

೧೧. ಸ್ವಾವಲಂಬನ:— ೧. ಅರ್ಥ— ಕೇವಲ ಸ್ವಂತ ಪ್ರಯತ್ನವನ್ನೇ ಅವಲಂಬಿಸೋಣ; ಅಂದರೆ ಪರರ ಸಹಾಯವನ್ನಪೇಕ್ಷಿಸದಿರೋಣ. ೨. ಅದರಿಂದಾಗುವ ಲಾಭಗಳು—ಪರಾವಲಂಬಿಯಾಗುವ ಅಗತ್ಯವಿಲ್ಲ; ಎರಡನೆಯವರ ಅನಾದರಣೆಗಳನ್ನು ಸಹನಮಾಡಿಕೊಳ್ಳುವ ಪ್ರಸಂಗವು ಬರುವದಿಲ್ಲ; ಯಾವದೊಂದು ಕೆಲಸವನ್ನು ಮಾಡುವಾಗ ವಿಘ್ನವು ಬಂದರೂ, ಸ್ವಾವಲಂಬಿಯಾದವನು ತನ್ನ ಸ್ವಂತ ಬಲದಿಂದಲೇ ಆ ಕೆಲಸವನ್ನು ಕೊನೆಗಾಣಿಸುವನು; ಸ್ವಾವಲಂಬಿಯಾದವನ ಕೆಲಸವು ಕೈಗೂಡಿದರೆ, ಅವನಿಗೆ ಯಶಸ್ಸು ದೊರೆಯುವದು; ಒಂದುವೇಳೆ ಕೈಗೂಡದಿದ್ದರೂ, ಅವನು ಅಪಹಾಸ್ಯಕ್ಕೆ ಕಾರಣವಾಗುವದಿಲ್ಲ; ಅವನನ್ನು ಎಲ್ಲರೂ ನಂಬುತ್ತಾರೆ; ಅವನಿಗೆ ಮಾನ, ಕೀರ್ತಿ ಮುಂತಾದವುಗಳು ಸುಲಭಸಾಧ್ಯವಾಗುತ್ತವೆ. ೩. ಉಪಸಂಹಾರ—ಪ್ರತಿಯೊಬ್ಬನು ಸ್ವಾವಲಂಬಿಯಾಗತಕ್ಕದ್ದು.

೬ ನೇ ಪ್ರಕರಣ.

(೧) ವರ್ಣನಪರ ವಿಷಯಗಳು:— ಆನೆ, ಕುದುರೆ, ಹಂಸ, ಹುಲಿ. ಉಗಿಬಂಡಿಯು ಸ್ಟೇಶನಕ್ಕೆ ಬಂದ ಕೂಡಲೆ ಕಾಣುವ ನೋಟವು. ಉಪ್ಪು, ಗಡಿಯಾರ, ಸಕ್ಕರೆ, ಚಂದ್ರೋದಯ, ಸೂರ್ಯೋದಯ, ದಸರೆ, ದೀಪಾವಳಿ, ಮೊಹರಂ. ಧಬಧಬೆ, ನದಿ, ಸರೋವರ, ಪಂಡರಪುರ, ಸಿಂಹಗಡ ಕೋಟೆಗಳು. ವಸಂತಕಾಲ, ಶರತ್ಕಾಲ. ವಿದ್ಯಾರ್ಥಿಯು ವಾಸವಾಗಿದ್ದ ಸ್ಥಳ.

(೨) ಕಥನಪರ ವಿಷಯಗಳು:- ಅಹಲ್ಯಾಬಾಯಿ, ಚಾಂದಬೀಬಿ, ದಮಯಂತಿ, ಝಾಶೀಯ ಮಹಾರಾಣಿಯು. ಏಸುಕ್ರಿಸ್ತ, ತುಕಾರಾಮ, ಮಹಮ್ಮದ, ರಾಮದಾಸ. ಕ್ಲೈವ ಸಾಹೇಬ, ನಾನಾ ಫಡನವೀಸ, ರಣಜಿತಸಿಂಗ, ಶಿವಾಜಿ, ಹೈದರ ಅಲ್ಲಿ. ಖಡಕಿ, ಪಾಣಿಪತ, ಪ್ಲಾಸಿ, ಬಕ್ಸಾರ ಕಾಳಗಗಳು.

ಮಹಾಭಾರತ, ರಾಮಾಯಣ, ಕುರಾಣ, ಬೈಬಲ್ ಇವುಗಳ ತಾತ್ಪರ್ಯ

೩. ಚಿಂತನಪರ ವಿಷಯಗಳು:–ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು. ಆನೆಯಾಗಿ ಸೊಪ್ಪು ಮೇಯುವದಕ್ಕಿಂತ ಇರಿವೆಯಾಗಿ ಸಕ್ಕರೆ ಮೇಯುವದೇ ಲೇಸು. ಇಂದು ಮಾಡುವದಕ್ಕೆ ಮುಂದೆ ಅನ್ನಬೇಡ. ಎಲ್ಲ ಬಲ್ಲಪ್ಪ, ಕೇಳಿದರೆ ಕಲ್ಲಪ್ಪ. ಏರಿದವ ಇಳಿದಾನು. ಕನ್ನಡಿಯೊಳಗಿನ ಗಂಟಿ ನಕಿಂತಲೂ ಕೈಯೊಳಗಿನ ದಂಟೇ ಲೇಸು. ಕಲ್ಲಕ್ಕ ಕಡಬು ಒಗೆದರೆ, ದೇಮಕ್ಕ ದೋಸೆ ಒಗೆಯುತ್ತಾಳೆ. ಕಷ್ಟಪಡದೆ ಕೈಲಾಸ ಸಿಕ್ಕೀತೇ ? ಕೂಳಿಗೆ ಕಾಳಾಗ ಬೇಡ, ಭೂಮಿಗೆ ಭಾರಾಗಬೇಡ. ಗುಟ್ಟು ಸಾವಿರಾಳು ಪೆಟ್ಟು. ತಾಗಿದವ ಬಾಗಿಯಾನು. ತಾಳಿದವ ಬಾಳಿಯಾನು. ಬಲವಂತನೇ ಬಾಧ್ಯಸ್ಥನು. ಬುದ್ಧಿ ವಂತನೇ ಬಲವಂತನು. ಬೆಲ್ಲವಿದ್ದಕಡೆ ನೊಣ, ಧಡೇ ನಾಲ್ಕಕ್ಕೆ ಮಣ. ಭೀತಿಯೇ ಭೂತ. ಮನಸ್ಸಿದ್ದರೆ ಮುಗಲಿಗೆ ಕೈ ಹಚ್ಚಬಹುದು. ಮುಕ್ಕ ಮುಕ್ಕ ಬೀಸಿದರೆ ಮರವೆಲ್ಲ ತೀರುವದು. ಮೂರು ವರ್ಷದ ಬುದ್ಧಿ ನೂರು ವರ್ಷಗಳ ತನಕ ಯಾರಂತೆ ಅಂದರೆ ಊರಂತೆ. ರಟ್ಟೇ ಮುರಿದು ರೊಟ್ಟೀ ತಿನ್ನಬೇಕು. ಶಕ್ತಿಗಿಂತ ಯುಕ್ತಿಯೇ ಲೇಸು. ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು.

೭ನೇ ಪ್ರಕರಣ.

ಪತ್ರವ್ಯವಹಾರ.

ಪತ್ರವ್ಯವಹಾರ.

- ೧. ಪ್ರಾಪಂಚಿಕ.
  - ೧. ಕುಟುಂಬದೊಳಗಿನವರ ಕೂಡ.
    - ೧. ಹಿರಿಯರ ಕೂಡ.
    - ೨. ಚಿಕ್ಕವರ ಕೂಡ.
  - ೨. ಕುಟುಂಬೇತರ ಜನರ ಕೂಡ.
- ೨. ವ್ಯಾವಹಾರಿಕ.
- ೩. ರಾಜಕೀಯ.
  - ೧. ಅಧಿಕಾರಿಗಳು ಅಧಿಕಾರಿಗಳ ಕೂಡ.
  - ೨. ಅಧಿಕಾರಿಗಳೂ ಪ್ರ ಗಳೂ ಪರಸ್ಪರರ ಕೂಡ.

ಉಪೋದ್ಘಾತ:— ಈ ದೇಶದಲ್ಲಿ ಇಂಗ್ಲಿಷ ವಿದ್ಯೆಯು ಪ್ರಸಾರವಾಗುತ್ತ ಹೋದಂದಿನಿಂದ ನಮ್ಮಲ್ಲಿಯ ವ್ಯಾವಹಾರಿಕ ಕಾರ್ಯಗಳಲ್ಲಿ ಎಷ್ಟೋ ಸ್ಥಿತ್ಯಂತರಗಳು ಕಂಡು ಬಂದಿರುತ್ತವೆ. ಅದರಂತೆಯೇ ಪತ್ರವ್ಯವಹಾರದಲ್ಲಿ ಸಹ ಎಷ್ಟೋ ಬದಲುಗಳಾಗಿರುವವು. ಹಿಂದುಸ್ತಾನದಲ್ಲಿ ಟಪಾಲಖಾತೆಯು ಪ್ರಾರಂಭವಾಗುವದಕ್ಕಿಂತ ಮೊದಲು ವ್ಯಕ್ತವಾಗುತ್ತಿದ್ದ ಪತ್ರವ್ಯವಹಾರಸಂಬಂಧದ ಜಾಗ್ರತೆಯು ಇತ್ತಿತ್ತಲಾಗಿ ಕಿಂಚಿತ್ತಾದರೂ ಉಳಿಯಲಿಲ್ಲೆಂದು ಹೇಳಬಹುದು. ಮೊದಲು ತಮ್ಮ ಇಷ್ಟಮಿತ್ರ ಮೊದಲಾದವರಿಗೆ ಪತ್ರ ಕಳುಹುವ ಅಗತ್ಯವು ವರ್ಷದಲ್ಲಿ ಒಂದೆರಡು ಸಾರೆಯೇ ಬರುತ್ತಿದ್ದದರಿಂದ, ಎಲ್ಲ ಜನರು ತಮ್ಮ ಪತ್ರಗಳನ್ನು ವಿಸ್ತಾರವಾಗಿ ಬರೆಯುತ್ತಿದ್ದರು. ಆಗ ಅವರು ಮಾನಾಪಮಾನ ಮುಂತಾದ ಸಂಗತಿಗಳಿಗೆ ಬಹಳೇ ಲಕ್ಷಗೊಡುತ್ತಿದ್ದದರಿಂದ, ಅವರ ಪತ್ರ ಬರೆಯುವ ಪದ್ಧತಿಯು ಈಗಿನಕಿಂತ ಹೆಚ್ಚು ನಿಯಮಿತವಾಗಿತ್ತೆಂದು ನಿರ್ವಿವಾದವಾಗಿ ಹೇಳಬಹುದು. ಇತ್ತಿತ್ತಲಾಗಿ ಪತ್ರವ್ಯವಹಾರದ ಮಾರ್ಗವು ಬಹಳೇ ಸುಲಭವಾಗಿರುವದರಿಂದ, ಜನರು ಅದರ ಸಂಬಂಧದ ನಿಯಮಗಳಿಗೆ ವಿಶೇಷವಾಗಿ ಲಕ್ಷಗೊಡುವದಿಲ್ಲ. ಸದ್ಯಕ್ಕೆ ಎರಡೇ ದುಡ್ಡಿಗೆ ದೊರಕುವ ಪೋಸ್ಟಕಾರ್ಡು ಹೊರಡುವ ಮೊದಲು ಪತ್ರ ಬರೆಯುವವರು ಪತ್ರ ಸ್ವೀಕರಿಸುವವರಿಗೆ ಯೋಗ್ಯವಾದ ಒಕ್ಕಣಿಕೆಗಳನ್ನೂ ಉಪಸಂಹಾರಗಳನ್ನೂ ಬರೆಯುತ್ತಿದ್ದರು. ಆದರೆ ಈಗ ಆ ಒಕ್ಕಣಿಕೆಗಳನ್ನು ಸಹ ಸಂಕ್ಷೇಪದಲ್ಲಿ ತಂದು, ಕುಟುಂಬೇತರ ಜನರಿಗೆ "**ವಿ. ವಿ.**" ಎಂಬೆರಡು ಅಕ್ಷರಗಳಿಂದ ಪ್ರತ್ರವನ್ನು ಆರಂಭಿಸುವದುಂಟು. ಕೆಲವರಿಗಂತೂ ಪತ್ರದ ಆರಂಭದಲ್ಲಿ "ರಾಜಶ್ರಿಯಾ ವಿರಾಜಿತ ರಾಜಮಾನ್ಯ ರಾಜಶ್ರೀ" ಎಂಬದಿದ್ದರೆ, ಕೊನೆಯಲ್ಲಿ "**ವಿನಂತಿ**" ಎಂದು ಬರೆಯತಕ್ಕದ್ದೋ, "**ವಿಜ್ಞಾಪನೆ**" ಎಂದು ಬರೆಯತಕ್ಕದ್ದೋ ಎಂಬದು ಗೊತ್ತಿರುವದಿಲ್ಲಾದ್ದರಿಂದ, ಅವರು "**ವಿ**" ಎಂಬ ಅಕ್ಷರವನ್ನಷ್ಟೇ ಬರೆದು ಪತ್ರವನ್ನು ಮುಗಿಸುತ್ತಾರೆ. ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯ ವಿಷಯಗಳಲ್ಲಿ ಪತ್ರವ್ಯವಹಾರದ ನಿಯಮಗಳನ್ನು ಸೇರಿಸದಿದ್ದರೆ, ಇಂದಿಗೆ ಅವುಗಳ ಹೆಸರು ಸಹ ಉಳಿಯುತ್ತಿದ್ದಿಲ್ಲ. ಹೀಗಾಗಬಾರದೆಂದು ನಾವು ಇದರಡಿಯಲ್ಲಿ ಪತ್ರವ್ಯವಹಾರದ ನಿಯಮಗಳನ್ನು ಕೆಲಮಟ್ಟಿಗೆ ಹೇಳಿರುವೆವು.

೧. ಪತ್ರವ್ಯವಹಾರವೂ ಅದರ ವಿಭಾಗಗಳೂ:— ಒಬ್ಬರ ಅಭಿಪ್ರಾಯಗಳು ಬೇರೊಬ್ಬರಿಗೆ ತಿಳಿಯುವದಕ್ಕಾಗಿ ಬರೆಯಲ್ಪಡುವ ಲೇಖ

ಗಳಿಗೆ ಪತ್ರವ್ಯವಹಾರವೆಂಬ ಹೆಸರು. ಮುಖ್ಯವಾಗಿ ಆಪ್ತ-ಇಷ್ಟರೂ, ಸ್ನೇಹಿ ತರೂ ಮೊದಲಾದವರ ಕ್ಷೇಮಸಮಾಚಾರವನ್ನು ತಿಳಿಕೊಳ್ಳುವದಕ್ಕಾಗಿಯೂ, ಕೊಡುಕೊಳ್ಳುವ ವ್ಯವಹಾರವು ನಡೆಯುವದಕ್ಕಾಗಿಯೂ, ಅರಸರ ಕೂಡಾಗ ಅರಸರ ಪ್ರತಿನಿಧಿಗಳ ಕೂಡಾಗಲಿ ರಾಜಕೀಯ ಕಾರ್ಯವು ಸಾಗುವದಕ್ಕಾ ಗಿಯೂ ಪತ್ರವ್ಯವಹಾರವು ಅತ್ಯವಶ್ಯವಾಗಿದೆ. ಆದ್ದರಿಂದ ಪತ್ರವ್ಯವಹಾರದ **ಪ್ರಾಪಂಚಿಕ, ವ್ಯಾವಹಾರಿಕ** ಮತ್ತು **ರಾಜಕೀಯ** ಎಂಬ ಮೂ ವಿಭಾಗಗಳನ್ನು ಮಾಡಬಹುದು.

೩. **ಪ್ರಾಪಂಚಿಕ ಪತ್ರವ್ಯವಹಾರ**:— ಪ್ರಪಂಚದಲ್ಲಿ ಆಪ್ತ ಇಷ್ಟರೂ, ಸ್ನೇಹಿತರೂ ಮೊದಲಾದವರ ಕ್ಷೇಮಸಮಾಚಾರವನ್ನು ತಿಳಿಸು ಲೇಖಗಳಿಗೆ **ಪ್ರಾಪಂಚಿಕ ಪತ್ರವ್ಯವಹಾರ** ಎಂದೆನ್ನುವರು. ಇದರ **ಕುಟುಂಬದೊಳಗಿನವರ ಕೂಡ, ಕುಟುಂಬೇತರ ಜನರ ಕೂಡ** ಹೀಗೆ ಎರಡು ವರ್ಗಗಳನ್ನು ಮಾಡಬಹುದು. ಕುಟುಂಬದೊಳಗಿನವರ ಕೂ ನಡಿಸುವ ಪತ್ರವ್ಯವಹಾರದಲ್ಲಿ ಸಹ **ಹಿರಿಯರ ಕೂಡ, ಚಿಕ್ಕವರ ಕೂಡ** ಎಂಬ ಎರಡು ಅವಾಂತರ ವರ್ಗಗಳನ್ನು ಕಲ್ಪಿಸಬಹುದು. ಮುಖ್ಯವಾಗಿ ಹಿರಿ ರೆಂದರೆ, ತಂದೆ, ತಾಯಿ, ಅಕ್ಕ, ಅಣ್ಣ, ಮಾವ ಮೊದಲಾದವರು. ಪತ್ರ ಸ್ವೀಕರಿಸತಕ್ಕವನ ಯೋಗ್ಯತೆಯಂತೆ ಅವನ ಹೆಸರಿನ ಹಿಂದೆ ಅವನ ಯೋಗ್ಯತ ಸೂಚಕ ಶಬ್ದಗಳನ್ನು (ಒಕ್ಕಣಿಕೆಗಳನ್ನು ಅಥವಾ ಬಿರುದುಗಳನ್ನು) ಬರೆಯು ಸಾಂಪ್ರದಾಯವುಂಟು. ತಂದೆ, ತಾಯಿ ಇವರಿಬ್ಬರು ಲೋಕದಲ್ಲಿ ಸರ್ವಜನ ಗಿಂತ-ಕಿಂಬಹುನಾ ದೇವರಿಗಿಂತ-ಹೆಚ್ಚಿನವರೆಂದು ಎಲ್ಲ ಮಾನವಪ್ರಾಣಿಗ ತಿಳುವಳಿಕೆಯುಂಟು. ಆದ್ದರಿಂದ ಇವರಿಬ್ಬರ ಒಕ್ಕಣಿಕೆ "**ತೀರ್ಥರೂಪ** (ಪುಣ್ಯೋದಕದಂತೆ ಇದ್ದಂಥ) ಎಂಬದಿರುತ್ತದೆ. ಆದರೆ ಇದರಲ್ಲಿ ಮುಖ್ಯವಾ ಹೆಂಗಸರ ಬಗ್ಗೆ ಲಕ್ಷವಲ್ಲಿಡತಕ್ಕದ್ದೇನೆಂದರೆ, ಅವರು ಸಧವೆಯರಿದ್ದರೆ **ಸೌಭಾಗ ವತಿ** ಎಂತಲೂ, ವಿಧವೆಯರಿದ್ದರೆ **ಗಂಗಾಭಾಗೀರಥಿ ಸಮಾನ** ಎಂತಲ ತೀರ್ಥರೂಪ ಈ ಶಬ್ದದ ಮುಂದೆ ಜೋಡಿಸಬೇಕು. **ರಾಜಮಾನ್ಯ-ರಾಜಶ್ರೀ** ಎಂಬ ಶಬ್ದಗಳನ್ನು ಯಾವತ್ತೂ ಪ್ರಾಪಂಚಿಕ ಒಕ್ಕಣಿಕೆಗಳಲ್ಲಿ ಹೆಸರಿಗೆ ಹೊಂ ಹಿಂದಿನ ಭಾಗದಲ್ಲಿ ಜೋಡಿಸತಕ್ಕದ್ದನ್ನು ಮರೆಯಬಾರದು. ತಂದೆತಾಯಿಗ ಳನ್ನುಳಿದು ಮಿಕ್ಕ ಬಳಗದೊಳಗಿನ ಎಲ್ಲ ಹಿರಿಯರಿಗೆ **ತೀರ್ಥಸ್ವರೂಪ** ಎಂ

ಆರಂಭದ ಭಾಗವನ್ನೂ, ರಾಜಮಾನ್ಯರಾಜಶ್ರೀ ಎಂಬ ಅಂತ್ಯಭಾಗವನ್ನೂ ಜೋಡಿಸತಕ್ಕದ್ದು. ಹೆಂಗಸರಿಗಾಗಿ ಮಾಡಿದ ಸೂಚನೆಯನ್ನು ಮರೆಯಬಾರದು.

ಚಿಕ್ಕವರಲ್ಲಿ ಮುಖ್ಯವಾಗಿ ಮಗ, ಮಗಳು, ತಮ್ಮ, ತಂಗಿ, ಸೊಸೆ ಮೊದಲಾದವರು ಬರುತ್ತಾರೆ. ಇವರಲ್ಲಿ ಸ್ವಂತ ಹೊಟ್ಟೆಯ ಮಕ್ಕಳಿಗೆ ಮಾತ್ರ **ಚಿರಂಜೀವ ವಿಜಯೀಭವ ರಾಜಮಾನ್ಯ ರಾಜಶ್ರೀ** ಎಂಬ ಒಕ್ಕಣಿಕೆಯನ್ನೂ ಮಿಕ್ಕವರಿಗೆ **ಚಿರಂಜೀವ ಸಮಾನ ರಾಜಮಾನ್ಯರಾಜಶ್ರೀ** ಎಂಬ ಒಕ್ಕಣಿಕೆಯನ್ನೂ ಬರೆಯಬೇಕು. ಹೆಣ್ಣುಮಕ್ಕಳನ್ನು ಕುರಿತು ಮೇಲೆ ಹೇಳಿದ ಸೂಚನೆಯನ್ನು ಮರೆಯಬಾರದು.

ಇನ್ನು ಕುಟುಂಬೇತರ(ಬಳಗದವರಲ್ಲದಂಥ)ಜನರ ಕೂಡ ನಡಿಸುವ ಪತ್ರವ್ಯವಹಾರದಲ್ಲಿ ಪತ್ರಸ್ವೀಕರಿಸತಕ್ಕವರ ಕುಲಾಧಿಕಾರವಿದ್ಯಾಸ್ಥಿತಿಗಳಿಗೆ ಅನುಸರಿಸಿ, ಈ ಕೆಳಗೆ ಬರೆದ ಒಕ್ಕಣಿಕೆಗಳ ಅವಯವಾರ್ಥವನ್ನು ಪರ್ಯಾಲೋಚಿಸಿ, ಆಯಾ ಒಕ್ಕಣಿಕೆಗಳನ್ನು ಅವರ ಹೆಸರಿನ ಹಿಂದೆ ಜೋಡಿಸತಕ್ಕದ್ದು. ಅವು ಯಾವವೆಂದರೆ, ಮಹಾರಾಜಶ್ರೀ, ಶ್ರೀಯುತ ರಾಜಶ್ರೀ, ರಾಜಮಾನ್ಯ ರಾಜಶ್ರೀ, ರಾಜಶ್ರೀಯೂ ವಿರಾಜಿತ ರಾಜಮಾನ್ಯ ರಾಜಶ್ರೀ, ಹರಿ (ಹರ) ಗುರುಭಕ್ತಿಪರಾಯಣ ರಾಜಮಾನ್ಯ ರಾಜಶ್ರೀ, ಮಹಾರಾಜ ಕೃಪಾಸಾಗರ ರಾಜಮಾನ್ಯ ರಾಜಶ್ರೀ ಇತ್ಯಾದಿ. ಪ್ರಾಪಂಚಿಕ ಪತ್ರವ್ಯವಹಾರದಲ್ಲಿ, ಪತ್ರ ಬರೆಯುವವರು ತಮ್ಮ ತಮ್ಮ ಕುಲದೇವರ ಇಲ್ಲವೆ ಇಷ್ಟದೇವತೆಯ ಪ್ರಸನ್ನತೆಗಾಗಿ ಪತ್ರದ ಶಿರೋಭಾಗದ ಮಧ್ಯದಲ್ಲಿ ಶ್ರೀಗಜಾನನ ಪ್ರಸನ್ನ, ಶ್ರೀಭುವನೇಶ್ವರೀ ಪ್ರಸನ್ನ, ಶ್ರೀದತ್ತ ಸಮರ್ಥ, ಶ್ರೀ ಸಿದ್ಧೇಶ್ವರ ಪ್ರಸನ್ನ, ಶ್ರೀಲಕ್ಷ್ಮೀವೆಂಕಟೇಶ ಪ್ರಸನ್ನ, ಮುಂತಾದ ಶುಭಸೂಚಕ ಶಬ್ದಗಳನ್ನು ಬರೆಯತಕ್ಕದ್ದು.

೪. **ವ್ಯಾವಹಾರಿಕ ಪತ್ರವ್ಯವಹಾರ**— ಪ್ರಪಂಚದಲ್ಲಿ ಪ್ರತಿಯೊಬ್ಬನಿಗೆ ಕೊಡುಕೊಳ್ಳುವ ಪ್ರಸಂಗವು ಬಂದೇ ಬರುತ್ತದೆ. ಇಂಥ ಪ್ರಸಂಗದಲ್ಲಿ ಒಬ್ಬರೊಬ್ಬರಿಗೆ ಬರಕೊಡುವ ಲೇಖಗಳಿಗೆ **ವ್ಯಾವಹಾರಿಕ ಪತ್ರವ್ಯವಹಾರ** ಎಂದೆನ್ನುವರು. ಇಂಥ ಲೇಖಗಳಲ್ಲಿ ಬರೆಯತಕ್ಕ ಒಕ್ಕಣಿಕೆಗಳನ್ನು ಮೇಲೆ ಹೇಳಿದಂತೆಯೇ ಉಪಯೋಗಿಸಬೇಕು. ಮಾತ್ರ ಬರಕೊಡುವವನ ಹೆಸರಿನ ಹಿಂದೆ, ಆ ಪತ್ರವು ಯಾವ ಸಂಬಂಧದಿಂದಿರುವದೋ ಆ ಹೆಸರನ್ನೂ, **ಬೇಸ್ತೇ** ಎಂಬ ಶಬ್ದವನ್ನೂ, ಬರಕೊಡುವವನ ಹೆಸರು, ತಂದೆಯ ಹೆಸರು, ಅಡ್ಡ

ಹೆಸರು, ಜಾತಿ, ಕಸಬು, ಊರು, ತಾಲೂಕು, ಜಿಲ್ಹಾ ಮುಂತಾದ ಸಂಗತಿಗಳನ್ನೂ ಬರೆದು, “ **ನಾನು ಬರಕೊಡುವ ... ಪತ್ರ ಏನೆಂದರೆ** ” ಎಂಬ ಶಬ್ದಗಳನ್ನೂ ಯಾವ ಪತ್ರದಲ್ಲಾದರೂ ಬರೆಯತಕ್ಕದ್ದು. ಮುಂದೆ ಕೊಡುಕೊಳ್ಳುವವರಲ್ಲಿ ಆದ ಕರಾರುಗಳನ್ನು ವಿಸ್ತಾರವಾಗಿ ಬರೆದು, ಕಡೆಯಲ್ಲಿ “ **ಎಂದು ಆತ್ಮ ಸಂತೋಷದಿಂದಲೂ ಪೂರ್ಣ ಎಚ್ಚರಿಕೆಯಿಂದಲೂ ಬರಕೊಟ್ಟ ... ಪತ್ರ, ಸಹಿ, ತಾರೀಖು**” ಎಂದು ಬರೆದು, ಪತ್ರ ಬರಕೊಡುವವನು ತನ್ನ ದಸ್ತೂರ ಸಹಿ ಮಾಡಬೇಕು. ಕೊನೆಯಲ್ಲಿ ಇಂಥ ವ್ಯವಹಾರವು ಆದದ್ದಕ್ಕಾಗಿ ಇಬ್ಬರ ಸಾಕ್ಷಿಗಳನ್ನು ಹಾಕಿಸಬೇಕು.

ವ್ಯಾವಹಾರಿಕ ಪತ್ರಗಳಲ್ಲಿ ಮುಖ್ಯವಾಗಿ ಬರುವ ಪತ್ರಗಳು ಯಾವವೆಂದರೆ, ಕರ್ಜಕತಬಿ. ಭಾಡೇಪತ್ರ, ಪಾವತೀಪತ್ರ, ಲಾವಣೀಪತ್ರ, ಕೋರಲಾವಣೀಪತ್ರ, ಇಳಬತ್ತೀಪತ್ರ, ತೋರಬತ್ತೀಪತ್ರ, ಕಬಜಾ ಬತ್ತೀಪತ್ರ, ಖರೀದೀಪತ್ರ, ಸೋಡಪತ್ರ, ದಾನಪತ್ರ, ದತ್ತಪತ್ರ, ಮೃತ್ಯುಪತ್ರ, ಇನಾಮಪತ್ರ, ಪ್ರಾಮಿಜರಿ ನೋಟು ಇತ್ಯಾದಿ.

೫. ರಾಜಕೀಯ ಪತ್ರವ್ಯವಹಾರ:— ಸರಕಾರೀ ಅಧಿಕಾರಿಗಳು ತಮ್ಮ ತಮ್ಮೊಳಗೆ ನಡಿಸುವ ಪತ್ರವ್ಯವಹಾರಕ್ಕೂ, ಪ್ರಜೆಗಳೂ ಸರಕಾರದವರೂ ಪರಸ್ಪರರಿಗೆ ಬರೆಯುವ ಲೇಖಗಳಿಗೂ **ರಾಜಕೀಯ ಪತ್ರವ್ಯವಹಾರ** ಎಂದೆನ್ನುವರು. ಇಂಥ ಲೇಖಗಳಲ್ಲಿ **ಅಧಿಕಾರಿಗಳು ಪರಸ್ಪರರಿಗೆ ಬರೆಯುವ ಲೇಖಗಳೂ, ಪ್ರಜೆಗಳೂ ಅಧಿಕಾರಿಗಳೂ ಪರಸ್ಪರರಿಗೆ ಬರೆಯುವ ಲೇಖಗಳೂ,** ಎಂಬ ಎರಡು ವಿಭಾಗಗಳನ್ನು ಮಾಡಬಹುದು. ಆಯಾ ಸರಕಾರೀ ಅಧಿಕಾರಿಗಳಿಗೆ ರಿಪೋರ್ಟು ಇಲ್ಲವೆ ಅರ್ಜಿಗಳನ್ನು ಮಾಡುವಾಗ, ಅವರವರಿಗೆ ಬರೆಯುತಕ್ಕ ಬಿರುದುಗಳನ್ನು ಮರೆಯಬಾರದು. **ರಾವ ಬಾಹದ್ದೂರ, ರಾವಸಾಹೇಬ** ಈ ಬಿರುದುಗಳನ್ನು ಹಿಂದೂ ಅಧಿಕಾರಿಗಳ ಸಲುವಾಗಿಯೂ, **ಖಾನ ಬಾಹದ್ದೂರ, ಖಾನಸಾಹೇಬ** ಈ ಬಿರುದುಗಳನ್ನು ಮುಸಲಮಾನೀ—ಪಾರ್ಶೀ ಅಧಿಕಾರಿಗಳ ಸಲುವಾಗಿಯೂ **ಮೋಹರಬಾನ** ಈ ಬಿರುದನ್ನು ಯುರೋಪಿಯನ್ ಅಧಿಕಾರಿಗಳ ಸಲುವಾಗಿಯೂ ಉಪಯೋಗಿಸತಕ್ಕದ್ದು.

ಫರ್ಸ್ಟಕ್ಲಾಸ ಸಬ್ ಜಜ್ಜ, ಡೆಪ್ಯುಟಿ ಕಲೆಕ್ಟರ, ಫರ್ಸ್ಟಕ್ಲಾಸ ಮ್ಯಾಜಿ

ಸ್ಪೇಟ, ರೆವ್ಹಿನ್ಯು ಕಮಿಶನರರ ನೇಟಿವ್ಹ ಅಸಿಸ್ಟಂಟ, ಪೋಲಿಟಿಕಲ್ ಏಜಂಟನ ನೇಟಿವ್ಹ ಅಸಿಸ್ಟಂಟ, ಸ್ಮಾಲಕಾಜ ಕೋರ್ಟಿನ ಜಜ್ಜ, ಮೊದಲಾದ ಅಧಿಕಾರಿಗಳ ಸಲುವಾಗಿ ಅವರವರ ಜಾತಿಗಳಿಗನುಸರಿಸಿ ರಾವಬಾಹದ್ದೂರ ಇಲ್ಲವೆ ಖಾನಬಾಹದ್ದೂರ ಎಂಬ ಬಿರುದನ್ನು ಬರೆಯುತಕ್ಕದ್ದು.

ಮೊದಲನೇ ವರ್ಗದವರನ್ನು ಬಿಟ್ಟು ಉಳಿದ ಸಬಾರ್ಡಿನೇಟ ಜಜ್ಜ, ಮಾಮಲೇದಾರ, ಡೆಪ್ಯುಟ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ಹೆಡ್ ಅಕಾವುಂಟಂಟ, ಪೋಲೀಸ ಇನ್‌ಸ್ಪೆಕ್ಟರ, ರೆಜಿಸ್ಟ್ರೇಶನ್ ಇನ್‌ಸ್ಪೆಕ್ಟರ, ಕಸ್ಟಮ ಹಾಗು ಅಬಕಾರೀ ಖಾತೆಗಳೊಳಗಿನ ೧೫೦ ರೂಪಾಯಿಗಿಂತ ಹೆಚ್ಚು ಸಂಬಳವುಳ್ಳ ನೇಟಿವ್ಹ ಅಧಿಕಾರಿಗಳು ಮೊದಲಾದ ಅಧಿಕಾರಿಗಳ ಸಲುವಾಗಿ ಅವರವರ ಜಾತಿಗಳಿಗನುಸರಿಸಿ ರಾವಸಾಹೇಬ ಇಲ್ಲವೆ ಖಾನಸಾಹೇಬ ಎಂಬ ಬಿರುವನ್ನು ಬರೆಯುತಕ್ಕದ್ದು.

ಪ್ರಜೆಗಳು ಸರಕಾರೀ ಅಧಿಕಾರಿಗಳ ಕೂಡ ರಾಜಕೀಯ ಲೇಖಗಳನ್ನು (ಅರ್ಜಿಗಳನ್ನು) ಬರೆಯುವಾಗ, ಶಿರೋಭಾಗವಲ್ಲಿ "ಇಂಡಿಯಾ ಬಾದಶಹ ಸರಕಾರಕ್ಕೆ" ಎಂಬದನ್ನು ಬರೆದು, ಆ ಬಳಿಕ ಅವರ ಬಿರುದನ್ನು ಬರೆದು, ಅರ್ಜದಾರ ಎಂದು ಆರಂಭಕ್ಕೆ ಬರೆದು, ಇದರ ಮುಂದೆ ಅರ್ಜದಾರನ ಪೂರ್ಣ ಹೆಸರು, ಊರು, ತಾಲೂಕು, ಜಿಲ್ಹಾ ಮುಂತಾದವುಗಳನ್ನು ಬರೆದು, ಬಳಿಕ "ನಾನು ಬರಕೊಂಡ ವಿನಂತಿ ಅರ್ಜಿ ಏನಂದರೆ" ಎಂದು ಬರೆಯುತಕ್ಕದ್ದು.

೬. ಪತ್ರವ್ಯವಹಾರದ ಮಾದರಿಗಳು:—ಮೇಲೆ ಹೇಳಿದ ಒಕ್ಕಣಿಕೆಗಳ ಹೊರತು ಬೇರೆ ಒಕ್ಕಣಿಕೆಗಳಿಲ್ಲೆಂದು ಹೇಳಲಾಗದು. ಆದರೆ ಮುಖ್ಯವಾದಂಥ ಮತ್ತು ವ್ಯವಹಾರದಲ್ಲಿ ಉಪಯೋಗಿಸಲ್ಪಡುವಂಥ ಒಕ್ಕಣಿಕೆಗಳನ್ನಷ್ಟೇ ನಾವು ಮೇಲೆ ಬರೆದು ತೋರಿಸಿರುವೆವು. ಆ ಒಕ್ಕಣಿಕೆಗಳು ಹೆಚ್ಚು ಸ್ಪಷ್ಟವಾಗಿ ತಿಳಿಯಬೇಕೆಂದು ನಾವು ಬೇರೆ ಬೇರೆ ತರದ ಪತ್ರಗಳ ಮಾದರಿಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಬರೆದು ತೋರಿಸಿರುತ್ತೇವೆ.

ಅ:— ಪ್ರಾಪಂಚಿಕ ಪತ್ರಗಳು:—

(೧) ಮಗನು ತಂದೆಗೆ ಬರೆದ ಪತ್ರ.

ಶ್ರೀ ಗಜಾನನ ಪ್ರಸನ್ನ.

ಮುಕ್ಕಾಮ ... ...

ತಾರೀಖು ...

ತೀರ್ಥರೂಪ ರಾಜಮಾನ್ಯ ರಾಜಶ್ರೀ ... ಮುಕ್ಕಾಮ ... ಇವರಿಗೆ—

ಬಾಲಕ ... ನು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಈ ವರೆಗೆ ತಮ್ಮ ಆಶೀರ್ವಾದದಿಂದ ಇಲ್ಲಿ ಕ್ಷೇಮದಿಂದಿರುವೆನು. ನಾನು ಇಲ್ಲಿ ಬಂದ ಬಳಿಕ ತಮ್ಮ ಮಿತ್ರರಾದ ರಾಜಮಾನ್ಯ ರಾಜಶ್ರೀ ... ಇವರು ನನಗೆ ಇರುವದಕ್ಕೆ ಮನೆಯನ್ನೂ, ಊಟದ ಅನುಕೂಲತೆಯನ್ನೂ, ಜತೆಗೆ ಸಹಪಾಠಿಗಳನ್ನೂ ನೋಡಿಕೊಟ್ಟಿರುವರು. ಈ ದಿವಸ ಇಲ್ಲಿಯ ಹೈಸ್ಕೂಲವನ್ನು ಸೇರಿದೆನು. ನನ್ನ ಬಗ್ಗೆ ಕಿಂಚಿತ್ತಾದರೂ ಚಿಂತೆ ಮಾಡಬಾರದು. ನಾನು ಚನ್ನಾಗಿ ಅಭ್ಯಾಸ ಮಾಡಿ, ತಮಗೆ ಕೀರ್ತಿ ಕೊಡುವೆನು. ಬರುವ ಮೇ ತಿಂಗಳ ಸೂಟಿಯಲ್ಲಿ ತಮ್ಮೆಲ್ಲರ ಭೆಟ್ಟಿಗಾಗಿ ಬರುವೆನು. ಅಪ್ಪಣೆಯಾದಲ್ಲಿ ಬರುವಾಗ ಚಿರಂಜೀವ ... ನಿಗೆ ಆಟದ ಸಾಮಾನುಗಳನ್ನು ತರುವೆನು. ಹೆಚ್ಚಿಗೆ ಬರೆಯಲು ಬಾಲಕನು ಶಕ್ತನಲ್ಲ. ಇತಿ ವಿಜ್ಞಾಪನೆ.

ತಮ್ಮ ಬಾಲಕ,

(ಹೆಸರು)..................

(೨) ತಂದೆಯು ಮಗನಿಗೆ ಬರೆದ ಪತ್ರ.

ಶ್ರೀ ಗಜಾನನ ಪ್ರಸನ್ನ.

ಮುಕ್ಕಾಮು ... ...

ತಾರೀಖು ... ...

ಚಿರಂಜೀವ ವಿಜಯೀಭವ ರಾಜಮಾನ್ಯ ರಾಜಶ್ರೀ ... ಮುಕ್ಕಾಮು...ಇವನಿಗೆ—

ಅನೇಕ ಆಶೀರ್ವಾದಗಳು. ದೇವರ ಅನುಗ್ರಹದಿಂದ ಇಲ್ಲಿ ಯಾವತ್ತೂ ಕ್ಷೇಮ. ನಿನ್ನ ಕ್ಷೇಮಸಮಾಚಾರವನ್ನು ಮೇಲಿಂದ ಮೇಲೆ ತಿಳಿಸುತ್ತಿರಬೇಕು. ತರುವಾಯ ನಿನ್ನ ಪತ್ರವನ್ನು ಓದಿ ನಮ್ಮೆಲ್ಲರಿಗೂ ಆನಂದವಾಯಿತು. ನೀನು ನಿನ್ನ ಪ್ರಕೃತಿಯನ್ನು ಚನ್ನಾಗಿಟ್ಟುಕೊಂಡು, ನಿನ್ನ ಸಹಪಾಠಿಗಳ ಕೂಡ ಚನ್ನಾಗಿ ಅಭ್ಯಾಸ ಮಾಡಿ.ಸದ್ವರ್ತನವನ್ನು ಕಾಯ್ದುಕೊಂಡು,ನಮ್ಮೆಲ್ಲರನ್ನು ಆನಂದಗೊಳಿಸಬೇಕು. ಅನುಕೂಲವಾದಲ್ಲಿ ನಿನ್ನ ಭೆಟ್ಟಿಗಾಗಿ ಬರುವೆನು. ಇತಿ ಆಶೀರ್ವಾದ.

(ಹೆಸರು)... ... ...

(೩) ಸೋದರಳಿಯನು ಮಾವನಿಗೆ ಬರೆದ ಪತ್ರ.

ಶ್ರೀ ಸಿದ್ಧೇಶ್ವರ ಪ್ರಸನ್ನ.

ಮುಕ್ಕಾಮು ... ...

ತಾರೀಖು ... ...

ಶೀರ್ಘಸ್ವರೂಪ ರಾಜಮಾನ್ಯ ರಾಜಶ್ರೀ ... ಮುಕ್ಕಾಮು ... ಇವರಿಗೆ—

ಚಿರಂಜೀವ ಸಮಾನ ... ಮಾಡುವ ಶಿರಸಾಷ್ಟಾಂಗ ನಮುಸ್ಕಾರಗಳು. ತಮ್ಮ ಆಶೀರ್ವಾದದಿಂದ ಇಲ್ಲಿ ಯಾವತ್ತು ಕ್ಷೇಮ. ತಮ್ಮ ಕ್ಷೇಮ ಸಮಾಚಾರವನ್ನು ತಿಳಿಸುತ್ತಿರಬೇಕು. ತರುವಾಯ—ಬರುವ ಶ್ರಾವಣ ಶುದ್ಧ ೧೫ ನೇ ದಿವಸ ಈ ಊರ ಶಂಭುಲಿಂಗನ ರಥೋತ್ಸವವಾಗುವದು. ಕಾರಣ ತಾವು ತಮ್ಮ ಚಿರಂಜೀವಿಗಳೊಡನೆ ಬಂದು ನಮ್ಮೆಲ್ಲರನ್ನು ಆನಂದಪಡಿಸಬೇಕೆಂದು ಬಯಸುವೆನು. ಇತಿ ಬಿನ್ನಹ.

ತಮ್ಮ,

(ಹೆಸರು) ... ...

(೪) ಸಮಾನಸ್ಕಂಧ ಮಿತ್ರರಿಗೆ ಬರೆಯುವ ಪದ್ಧತಿ.

ಶ್ರೀ ರಾಮ ಪ್ರಸನ್ನ.

ಮುಕ್ಕಾಮು ... ...

ತಾರೀಖು ... ...

ರಾಜಮಾನ್ಯ ರಾಜಶ್ರೀ ... ಮುಕ್ಕಾಮು ... ಇವರಿಗೆ—

ತಮ್ಮ ಸ್ನೇಹಿತನಾದ ... ... ಮುಕ್ಕಾಮು ... ಈತನು ಮಾಡುವ ಶಿರಸಾಷ್ಟಾಂಗ ನಮುಸ್ಕಾರ. ವಿನಂತಿ ವಿಶೇಷ. ಇಲ್ಲಿ ಯಾವತ್ತು ಕ್ಷೇಮ. ತಮ್ಮ ಕ್ಷೇಮವನ್ನು ತಿಳಿಸುತ್ತಿರಬೇಕು. ತರುವಾಯ ... ಇತ್ಯಾದಿ. ಲೋಭವಿರಲಿ. ಇತಿ ವಿನಂತಿ.

ತಮ್ಮ ಸ್ನೇಹಾಭಿಲಾಷಿ,

ಹೆಸರು ... ...

(೫) ಗಂಡನು ಹೆಂಡತಿಗೆ ಬರೆಯುವ ಪದ್ಧತಿ.

ಶ್ರೀ ಲಕ್ಷ್ಮೀ ವೆಂಕಟೇಶ ಪ್ರಸನ್ನ.

ಮುಕ್ಕಾಮು ... ...

ತಾರೀಖು ... ...

ಕುಂಕುಮ ಸೌಭಾಗ್ಯವತಿಗೆ ಮಾಡುವ ಅನೇಕ ಆಶೀರ್ವಾದಗಳು. ಶ್ರೀ ಹರಿಯ ಕೃಪೆಯಿಂದ ನಾವು ಇಲ್ಲಿ ಎಲ್ಲರೂ ಕ್ಷೇಮ ... ... ಇತ್ಯಾದಿ ... ಇತಿ ಆಶೀರ್ವಾದಗಳು.

(ಹೆಸರು) ... ...

(೬) ಹೆಂಡತಿಯು ಗಂಡನಿಗೆ ಬರೆಯುವ ಪದ್ಧತಿ.

ಶ್ರೀ ಅಂಬಾಭುವನೇಶ್ವರೀ ಪ್ರಸನ್ನ.

ಮುಕ್ಕಾಮು ... ...

ತಾರೀಖು ... ...

ಮಂಗಲಸೂತ್ರಸ್ವರೂಪರಾದ ರಾಜಮಾನ್ಯ ರಾಜಶ್ರೀ ... ... ಮುಕ್ಕಾಮು ... ... ಇವರ ಪಾದಪದ್ಮಗಳಿಗೆ—

ತಮ್ಮ ಸೇವಾತತ್ಪರಳಾದ ... ಪತ್ನಿಯು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಈ ವರೆಗೆ ತಮ್ಮ ಆಶೀರ್ವಾದದಿಂದ ಇಲ್ಲಿ ನಾವೆಲ್ಲರೂ ಕ್ಷೇಮ. ತಮ್ಮ ಕ್ಷೇಮವನ್ನು ಮೇಲಿಂದ ಮೇಲೆ ತಿಳಿಸಬೇಕೆಂದು ಸವಿನಯ ಪ್ರಾರ್ಥಿಸುತ್ತೇನೆ. ತರುವಾಯ ... ... ಇತ್ಯಾದಿ. ಇತಿ ವಿಜ್ಞಾಪನೆ.

ತಮ್ಮ ವಿಧೇಯಳಾದ,

(ಹೆಸರು) ... ...

(೭) ಉಪನಯನ (ಮುಂಜಿ) ಪತ್ರಿಕೆ ಬರೆಯುವ ಪದ್ಧತಿ.

ಶ್ರೀಗುರು ಪ್ರಸನ್ನ.

ಮಹಾರಾಜಮಾನ್ಯ ರಾಜಶ್ರೀ ... ... ಮುಕ್ಕಾಮು ... ... ಇವರಿಗೆ— ಕೃತಾನೇಕ ಶಿರಸಾಷ್ಟಾಂಗ ನಮಸ್ಕಾರ. ವಿನಂತಿ ವಿಶೇಷ—ಉಭಯ ಕುಶಲೋಪರಿ. ಸಾಂಪ್ರತ ಶ್ರೀಹರಿ-ಗುರುಗಳ ಕೃಪೆಯಿಂದ ನಮ್ಮ ಮನೆಯಲ್ಲಿ ನಮ್ಮ... ... ಆದ ಚಿರಂಜೀವ ... ಈತನ ವ್ರತಬಂಧ ಇದೇ ಸಂವತ್ಸರದ ... ಮಾಸ, ... ತಿಥಿ ... ವಾರ (ತಾರೀಖು ...) ದಿವಸ ... ಗಳಿಗೆ, ಈ ಶುಭಮುಹೂರ್ತವಲ್ಲಿ ... ಸ್ಥಳದಲ್ಲಿ ಮಾಡಬೇಕೆಂದು ನಿಶ್ಚಯಿಸಿದೆ. ಕಾರಣ ತಾವು ಕುಟುಂಬ-ಪರಿವಾರದೊಡನೆ ಅಗತ್ಯವಾಗಿ ಬಂದು, ಈ ಶುಭಕಾರ್ಯವನ್ನು ನೆರವೇರಿಸಬೇಕೆಂದು ವಿನಂತಿಯಿದೆ. ತಮ್ಮ ಆಗಮನದಿಂದ ಈ ಕಾರ್ಯಕ್ಕೆ ವಿಶೇಷ ಶೋಭೆಯುಂಟಾಗುವದು.

(ಸ್ಥಳ.........
ತಾರೀಖು......

ತಮ್ಮ ಕೃಪಾಭಿಲಾಷಿ,
(ಹೆಸರು)...........

(೮) ಲಗ್ನಪತ್ರಿಕೆ ಬರೆಯುವ ಪದ್ಧತಿ.

ಶ್ರೀ ಜಗದಂಬಾ ಪ್ರಸನ್ನ.

ಮಹಾರಾಜಮಾನ್ಯ ರಾಜಶ್ರೀ ... ಮುಕ್ಕಾಮು ... ಇವರಿಗೆ—ಕೃತಾನೇಕ

ಶಿರಸಾಷ್ಟಾಂಗ ನಮಸ್ಕಾರ-ವಿನಂತಿ ವಿಶೇಷ. ಉಭಯ ಕುಶಲೋಪರಿ. ಸಾಂಪ್ರತ ಶ್ರೀಹರಿ ಗುರುಗಳ ಕೃಪೆಯಿಂದ ನಮ್ಮ ಮನೆಯಲ್ಲಿ ನಮ್ಮ ... ಆದ ಚಿರಂಜೀವ ರಾಜಶ್ರೀ ... ಈತನ ವಿವಾಹವನ್ನು ಇದೇ ಸಂವತ್ಸರದ ... ಮಾಸ ... ತಿಥಿ ... ವಾರ, (ತಾರೀಖು ...) ದಿವಸ ... ಗಳಿಗೆ, ಈ ಶುಭಮುಹೂರ್ತದಲ್ಲಿ ... ಸ್ಥಳದಲ್ಲಿ ಮಾಡಬೇಕೆಂದು ನಿಶ್ಚಯಿಸಿದೆ. ಶರೀರಸಂಬಂಧ ರಾಜಮಾನ್ಯ ರಾಜಶ್ರೀ ... ಇವರ ... ಆದ ಚಿರಂಜೀವಿ ಸೌಭಾಗ್ಯ ಕಾಂಕ್ಷಿಣಿ ... ಇವಳನ್ನು ವಧು ವನ್ನಾಗಿ ನಿಶ್ಚಯಿಸಿರುವೆವು. ಕಾರಣ ತಾವು ಕುಟುಂಬ-ಪರಿವಾರದೊಡನೆ ಅಗತ್ಯ ವಾಗಿ ಬಂದು, ವಧೂ-ವರರನ್ನು ಆಶೀರ್ವದಿಸಿ, ಈ ಶುಭಕಾರ್ಯವನ್ನು ನೆರವೇರಿಸಬೇಕೆಂದು ವಿನಂತಿಯಿದೆ. ತಮ್ಮ ಆಗಮನದಿಂದ ಈ ಕಾರ್ಯಕ್ಕೆ ವಿಶೇಷ ಶೋಭೆಯುಂಟಾಗುವದು.

ಸ್ಥಳ............	ತಮ್ಮ ಕೃಪಾಭಿಲಾಷಿ,
ತಾರೀಖು	(ಹೆಸರು) ....

ಟಿಪ್ಪಣಿ:—ಮುಂಜಿ, ಲಗ್ನ ಮುಂತಾದ ಶುಭಕಾರ್ಯಗಳ ಪತ್ರಗಳಿಗೆ ಅರಿಸಿಣ ಕುಂಕುಮ ಹಚ್ಚತಕ್ಕದ್ದು.

೩:—ವ್ಯಾವಹಾರಿಕ ಪತ್ರಗಳು:—

(೧). ಕರ್ಜ ಕತಬಿ (ಸಾಲದ ಪತ್ರ).

ರಾ. ರಾ. ... ಜಾತಿ ... ಕಸಬು ... ವಯಸ್ಸು ... ಸಾಕೀನ...ಇವರಿಗೆ—

ಕರ್ಜಕತಬಿ ಬೇಸ್ಮಿ-(ಹೆಸರು)...ಜಾತಿ...ಕಸಬು...ವಯಸ್ಸು...ಸಾಕಿನ ...ನಾನು ಬರಕೊಟ್ಟ ಕರ್ಜಕತಬಿ ಏನಂದರೆ—ನನ್ನ ಗೃಹಕೃತ್ಯದ ಅಡಚಣಿ ಮೂಲಕ ನಿಮ್ಮ ಕಡೆಯಿಂದ ಈ ದಿವಸ ರೋಖ...ರೂಪಾಯಿ (ಅಕ್ಷರದಲ್ಲಿ)... ರೂಪಾಯಿ ಸಾಲಾ ತೆಗೆದುಕೊಂಡಿರುತ್ತೇನೆ. ಬಡ್ಡಿಯ ದರ ಪ್ರತಿ ತಿಂಗಳಿಗೆ ಒಂದು ರೂಪಾಯಿಗೆ ..ಪೈ ಯಂತೆ ಕರಾರುಮಾಡಿರುತ್ತೇನೆ. ಇದಕ್ಕೆ ಮುದ್ದತು ಈ ಹೊತ್ತಿನಿಂದ...ತಿಂಗಳಿಗೆ ನಿಮ್ಮ ಅಸಲು, ಆ ಅಸಲಿಗೆ ಆದಷ್ಟು ಬಡ್ಡೀ ಸಹಿತ ಒಟ್ಟು ರೂಪಾಯಿಗಳನ್ನು ಕೊಟ್ಟು, ಈ ಕತಬಿ ತಿರಿಗಿ ಒಯ್ಯುತ್ತೇನೆ. ಒಂದುವೇಳೆ ಮೇಲಿನ ಮುದ್ದತಿಗೆ ಸರಿಯಾಗಿ ಸದರ ರೂಪಾಯಿ ಕೊಡದಿದ್ದರೆ, ಮುಂದೆ ನಡೆದ ಮಿತಿಯ ವರೆಗೆ ಮೇಲಿನ ಕರಾರಿನಂತೆ ಅಸಲು ಬಡ್ಡೀಸಹಿತ ಕೊಡು ತ್ತೇನೆ. ಇದಕ್ಕೆ ತಪ್ಪಲಿಕ್ಕಿಲ್ಲ. ಎಂದು ಆತ್ಮಸಂತೋಷದಿಂದಲೂ ಪೂರ್ಣ

ಎಚ್ಚರಿಕೆಯಿಂದಲೂ ಬರಕೊಟ್ಟ ಕರ್ಜಕತಬಿ-ಸಹಿ-ತಾರೀಖು...ತಿಂಗಳು...
ಇಸವಿ...

(ಸಹಿ)......................ದ|| ಖು||

ಸಾಕ್ಷಿ.

೧, (ಸಹಿ)...............ದ|| ಖು|| ೧ (ಸಹಿ)...............ದ|| ಖು||

ಟಿಪ್ಪಣಿ:—ಕರ್ಜಕತಬಿ ಮತ್ತು ತೋರಬಕ್ಕಿ ಪತ್ರಗಳಿಗೆ ಹಚ್ಚುವ ಸ್ಟಾಂಪು.

				ರೂ. ಆ. ಪೈ.	
೧ ರೂ.	ಮೇಲೆ	೧೦ ರೂ.	ವರೆಗೆ	೦—೨—೦	ಮುಂದೆ ೧೦೦೦ ರೂ. ವರೆಗೆ ಪ್ರತಿಒಂದು ನೂರಕ್ಕೆ ಅಥವಾ ಅದರ ಭಾಗಕ್ಕೆ ೧೨ಆಣೆ ಯಂತೆ. ೧೦೦೦ ರೂ. ಮೀರಿದನಂತರ ಪ್ರತಿ ೫೦೦ ರೂ. ಅಥವಾ ಅದರ ಭಾಗಕ್ಕೆ ೩ರೂ. ೧೨ ಆಣೆ ಯಂತೆ.
೧೧	,,	೫೦	,,	೦—೪—೦	
೫೧	,,	೧೦೦	,,	೦—೮—೦	
೧೦೧	,,	೨೦೦	,,	೧—೦—೦	
೨೦೧	,,	೪೦೦	,,	೨—೪—೦	

(೨). ಭಾಡೇಪತ್ರ.

ರಾ. ರಾ. ......ಸಾಕೀನ......ಇವರಿಗೆ—

ಭಾಡೇಪತ್ರ ಬೇಸ್ಮಿ. (ಹೆಸರು)...ಸಾಕೀನ...ನಾನು ಬರಕೊಟ್ಟ ಭಾಡೇ ಪತ್ರ ಏನಂದರೆ,...ಜಿಲ್ಲಾ...ತಾಲೂಕ ಸಬ್ಬರೆಜಿಸ್ಟರ ಹದ್ದಿನಲ್ಲಿರುವ ಮನೆ—ಪೂರ್ವಕ್ಕೆ...ಪಶ್ಚಿಮಕ್ಕೆ...ದಕ್ಷಿಣಕ್ಕೆ..., ಉತ್ತರಕ್ಕೆ...ಈ ಚಕ್ಕಬಂದಿ ಮಧ್ಯದಲ್ಲಿರುವ ಮನೆ ನಿಮ್ಮ ಮಾಲಕೀಯ ವ ವಹಿವಾಟಿಯಲ್ಲಿರುವದು, ಒಂದು ವರ್ಷ ಅಂದರೆ ಸನ್...ಇಸವಿ...ತಿಂಗಳಿಂದ ಸನ್...ಇಸವಿ...ತಿಂಗಳದ ವರೆಗೆ ...ರೂಪಾಯಿಗೆ ಬಾಡಗಿ ಕೊಡುವ ಕರಾರು ಮಾಡಿ ಹಿಡಿದು, ನನ್ನ ತಾಬಾಕ್ಕೆ ತೆಗೆದುಕೊಂಡಿರುವೆನು. ಈ ಮುದ್ದತು ಆದ ಕೂಡಲೆ ನಿಮ್ಮ ಮನೆಯನ್ನು ನಿಮಗೆ ಬಿಟ್ಟುಕೊಡುತ್ತೇನೆ. ಈ ಮನೆಯು ಸಾಧಾರಣ ದಾಗದುಜಿ ನಾನೇ ನನ್ನ ಖರ್ಚಿನಿಂದ ಮಾಡುವೆನು. ಎಂದು ಆತ್ಮಸಂತೋಷದಿಂದ ಬರಕೊಟ್ಟ ಭಾಡೇಪತ್ರ-ಸಹಿ-ತಾರೀಖು ... ತಿಂಗಳು ... ಇಸವಿ ...

(ಸಹಿ)......................ದ|| ಖು||

ಸಾಕ್ಷಿ.

೧. (ಸಹಿ)...............ದ|| ಖು|| ೧. (ಸಹಿ)...............ದ|| ಖು||

ಟಿಪ್ಪಣಿ:—ಭಾಡೇಪತ್ರಕ್ಕೆ ಹಚ್ಚುವ ಸ್ಟಾಂಪು: —

೧. ಒಂದು ವರ್ಷಕ್ಕಿಂತ ಕಡಿಮೆ ಮುದ್ದತು ಇದ್ದಲ್ಲಿ, ಆ ಅವಧಿಯ ಖಾಸಗಿ ರಕಮಿನ ಮೇಲೆ ಕರ್ಜಕತಬಿಯು ದರದ ಪ್ರಕಾರ. ೨. ಒಂದು ವರ್ಷಕ್ಕೆ ಮೀರಿ ೩ ವರ್ಷ ಮೀರದಿದ್ದರೆ, ಒಂದು ವರ್ಷದ ಖಾಸಗಿ ರಕಮಿನ ಮೇಲೆ ಕರ್ಜಕತಬಿಯು ದರದ ಪ್ರಕಾರ. ೩. ಮೂರು ವರ್ಷದ ಕಿಂತ ಹೆಚ್ಚು ಇದ್ದರೆ, ಒಂದು ವರ್ಷದ ಖಾಸಗಿ ರಕಮಿನ ಮೇಲೆ ಖರೀದಿಪತ್ರದ ದರದ ಪ್ರಕಾರ.

(೩) ಪಾವತಿ ಬರಕೊಡುವದು

ರಾ. ರಾ.····· ಸಾಕೀನ······ಇವರಿಗೆ–

ಪಾವತಿ ಬೇಸ್ತ್ರ(ಹೆಸರು)···ಸಾಕೀನ···ನಾನು ಬರಕೊಡುವ ಪಾವತಿ ಏನಂದರೆ—···ಜಿಲ್ಹಾ···ತಾಲೂಕ···ಗ್ರಾಮದ ಸರ್ವೆ ನಂಬರು···ಈ ಜಮೀನಿಯು ಸನ್···ನೇ ಇಸವಿಯ ಬಾಬತು ನಿಮ್ಮಿಂದ ಬರತಕ್ಕ ಲಾವಣೀ ಹಣ ರೂಪಾಯಿ··· (ಅಕ್ಷರದಲ್ಲಿ) ··· ರೂಪಾಯಿಗಳು ನೀವು ಕೊಟ್ಟಿದ್ದು ನನಗೆ ರೋಖ ಮುಟ್ಟಿದವು. ಎಂದು ಬರಕೊಟ್ಟ ಪಾವತಿ. ಸಹಿ—ತಾರೀಖು······ ತಿಂಗಳು······ಇಸವಿ.

(ಸಹಿ)············ದ॥ ಖು॥

ಸಾಕ್ಷಿ.

೧ ನನ್ನ ಸಮಕ್ಷ ಹಣ ಕೊಟ್ಟಿತು. ೧ ನನ್ನ ಸಮಕ್ಷ ಹಣ ಕೊಟ್ಟಿತು.
(ಸಹಿ)··················ದ॥ ಖು॥ (ಸಹಿ)················ದ॥ ಖು॥

ಟಿಪ್ಪಣಿ:—ಪಾವತಿಯು ರಕಮು ೨೦ ರೂ. ಗಿಂತ ಹೆಚ್ಚಿಗಿದ್ದರೆ, ಒಂದು ಆಣೆಯ ಪೋಸ್ಟ ತಿಕೀಟು ಹಚ್ಚಬೇಕು. ಕಡಿಮೆ ಇದ್ದರೆ ಬೇಡ. ಸಾದಾ ಕಾಗದದ ಮೇಲೆ ಬರೆಯತಕ್ಕದ್ದು.

೪. ಲಾವಣಿ ಪತ್ರ.

ರಾ. ರಾ.······ಜಾತಿ···ಕಸಬು···ವಯಸ್ಸು···ಸಾಕೀನ·· ಇವರಿಗೆ—

ಲಾವಣಿಪತ್ರ ಬೇಸ್ತ್ರ— (ಹೆಸರು ······ಜಾತಿ···ಕಸಬು···ವಯಸ್ಸು··· ಸಾಕೀನ···ನಾನು ಬರಕೊಟ್ಟ ಲಾವಣಿಪತ್ರ ಏನಂದರೆ,···ಜಿಲ್ಹಾ··· ತಾಲೂಕ ···ಸಬ್ಬರಿಜಿಸ್ಟ್ರರ ಹದ್ದಿನ ಪೈಕಿ ಮೋಜೆ.. ದಲ್ಲಿ ನಿಮ್ಮ ಖಾತೇಮಟ್ಟ ನ ವಹಿವಾಟಿಯಲ್ಲಿರುವ ಜಮೀನು ೧. ಸರ್ವೆ ನಂಬರು···ಎಕರೆ··· ತರಮ ರೂಪಾಯಿ··· ಈ ಜಮೀನು ಒಂದು ವರ್ಷದ ವರೆಗೆ ಅಂದರೆ ಶಕೆ···ಸಂವತ್ಸರ··· ದ ಅಖೀರದ ವರೆಗೆ···ರೂಪಾಯಿಗೆ ಲಾವಣಿ ಕಬೂಲ ಮಾಡಿ ಹಿಡಿದಿರುವೆನು. ಸದರ ಜಮೀನಿಯು ಸರಕಾರೀ ಹಪ್ತೇದ ಹಣಾ ಹಪ್ತೇಬಂದೀ ಪ್ರಕಾರ ನಾನೇ ಸರಕಾ

ರಕ್ಕೆ ಮುಟ್ಟಿಸಿ, ಪಾವತಿ ತಕ್ಕೊಂಡು ನಿಮಗೆ ಕೊಡುವೆನು. ರೀತೀ ಪ್ರಕಾರ ಬಾಂದು-ಕಲ್ಲು ನಮೂನೆಯಂತೆ ನಾನೇ ಹಾಕಿಸುತ್ತೇನೆ. ಮುಂದಿನ ವರ್ಷ ನಿಮ್ಮ ಮರ್ಜಿ ಪ್ರಕಾರ ಲಾವಣಿ ಮಾಡಿಕೊಂಡರೆ, ನನ್ನದೇನೂ ಅಡ್ಡಿ ಇಲ್ಲ. ಎಂದು ಆತ್ಮಸಂತೋಷದಿಂದ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಬರಕೊಟ್ಟ ಲಾವಣಿಪತ್ರ ಸಹಿ-ತಾರೀಖು···ತಿಂಗಳು···ಇಸವಿ.

ಈ ಎಡಗೈ ಹೆಬ್ಬೆರಳಿನ ಗುರ್ತು, (ಹೆಸರು) ... ಇವನದು ಅದೆ.

(ಸಹಿ)... ....ದ॥ ಖು॥

ಸಾಕ್ಷಿ.

೧ ಸದರ ಕರಾರು ನನ್ನ ಸಮಕ್ಷ ಆಗಿದೆ. ೧ ಸದರ ಕರಾರು ನನ್ನ ಸಮಕ್ಷ ಆಗಿದೆ.

(ಸಹಿ)...................... ದ॥ ಖು॥ (ಸಹಿ)..................ದ॥ ಖು॥

(೫) ಕೋರಲಾವಣಿ ಪತ್ರ.

ರಾ. ರಾ. ······ಜಾತಿ······ಕಸಬು······ವಯಸ್ಸು···ಸಾಕೀನ···ಇವರಿಗೆ—

ಕೋರಲಾವಣಿ ಪತ್ರ ಬೇಸ್ಮಿ-(ಹೆಸರು)···ಜಾತಿ···ಕಸಬು···ವಯಸ್ಸು ···ಸಾಕೀನ···ನಾನು ಬರಕೊಡುವ ಕೋರಲಾವಣಿ ಪತ್ರ ಏನಂದರೆ, ಜಿಲ್ಲಾ··· ತಾಲೂಕ···ಸಬ್ಬರಿಜಿಸ್ಟರ ಹದ್ದಿನ ಪೈಕಿ ಮೋಜೆ···ದಲ್ಲಿ ನಿಮ್ಮ ಖಾತೇದ್ದು ಮತ್ತು ವಹಿವಾಟಿಯುಲ್ಲಿರುವ ಜಮೀನು ರಿ. ಸ. ನಂಬರು···ಎಕರೆ···ತರಮು ರೂಪಾಯಿ... ಈ ಜಮೀನು ಈ ವರ್ಷ ಅಂದರೆ ತಾರೀಖು···ತಿಂಗಳು···ಇಸ ವಿಯಿಂದ ತಾರೀಖು···ತಿಂಗಳು···ಇಸವಿ ವರೆಗೆ ಕೋರಲಾವಣಿ ಹಿಡಿದು, ನನ್ನ ತಾಬಾಕ್ಕೆ ತೆಗೆದುಕೊಂಡಿರುತ್ತೇನೆ. ಹೊಲದಲ್ಲಿ ನಿಮ್ಮ ಹೇಳಿಕೆಯಂತೆ ಕಾಳು ಬಿತ್ತಿ, ರೀತೀಪ್ರಕಾರ ಬದಕು ಮಾಡಿ, ನಿಮ್ಮ ಅರ್ಧ ಮಾಹಸೂಲು ನಿಮಗೆ ಕೊಡುತ್ತೇನೆ. ಈ ಜಮೀನಿಯ ಸರಕಾರೀ ಹಪ್ತೆ ನೀವೇ ಕೊಡಬೇಕು. ರೀತೀ ಪ್ರಕಾರ ಬಾಂದು-ಕಲ್ಲು ನಾನೇ ದುರುಸ್ತು ಮಾಡುತ್ತೇನೆ. ಮುಂದಿನ ವರ್ಷ ನಿಮ್ಮ ಮರ್ಜಿ ಪ್ರಕಾರ ಲಾವಣಿ ಮಾಡಿಕೊಂಡರೆ, ನನ್ನದೇನೂ ಅಡ್ಡಿ ಇಲ್ಲ. ಎಂದು ಆತ್ಮಸಂತೋಷದಿಂದ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಬರಕೊಟ್ಟ ಕೋರಲಾವಣಿ ಪತ್ರ-ಸಹಿ-ತಾರೀಖು···ತಿಂಗಳು······ಇಸವಿ.

(ಸಹಿ)··················ದ॥ ಖು॥

ಸಾಕ್ಷಿ.

೧. ಸದರ ಕರಾರು ನನ್ನ ಸಮಕ್ಷ ಆಗಿದೆ. ೧. ಸದರ ಕರಾರು ನನ್ನ ಸಮಕ್ಷ ಆಗಿದೆ.

(ಸಹಿ)……………ದ|| ಖು|| (ಸಹಿ)……………ದ|| ಖು||

ಟಿಪ್ಪಣಿ–ಲಾವಣಿಪತ್ರ, ಕೋರಲಾವಣಿಪತ್ರಗಳಿಗೆ ಹತ್ತುವ ಸ್ಟ್ಯಾಂಪು:– ಜಮೀನು ಸಾಗುವಳಿಯು ಬಗ್ಗೆ ಲಾವಣಿಪತ್ರವಿದ್ದಲ್ಲಿ, ಒಂದು ವರ್ಷದ ಲಾವಣಿಪತ್ರಕ್ಕೆ ಸ್ಟ್ಯಾಂಪು ಬೇಡ. ಹೆಚ್ಚು ಮುದ್ದತಿನ ಲಾವಣಿಪತ್ರವಿದ್ದು, ಲಾವಣೀ ಹಣವು ನೂರಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಮೇಲೆ ಹೇಳಿದ ಬಾಡಗಿಪತ್ರದ ದರದ ಪ್ರಕಾರ.

(೬) ತೋರಬತ್ತಿ ಪತ್ರ.

ರಾ. ರಾ. ……ಜಾತಿ…ಕಸಬು…ವಯುಸ್ಸು…ಸಾಕೀನ… ಇವರಿಗೆ—

ತೋರಬತ್ತಿ ಪತ್ರ ಬೇಸ್ಕಿ—(ಹೆಸರು) …ಜಾತಿ…ಕಸಬು…ವಯುಸ್ಸು… ಸಾಕೀನ…ನಾನು ಬರಕೊಟ್ಟ ತೋರಬತ್ತಿ ಪತ್ರ ಏನಂದರೆ, ಜಿಲ್ಹಾ…ತಾಲೂಕ …ಸಬ್ಬರಿಜಿಸ್ಟರ ಹದ್ದಿನ ಪೈಕಿ ಮೋಜೆ…ದಲ್ಲಿ ನನ್ನ ಹೆಸರ್ಲೆ ದಾಖಲಿರುವ ಮತ್ತು ನನ್ನ ವಹಿವಾಟಿಯಲ್ಲಿರುವ ಜಮೀನು ೨. ಸ. ನಂಬರು-ಎಕರೆ…ತರಮು ರೂ…ಈ ಜಮೀನು ನನ್ನ ಗೃಹಕೃತ್ಯದ ಅಡಚಣಿಗಾಗಿ ನಿಮಗೆ ಬತ್ತೀಬರ ಕೊಟ್ಟು ನಿಮ್ಮ ಕಡೆಯಿಂದ…ರೂಪಾಯಿ (ಅಕ್ಷರದಲ್ಲಿ) …ರೂ. ನೂರಕ್ಕೆ ತಿಂಗಳಿಗೆ…ರೂ. ಬಡ್ಡೀ ಕರಾರು ಮಾಡಿ, ಸಾಲಾ ತಕ್ಕೊಂಡಿರುವೆನು. ಈ ಬಾಬತ್ತು ಬಡ್ಡೀ ಕೊಡುತ್ತ ಹೋಗುವೆನು. ಈ ಆಸ್ತಿಯು ಮೇಲೆ ಹಣ ಭರತಿ ಮಾಡಿಕೊಳ್ಳಬೇಕು. ಈ ಜಮೀನು ನಾನು ಎರಡನೆಯವರಿಗೆ ಖರೀದಿ ಇಲ್ಲವೆ ಬತ್ತೀ ಬರ ಕೊಟ್ಟಿಲ್ಲ. ಎಂದು ಆತ್ಮಸಂತೋಷದಿಂದ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಬರಕೊಟ್ಟ ತೋರಬತ್ತಿಪತ್ರ—ಸಹಿ—ತಾರೀಖು—ತಿಂಗಳು—ಇಸವಿ.

(ಸಹಿ)……………ದ|| ಖು||

ಸಾಕ್ಷಿ.

೧. ಸದರ ಕರಾರು ನನ್ನ ಸಮಕ್ಷ ಆಗಿದೆ. ೧. ಸದರ ಕರಾರು ನನ್ನ ಸಮಕ್ಷ ಆಗಿದೆ.

(ಸಹಿ)…………ದ|| ಖು|| (ಸಹಿ)……………ದ|| ಖು||

(೭.) ಇಳಬತ್ತಿ ಪತ್ರ.

ರಾ. ರಾ. …ಜಾತಿ…ಕಸಬು…ವಯುಸ್ಸು…ಸಾಕೀನ… ಇವರಿಗೆ—

ಇಳಬತ್ತಿ ಪತ್ರ, ಬೇಸ್ಕಿ— (ಹೆಸರು)…ಜಾತಿ – ಕಸಬು…ವಯುಸ್ಸು…ಸಾಕೀನ

... ನಾನು ಬರಕೊಡುವ ಇಳಒತ್ತಿ ಪತ್ರ ಏನಂದರೆ–ನಾನು ನನ್ನ ಗೃಹಕೃತ್ಯ
ಮೂಲಕ ನಿಮ್ಮ ಕಡೆಯಿಂದ...ರೂಪಾಯಿ(ಅಕ್ಷರದಲ್ಲಿ)...ರೂ. ಸಾಲಾ ತೆಗೆದು
ಕೊಂಡಿರುತ್ತೇನೆ. ಇವನ್ನು ಮುಟ್ಟಿಸುವದಕ್ಕಾಗಿ ಜಿಲ್ಹಾ...ತಾಲೂಕ...ಸಬ್
ರೆಜಿಸ್ಟರ ಹದ್ದಿನ ಪೈಕಿ...ಗ್ರಾಮದಲ್ಲಿರುವ ನನ್ನ ಹೆಸರಿನ ಖಾತೆ ಮತ್ತು ಸ
ವಹಿವಾಟಿಯುಲ್ಲಿರುವ ರಿ. ಸ. ನಂಬರು...ಎಕರೆ...ತರಮ ರೂ...., ಈ ಜಮೀನ
ನಿಮಗೆ ಇಳಒತ್ತೀ ಬರಕೊಟ್ಟು ನಿಮ್ಮ ತಾಬಾಕ್ಕೆ ಕೊಟ್ಟಿರುತ್ತೇನೆ. ಸದ
ಜಮೀನು ನೀವು......ಸಂವತ್ಸರದಿಂದ...ವರ್ಷಗಳ ವರೆಗೆ ಸರಕಾರೀ ಹಪ್ತೆ
ಲೋಕಲ್‌ಫಂಡ ಮುಂತಾದವುಗಳನ್ನು ನೀವೇ ಪರಭಾರೆ ಕೊಟ್ಟು ಉಪಭೋಗ
ಮಾಡಿಕೊಳ್ಳಬೇಕು. ಸದರ ಮುದ್ದತು ಆದ ಮರುವರ್ಷ ಲಾವಣೀ ಹಂಗಾ
ಮಿಗೆ ನೀವು ಸದರ ಜಮೀನು ನನಗೆ ಬಿಟ್ಟುಗೊಡಬೇಕು. ಈ ಜಮೀನ
ನಾನು ಎರಡನೆಯವರಿಗೆ ಒತ್ತೀ ಇಲ್ಲವೆ ಖರೀದಿ ಬರಕೊಟ್ಟಿರುವದಿಲ್ಲ. ಎಂದ
ಆತ್ಮಸಂತೋಷದಿಂದ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಬರಕೊಟ್ಟ ಇಳ
ಒತ್ತಿ ಪತ್ರ. ಸಹಿ–ತಾರೀಖು–ತಿಂಗಳು–ಇಸವಿ.

(ಸಹಿ)..................ದ॥ ಖು॥

ಸಾಕ್ಷಿ.

೧. ಸದರ ಕರಾರು ನನ್ನ ಸಮಕ್ಷ ಆಗಿದೆ. ೧. ಸದರ ಕರಾರು ನನ್ನ ಸಮಕ್ಷ
ಆಗಿದೆ.

(ಸಹಿ)..................ದ॥ ಖು॥ (ಸಹಿ)...............ದ॥ ಖು

(೮.) ಖರೀದಿ ಪತ್ರ.

ರಾ. ರಾ. ...ಜಾತಿ...ಕಸಬು...ವಯಸ್ಸು...ಸಾಕಿನ...ಇವರಿಗೆ–
ಖರೀದಿ ಪತ್ರ ಬರೆಸ್ಕೊ–(ಹೆಸರು)...ಜಾತಿ...ಕಸಬು....ವಯಸ್ಸು...ಸಾಕಿನ..
ನಾನು ಬರಕೊಟ್ಟ ಖರೀದಿ ಪತ್ರ ಏನಂದರೆ—ನನ್ನ ಕುಟುಂಬ ಸಂರಕ್ಷಣೆಗಾ
ಮತ್ತು ರಾ. ರಾ. ... ಇವರ ಕಡೆಯಿಂದ ನಾನು ತಕ್ಕೊಂಡ ಸಾಲದ ರೂಪ
ಯಿ ತೀರಿಸುವದಕ್ಕಾಗಿ ನಿಮ್ಮ ಕಡೆಯಿಂದ ... ರೂಪಾಯಿ (ಅಕ್ಷರದಲ್ಲಿ) ..
ರೂ. ರೋಖ ತೆಗೆದುಕೊಂಡು, ಜಿಲ್ಹಾ...ತಾಲೂಕ...ಸಬ್‌ರೆಜಿಸ್ಟರ ಹದ್ದಿ
ಪೈಕಿ...ಗ್ರಾಮದಲ್ಲಿ ನನ್ನ ಹೆಸರಿನ ಖಾತೆ ಮತ್ತು ವಹಿವಾಟಿಯುಲ್ಲಿರುವ ರಿ. ಸ
ನಂಬರು...ಎಕರೆ ...ತರಮ...ರೂಪಾಯಿ, ಈ ಪಿತ್ರಾರ್ಜಿತ ಜಮೀನು ನಿಮ

ಖರೀದಿ ಕೊಟ್ಟು, ನಿಮ್ಮ ಸ್ವಾಧೀನ ಮಾಡಿರುವೆನು. ಸದರ ಜಮೀನಿಯು ಮೇಲೆ ನನ್ನದೂ, ನನ್ನ ವಾರಸದಾರರದೂ, ಮೃತ್ಯುಪತ್ರ ನಡಿಸುವವರದೂ ಯಾರದೂ ಮಾಲಿಕಿ ಇರುವದಿಲ್ಲ. ಸಂಪೂರ್ಣ ನಿಮ್ಮ ಮಾಲಿಕೀನೇ ಇರುತ್ತದೆ. ನಿಮ್ಮ ಮರ್ಜಿಪ್ರಕಾರ ಸದರ ಜಮೀನಿಯು ವ್ಯವಸ್ಥೆ ಮಾಡಿಕೊಳ್ಳುವದಕ್ಕೆ ನೀವೇ ಬಾಧ್ಯಸ್ಥರಿರುವಿರಿ. ಈ ಜಮೀನು ಈ ವರೆಗೂ ಯಾರಿಗೂ ಒತ್ತೀ ಇಲ್ಲವೆ ಖರೀದಿ ಬರಕೊಟ್ಟಿರುವದಿಲ್ಲ. ಒಂದು ವೇಳೆ ಈ ಜಮೀನಿಯು ಬಾಬತ್ತು ಏನಾದರೂ ತೊಂದರೆ ಬಂದಲ್ಲಿ, ಅದನ್ನು ನಾನೇ ನೋಡಿಕೊಳ್ಳುವೆನು. ಎಂದು ಆತ್ಮಸಂತೋಷದಿಂದ ಮತ್ತು ಸಂಪೂರ್ಣ ಎಚ್ಚರಿಕೆಯಿಂದ ಬರಕೊಟ್ಟ ಖರೀದಿ ಪತ್ರ—ಸಹಿ—ತಾರೀಖು—ತಿಂಗಳು—ಇಸವಿ.

(ಸಹಿ)..............ದ|| ಖು||

ಸಾಕ್ಷಿ.

೧. ಸದರ ಕರಾರು ನನ್ನ ಸಮಕ್ಷ ಆಗಿದೆ. ೧. ಸದರ ಕರಾರು ನನ್ನ ಸಮಕ್ಷ ಆಗಿದೆ.

(ಸಹಿ) ... ... ದ|| ಖು|| (ಸಹಿ) ... ... ದ|| ಖು||

ಟಿಪ್ಪಣಿ:—ಖರೀದಿ ಪತ್ರ, ಇಸಬತ್ತಿ ಪತ್ರ, ಕಬಜಾಬತ್ತಿ ಪತ್ರಗಳಿಗೆ ಬೇಕಾಗುವ ಸ್ಟ್ಯಾಂಪು.

			ರೂ. ಆ. ಪೈ.
೫೦ ರೂ.	...	ಮೀರದಿದ್ದರೆ	೦—೬—೦
೫೦ ರೂ. ಮೀರಿ	೧೦೦ ರೂ.	ಮೀರದಿದ್ದರೆ	೧—೦—೦
೧೦೦ ರೂ. ,,	೨೦೦ ರೂ.	,,	೨—೦—೦
೨೦೦ ರೂ. ,,	೩೦೦ ರೂ.	,,	೩—೬—೦

ಮುಂದೆ ೧೦೦೦ರೂ. ವರೆಗೆ ಪ್ರತಿ ಒಂದು ನೂರಕ್ಕೆ ಮತ್ತು ಅದರ ಭಾಗಕ್ಕೆ ೧½ರೂ ಯಂತೆ. ೧೦೦೦ ರೂ. ಮೀರಿದ ನಂತರ ಪ್ರತಿ ೫೦೦ ರೂ. ಗೆ ಅಥವಾ ಅದರ ಭಾಗಕ್ಕೆ ೭½ ರೂ.ಯಂತೆ.

(೯). ಪ್ರಾಮಿಜರಿ ನೋಟು.

ರಾ. ರಾ. ... ... ಸಾಕೀನ ... ಇವರಿಗೆ—(ಹೆಸರು) ... ... ಸಾಕೀನ ... ತಾಲೂಕ ... ನಾನು ಬರಕೊಡುವ ಪ್ರಾಮಿಜರಿ ನೋಟು ಏನಂದರೆ— ನಾನು ನಿಮ್ಮ ಕಡೆಯಿಂದ ಈ ಹೊತ್ತು ... ರೂಪಾಯಿ (ಅಕ್ಷರದಲ್ಲಿ) ... ರೂ. ರೋಖ ಇಸುಗೊಂಡಿರುತ್ತೇನೆ. ಇದನ್ನು ನೀವು ಅಥವಾ ನಿಮ್ಮ ಕಡೆಯಿಂದ ಅಪ್ಪಣೆ ಹೊಂದಿದವರು ಯಾರಾ

ದರೂ ಬೇಡಿದ ಕೂಡಲೆ ಕೊಡುವೆನು. ಸದರ ರೂಪಾಯಿಗಳು ನನಗೆ ಪೂರಾ ಮುಟ್ಟಿರುತ್ತವೆ. ತಾರೀಖು — ತಿಂಗಳು — ಇಸವಿ.

(ಸಹಿ) ... ... ದ॥ ಖು॥

ಟಿಪ್ಪಣಿ:— ಬೇಡಿದಾಗ ಕೊಡುವದಿದ್ದರೆ, ನೋಟಿನ ರಕಮು ೨೫೦ ರೂ. ಮೀರದಿದ್ದಲ್ಲಿ, ಸಾದಾ ಕಾಗದದ ಮೇಲೆ ಒಂದು ಆಣೆಯ ಪೋಸ್ಟ ತಿಕೀಟು ಹಚ್ಚಿ ಅದರ ಮೇಲೆ ಸಹಿ ಮಾಡತಕ್ಕದ್ದು. ಸಾಕ್ಷಿ ಬೇಡ. ೨೫೦ ರೂ. ಯಿಂದ ೧೦೦೦ ರೂ. ವರೆಗೆ ೨ ಆಣೆ, ಮತ್ತು ಅದಕ್ಕೂ ಹೆಚ್ಚಿನ ರಕಮಿಗೆ ೪ ಆಣೆಯ ತಿಕೀಟುಗಳನ್ನು ಹಚ್ಚತಕ್ಕದ್ದು. ಬೇಡಿದಾಗ ಕೊಡುವದು ಇಲ್ಲದಿದ್ದರೆ, ಹುಂಡಿಯ ಸ್ಟ್ಯಾಂಪಿನ ದರದಂತೆ.

(ಕ) ರಾಜಕೀಯ ವಿಷಯಗಳು:—

(೧) ಗ್ರಾಮಸ್ಥರು ತಮ್ಮ ಊರಲ್ಲಿಯೂ ಊರ ಸುತ್ತಲೂ ಬೆಳೆದ ಮುಳಗಳ್ಳಿಯನ್ನು ನಾಶಮಾಡುವ ಬಗ್ಗೆ ತಮ್ಮ ತಾಲೂಕ ಮಾಮಲೇದಾರ ಸಾಹೇಬರವರ ಕಡೆಗೆ ಮಾಡಿಕೊಂಡ ರಿಪೋರ್ಟ.

ಜಾವಕ ನಂಬರು ×××

ರಾವಸಾಹೇಬ ಮಾಮಲೇದಾರ, ತಾಲೂಕ ⋯ ದೊರೆಗಳವರ ಹುಜೂರಿಗೆ—

ಮೋಜೆ ⋯ ಗ್ರಾಮಸ್ಥರ ವಿನಯಪೂರ್ವಕ ವಿನಂತಿ ರಿಪೋರ್ಟ—

ತಾರೀಖು ⋯ ನೇ ಮಾಹೆ ⋯ ಸನ್ ⋯ ನೇ ಇಸವಿ ತರುವಾಯ— ನಮ್ಮ ಊರಲ್ಲಿಯೂ ಊರ ಸುತ್ತಲೂ ಮುಳಗಳ್ಳಿಯು ವಿಶೇಷವಾಗಿ ಬೆಳೆದು, ಜನರಿಗೆ ಅನೇಕ ಪ್ರಕಾರವಾಗಿ ಹಾನಿಕರವಾಗಿರುವದು. ಎಷ್ಟೋ ಜನರು ಚಳಿ–ಜ್ವರ, ಮಾರೀಜೆನೆ ಮುಂತಾದ ಸಾಂಸರ್ಗಿಕ ರೋಗಗಳಿಗೆ ತುತ್ತಾಗಿ ಗೋಳಾಡುತ್ತಿರುವರು. ಹುಲಿ, ಚಿರ್ಚು ಮುಂತಾದ ಹಿಂಸ್ರ ಪಶುಗಳು ಮುಳಗಳ್ಳಿಯಲ್ಲಿ ಅಡಗಿಕೊಂಡು, ದನಕರುಗಳಿಗೂ ಹೋಗಬರುವ ಜನರಿಗೂ ಬಹಳೇ ಉಪದ್ರವ ಕೊಡುತ್ತಲಿವೆ. ಹಾಗು ಈ ಊರ ದನಗಳ ಉಪಯೋಗಕ್ಕಾಗಿ ಕಾದಿಟ್ಟ ಗಾವಠಾಣೆಗಳಲ್ಲಿಯೂ ಮುಳಗಳ್ಳಿಯು ಹಬ್ಬಿರುವವರಿಂದ, ದನಗಳಿಗೆ ಮೇಯಲಿಕ್ಕೆ ಹುಲ್ಲು ದೊರೆಯದಂತಾಗಿದೆ. ಹೀಗಾಗಿ, ಈ ಊರ ಜನರಿಗೂ, ದನಕರುಗಳಿಗೂ, ಪ್ರವಾಸಿಕರಿಗೂ ಹೇಳಕೂಡದಷ್ಟು ಹಾನಿಯಾಗುತ್ತಲಿದೆ. ಈ ದುಃಸ್ಥಿತಿಯನ್ನು ಹೋಗಲಾಡಿಸುವ ಕೆಲಸವು ಕೇವಲ ರೈತರಿಂದಲೇ ಆಗಲಾರ

ದೆಂದು ನಾವು ಮನಗಂಡಿರುವೆವು. ಅದಕ್ಕೆ ಸರಕಾರದವರ ಸಹಾಯವು ಅವಶ್ಯ ವಾಗಿ ಬೇಕು. ಆದದರಿಂದ ಗಾವಠಾಣೆಯಲ್ಲಿ ತಮ್ಮ ತಮ್ಮ ಹದ್ದಿನೊಳಗಿನ ಮುಳಗಳ್ಳಿಯನ್ನು ಊರ ಜನರೇ ನಾಶಮಾಡತಕ್ಕದ್ದೆಂತಲೂ, ಅದಕ್ಕೆ ತಪ್ಪಿ ದಲ್ಲಿ ಯೋಗ್ಯ ಶಿಕ್ಷೆಯಾಗುವದೆಂತಲೂ ಊರಲ್ಲಿ ಡಂಗುರ ಸಾರಲಿಕ್ಕೆ ತಮ್ಮ ಅಪ್ಪಣೆಯಾಗಬೇಕು. ಹಾಗು ಸರಕಾರೀ ಸಾರ್ವಜನಿಕ ಗಾವಠಾಣೆಗಳಲ್ಲಿಯ ಮುಳಗಳ್ಳಿಯನ್ನು ನಾಶಮಾಡುವದಕ್ಕಾಗಿ ಹತ್ತುವ ಹಣದಲ್ಲಿ ಅರ್ಧ ಹಣ ವನ್ನು ಈ ಊರ ಜನರು ಕೊಡಲೊಪ್ಪಿಕೊಂಡಿರುವದರಿಂದ, ಉಳಿದ ಅರ್ಧ ಹಣವನ್ನು ಸರಕಾರದವರು ಕೊಡಬೇಕೆಂದು ನಮ್ಮ ಸವಿನಯ ಸೂಚನೆಯಿದೆ. ಈ ರಿಪೋರ್ಟಿನ ವಿಚಾರವು ಆದಷ್ಟು ತೀವ್ರವಾಗಬೇಕೆಂದು ಬೇಡಿಕೊಳ್ಳುತ್ತೇವೆ.

ತಮ್ಮ ಅತ್ಯಂತ ವಿಧೇಯರಾದ,
ಸಹಿ— ಪಾಟೀಲ.
ಸಹಿ— ಕುಲಕರಣಿ.

ಮಾಮಲೇದಾರರು ತಮ್ಮ ತಾಲೂಕಿನಲ್ಲಿ ದವಾಖಾನೆಯಾಗ ಬೇಕೆಂಬ ಬಗ್ಗೆ ತಮ್ಮ ಜಿಲ್ಹೆಯ ಕಲೆಕ್ಟರ ಸಾಹೇಬರವರ ಕಡೆಗೆ ಮಾಡಿಕೊಂಡ ರಿಪೋರ್ಟ.

ಜಾವಕ ನಂಬರು ....

ಮೆಹರಬಾನ ಕಲೆಕ್ಟರ ಸಾಹೇಬ ಬಾಹದ್ದೂರ, ಜಿಲ್ಹಾ......ಯಾವಂದ ರವರ ಹುಜೂರಿಗೆ—

...ತಾಲೂಕ ಮಾಮಲೇದಾರನ ವಿನಂತಿ ರಿಪೋರ್ಟ—ತಾರೀಖ...ಮಾಹೆ... ಸನ್...ನೇ ಇಸವಿ ತರುವಾಯ—ಈ ತಾಲೂಕಿನಲ್ಲಿ ದವಾಖಾನೆ ಇಲ್ಲದ್ದರಿಂದ ಜನರಿಗೆ ಬಹಳೇ ಅನಾನುಕೂಲತೆಯೂ ಹಾನಿಯೂ ಆಗುತ್ತಲಿವೆ. ಅವು ಯಾವ ವೆಂದರೆ:—ಈ ತಾಲೂಕು ಕ್ಷೇತ್ರ—ಜನಸಂಖ್ಯೆಗಳ ಮಾನದಿಂದ ದೊಡ್ಡದು. ಒಂದಿಲ್ಲೊಂದು ಗ್ರಾಮದಲ್ಲಿ ಅಪಘಾತ, ದುರ್ಮರಣ, ಕೊಲೆಗಳು ಮೇಲಿಂದ ಮೇಲೆ ಆಗುತ್ತಿರುತ್ತವೆ. ಇಂಥ ಪ್ರಸಂಗಗಳಲ್ಲಿ ಅವಶ್ಯವಾಗಿ ಬೇಕಾದ ಪರೀಕ್ಷೆ— ಶುಶ್ರೂಷೆ ಮಾಡುವ ದವಾಖಾನೆಯು ಈ ತಾಲೂಕಿನಲ್ಲಿಲ್ಲದ ಮೂಲಕ, ದವಾ

ಖಾನೆಯಿದ್ದ ಬೇರೆ ತಾಲೂಕಿನ ಊರಿಗೆ ಹೋಗಬೇಕಾಗುತ್ತದೆ. ಇದರಿಂ
ಇಲ್ಲಿಯ ಜನರಿಗೆ ಬಹಳೇ ತೊಂದರೆಯೂ ಹಾನಿಯೂ ಆಗುವದುಂಟು.

ಈ ತಾಲೂಕಿನ ಕೆಲವು ಗ್ರಾಮಗಳು ವ್ಯಾಪಾರದ ಪಡಮೂಲೆಗಳಾಗಿ
ಕೆಲವು ಗ್ರಾಮಗಳಲ್ಲಿ ಗಿರಣಿಗಳುಂಟು. ಆಯಾ ವ್ಯಾಪಾರಸ್ಥರ ಅಂಗಡಿ
ಲ್ಲಿಯೂ ಗಿರಣಿಗಳಲ್ಲಿಯೂ ಈ ತಾಲೂಕಿನ ಹಾಗು ಪರಸ್ಥಳದ ಸಾವಿರಾರು ಬ
ಜನ ಕೂಲಿಕಾರರು ದುಡಿಯುತ್ತಿರುತ್ತಾರೆ. ಇಂಥ ಬಡಜನರಿಗೆ ರೋಗನಿವಾ
ರಣಾರ್ಥ ಎರಡನೆಯ ಕಡೆಗೆ ಹೋಗಲು ದ್ರವ್ಯಾನುಕೂಲತೆ ಇರುವದಿಲ್ಲ. ಆದ
ರಿಂದ ಅವರಿಗೆ ಏನಾದರೂ ರೋಗವು ಬಂದಲ್ಲಿ ಬಹಳೇ ತೊಂದರೆಯಾಗ
ದಲ್ಲದೆ, ಒಮ್ಮೊಮ್ಮೆ ಪ್ರಾಣಹಾನಿಯೂ ಆಗುವದು.

ಈ ತಾಲೂಕಿನಲ್ಲಿ ಪ್ಲೇಗ ರೋಗವು ಪ್ರತಿವರ್ಷ ಉದ್ಭವಿಸುತ್ತ
ಅದರ ನಿವಾರಣೆಗಾಗಿ ಇನಾಕ್ಯುಲೇಶನ್ ಮಾಡಲಿಕ್ಕೂ, ಮಾರಿಕಾ-ಮೈ
ಬೇನೆ ಮುಂತಾದ ಸಾಂಸರ್ಗಿಕ ರೋಗಗಳಿಗೆ ಯೋಗ್ಯ ಉಪಾಯಗಳ
ಮಾಡಲಿಕ್ಕೂ ಡಾಕ್ಟರನು ಅವಶ್ಯವಾಗಿ ಬೇಕು. ಆದರೆ ಇಲ್ಲಿ ದವಾಖಾನೆ ಇಲ್ಲ
ರಿಂದ ಜನರಿಗೆ ಬಹಳೇ ಕಷ್ಟನಷ್ಟಗಳಾಗುತ್ತವೆ.

ದವಾಖಾನೆಯ ಇಮಾರತನ್ನು ಕಟ್ಟುವ ವರೆಗೆ ಈ ತಾಲೂಕಿನ ದೊ
ಸಾವುಕಾರರಾದ ಶ್ರೀಯುತ...ಇವರು ತಮ್ಮ ಸ್ವಂತದ ಮನೆಯನ್ನು ಪುಕ
ಯಾಗಿ ಕೊಡಲೊಪ್ಪಿರುವರು. ಅವರ ಒಪ್ಪಿಗೆಯು ಈ ರಿಪೋರ್ಟಿನ ಲಗತ ಆ

ದವಾಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ಬೇಕಾಗುವ ವೆಚ್ಚವನ್ನು
ತಾಲೂಕಿನ ಪ್ರಮುಖ ಜನರು ವರ್ಗಣಿಯಿಂದ ಕೂಡಿಸಿ ಕೊಡಲಿಕ್ಕೆ ಒಪ್ಪಿರುವ

ಮೇಲೆ ಬರೆದ ಎಲ್ಲ ಸಂಗತಿಗಳ ವಿಚಾರವಾಗಿ, ಈ ತಾಲೂಕಿನ ಸ
ಗ್ರಾಮವಾದ...ಇಲ್ಲಿ ದವಾಖಾನೆಯನ್ನು ಸ್ಥಾಪಿಸುವ ಮೆಹರಬಾನಗಿಯ
ಬೇಕೆಂದು ಬೇಡಿಕೊಳ್ಳುತ್ತೇನೆ.

ತಮ್ಮ ಅತ್ಯಂತ ವಿಧೇಯ,

ಸಹಿ.........

ಮಾಮಲೇದಾರ, ತಾಲೂಕ.....

ಒಂದು ಊರ ಜನರು ತಮ್ಮಲ್ಲಿಯ ನೀರಿನ ಕೊರತೆಯನ್ನು ದೂರಪಡಿಸುವ ಬಗ್ಗೆ ತಮ್ಮ ಜಿಲ್ಹೆಯ ಕಲೆಕ್ಟರ ಸಾಹೇಬ ಬಾಹದ್ದೂರ ಇವರ ಕಡೆಗೆ ಬರಕೊಂಡ ಅರ್ಜಿ-

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ ಕಲೆಕ್ಟರ ಸಾಹೇಬ ಬಾಹದ್ದೂರ ಜಿಲಾ ...ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿ ಮಾಡುವ ಜನರು ಮೋಜೆ...ತಾಲೂಕ...ಜಿಲ್ಹಾ ...ಇವರು ಬರಕೊಂಡ ವಿಸಂತಿ ಅರ್ಜಿ ಏನಂದರೆ—ನಮ್ಮ ಊರಲ್ಲಿ ಎಂಟು ಸಾವಿರ ಜನಸಂಖ್ಯೆಯಿದೆ. ಇಷ್ಟು ಜನವಸತಿಯುಳ್ಳ ಗ್ರಾಮಕ್ಕೆ ಒಂದೇ ಕೆರೆಯುಂಟು. ಈಗ ಅದು ರೇವೆಯಿಂದ ಮುಚ್ಚಿ, ಒಂದು ವರ್ಷ ಸಾಲುವಷ್ಟು ನೀರು ಹಿಡಿಯುವದಿಲ್ಲ. ಮಳೆಯು ಮೇಲಿಂದ ಮೇಲೆ ಆಗುತ್ತಿದ್ದರೆ, ಅದೇ ಕೆರೆಯಿಂದ ನೀರಿನ ಪುರವಠೆಯಾಗಬಹುದಾಗಿತ್ತು. ಆದರೆ ಈಗ ನಾಲ್ಕೈದು ವರ್ಷಗಳಿಂದ ಕಾಲಕ್ಕೆ ಸರಿಯಾಗಿ ಮಳೆಯಾಗುವದಿಲ್ಲ. ಮಳೆಯಾದ ಕಾಲಕ್ಕೆ ನೀರಿನ ಸಂಗ್ರಹ ಮಾಡಿಕೊಳ್ಳಬೇಕೆಂದರೆ, ದೊಡ್ಡ ಕೆರೆಯಿಲ್ಲ. ಇದ್ದ ಸಣ್ಣ ಕೆರೆಯು ಹುಗಿದು ಹೋಗಿದೆ. ಇದರಿಂದ ಇಲ್ಲಿಯ ಜನರಿಗೆ ಊರು ಬಿಟ್ಟು ಹೋಗುವ ಪ್ರಸಂಗ ಬಂದಿದೆ.

ಊರಲ್ಲಿ ಕೆಲವು ಸೇದುವ ಬಾವಿಗಳಿದ್ದರೂ, ಅವುಗಳಿಂದ ನೀರಿನ ಪುರವಠೆಯಾಗುವದಿಲ್ಲ. ಇದರಿಂದ ನೀರಿನ ಸಲುವಾಗಿ ದಿನಾಲು ಕಲಹಗಳಾಗಹತ್ತಿವೆ. ಸ್ವಲ್ಪ ದಿವಸಗಳಲ್ಲಿ ಆ ಬಾವಿಗಳು ಸಹ ಬತ್ತಿಹೋಗಿ, ಕಠಿಣ ಪ್ರಸಂಗ ಪ್ರೊದಗುತ್ತದೆಂಬವದರಲ್ಲಿ ಸಂಶಯವಿಲ್ಲ.

ಆದದರಿಂದ ತಮ್ಮ ಸನ್ನಿಧಿಯಲ್ಲಿ ವಿನಂತಿ ಮಾಡಿಕೊಳ್ಳುವದೇನಂದರೆ, ನಮ್ಮ ಊರ ಪಶ್ಚಿಮಕ್ಕಿರುವ ಕೆರೆಯನ್ನು ಹೆಚ್ಚಿಗೆ ಕಡಿಸಿ, ಬರುವ ಮಳೆಗಾಲದೊಳಗಾಗಿ ಕೆರೆಯಲ್ಲಿ ನೀರಿನ ಸಂಗ್ರಹವಾಗುವಂತೆ ಮಾಡಬೇಕು. ಹಾಗು ಇದಕ್ಕೆ ಬೇಕಾಗುವ ಖರ್ಚಿನ ಹಣವನ್ನು ತೀವ್ರ ಮಂಜೂರ ಮಾಡಿ ಕೆಲಸ ಪ್ರಾರಂಭಿಸಬೇಕು.

ಸದ್ಯಕ್ಕೆ ಇಲ್ಲಿ ದುರ್ಭಿಕ್ಷವಿರುವದರಿಂದ, ಕೂಲೀ ಜನರು ಕಡಿಮೆ ದರದಿಂದ

ಕೆಲಸ ಮಾಡುವರು. ಇದರಿಂದ ಸರಕಾರಕ್ಕೆ ಕಡಿಮೆ ಖರ್ಚು ಬರುವದು
ಹಾಗು ಬಡಜನರಿಗೆ ಕೂಲಿ ಹತ್ತಿ ಉಪಜೀವನಕ್ಕೆ ಮಾರ್ಗವಾಗುವದು.

ಈ ಎಲ್ಲ ಸಂಗತಿಗಳ ವಿಚಾರವಾಗಿ,ನೀರಿನ ಕೊರತೆಯ ಮೂಲಕ ನಮ
ಗಾಗುತ್ತಿರುವ ತಪ್ಪವನ್ನು ಆದಷ್ಟು ತೀವ್ರ ದೂರ ಮಾಡುವಿರೆಂದು ಬೇಡಿಕೊಳ
ತ್ತೇವೆ. ಎಂದು ಬರಕೊಂಡ ಅರ್ಜಿ–ಸಹಿ–ತಾರೀಖು...ಮಾಹೆ...ಇಸವಿ...

ಸಹಿ—ಊರ ಜನರು.

ಒಂದು ಊರ ಜನರು ತಮ್ಮಲ್ಲಿ ಒಂದು ಕನ್ನಡ ಗಂಡು ಹುಡುಗ ಶಾಲೆಯಾಗುವ ಬಗ್ಗೆ ತಮ್ಮ ಜಿಲ್ಹೆಯ ಸ್ಕೂಲಬೋಡ ಚೇಅರಮನ್ ಸಾಹೇಬರವರ ಕಡೆಗೆ ಮಾಡಿಕೊಂಡ ಅಜಿ

ಇಂಡಿಯಾ ಬಾದಶಹ ಸರಕಾರಕ್ಕೆ—

ರಾವಸಾಹೇಬ ಚೇಅರಮನ್, ಸ್ಕೂಲ ಬೋರ್ಡ, ಡಿಸ್ಟ್ರಿಕ್ಟ ಲೋಕಲ
ಬೋರ್ಡ, ಜಿಲ್ಹಾ... ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿ ಮಾಡುವ ಜನರು ಮೋಜೆ... ತಾಲೂಕ...
ಜಿಲ್ಹಾ... ಇವರು ಬರಕೊಂಡ ವಿನಂತಿ ಅರ್ಜಿ ಏನಂದರೆ—ನಮ್ಮ ಊರ ಜ
ಸಂಖ್ಯೆಯು ೮೦೦ ಇದ್ದು, ಇಲ್ಲಿ ಈ ವರೆಗೂ ಶಾಲೆಯಾಗಿರುವದಿಲ್ಲ. ಇಲ್ಲಿ ಕನಿ
ಮೂವತ್ತು ಹುಡುಗರು ಶಾಲೆಗೆ ಬರಲಿಕ್ಕೆ ಅಡ್ಡಿ ಇಲ್ಲ.

ಈ ಊರಲ್ಲಿ ಶಾಲೆಯಿಲ್ಲದ್ದರಿಂದ ಇಲ್ಲಿಂದ ೨ ಮೈಲುಗಳ ಮೇಲಿರುವ...
ಗ್ರಾಮದ ಶಾಲೆಗೆ ಸದ್ಯಕ್ಕೆ ನಮ್ಮ ಊರಿಂದ ೧೫ ಹುಡುಗರು ಹೋಗಿ ಬ
ತ್ತವೆ. ಆದರೆ ನಮ್ಮ ಊರಿಗೂ... ಊರಿಗೂ ನಡುವೆ ದೊಡ್ಡ ದೊಡ್ಡ ಹ
ಗಳಿರುವದರಿಂದ, ಮಳೆಗಾಲದಲ್ಲಿ ಮಾರ್ಗವು ಕೆಟ್ಟು ಹಳ್ಳ ಕಟ್ಟುವದರಿಂ
ನಮ್ಮ ಹುಡುಗರಿಗೆ ಸದರ ಹಳ್ಳಿಯ ಶಾಲೆಗೆ ಹೋಗಿಬರುವದು ಅಸಾಧ್ಯವಾ
ವದು. ಹೀಗಾಗಿ ೩–೪ ತಿಂಗಳುಗಳ ವರೆಗೆ ಅಭ್ಯಾಸ ಬಿಟ್ಟು ಮನೆಯಲ್ಲಿಯ
ಕೂಡ್ರಬೇಕಾಗುತ್ತದೆ.

ಈ ಊರ ಸಾಂಪತ್ತಿಕ ಸ್ಥಿತಿಯು ನೆಟ್ಟಗಿಲ್ಲ. ಬಡ ಜನರ ಸಂಖ್ಯೆಯ
ಹೆಚ್ಚು. ಆದದರಿಂದ ಊರಲ್ಲಿ ಗಾವಠಿ ಶಾಲೆಯನ್ನಿಟ್ಟು ಮಾಸ್ತರರ ಸಂಬ

ಕೊಡುವಷ್ಟು ಸಾಮರ್ಥ್ಯವು ನಮ್ಮಲ್ಲಿಲ್ಲ.

ಶಾಲೆಯು ಇಮಾರತನ್ನು ಕಟ್ಟುವ ವರೆಗೆ ಈ ಊರ ಹನುಮಂತ ದೇವರ ಗುಡಿಯಲ್ಲಿ ಶಾಲೆ ಹಾಕಲಿಕ್ಕೆ ಅಡಿಯಿಲ್ಲ. ಸದರ ಗುಡಿಯು ಇಮಾರತು ಸಾಕಷ್ಟು ಹವೆಯುಳ್ಳದ್ದೂ ಬೆಳಕುಳ್ಳದ್ದೂ ಇದ್ದು, ಸುಮಾರು ೪೦ ಹುಡುಗರಿಗೆ ಸಾಲುವಷ್ಟು ದೊಡ್ಡದದೆ.

ಶಾಲೆಯು ಪುಸ್ತಕ, ನಕಾಶ, ಮೇಜು, ಖುರ್ಚಿ ಮುಂತಾದ ಡೆಡ್‌ಸ್ಟಾಕ ಸಾಮಾನುಗಳ ಬಗ್ಗೆ ೫೦ ರೂಪಾಯಿಗಳನ್ನೂ, ಮಾಸ್ತರ ಜನರಿಗೆ ಇರಲಿಕ್ಕೆ ಅನುಕೂಲವಾದ ಮನೆಗಳನ್ನೂ ನಾವು ಕೊಡುತ್ತೇವೆ.

ಈ ಎಲ್ಲ ಸಂಗತಿಗಳ ವಿಚಾರವಾಗಿ, ಈ ಊರಲ್ಲಿ ಒಂದು ಕನ್ನಡ ಗಂಡು ಹುಡುಗರ ಶಾಲೆಯನ್ನು ಸ್ಥಾಪಿಸಿ, ಇಲ್ಲಿಯ ಜನರಿಗೆ ವಿದ್ಯಾಮೃತಪಾನ ಮಾಡಿಸುವ ಮೆಹರಬಾನಗಿಯಾಗಬೇಕೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ– ಸಹಿ– ತಾರೀಖು... ಮಾಹೆ... ಇಸವಿ ...

ಸಹಿ. ಊರ ಜನರು.

ಒಂದು ಊರ ಜನರು ತಮ್ಮಲ್ಲಿ ಒಂದು ಇಂಗ್ಲಿಷ ಶಾಲೆಯನ್ನು ಸ್ಥಾಪಿಸಲಿಕ್ಕೆ ಅಪ್ಪಣೆಯಾಗುವ ಕುರಿತು ಮೆಹರಬಾನ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ, ದಕ್ಷಿಣಭಾಗ. ಇವರ ಕಡೆಗೆ ಬರಕೊಂಡ ಅರ್ಜಿ—

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ, ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ಬಾಹದ್ದೂರ, ದಕ್ಷಿಣಭಾಗ, ಧಾರವಾಡ, ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿಮಾಡುವ ಜನರು ಮೋಜೆ... ತಾಲೂಕ... ಜಿಲ್ಹಾ... ಇವರು ಬರಕೊಂಡ ವಿನಂತಿ ಅರ್ಜಿ ಏನಂದರೆ– ಈ ದೇಶದಲ್ಲಿ ಸದ್ಯಕ್ಕೆ ರಾಜಕೀಯ ಪತ್ರವ್ಯವಹಾರವು ಇಂಗ್ಲಿಷ ಭಾಷೆಯಲ್ಲಿ ನಡೆಯುವದು ಸ್ವಾಭಾವಿಕವು. ಆದರೆ ವ್ಯಾವಹಾರಿಕ ಮತ್ತು ಪ್ರಾಪಂಚಿಕ ಪತ್ರವ್ಯವಹಾರಗಳೂ ಕೂಡ ಹೆಚ್ಚಾಗಿ ಇಂಗ್ಲಿಷ ಭಾಷೆಯಲ್ಲಿಯೇ ನಡೆದಿರುವವೆಂದು ಹೇಳಿ

ದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಇದರಿಂದ ಇಂಗ್ಲಿಷ ವಿದ್ಯೆಯ ಮಹತ್ವವು ಎಷ್ಟಿರುವದೆಂಬದನ್ನು ಬೇರೆ ಹೇಳುವ ಕಾರಣವಿಲ್ಲ.

ನಮ್ಮ ಊರು ಎಂಟು ಸಾವಿರ ಜನವಸತಿಯುಳ್ಳ ಗ್ರಾಮವು. ಇಲ್ಲಿ ೭ ನೇ ಇಯತ್ತೆಯ ವರೆಗೆ ಒಂದು ಕನ್ನಡ ಗಂಡುಮಕ್ಕಳ ಶಾಲೆ, ೫ ನೇ ಇಯತ್ತೆಯ ವರೆಗೆ ಒಂದು ಕನ್ನಡ ಹೆಣ್ಣುಮಕ್ಕಳ ಶಾಲೆ, ಒಂದು ಮರಾಠಿ ಶಾಲೆ, ಹಾಗು ಒಂದು ಉರ್ದು ಗಂಡುಮಕ್ಕಳ ಶಾಲೆ– ಹೀಗೆ ನಾಲ್ಕು ಪ್ರಾಥಮಿಕ ಶಾಲೆಗಳಿರುವವು. ಆದರೆ ಇಲ್ಲಿ ಇಂಗ್ಲಿಷ ಶಾಲೆಯಿಲ್ಲದ್ದರಿಂದ, ಇಂಗ್ಲಿಷ ಕಲಿಯಲಿಚ್ಛಿಸುವ ನಮ್ಮ ಮಕ್ಕಳಿಗೆ ಪರಸ್ಥಳಕ್ಕೆ ಹೋಗಬೇಕಾಗುತ್ತದೆ. ಆದರೆ ಸಣ್ಣ ಮಕ್ಕಳನ್ನು ಪರಸ್ಥಳಕ್ಕೆ ಕಳಿಸುವದು ನಮ್ಮಿಂದಾಗದು. ಅದಕ್ಕೆ ಬಹಳ ಖರ್ಚು ಬರುವದಲ್ಲದೆ ಅನೇಕ ತೊಂದರೆಗಳೂ ಉಂಟು.

ನಮ್ಮಲ್ಲಿ ವ್ಯಾಪಾರವು ವಿಶೇಷವಾಗಿ ನಡೆಯುತ್ತದೆ. ಮುಂಬಯಿ ವ್ಯಾಪಾರವೇ ಬಹಳ. ಹಾಗು ಅಲ್ಲಿಂದ ಇಂಗ್ಲಿಷ ಪತ್ರವ್ಯವಹಾರವೇ ಬಹಳ ನಡೆಯುವದು. ಆದರೆ ನಮ್ಮಲ್ಲಿ ಇಂಗ್ಲಿಷ ಬಲ್ಲವರು ಇಲ್ಲದ್ದರಿಂದ, ಇಂಗ್ಲಿಷ ಪತ್ರಗಳನ್ನು ಇಂಗ್ಲಿಷ ಬಲ್ಲಂಥವರ ಕಡೆಗೆ ಹೋಗಿ ತಿಳುಕೊಳ್ಳಬೇಕಾಗುತ್ತದೆ. ಇದರಿಂದ ನಮಗೆ ಬಹಳೇ ತೊಂದರೆಯಾಗುವದಲ್ಲದೆ ನಮ್ಮ ವ್ಯಾಪಾರದ ಗುಟ್ಟು ಹೊರಟು ಹೋಗುತ್ತದೆ.

ಈ ಊರಲ್ಲಿ ಇಂಗ್ಲಿಷ ಶಾಲೆಯು ಸ್ಥಾಪಿಸಲ್ಪಟ್ಟರೆ, ಕನಿಷ್ಠ ೫೦–೬೦ ಹುಡುಗರು ಕೂಡುವರು. ಹಾಗು ನಮ್ಮ ಊರ ಸುತ್ತು ಮುತ್ತು ಸಮೀಪದಲ್ಲಿ ದೊಡ್ಡ ದೊಡ್ಡ ಊರುಗಳಿದ್ದದರಿಂದ, ಅಲ್ಲಿಯ ಹುಡುಗರಿಗೆ ಸಹ ಇಲ್ಲಿ ಕಲಿಯಲಿಕ್ಕೆ ಬರಲು ಅನುಕೂಲವಾಗುವದು.

ಶಾಲೆ ಹಾಕಲಿಕ್ಕೆ ಒಂದು ಯೋಗ್ಯ ಇಮಾರತನ್ನು ನಾವು ಪುಕ್ಕಟೆಯಾಗಿ ಕೊಡುತ್ತೇವೆ. ಅದು ಸಾಕಷ್ಟು ಬೆಳಕುಳ್ಳದ್ದೂ ಹವೆಯುಳ್ಳದ್ದೂ ಇರುವದಲ್ಲದೆ ೫೦–೬೦ ಹುಡುಗರಿಗೆ ಸಾಲುವಷ್ಟು ದೊಡ್ಡದದೆ. ಶಾಲೆಯ ಸಂಬಂಧದಿಂದ ಪ್ರಾರಂಭಕ್ಕೆ ಬೇಕಾಗುವ ನಕಾಶ, ಪುಸ್ತಕ, ಖುರ್ಚಿ, ಮೇಜು ಮುಂತಾದ ಡೆಡ್ ಸ್ಟಾಕ ಸಾಮಾನುಗಳನ್ನು ನಾವೇ ಕೊಡುತ್ತೇವೆ.

ಈ ಎಲ್ಲ ಸಂಗತಿಗಳನ್ನು ಅವಲೋಕಿಸಿ, ಮೆಹರಬಾನರವರು ನಮ್ಮ ಊರಲ್ಲಿ ಒಂದು ಇಂಗ್ಲಿಷ ಶಾಲೆಯನ್ನು ಸ್ಥಾಪಿಸಲಿಕ್ಕೆ ಅಪ್ಪಣೆ ಕೊಡುವಿರೆಂದ

ಸವಿನಯ ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ—ಸಹಿ— ತಾರೀಖು... ಮಾಹೆ... ಇಸವಿ...

ಸಹಿ. ಊರ ಜನರು.

——೦——

ಒಂದು ಊರ ರೈತ ಜನರು ತಮ್ಮಲ್ಲಿ ಒಕ್ಕಲತನದ ಶಿಕ್ಷಣ ಕೊಡುವ ಶಾಲೆಯನ್ನು ಸ್ಥಾಪಿಸುವ ಬಗ್ಗೆ ಡಾಯರೆಕ್ಟರ ಆಫ್ ಆಗ್ರಿಕಲ್ಚರ ಸಾಹೇಬರವರ ಕಡೆಗೆ ಬರಕೊಂಡ ಅರ್ಜಿ.

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ ಡಾಯರೆಕ್ಟರ ಆಫ್ ಆಗ್ರಿಕಲ್ಚರ ಸಾಹೇಬ, ಪುಣೆ, ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿ ಮಾಡುವ ಜನರು ಮೋಜೆ...ತಾಲೂಕ...ಜಿಲ್ಲಾ ...ಇವರು ಬರಕೊಂಡ ವಿನಂತಿ ಅರ್ಜಿ ಏನಂದರೆ—ನಮ್ಮ ದೇಶದ ಮುಖ್ಯ ಉದ್ಯೋಗವೆಂದರೆ ಒಕ್ಕಲತನವು. ಈ ಉದ್ಯೋಗವು ವಿಶೇಷವಾಗಿ ಸುವೃಷ್ಟಿಯನ್ನವಲಂಬಿಸಿದೆ. ಆದರೆ ಈಗ ಹತ್ತಿಪ್ಪತ್ತು ವರ್ಷಗಳಿಂದ ಈ ದೇಶದಲ್ಲಿ ಮಳೆಯು ಕಾಲಕಾಲಕ್ಕೆ ಹಾಗು ಸಾಕಷ್ಟು ಆಗುತ್ತಿರುವದಿಲ್ಲ. ಇದರಿಂದ ಈ ದೇಶದ ರೈತಜನರು ವರ್ಷಾನುವರ್ಷ ದುರ್ಭಿಕ್ಷಪೀಡಿತರಾಗಿ ಗೋಳಾಡುತ್ತಿರುವರು. ಮಳೆಯಾದ ಕಾಲಕ್ಕೆ ಯೋಗ್ಯ ಬೆಳೆ ತೆಗೆದುಕೊಳ್ಳಲಿಕ್ಕೆ ಅವಶ್ಯವಾಗಿ ಬೇಕಾದ ಶಿಕ್ಷಣವು ನಮಗೆ ಇಲ್ಲ. ಈ ಶಿಕ್ಷಣವು ನಮ್ಮ ಬಡ ರೈತರಿಗೆ ಅವಶ್ಯವಾಗಿ ಬೇಕು.

ನಮ್ಮ ದೇಶದ ಜನಸಂಖ್ಯೆಯು ಪ್ರತಿವರ್ಷ ಹೆಚ್ಚೆಚ್ಚು ಬೆಳೆಯುತ್ತಲಿದೆ ಆದರೆ ಜನಸಂಖ್ಯೆ ಬೆಳೆದ ಮಾನದಿಂದ ಭೂಮಿಯು ಬೆಳೆಯುವದಿಲ್ಲ. ಇದ್ದ ಭೂಮಿಯಲ್ಲಿಯೇ ಮೊದಲಿನ ಇಮ್ಮಡಿ ಬೆಳೆ ತೆಗೆದುಕೊಂಡ ಹೊರತು ನಮ್ಮ ಉಪಜೀವನವು ಸಾಗುವಂತಿಲ್ಲ. ಈ ಕೆಲಸವು ನೆರವೇರಬೇಕಾದರೆ, ಕೃಷಿಕರ್ಮ (ಒಕ್ಕಲತನದ) ಶಿಕ್ಷಣವು ಅತ್ಯವಶ್ಯವದೆ.

ಇಂಗ್ಲಂಡ, ಅಮೇರಿಕಾ ಮುಂತಾದ ದೇಶಗಳಲ್ಲಿ ಉತ್ತಮ ಬೆಳೆ ಬರಲಿಕ್ಕೆ ಸ್ವಾಭಾವಿಕವಾದ ಸಾಧನಗಳು ವಿಶೇಷವಾಗಿಲ್ಲದಿದ್ದರೂ, ಕೃತ್ರಿಮೋಪಾಯ

ಗಳಿಂದ ಉತ್ತಮ ಪೈರು ತಕ್ಕೊಳ್ಳುವರು. ಇದು ಕೇವಲ ಕೃಷಿಕರ್ಮಶಾಸ್ತ್ರ ಜ್ಞಾನದ ಫಲವು. ಆದದರಿಂದ ಈ ತರದ ಶಿಕ್ಷಣವು ನಮ್ಮ ದೇಶದಲ್ಲಿ ಅವಶ್ಯವಾಗಿ ಬೇಕು.

ಸದ್ಯಕ್ಕೆ ಈ ದೇಶದಲ್ಲಿ ನಮ್ಮ ಸರಕಾರದವರು ಒಕ್ಕಲತನದ (ಶೇತಕೀ ಶಿಕ್ಷಣ ಕೊಡುವ ಶಾಲೆಗಳನ್ನು ಕೆಲವು ಕಡೆಯಲ್ಲಿ ಸ್ಥಾಪಿಸಿರುವರಷ್ಟೇ. ಆದರೆ ಇಂಥ ಶಾಲೆಗಳು ನಮ್ಮ ಭಾಗದಲ್ಲಿ ಸಾಕಷ್ಟು ಇಲ್ಲದ್ದರಿಂದ, ನಮ್ಮ ಪ್ರಾಂತವು ದುಷ್ಕಾಳದ ತವರಮನೆಯಾಗಿರುವದು. ಕಾರಣ ಇಂಥದೊಂದು ಮಾದರಿಯ ಶಾಲೆಯನ್ನು ನಮ್ಮ ಗ್ರಾಮದಲ್ಲಿ ಸ್ಥಾಪಿಸೋಣವಾಗಬೇಕು. ಸದರ ಶಾಲೆಯನ್ನು ನಮ್ಮ ಗ್ರಾಮದಲ್ಲಿ ಸ್ಥಾಪಿಸಿದರೆ, ಶಾಲೆಯ ಇಮಾರತಿಗಾಗಿ ಆರು ಸಾವಿರ ರೂಪಾಯಿಗಳನ್ನೂ, ಬೇರೆ ಕಟ್ಟಡಗಳನ್ನು ಅಂದರೆ ವಿದ್ಯಾರ್ಥಿಗಳಿಗೂ ಮಾಸ್ತರ ಜನರಿಗೂ ಇರಲಿಕ್ಕೆ ಮನೆಗಳನ್ನು ಕಟ್ಟಿಸಲಿಕ್ಕೆ ಹತ್ತು ಎಕರೆ ಭೂಮಿಯನ್ನೂ ಪುಕ್ಕಟೆಯಾಗಿ ಕೊಡುವೆವು. ಹಾಗು ಶೇತಕೀ ಕೆಲಸದ ಪ್ರಯೋಗಗಳನ್ನು ಮಾಡಲಿಕ್ಕೆ ಹದಿನಾರು ಎಕರೆ ಭೂಮಿಯನ್ನು ಸದರ ಶಾಲೆಯ ಇಮಾರತಿಯ ಸಮೀಪದಲ್ಲಿಯೇ ಸದರ ಶಾಲೆ ಇರುವ ವರೆಗೆ ಕೊಡಲಿಕ್ಕೆ ನಮ್ಮ ಒಪ್ಪಿಗೆಯದೆ.

ಈ ಎಲ್ಲ ಸಂಗತಿಗಳ ವಿಚಾರವಾಗಿ, ನಮ್ಮ ಊರಲ್ಲಿ ಒಂದು ಒಕ್ಕಲತನದ ಶಿಕ್ಷಣ ಕೊಡುವ ಶಾಲೆಯನ್ನು ಆದಷ್ಟು ತೀವ್ರ ಸ್ಥಾಪಿಸೋಣವಾಗಬೇಕೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ—ಸಹಿ—ತಾರೀಖು —ನೇ ಮಾಹೆ—ಸನ್—ನೇ ಇಸವಿ.

ಸಹಿ—ರೈತ ಜನರು.

—— ೨ ——

ಒಂದು ಊರ ರೈತಜನರು ತಮ್ಮಲ್ಲಿ ಒಂದು ಸ್ಯಾನಿಟರಿ ಸಂಘ ವಾಗುವ ಕುರಿತು ಮೆಹರಬಾನ ಸ್ಯಾನಿಟರಿ ಕಮಿಶನರ ಸಾಹೇಬ ರವರ ಕಡೆಗೆ ಬರಕೊಂಡ ಅರ್ಜಿ.

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ ಸ್ಯಾನಿಟರಿ ಕಮಿಶನರ ಸಾಹೇಬ ಬಾಹದ್ದೂರ, ದಕ್ಷಿಣ ಭಾಗ, ಬೆಳಗಾಂವ, ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿ ಮಾಡುವ ರೈತಜನರು, ಸಾವುಕಾರರು ಮತ್ತು

ಗ್ರಾಮಸ್ಥರು ಮೋಜೆ— ತಾಲೂಕ— ಜಿಲ್ಹಾ— ಇವರು ವಿನಯಪೂರ್ವಕ ಬರಕೊಂಡ ವಿನಂತಿ ಅರ್ಜಿ ಏನಂದರೆ—ಈ ಊರು ಕ್ಷೇತ್ರ–ಜನಸಂಖ್ಯೆಗಳ ಮಾನದಿಂದ ದೊಡ್ಡದಿರುವದರಿಂದ, ಊರ ಸ್ವಚ್ಛತೆ ಹಾಗು ಜನರ ಆರೋಗ್ಯ ರಕ್ಷಣೆಗಳ ಸಲುವಾಗಿ ಒಂದು ಸ್ಯಾನಿಟರಿ ಸಂಘವನ್ನು ಸ್ಥಾಪಿಸುವದು ಅವಶ್ಯವದೆ.

ಈ ಊರ ಜನರ ಮುಖ್ಯ ಉದ್ಯೋಗವು ಒಕ್ಕಲತನವು. ದನಕರುಗಳ ದಟ್ಟಣೆ ಬಹಳ. ಊರ ಸಮೀಪಕ್ಕಿರುವ ಹಳ್ಳದ ನೀರು ಕೆಟ್ಟು, ಮಾರಿಕಾ–ಮೈಲಿ–ಚಳಿಜ್ವರ ಮುಂತಾದ ರೋಗಗಳು ತಪ್ಪದೆ ಹುಟ್ಟುತ್ತವೆ. ಅದರಿಂದ ಎಷ್ಟೋ ಜನರು ವ್ಯಾಧಿಗ್ರಸ್ತರಾಗಿ ಒಮ್ಮೊಮ್ಮೆ ಪ್ರಾಣಕ್ಕೆ ಸಹ ಎರವಾಗುತ್ತಾರೆ.

ಊರಲ್ಲಿ ಹೊಲಸು ನೀರು ಹರಿದು ಹೋಗಲಿಕ್ಕೆ ಕಟ್ಟಿಸಿದ ಕಾಲುವೆಗಳು ಇಲ್ಲದ್ದರಿಂದ, ಬಚ್ಚಲಹರಿಗಳ ಕೆಟ್ಟ ನೀರು ಓಣಿಗಳಲ್ಲೆಲ್ಲ ಹರಿದು ಬಂದು ನಿಂತು ಹವೆಯನ್ನು ಕೆಡಿಸುತ್ತದೆ. ಅದರಿಂದ ಚಳಿಜ್ವರವುಂಟಾಗಿ ಜನರು ಗೋಳಾಡುತ್ತಿರುವರು.

ಊರಲ್ಲಿ ವಾರಕ್ಕೊಮ್ಮೆ ದೊಡ್ಡ ಸಂತೆ ನೆರೆಯುತ್ತಿರುವದರಿಂದ, ಸಂತೆಗೆ ಬಂದ ಸಾವಿರಾರು ಜನರ ಹಾಗು ದನಕರುಗಳ ಮಲಮೂತ್ರಾದಿಗಳಿಂದ ಹವೆಯು ಕೆಡುವದು.

ಈ ಊರ ಸಾವುಕಾರರೂ ದೊಡ್ಡ ದೊಡ್ಡ ವ್ಯಾಪಾರಸ್ಥರೂ ಸ್ಯಾನಿಟರಿ ಸಂಘ ಸ್ಥಾಪನೆಯಾಗುವ ಒಗ್ಗೆ ಹತ್ತುವ ವೆಚ್ಚವನ್ನು ಕೊಡಲಿಕ್ಕೆ ಒಪ್ಪಿಕೊಂಡಿರುವರು.

ಈ ಎಲ್ಲ ಸಂಗತಿಗಳನ್ನು ಅವಲೋಕಿಸಿ, ಈ ಊರಲ್ಲಿ ಒಂದು ಸ್ಯಾನಿಟರಿ ಸಂಘ ಸ್ಥಾಪನೆಯಾಗುವ ಬಗ್ಗೆ ಹುಕುಮ ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ–ಸಹಿ–ತಾರೀಖು···ನೇ ಮಾಹೆ··· ಸನ್···ನೇ ಇಸವಿ.

ಸಹಿ–ಸಾವುಕಾರರು. ಸಹಿ–ಪಾಟೀಲ.

ಸಹಿ–ರೈತ ಜನರು. ಸಹಿ–ಕುಲಕರಣಿ.

ಒಂದು ಊರ ಜನರು ತಮ್ಮಲ್ಲಿ ಪೋಸ್ಟ ಆಫೀಸು ಆಗುವ ಬಗ್ಗೆ ತಮ್ಮ ಜಿಲ್ಹೆಯ ಪೋಸ್ಟಲ್ ಸುಪರಿಂಟೆಂಡೆಂಟ ಸಾಹೇಬರವರ ಕಡೆಗೆ ಬರಕೊಂಡ ಅರ್ಜಿ.

ಇಂಡಿಯಾ ಬಾದಶಹ ಸರಕಾರಕ್ಕೆ:—

ಮೆಹರಬಾನ ಪೋಸ್ಟಲ್ ಸುಪರಿಂಟೆಂಡೆಂಟ ಸಾಹೇಬ ಬಾಹದ್ದೂರ, ಸಬ್ ಡಿವ್ಹಿಜನ್···ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿ ಮಾಡುವ ಜನರು ಮೋಜೆ...ತಾಲೂಕ.... ಜಿಲ್ಹಾ...ಇವರು ವಿನಯಪೂರ್ವಕ ಬರಕೊಂಡ ವಿನಂತಿ ಅರ್ಜಿ ಏನಂದರೆ— ಈ ಊರು ಜನಸಂಖ್ಯೆ-ವ್ಯಾಪಾರಗಳ ಮಾನದಿಂದ ದೊಡ್ಡದಿದ್ದು, ಇಲ್ಲಿ ಪೋಸ್ಟ ಆಫೀಸು ಇಲ್ಲದ್ದರಿಂದ ಜನರಿಗೆ ಬಹಳೇ ತೊಂದರೆಯಾಗಿದೆ.

ಈ ಊರು ಸಂತೆಯ ಸ್ಥಳವಿರುವದರಿಂದಲೂ, ಇಲ್ಲಿ ವ್ಯಾಪಾರಸ್ಥರ ಅಂಗಡಿಗಳು ಬಹಳ ಇರುವದರಿಂದಲೂ, ಪತ್ರವ್ಯವಹಾರ, ಮನಿ ಆರ್ಡರ, ರೆಜಿಸ್ಟರ, ಪಾರ್ಸಲ್, ವ್ಹಿ.ಪಿ.,ಹುಂಡಿ ಮುಂತಾದ ವ್ಯವಹಾರಗಳನ್ನು ಮಾಡುವ ಪ್ರಸಂಗಗಳು ಮೇಲಿಂದ ಮೇಲೆ ಬರುತ್ತವೆ. ಆದರೆ ಇಲ್ಲಿ ಪೋಸ್ಟ ಆಫೀಸು ಇಲ್ಲದ್ದರಿಂದ, ಇಂಥ ವ್ಯವಹಾರಗಳ ಸಲುವಾಗಿ ಪೋಸ್ಟ ಆಫೀಸ ಇದ್ದ ಊರಿಗೆ ಹೋಗಬರಬೇಕಾಗುತ್ತದೆ. ಇದರಿಂದ ಈ ಊರ ಜನರಿಗೆ ಬಹಳೇ ತೊಂದರೆಯೂ ಹಾನಿಯೂ ಉಂಟಾಗುತ್ತವೆ.

ಈ ಊರಲ್ಲಿ ಒಂದು ಸರಕಾರೀ ಶಾಲೆಯೂ, ಒಂದು ಕೊ-ಆಪರೇಟಿವ್ಹ ಕ್ರೆಡಿಟ್ ಸೋಸಾಯಟಿಯೂ, ಒಂದು ಸಾರ್ವಜನಿಕ ವಾಚನಮಂದಿರವೂ ಉಂಟು. ಈ ಸಂಸ್ಥೆಗಳಿಗೆ ಕಳಿಸಿದ ಎಷ್ಟೋ ಮಹತ್ವದ ಪತ್ರಗಳೂ, ದೈನಿಕ ಹಾಗು ವಾರದ ವರ್ತಮಾನಪತ್ರಗಳೂ, ಮಾಸಿಕ ಪುಸ್ತಕಗಳೂ ಮುಂತಾದವು ಗಳು ವೇಳೆಗೆ ಸರಿಯಾಗಿ ತಲಪುವದಿಲ್ಲಾದ್ದರಿಂದ ಜನರಿಗೆ ಬಹಳೇ ತೊಂದರೆ ಯಾಗುತ್ತದೆ.

ಮೇಲೆ ಬರೆದ ಸಂಗತಿಗಳನ್ನು ಅವಲೋಕಿಸಿ, ಖಾವಂದರವರು ಈ ಊರಿಗೆ ಒಂದು ಬ್ರ್ಯಾಂಚ ಪೋಸ್ಟ ಆಫೀಸನ್ನಾದರೂ ಆದಷ್ಟು ತೀವ್ರ, ಸ್ಥಾಪಿ

ಸುವ ಮೆಹರಬಾನಗಿಯಾಗಬೇಕೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ—ಸಹಿ —ತಾರೀಖು...ನೇ ಮಾಹೆ...ಸನ್...ನೇ ಇಸವಿ.

ಸಹಿ. ಊರ ಜನರು.

ಒಂದು ಊರ ರೈತಜನರು ತಮ್ಮಲ್ಲಿ ಕೊ-ಆಪರೇಟಿವ್ಹ ಕ್ರೆಡಿಟ್ ಸೋಸಾಯುಟಿಯನ್ನು ಸ್ಥಾಪಿಸುವ ಕುರಿತು ಮೆಹರಬಾನ ರೆಜಿಸ್ಟ್ರಾರ ಸಾಹೇಬ ಕೊ-ಆಪರೇಟಿವ್ಹ ಕ್ರೆಡಿಟ್ ಸೋಸಾಯುಟಿ, ಪುಣೆ, ಇವರ ಸನ್ನಿಧಿಗೆ ಬರಕೊಂಡ ಅರ್ಜಿ.

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ ರೆಜಿಸ್ಟ್ರಾರ ಸಾಹೇಬ, ಕೊ-ಆಪರೇಟಿವ್ಹ ಕ್ರೆಡಿಟ್ ಸೋಸಾಯುಟಿ, ಪುಣೆ, ಖಾವಂದರವರ ಹುಜೂರಿಗೆ—

ಅರ್ಜದಾರ ಕೆಳಗೆ ಸಹಿಮಾಡುವ ಜನರು ಮೋಜೆ...ತಾಲೂಕ ... ಜಿಲ್ಹಾ...ಇವರು ಮಾಡಿಕೊಂಡ ವಿನಂತಿ ಅರ್ಜಿ ಏನಂದರೆ—ಈ ಊರ ಜನರ ಮುಖ್ಯ ಉದ್ಯೋಗವು ಒಕ್ಕಲತನವು. ಆದರೆ ಈಗ ಎಳೆಂಟು ವರ್ಷಗಳಿಂದ ಇಲ್ಲಿ ಮಳೆಯು ಕಾಲಕಾಲಕ್ಕೆ ಹಾಗು ಸಾಕಷ್ಟು ಆಗುತ್ತಿರುವದಿಲ್ಲ. ಇದರಿಂದ ಪ್ರತಿವರ್ಷ ನಾವು ಸಾವುಕಾರರ ಬಾಗಿಲ ಕಾಯುವದು ತಪ್ಪನಲ್ಲದು. ಇದಲ್ಲದೆ ಸಾವುಕಾರರು ಬಡ್ಡೀದರವನ್ನು ಮಿತಿಮೀರಿ ಹೆಚ್ಚಿಸಿರುವದರಿಂದ, ನಮಗೆಬಡ್ಡೀ ಹಣ ಕೊಡುವದು ಸಹ ದುಸ್ತರವಾಗಿದೆ. ಹೀಗಾಗಿ ನಮ್ಮ ಊರು ತೀರ ಕೀಳ ಸ್ಥಿತಿಗೆ ಬಂದಿದೆ. ಈ ದುಃಸ್ಥಿತಿಯು ದೂರಾಗಬೇಕಾದರೆ ಈ ಊರಲ್ಲಿ ಕಡಿಮೆ ದರದಿಂದ ಸಾಲಕೊಡುವ ಸೋಸಾಯುಟಿಯು ಸ್ಥಾಪಿಸಲ್ಪಡುವದು ಅತ್ಯವಶ್ಯವದೆ.

ಇದಕ್ಕಾಗಿ ನಾವು ಒಂದು ಸಾರ್ವಜನಿಕ ಸಭೆ ಕೂಡಿಸಿ, ಶೇರಿನಿಂದ ಒಟ್ಟು ಒಂದು ಸಾವಿರ ರೂಪಾಯಿಗಳನ್ನು ಕೂಡಿಸಿ, ನಮ್ಮೂರ ಪೋಸ್ಟಆಫೀಸ ಸೇವ್ಹಿಂಗ್ಸ ಬ್ಯಾಂಕಿನಲ್ಲಿಟ್ಟಿರುವೆವು. ಕಾರಣ ನಮ್ಮಲ್ಲಿ ಒಂದು ಕೊ-ಆಪರೇಟಿವ್ಹ ಕ್ರೆಡಿಟ್ ಸೋಸಾಯುಟಿಯನ್ನು ಸ್ಥಾಪಿಸಲಿಕ್ಕೆ ಪರವಾನಿಗಿ ಕೊಡೋಣವಾಗಬೇಕು.

ಸೋಸಾಯುಟಿಯ ಯಾವತ್ತೂ ನಿಯಮಗಳನ್ನು ನಾವು ಮಾ। ರಾ। ರಾ। ... ಇವರ ಮುಖಾಂತರವಾಗಿ ತಿಳಿದುಕೊಂಡಿದ್ದೇವೆ. ಅವುಗಳಿಗೆ ನಮ್ಮ

ಸಂಪೂರ್ಣ ಒಪ್ಪಿಗೆಯುದೆ. ಇದಲ್ಲದೆ ಈ ಸಹಕಾರಿ ಸಂಘದ ಖಾತೆಯುವರು ಕಾಲ ಕಾಲಕ್ಕೆ ಸೋಸಾಯಟಿಯು ನಿಯಮಗಳಲ್ಲಿ ಮಾಡಬಹುದಾದ ಯಾವತ್ತೂ ಹೆಚ್ಚು ಕಡಿಮೆಗಳಿಗೆ ಸಹ ನಮ್ಮ ಒಪ್ಪಿಗೆಯುಂಟು.

ಈ ಎಲ್ಲ ಸಂಗತಿಗಳನ್ನು ಅವಲೋಕಿಸಿ, ನಮ್ಮಲ್ಲಿ ಒಂದು ಸೋಸಾಯಟಿಯನ್ನು ಸ್ಥಾಪಿಸುವ ಬಗ್ಗೆ ತೀವ್ರ ಅಪ್ಪಣೆ ಕೊಟ್ಟು, ಈ ಬಡರೈತರ ನಷ್ಟಕಷ್ಟಗಳನ್ನು ದೂರಮಾಡುವಿರೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ—ಸಹಿ—ತಾರೀಖು ... ಮಾಹೆ...ಸನ್...ನೇ ಇಸವಿ.

ಸಹಿ—ರೈತರು.

ಒಂದು ಊರ ಜನರು ತಮ್ಮಲ್ಲಿ ಮ್ಯುನಿಸಿಪಾಲಿಟಿಯಾಗುವ ಬಗ್ಗೆ ಮೆಹರಬಾನ ಕಲೆಕ್ಟರ ಸಾಹೇಬ ಬಾಹದ್ದೂರ ಇವರ ಕಡೆಗೆ ಬರಕೊಂಡ ಅರ್ಜಿ.

ಇಂಡಿಯಾ ಬಾದಶಹ ಸರಕಾರಕ್ಕೆ—

ಮೆಹರಬಾನ ಕಲೆಕ್ಟರ ಸಾಹೇಬ ಬಾಹದ್ದೂರ, ಜಿಲ್ಹಾ...ಖಾವಂದರವರ ಹುಜೂರಿಗೆ—

ಕೆಳಗೆ ಸಹಿ ಮಾಡುವ ಜನರು ಮೋಜೆ...ತಾಲೂಕ...ಜಿಲ್ಹಾ...ಇವರು ವಿನಯಪೂರ್ವಕ ಬರಕೊಂಡ ಅರ್ಜಿ ಏನಂದರೆ—ನಮ್ಮ ಊರು ಜನಸಂಖ್ಯೆಯು ಮಾನದಿಂದ ಬಹಳೇ ದೊಡ್ಡದಿದ್ದು, ಇಲ್ಲಿ ಮ್ಯುನಿಸಿಪಾಲಿಟಿಯಿಲ್ಲದ್ದರಿಂದ ಜನರ ಆರೋಗ್ಯರಕ್ಷಣೆಗೆ ಬಹಳೇ ತೊಂದರೆಯುಂಟಾಗಿದೆ. ಊರ ಬೀದಿಗಳಲ್ಲಿ ಗಟಾರಗಳಿದ್ದು, ಅವು ಹುಗಿದಿರುತ್ತವೆ. ಅದರಿಂದ ಮಳೆಗಾಲವಲ್ಲಿ ಬೀದಿಗಳಲ್ಲಿ ಓಡಾಡಲಿಕ್ಕೆ ಬಾರದಷ್ಟು ಹುದಲು ಆಗುತ್ತದೆ.

ನಮ್ಮ ಊರಲ್ಲಿ ಸಂತೆಯ ದಿವಸ ಬಹಳ ಜನರು ಕೂಡುವವರಿಂದ, ಕೊಳೆತ ಕಾಯಿಪಲ್ಲೆ ಮುಂತಾದವುಗಳನ್ನು ಅಲ್ಲಿಯೇ ಚಲ್ಲುವರು. ಆದರೆ ಅವುಗಳನ್ನು ಉಡುಗಿಸಿ ಸ್ವಚ್ಛ ಮಾಡುವವರು ಇರದ್ದರಿಂದ, ಮಾರಿಕಾ ಮುಂತಾದ ರೋಗಗಳು ಹುಟ್ಟುವ ಸಂಭವವದೆ.

ಈ ಊರಲ್ಲಿ ಎಂಟು ಸಾವಿರ ಜನಸಂಖ್ಯೆಯಿದ್ದು, ಸಣ್ಣ ಕೆರೆ ಇರುವದರಿಂದ, ಎಲ್ಲ ಜನರಿಗೆ ಸಾಲುವಷ್ಟು ನೀರು ಇಲ್ಲ. ಬೇರೆ ಕರೆಗಳಿದ್ದರೂ, ಅವು ರೇವೆಯಿಂದ ಮುಚ್ಚಿರುತ್ತವೆ. ಆ ರೇವೆಯನ್ನು ತೆಗೆದುಹಾಕುವವರು ಯಾರೂ ಇಲ್ಲ.

ಈ ಊರಲ್ಲಿ ದವಾಖಾನೆಯಿಲ್ಲದ್ದರಿಂದ, ರೋಗ ಬಂದಾಗ ಜನರ ಆರೈಕೆ ಮಾಡುವದು ಕಷ್ಟವದೆ. ಮ್ಯುನಿಸಿಪಾಲಿಟಿಯಾದಲ್ಲಿ, ಒಂದು ಸ್ವತಂತ್ರ ದವಾಖಾನೆ ಸ್ಥಾಪಿಸಿ, ಊರ ಆರೋಗ್ಯತೆಯನ್ನು ಕಾಯಲು ಸಹಾಯವಾಗುತ್ತದೆ.

ಊರ ಜನಸಂಖ್ಯೆಯ ಮಾನದಿಂದ ಶಾಲೆ ಕಲಿಯುವ ಹುಡುಗರ ಸಂಖ್ಯೆಯು ತೀರ ಕಡಿಮೆಯದೆ. ಮ್ಯುನಿಸಿಪಾಲಿಟಿಯಾದಲ್ಲಿ, ವಿದ್ಯಾಪ್ರಸಾರವಾಗಲಿಕ್ಕೆ ಅನುಕೂಲವಾಗುವದು.

ಮ್ಯುನಿಸಿಪಾಲಿಟಿಯನ್ನು ಸ್ಥಾಪಿಸಲಿಕ್ಕೆ ಬೇಕಾಗುವ ಇಮಾರತು, ಹಣ ಮುಂತಾದವುಗಳನ್ನೆಲ್ಲ ಕೊಡಲಿಕ್ಕೆ ಈ ಊರ ಜನರು ಒಪ್ಪಿಕೊಂಡಿರುವರು.

ಈ ಎಲ್ಲ ಸಂಗತಿಗಳ ವಿಚಾರವಾಗಿ, ಈ ಊರಲ್ಲಿ ಮ್ಯುನಿಸಿಪಾಲಿಟಿಯಾಗುವ ವ್ಯವಸ್ಥೆ ತೀವ್ರ ಮಾಡುವಿರೆಂದು ಬೇಡಿಕೊಳ್ಳುತ್ತೇವೆ. ಎಂದು ಬರಕೊಂಡ ಅರ್ಜಿ—ಸಹಿ—ತಾರೀಖು ...

ಸಹಿ—ಊರ ಜನರು.

→ ಸಮಾಪ್ತ. ←

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೭	೧೩	ಲುಪ್ತವಾದಲ್ಲಿಯಾ	ಲುಪ್ತವಾದಲ್ಲಿಯೂ
೧೧	೧೦	ಸಂಗತಿಗಯು	ಸಂಗತಿಯು
೧೯	೭	ಮಾಡ	ಮಾಡು
೨೯	೨	ಶಿಲ್ವಿಗಳು	ಶಿಲ್ಪಿಗಳು
೩೨	೧೫	ಆದರ	ಅದರ
೩೩	೧೧	ದೇಶವದರು	ದೇಶದವರು
೪೧	೨೨	ಆವುಗಳನ್ನು	ಅವುಗಳನ್ನು
೭೦	೨೬	ಮೇಗೆರೆ	ಮೇರೆಗೆ
೮೧	೨	ಕೂಡೋಣ	ಕೊಡೋಣ
೯೦	೮	ಕೈವಿ ರಿ	ಕೈಪಿಡಿ
೧೨೮	೧೭	ಮೂಸ್ಥಾನ	ಮೂಲಸ್ಥಾನ
೧೩೭	೨೩	ಮೆಲೆ	ಮೇಲೆ
೧೬೫	೧೨	ಅಯಾ	ಆಯಾ

ಕಠಿಣ ಶಬ್ದಗಳ ಕೋಶ.

ಅನುಪಮ = ಹೋಲಿಕೆ ಇಲ್ಲದ.

ಅಬಾಧಿತವಾಗಿ = ಅಡ್ಡಿಯಿಲ್ಲದೆ.

ಆಚಂದ್ರಾರ್ಕ = ಸೂರ್ಯ ಚಂದ್ರರು ಇರುವ ವರೆಗೆ.

ಆಶಯದ = ಅಭಿಪ್ರಾಯದ.

ಉಚ್ಛೃಂಖಲ = ಪ್ರತಿಬಂಧವಿಲ್ಲದ.

ಉದ್ವಿಗ್ನ = ದುಃಖಿತ.

ಊಹಾಪೋಹ = ಯೋಗ್ಯಾಯೋಗ್ಯ ವಿಚಾರ.

ಎಕ್ಸಚೇಂಜ ಕಾಂಪೆನ್‌ಸೇಶನ್ = ಇಂಗ್ಲಂಡದಲ್ಲಿ ಚಿನ್ನದ ನಾಣ್ಯಗಳು ನಡೆಯುತ್ತವೆ. ಹಿಂದುಸ್ತಾನದಲ್ಲಿ ಬೆಳ್ಳಿಯ ನಾಣ್ಯಗಳುಂಟು. ಬೆಳ್ಳಿಯು ಅಗ್ಗವಾಗಿ ಬಂಗಾರವು ತುಟ್ಟಿಯಾದಾಗ, ಹಿಂದುಸ್ತಾನದಲ್ಲಿ ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಇಂಗ್ಲಂಡದಲ್ಲಿ ಬಂಗಾರದ ನಾಣ್ಯಗಳನ್ನು ತಕ್ಕೊಳ್ಳುವವರಿಗೆ ಆಗುವ ಹಾನಿಯನ್ನು ತುಂಬಿಕೊಡುವದಕ್ಕಾಗಿ ಸರಕಾರದವರು ಅವರಿಗೆ ಹೆಚ್ಚಿಗೆ ಕೊಟ್ಟ ಹಣ.

ದುಕೂಲ = ರೇಶಿಮೆಯ ವಸ್ತ್ರ.

ದುರ್ದಿನ = ಮೋಡ ಹಾಕಿದ ದಿವಸ.

ದುರ್ವಿದಗ್ಧ = ಮೂರ್ಖ.

ಧುರಂಧರ = ಭಾರ ವಹಿಸಿಕೊ

ಪರದಾರರತ=ಪರಸ್ತ್ರೀಯರಲ್ಲಿ ಆ

ಫಾಯನ್ಯಾನ್ಸ ಡಿಪಾರ್ಟಮೆಂಟ
ಕಾರೀ ಹಣದ ಖರ್ಚಿನ ಮ
ರಿ ಮಾಡುವ ಖಾತೆ.

ಫಾರೇನ ಡಿಪಾರ್ಟಮೆಂಟ= ಪರ
ಕ್ಕೆ ಸಂಬಂಧಿಸಿದ ವಿಷಯಗ
ವಿಚಾರಿಸುವ ಖಾತೆ.

ರಹಸ್ಯಭೇದ=ಗುಟ್ಟು ಹೊರಗೆಡು

ವಿಹರಿಸು=ತಿರುಗಾಡು.

ಸಾಯುಜ್ಯ=ಮೋಕ್ಷ.

ಸ್ವಪ್ರಮಾಣಾನುರೂಪ=ತನ್ನ ಅ

ಹೋಮ ಚಾರ್ಜಿಸ= ಇಂಗ್ಲಂ
ಹಿಂದುಸ್ತಾನದ ರಾಜ್ಯಕಾರ
ಮಾಡುವ ಸ್ಟೇಟ ಸೆಕ್ರೆಟರಿ
ಕಚೇರಿಯ ಖರ್ಚು ಸಾಗ
ದಕ್ಕೂ ಅಲ್ಲಿರುವ ಪೆನ್‌ಶನ
ಪೆನ್‌ಶನ್ ಕೊಡುವದಕ್ಕೂ,
ಸ್ತಾನದ ರಾಜ್ಯದಾಡಳಿತಕ್ಕೆ
ವಾದ ಎಲ್ಲ ವಿಸರ್ಾದು ಮಾ
ದಕ್ಕೂ ಹಿಂದುಸ್ತಾನದಿಂದ
ಲ್ಪಡುವ ಹಣ.

ಪ್ರತಿಗಳು ದೊರೆಯುವ ಸ್ಥಳ:—

(೧) ರಾ॥ ರಾ॥ ಎ. ಆರ್. ಶಿವನಾಗಪ್ಪಾ,

ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ.

(೨) ರಾ॥ ರಾ॥ ಬಿ. ಜಿ. ದಿವೇಕರ,

ಮಾಳಗುಡ್ಡ, ಧಾರವಾಡ.

[illegible] ಗ್ರಂಥಕರ್ತರ.